ಮಿಂಚಿನ ಬಳ್ಳಿ

ಸಂಪಾದಕ :-
ಬುರ್ಲಿ ಬಿಂದುಮಾಧವ

ಗಾಂಧಿಯುವರ ದಕ್ಷಿಣ ಯಾತ್ರೆ

ಲೇ:- ಗೊರೂರ ರಾಮಸ್ವಾಮಯ್ಯಂಗಾರ್

೫

ಮಿಂಚಿನಬಳ್ಳಿಯ ೧೬ನೆಯ ವರುಷದ ಮೊದಲನೆಯ ಕುಡಿ

ಮಹಾತ್ಮ

ಗಾಂಧಿಯವರ ದಕ್ಷಿಣ ಯಾತ್ರೆ

(೨೧-೧-೧೯೪೬ ರಿಂದ ೫-೨-೧೯೪೬)

ಶ್ರೀ. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಚಾಲುಕ್ಯ ವಿಕ್ರಮ ವರುಷ ೮೭೩

ವಿಜಯಾದಶಮೀ
೧-೧೦-೧೯೪೯

ಬೆಲೆ:
೨—೪—೦

ಮಿಂಚಿನಬಳ್ಳಿಯ ೧೨ನೆಯ ವರ್ಷದ ೨ನೆಯ ಕುಡಿ

ಪ್ಲೇಟೋನ "ಪ್ರಜಾಪ್ರಭುತ್ವ"

(ರಿಪಬ್ಲಿಕ್)

ಲೇ:—ಕೆ. ವೆಂಕಟರಾಮಪ್ಪ, ಎಂ. ಎ.

ಜನವರಿ ೧೯೫೦ರಲ್ಲಿ ಪ್ರಕಟವಾಗುವದು.

ಮುದ್ರಕರು:
ಟಿನ್‌. ಎಸ್‌. ಬೆಂಗೇರಿ
ವಿಜಯ ಮುದ್ರಾಲಯ
ಧಾರವಾಡ

ಪ್ರಕಾಶಕರು:
[illegible]. ಬಿ. ಅವಧಾನಿ
ಮಿಂಚಿನಬಳ್ಳಿ
ಧಾರವಾಡ

ವಾಚಕರಲ್ಲಿ ಬಿನ್ನಹ

"ಗಾಂಧಿಯವರ ದಕ್ಷಿಣಯಾತ್ರೆ''ಯು ೧೨ನೆಯ ವರ್ಷದ ಮೊದಲನೆಯ ಕುಡಿಯು. ಈ ಹನ್ನೊಂದು ವರ್ಷ ಬಳ್ಳಿಯು ತನ್ನ ಸೇವೆಯನ್ನು ಕನ್ನಡಿಗರಿಗೆ ಅರ್ಪಿಸಿದೆ. ಹೋದ ವರ್ಷ ಬಳ್ಳಿಗೆ ೧೮೦೦ ರೂಪಾಯಿಗಳ ಆರ್ಥಿಕ ಪೆಟ್ಟು ಬಿದ್ದಿದೆ. ಇದನ್ನು ಸಹಿಸಿಕೊಳ್ಳಲು ಬಹಳ ಕಷ್ಟವಾಗಿದೆ. ನಮ್ಮ ವಾಚಕರು ಮನಸ್ಸು ಮಾಡಿದರೆ ಈ ಆರ್ಥಿಕ ಸಂಕಟದಿಂದ ನಾವು ಪಾರಾಗುವೆವೆಂದು ನಮಗೆ ಅನಿಸುತ್ತಿದೆ. ಆದುದರಿಂದ ಪ್ರತಿಯೊಬ್ಬ ಚಂದಾದಾರರು ಒಬ್ಬೊಬ್ಬ ಚಂದಾದಾರರನ್ನು ದೊರಕಿಸಿ ಕೊಟ್ಟರೆ ನಮ್ಮ ಕೊರತೆಯು ಪೂರ್ಣವಾಗುವದು ಉದಾರರಾದ ಕನ್ನಡಿಗರೂ ಚಂದಾದಾರರೂ ನಮಗೆ ನೆರವನ್ನಿತ್ತು ಪ್ರೋತ್ಸಾಹನವನ್ನು ಕೊಟ್ಟು ನಮ್ಮ ಯೋಜನೆಯನ್ನು ಯಶಸ್ವಿಗೊಳಿಸುವರೆಂದು ನಂಬಿದ್ದೇವೆ.

ವಿಜಯಾದಶಮಿಗೆ ಪ್ರಕಟವಾದ ಈ "ಗಾಂಧಿಯವರ ದಕ್ಷಿಣಯಾತ್ರೆ" ಯಲ್ಲಿ ಗಾಂಧಿಯವರ ಹೃದಯವನ್ನು ನಾವು ಪೂರ್ಣವಾಗಿ ಕಾಣಬಹುದು. ಅವರ ವಿಧಾಯಕ ಕಾರ್ಯಕ್ರಮಗಳ ಬಗ್ಗೆ ಸ್ಪಷ್ಟವಾದ, ನಿಶ್ಚಿತವಾದ ಕಲ್ಪನೆಗಳನ್ನು ಇದರಲ್ಲಿ ನೋಡಬಹುದು ಅಂತೂ ಗಾಂಧಿಯವರ ಎಲ್ಲ ಕಲ್ಪನೆಗಳ ಮೂರ್ತರೂಪವಿದು—ಎಂದು ವಾಚಕರಿಗೆ ಇದನ್ನು ಓದಿದ ಮೇಲೆ ಹೊಳೆಯದಿರದು. ಪ್ರಿಯಮಿತ್ರರಾದ ಶ್ರೀ ಗೋರೂರ ರಾಮಸ್ವಾಮಿ ಆಯ್ಯಂಗಾರರು ಗಾಂಧಿಯವರ ಈ ಪ್ರವಾಸದಲ್ಲಿ ಅವರೊಡನೆ ಇದ್ದು ಅದರ ವೃತ್ತಾಂತದ ಯಥಾರ್ಥ ಚಿತ್ರವನ್ನು ಭಕ್ತಿಯಿಂದ ಬರೆದು ಜನತೆಯ ಮುಂದೆ ಇಟ್ಟದ್ದಕ್ಕಾಗಿ ಮಿಂಚಿನಬಳ್ಳಿಯು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.

ಸರ್ವೋದಯ ಸಮಾಜವನ್ನು ನಿರ್ಮಿಸಬೇಕೆಂದು ಹಂಬಲಿಸುತ್ತಿರುವ ಜನಾಂಗಕ್ಕೆ ಈ ಪುಸ್ತಕವು ಕೈದೀವಿಗೆಯಾಗುವದೆಂದು ನಂಬಿದ್ದೇವೆ. ಕನ್ನಡಿಗರು ಇದರ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ವಿಜಯದಶಮಿ — ತಮ್ಮ ಸೇವಕ

೧–೧೦–೧೯೪೯ — ಬುರ್ಲಿ ಬಿಂದುಮಾಧವ

ಅರಿಕೆ

●

೧೯೪೬ನೆ ಸಂವತ್ಸರದ ಜನವರಿ ತಿಂಗಳು ಮೂರನೆ ವಾರ ಮಹಾತ್ಮಾ ಗಾಂಧಿಯವರು ಮದರಾಸಿಗೆ ಆಗಮಿಸಿದರು. ಆಗ ದಕ್ಷಿಣಭಾರತ ಹಿಂದು ಸ್ಥಾನಿ ಪ್ರಚಾರ ಸಭೆಯ ರಜತೋತ್ಸವ ರಚನಾತ್ಮಕ ಕಾರ್ಯಕರ್ತರ ಸಭೆ ಮೊದಲಾದ ಅನೇಕ ಮುಖ್ಯ ಸಂಭ್ರಮಗಳು ಮಹಾತ್ಮರ ನೇತೃತ್ವದಲ್ಲಿಯೇ ಜರುಗಿದವು. ಅದೇ ಸಂದರ್ಭದಲ್ಲಿ ಮಹಾತ್ಮಾಗಾಂಧಿಯವರು ಪಳನಿ ಮಧುರಾಗಳಿಗೆ ದರ್ಶನ ಮತ್ತು ಅಲ್ಲಿಯ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದರು. ಮಹಾತ್ಮರ ಸಮೀಪ ಪರಿವಾರದಲ್ಲಿ ಸೇರಿ ಆ ಸಂದರ್ಭಗಳಲ್ಲೆಲ್ಲ ಅವರ ನಿಕಟ ಪರಿಚಯವನ್ನು ಹೊಂದುವ ಭಾಗ್ಯ ಲೇಖಕನಿಗೆ ದೊರೆಯಿತು.

ಗಾಂಧಿಯವರ ಕಾರ್ಯಕ್ರಮಗಳಲ್ಲಿಯೂ, ಅವರು ಹೋದೆಡೆಗಳಲ್ಲಿಯೂ ರಚನಾತ್ಮಕ ಕಾರ್ಯಕ್ಕೆ ಯಾವಾಗಲೂ ಪ್ರಾಶಸ್ತ್ಯ ಹೆಚ್ಚು. ಸ್ವರಾಜ್ಯ ಬಂದರೂ ನಿರ್ಮಾಣ ಕಾರ್ಯದ ತಳಹದಿಯ ಮೇಲೆ ಸಮಾಜ ಸ್ಥಾಪನೆಯಾದ ಹೊರತು ರಾಮರಾಜ್ಯವಾಗುವುದಿಲ್ಲವೆಂಬುದು ಗಾಂಧಿಯವರ ಮತ. ಗಾಂಧಿಯವರ ಮದರಾಸು ಪ್ರವಾಸದಲ್ಲಿಯೂ ನಿರ್ಮಾಣ ಕಾರ್ಯ. ಅವರ ಕಾರ್ಯದ ಹೆಚ್ಚು ಕಾಲವನ್ನು ಆಕ್ರಮಿಸಿಕೊಂಡಿತು. ಅದೇ ಕಾರಣದಿಂದ ಈ ಗ್ರಂಥದಲ್ಲಿಯೂ ಆ ಭಾಗ ಸ್ವಲ್ಪ ಹೆಚ್ಚಾಗಿ ಬಂದಿದೆ.

ಮಹಾತ್ಮಾ ಗಾಂಧಿಯವರ ಕೃತಿಗಳಿಗೆ, ಮಹಾತ್ಮರೇ ಅತ್ಯುತ್ತಮ ವ್ಯಾಖ್ಯಾನಗಾರರು. ಆದುದರಿಂದ ಮಹಾತ್ಮರ ಮಾತುಗಳನ್ನೇ ಉದ್ಧರಿಸಿ ಬಳಸಲಾಗಿದೆ. ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದರಲ್ಲಿ ನಿಷ್ಣಾತರಾದ

ನನ್ನ ಮಿತ್ರರಾದ ಶ್ರೀ. ಬುರ್ಲಿಯವರ ಪ್ರೋತ್ಸಾಹವಿಲ್ಲದಿದ್ದಲ್ಲಿ ಈ ಗ್ರಂಥ ಇಷ್ಟು ಬೇಗ ಬೆಳಕನ್ನು ಕಾಣುತ್ತಿರಲಿಲ್ಲ. ಆದುದರಿಂದ ಇದಕ್ಕೆ ದೊರೆಯಬಹುದಾದ ಯಶಸ್ಸಿಗೆ ಮಿಂಚಿನಬಳ್ಳಿ ಗ್ರಂಥಮಾಲೆಯವರೇ ಕಾರಣ.

ಮಹಾತ್ಮ ಗಾಂಧಿಯವರ ಅಭಿಪ್ರಾಯಗಳಿಗೂ, ಈ ಗ್ರಂಥದಲ್ಲಿ ಅವರದೆಂದು ವ್ಯಕ್ತವಾಗಿರುವ ಅಭಿಪ್ರಾಯಗಳಿಗೂ ಎಲ್ಲಿಯಾದರೂ ವ್ಯತ್ಯಾಸ ವಾಚಕರಿಗೆ ಕಂಡಲ್ಲಿ ತಪ್ಪು ಲೇಖನದೇ.

ಗೊರೂರು ರಾಮಸ್ವಾಮಯ್ಯಂಗಾರ

ಗೊರೂರ
ವಿರೋಧಿ ಸಂ. ಅಶ್ವೀಜ ಶು ೯
೧—೧೦—೧೯೪೯

ವಿಷಯಸೂಚಿಕೆ

ಗಾಂಧಿಯವರ ದಕ್ಷಿಣಯಾತ್ರೆ

೧

ಆಧುನಿಕ ಅಗಸ್ತ್ಯ

ಪೂರ್ವಕಾಲದಲ್ಲಿ ಅಗಸ್ತ್ಯರು ದಕ್ಷಿಣ ದೇಶಕ್ಕೆ ಬಂದುದನ್ನು ನಾವು ಪುರಾಣಗಳಲ್ಲಿ ಓದಿ ತಿಳಿದಿದ್ದೇವೆ. ಮಹಾತ್ಮಾ ಗಾಂಧಿಯವರು ಕೈಕೊಂಡ ದಕ್ಷಿಣ ದೇಶದ ಯಾತ್ರೆಯನ್ನು ಕಂಡಕಣ್ಣು ಧನ್ಯವಾಯಿತು. ಕೇಳಿದ ಕಿವಿ ಪುನೀತವಾಯಿತು. ಗಾಂಧಿಯವರು ಇಪ್ಪತ್ತನೆಯ ಶತಮಾನದ ಈ ಆಟಂಬಾಂಬಿನ ಯುಗದಲ್ಲಿದ್ದರೂ ಅವರನ್ನು ನೋಡಿದ ಕೂಡಲೇ ತ್ರೇತಾಯುಗದ ಶ್ರೀರಾಮಚಂದ್ರನ ಜ್ಞಾಪಕವಾಗುತ್ತದೆ. ಅವರ ಪ್ರಯಾಣಗಳೆಲ್ಲಾ ಆ ರಾಮಚಂದ್ರನ ವನಸಂಚಾರ ದೃಶ್ಯಗಳನ್ನು ಕಣ್ಣಮುಂದೆ ನಿಲ್ಲಿಸುತ್ತವೆ. ಭಾರತೀಯರ ಆಶೋತ್ತರಗಳೆಲ್ಲಾ ಗಾಂಧಿಯವರ ರೂಪವೆತ್ತು "ಭಾರತೀಯನೆಂದುಕೊಳ್ಳಲು ಯಾರೂ ನಾಚಿಕೆಗೊಳ್ಳಬೇಕಾದುದಿಲ್ಲ. ಭಾರತೀಯನೆಂದುಕೊಳ್ಳಲು ಎಲ್ಲರೂ ಹೆಮ್ಮೆಪಡಿ" ಎಂದು ಹೇಳುವಂತೆ ತೋರುತ್ತದೆ. (ಪರಕೀಯರು ಪಾದಾಕ್ರಾಂತವಾಗಿ ಮಾಡಿಕೊಂಡಿರುವ ಈ ವಿಶಾಲವಾದ ಭಾರತದಲ್ಲಿ, ಆ ಶೃಂಖಲೆಗೆ ಸಿಕ್ಕದೆ ಮೀರಿನಿಂತಿರುವ ಚೇತನ ಗಾಂಧಿಜಿ.)

ಗಾಂಧಿಯವರು ಬಂಗಾಳದಿಂದ ಮದರಾಸಿಗೆ ಬರುತ್ತಾರೆಂದ ಕೂಡಲೆ ಆ ರೈಲುಮಾರ್ಗವೇ ಉದ್ದಕ್ಕೂ ಯಾತ್ರಾಕ್ಷೇತ್ರವಾಯಿತು. ವಂಗದೇಶದಿಂದ ಮದರಾಸಿಗೆ ಮಹಾತ್ಮರು ಮೂರು ಪ್ರಾಂತಗಳ (ಬಂಗಾಳ, ಒರಿಸ್ಸಾ, ಮದರಾಸ್) ಪ್ರವಾಸಗಳ ಮೂಲಕ ಹಾದುಬಂದರು. ಅವರ ಪ್ರಯಾಣವೂ ಮೂರು ರೈಲುಗಳಲ್ಲಿ (ಅಸ್ಸಾಂ ಬಂಗಾಳ ರೇಲ್ವೆ, ಬಂಗಾಳಾ ನಾಗಪುರ್

ರೈಲ್ವೆ, ಮತ್ತು ಈಸ್ಟ್ ಇಂಡಿಯನ್ ರೈಲ್ವೆ) ಆಯಿತು. ದಾರಿಯುದ್ದಕ್ಕೂ ಜನ, ಮಹಾತ್ಮರ ದರುಶನಕ್ಕಾಗಿ ರೈಲನ್ನು ಎಷ್ಟು ಹೊತ್ತು ನಿಲ್ಲಿಸಬಹುದೋ ಅಷ್ಟು ಹೊತ್ತೂ ನಿಲ್ಲಿಸುತ್ತಿದ್ದರು. ಶ್ರೀರಾಮಚಂದ್ರನು ವನವಾಸಕ್ಕೆ ಹೊರಟಾಗ ದಾರಿಯಲ್ಲಿ ಬೇರೆ ಬೇರೆ ಆಶ್ರಮಗಳಲ್ಲಿ ಭಕ್ತರೂ ಋಷಿಗಳೂ ಆತನನ್ನು ಕಂಡು ಸತ್ಕರಿಸಿ ಕೃತಕೃತ್ಯರಾದಂತೆ ರೈಲುನಿಲ್ಲುವೆಡೆಗಳಲ್ಲೆಲ್ಲಾ ಜನ, ಗಾಂಧಿ ದರ್ಶನಕ್ಕಾಗಿ ನೆರೆದಿರುತ್ತಿದ್ದರು. ರೈಲು ನಿಲ್ಲದ ಕಡೆಗಳಲ್ಲಿ ಸಹ, ಜನ ಗಾಂಧಿಯವರು ಕುಳಿತ ರೈಲನ್ನು ನೋಡುವುದರಿಂದಲೇ ತಮ್ಮ ಬಾಳು ಸಾರ್ಥಕವಾದಂತೆ ಭಾವಿಸಿಕೊಂಡು ಶಾಂತರಾಗಿ ನಿಂತಿದ್ದರು. ಸ್ಪೆಶಲ್ ರೈಲು ಕೆಲವು ಸ್ಟೇಶನ್ನುಗಳಲ್ಲಿ ಮಾತ್ರ ನಿಲ್ಲುವುದೆಂದು ಮೊದಲೇ ಗೊತ್ತಾಗಿದ್ದರೂ, ಜನ ದಾರಿಯ ಎಲ್ಲಾ ಸ್ಟೇಶನ್‌ಗಳಲ್ಲಿಯೂ ನಿಂತು ಬಿಡುತ್ತಿದುದರಿಂದ ರೈಲನ್ನು ಅನೇಕ ಕಡೆ ಹೆಚ್ಚಾಗಿ ನಿಲ್ಲಿಸಬೇಕಾಯಿತು. ಪ್ರೇಕ್ಷಕರು ಶಾಂತರಾಗಿ ಶಿಸ್ತಿನಿಂದ ನಿಂತಿರುತ್ತಿದ್ದ ಕಡೆ ಮಹಾತ್ಮರೇ ರೈಲನ್ನು ನಿಲ್ಲಿಸುತ್ತಿದ್ದರು. ಗುಂಪು ಗದ್ದಲ ಮಾಡುತ್ತಿದ್ದರೂ, ಗಾಂಧಿಯವರನ್ನು ಕಂಡಕೂಡಲೇ, ಗಾಂಧಿಯವರು ತುಟಿಯ ಮೇಲೆ ಬೆರಳಿಟ್ಟು ನಿಶ್ಶಬ್ದವಾಗಿರಿ ಎಂದು ಸೂಚಿಸಿದ ಕೂಡಲೇ ಶಾಂತವೂ ನಿಶ್ಶಬ್ದವೂ ಆಗುತ್ತಿದ್ದಿತು. ಜನದ ಈ ಶಿಸ್ತನ್ನು ಗಾಂಧಿಯವರು ಬಹಳ ಮೆಚ್ಚಿದರು. ಈಚೆಗೆ ಗಾಂಧಿಯವರು ಶಿಸ್ತು ಶಾಂತಿ ಸಹ, ರಚನಾತ್ಮಕ ಕಾರ್ಯಕ್ರಮದಲ್ಲಿ ಒಂದು ಅಂಗವೆಂದು ಹೇಳತೊಡಗಿದ್ದಾರೆ. ಶನಿವಾರ (೧೯-೧-೪೬) ಮಧ್ಯಾಹ್ನ ೨॥ ಗಂಟೆಗೆ ಸೋದೆಪುರದಿಂದ ಹೊರಟ "ಗಾಂಧಿ ಸ್ಪೆಶಲ್" ಸೋಮವಾರ ಮಧ್ಯಾಹ್ನ ೧೧ಕ್ಕೆ ವಿಶಾಖಪಟ್ಟಣಕ್ಕೆ ಬಂದಿತು. ಜನರು ಶಾಂತಿಯಿಂದ ಕುಳಿತಿದ್ದ ಕಡೆ ಗಾಂಧಿಯವರು ತಾವಾಗಿಯೇ ಭಾಷಣ ಮಾಡುತ್ತಿದ್ದರು. ಗದ್ದಲವಿಲ್ಲದಿದ್ದರೆ ಹೆಚ್ಚು ಹೊತ್ತು ಮಾತನಾಡುತ್ತಿದ್ದರು. ಬರ್ಹಂಪುರದಲ್ಲಿ ದರ್ಶನಾರ್ಥಿಗಳು ಛಳಿಯಲ್ಲಿ ನಡುಗುತ್ತ ಶಬ್ದಮಾಡದೆ ಕುಳಿತುದನ್ನು ಕಂಡು ಗಾಂಧಿಯವರು ಬಹಳ ಪ್ರೀತರಾಗಿ ೩೦ ನಿಮಿಷ ಮಾತನಾಡಿದರು. ವಿಶಾಖ ಪಟ್ಟಣದಲ್ಲಿ ಗಾಂಧಿಯವರು ಇಳಿದ ಕೂಡಲೆ ವಿದ್ಯಾರ್ಥಿ ಕಾಂಗ್ರೆಸ್ಸಿನ ಮುಂದಾಳುಗಳಾದ ಶ್ರೀಮತಿ ಸೌಭಾಗ್ಯವತಿ ಮತ್ತು ಅನ್ನಪೂರ್ಣದೇವಿಯರು ಗಾಂಧಿಯವರ ಕಾಲುಗಳನ್ನು ತೊಳೆದು

ಕುಂಕುಮವಿಟ್ಟು ಆರತಿ ಮಾಡಿದರು. ಊರೊಳಕ್ಕೆ ಹೋಗಲು ಒಂದು ಮೋಟಾರು ಸಿದ್ಧವಾಗಿದ್ದಿತು. ಗಾಂಧಿಯವರು ಮಾಡುವ ಯಾವ ಕೆಲಸವನ್ನೂ ಬಿಡುವವರಲ್ಲ. ತಮ್ಮ ಹೃದಯವೈಶಾಲ್ಯವನ್ನು ವ್ಯಕ್ತಪಡಿಸುವ ಸಣ್ಣ ಸಣ್ಣ ದಯಾಪೂರಿತವಾದ ಕೆಲಸಗಳನ್ನು ಅವರು ಮಾಡುತ್ತಲೇ ಇರುತ್ತಾರೆ ಸಾಮ್ರಾಜ್ಯಶಾಹಿಗೆ ಎದುರಾಗಿ ಹೋರಾಡಿ ಜಗತ್ತಿನಲ್ಲೆಲ್ಲಾ ಅತ್ಯಂತ ದೊಡ್ಡ ಸಾಮ್ರಾಜ್ಯವಾದ ಬ್ರಿಟಿಷ್ ಚಕ್ರಾಧಿಪತ್ಯವನ್ನು ಅಹಿಂಸೆಯಿಂದ ಮಣ್ಣುಮುಕ್ಕಿಸಿದ ಈತ "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾನಿಚ." ಗಾಂಧಿಯವರ ಪ್ರತಿಯೊಂದು ಕೆಲಸದಲ್ಲಿಯೂ ಗಾಂಭೀರ್ಯ ಔದಾರ್ಯ ದಯೆ ಪರಹಿತ ಇವು ವ್ಯಕ್ತವಾಗುತ್ತವೆ. ಬಂಗಾಳ ನಾಗಪುರ ರೈಲ್ವೆಯವರ ರೈಲು ವಾಲ್ಟೇರಿಗೆ ಕೊನೆಯಾಗುವುದಷ್ಟೆ. ಗಾಂಧಿಯವರು ವಿಶಾಖಪಟ್ಟಣದಲ್ಲಿ ರೈಲಿನಿಂದ ಇಳಿದು ರೈಲ್ವೆ ಅಧಿಕಾರಿಗಳಿಗೆ ಹಸ್ತಲಾಘವವನ್ನು ಕೊಟ್ಟರು. ಆಗ ಆ ಅಧಿಕಾರಿಗಳ ಮುಖದ ಆನಂದವನ್ನು ನೋಡಬೇಕು. ಭಾರತ ಭಾಗ್ಯವಿಧಾತನ ಈ ಸೇವೆಯಲ್ಲಿ ಭಾಗಿಯಾಗುವ ಭಾಗ್ಯ ನಮಗೆ ದೊರೆಯಿತಲ್ಲಾ; ಭಾರತ ಸ್ವಾತಂತ್ರ್ಯದ ರಥೋತ್ಸವದಲ್ಲಿ ನಮ್ಮ ಕೈಯೂ ಸೇರಿತಲ್ಲಾ ಎಂಬುದು ಅವರ ತೃಪ್ತಿಯಾಯಿತು ರಾಮನ ಸೇವೆ ಮಾಡಿದ ಗುಹನಂತೆ ರೈಲ್ವೆ ಅಧಿಕಾರಿಗಳು ತುಷ್ಟರಾದ ವಿನೀತಭಾವದಿಂದ ಗಾಂಧಿಯವರ ಹಸ್ತಲಾಘವವನ್ನು ಸ್ವೀಕರಿಸಿದರು. ಗಾಂಧಿಯವರ ಸಾನ್ನಿಧ್ಯಕ್ಕೆ ಬಂದವರು ಹೀಗೆ ಪುಟಕ್ಕೆ ಬಿದ್ದ ಚಿನ್ನದಂತೆ ಎಂದೆಂದಿಗೂ ಉತ್ತಮರೇ ಆಗುತ್ತಾರೆ. ಪ್ರತಿಯೊಂದು ಪ್ರಾಣಿಯನ್ನೂ ಅದು ಎಷ್ಟೇ ಚಿಕ್ಕದಾಗಿರಲಿ "ನಾನೂ ಒಂದು ಬೆಲೆಯಾದ ಪದಾರ್ಥ" ಎಂದು ಅದರ ಮನಸ್ಸಿಗೆ ಬರುವಂತೆ ಮಾಡುವ ಸ್ಪರ್ಶಶಿಲೆ ಗಾಂಧಿಜಿ ಅವರ ಸಂಪರ್ಕದಿಂದ ಸೇವೆ (ಸಮಾಜ ದೃಷ್ಟಿಯಲ್ಲಿ)—ಅದು ಎಷ್ಟೇ ಕೀಳುದರ್ಜೆಯ ಸೇವೆಯಾದರೂ—ಪೂಜೆಯಾಗುತ್ತದೆ.

ಗಾಂಧಿಯವರು ಹಿಂದೆ ದಕ್ಷಿಣ ಭಾರತದ ಪ್ರವಾಸಕ್ಕೆ ಬಂದಿದ್ದಾಗ ಒಬ್ಬ ಮೋಟಾರು ಡ್ರೈವರಿಗೆ ಒಂದು ಯೋಗ್ಯತಾಪತ್ರವನ್ನು ಕೊಟ್ಟರು ಅದರಲ್ಲಿ ಈ ಅಭಿಪ್ರಾಯವಿದ್ದಿತು "ಈತ ನನಗೆ ಡ್ರೈವರ್ ಆಗಿದ್ದದ್ದು ಮಾತ್ರವೇ ಅಲ್ಲ; ನರ್ಸ್ ಸಹ ಆಗಿದ್ದ." ಗಾಂಧಿಯವರಿಂದ ಇಂತಹ

ಯೋಗ್ಯತಾಪತ್ರವನ್ನು ಪಡೆದವನು ತನ್ನ ಕೆಲಸದಲ್ಲಿ ವಿಮುಖನಾಗಲು ಸಾಧ್ಯವೇ? ಅವನಿಗೆ ತನ್ನ ಕರ್ಮದಲ್ಲಿ ಎಂದಿಗಾದರೂ ತಿರಸ್ಕಾರವುಂಟಾಗುವುದೆ? ಸೂರ್ಯ ತನ್ನ ಶಾಖದಿಂದ ಪ್ರತಿಯೊಂದು ವಸ್ತುವನ್ನೂ ಗೆಲವು ಮಾಡುವಂತೆ ಗಾಂಧಿಯವರು ತಮ್ಮ ಸಹವಾಸಕ್ಕೆ ಬಂದ ಪ್ರತಿ ಮನುಷ್ಯನ ಬಾಳನ್ನು ಬೆಳಗುತ್ತಾರೆ. ಆ ಭಾಗ್ಯ ಬಂಗಾಳಾ ನಾಗಪುರ್ ರೈಲ್ವೆ ಅಧಿಕಾರಿಗಳಿಗೂ ಲಭಿಸಿತು

ಗಾಂಧಿಯವರು ಈ ದಕ್ಷಿಣ ದೇಶದ ಪ್ರವಾಸವನ್ನು ಕೈಕೊಂಡುದೇ ಹಿಂದೂಸ್ಥಾನಿ ಭಾಷೆಯ ಪ್ರಚಾರಕ್ಕಾಗಿ. ಬಂಗಾಳದಿಂದ ಮದರಾಸಿನ ವರೆಗೆ ರೈಲು ಎಲ್ಲೆಲ್ಲಿ ನಿಂತಿತೋ ಅಲ್ಲೆಲ್ಲಾ ಗಾಂಧಿಯವರು ಹಿಂದುಸ್ಥಾನಿಯ ಆವಶ್ಯಕತೆಯನ್ನು ಕುರಿತು ಹೇಳತೊಡಗಿದ್ದರು. ನಿರ್ಮಾಣ ಕಾರ್ಯದ ಹದಿನೆಂಟು ಅಂಗಗಳು ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಂತೆ, ಜನರ ಮುಂದೆ ಇಡಲ್ಪಟ್ಟವು. “ಅಸ್ಪೃಶ್ಯತೆಯ ನಿವಾರಣೆ ಮಾಡಿದ್ದೀರಾ? ಜಾತೀಯ ಐಕಮತ್ಯವುಂಟಾಗಿದೆಯೆ? ಆದಿವಾಸಿಗಳೂ ಸ್ವರಾಜ್ಯಕ್ಕೆ ಭಾಗಿಗಳೆಂಬುದು ನಿಮಗೆ ತಿಳಿದಿದೆಯೆ? ನಾವೆಲ್ಲ ಹಿಂದೂಸ್ಥಾನದವರು; ನಾವು ಕುಡಿಯುವ ನೀರು ಇಲ್ಲಿಯದು; ಉಸಿರಾಡುವ ಗಾಳಿ ಇಲ್ಲಿಯದು. ನನ್ನ ಸ್ವರಾಜ್ಯ ಎಲ್ಲರಿಗೂ ಸೇರಿದುದು. ಇದು ಹಿಂದುಗಳದು, ಮುಸಲ್ಮಾನರದು, ಪಾರಸಿಗಳದು, ಕ್ರಿಸ್ತರದು ಭಾರತೀಯರೆಲ್ಲರದು. ನಮಗೆ ಬೇಕಾದುದು ಶಿಸ್ತು. ಒಂದೇ ಸ್ಥಳದಲ್ಲಿ ಒಂದು ಕೋಟಿ ಜನ ನೆರೆದರೂ ಪೂರ್ಣ ಶಾಂತಿ ಇರಬೇಕು ಹಾಗಾದಾಗ ಮಾತ್ರ ನಮ್ಮಲ್ಲಿ ಒಳ್ಳೆಯ ಶಿಸ್ತು ಇರುವುದೆಂದು ಹೇಳಬಹುದು ಭಾರತದ ಒಟ್ಟು ಜನಸಂಖೆಗೆ ಹೋಲಿಸಿಕೊಂಡರೆ, ನಮ್ಮ ಸಭೆಗಳಲ್ಲಿ ಸೇರುವವರ ಸಂಖ್ಯೆ ಅತ್ಯಲ್ಪ. ಇಷ್ಟು ಸಣ್ಣ ಸಂಖೆಯ ಜನರಲ್ಲಿ ಶಿಸ್ತು ಇಲ್ಲದಿದ್ದಲ್ಲಿ ನಮಗೆ ಸ್ವರಾಜ್ಯ ಹೇಗೆ ಬರುವುದು? ನಮ್ಮಲ್ಲಿ ಶಿಸ್ತು ವ್ಯವಸ್ಥೆ ಇಲ್ಲದಿದ್ದಲ್ಲಿ ಸ್ವರಾಜ್ಯ ಬಂದರೂ ನಾವು ಅದನ್ನು ಬಹುಕಾಲ ಉಳಿಸಿಕೊಳ್ಳಲಾರೆವು. ನಾನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತ ಮಹೋತ್ಸವಕ್ಕೆ ಹೋಗುತ್ತಿದ್ದೇನೆ. ಈಗ ನೋಡಿ, ನನ್ನ ಜತೆಯಲ್ಲಿ ಕೆಲವು ಆಂಧ್ರ ಮಹಿಳೆಯರು ಪ್ರಯಾಣ ಮಾಡುತ್ತಿದ್ದಾರೆ. ನಾನು ಹಿಂದುಸ್ಥಾನಿಯಲ್ಲಿ ಅವರೊಂದಿಗೆ ಮಾತನಾಡಿದಾಗ ಅವರಿಗೆ ಅರ್ಥವಾಗ

ಲಿಲ್ಲ. ಹಿಂದುಸ್ಥಾನಿಯನ್ನು ಎಲ್ಲರೂ ಕಲಿಯಬೇಕು. ಭಾರತಕ್ಕೆಲ್ಲಾ ಸರ್ವಸಾಮಾನ್ಯವಾದ ಹಿಂದುಸ್ಥಾನಿಯಲ್ಲಿ ನಾನು ಮಾತನಾಡಲೇ ಅಥವಾ ಇಂಗ್ಲಿಷಿನಲ್ಲಿಯೇ? ನನ್ನ ಸೇವೆ ಸಮಗ್ರ ಭಾರತಕ್ಕೆ. ಆದುದರಿಂದ ಸ್ವಲ್ಪ ಯೋಚಿಸಿ ನಾನು ಎಲ್ಲಾ ಪ್ರಾಂತಗಳ ಎಲ್ಲಾ ಭಾಷೆಗಳನ್ನೂ ಕಲಿಯುವುದು ಒಳ್ಳೆಯದೇ ಅಥವಾ ಈಗ ಹಿಂದುಸ್ಥಾನಿ ತಿಳಿಯದ ಅಲ್ಪಸಂಖ್ಯಾಕರು ಹಿಂದುಸ್ಥಾನಿ ಕಲಿಯುವುದು ಒಳ್ಳೆಯದೆ? ಹಿಂದುಸ್ಥಾನಿ ಕಲಿತು ನನ್ನ ಸಲಹೆಗಳನ್ನು ಅನುಸರಿಸಿರಿ. ಹಿಂದುಸ್ಥಾನಿ ಇಂಪಾದ ಭಾಷೆ, ಕಲಿಯುವುದಕ್ಕೆ ಸುಲಭ. ಇದು ಈಗ ಭಾರತದಲ್ಲಿ ಮುವ್ವತ್ತುಮೂರು ಕೋಟಿ ಜನರ ಮಾತೃಭಾಷೆ. ನೀವೆಲ್ಲರೂ ಹಿಂದುಸ್ಥಾನಿ ಕಲಿಯಬೇಕು. ನಮ್ಮ ಪ್ರಯತ್ನವಿಲ್ಲದೆ ಸ್ವರಾಜ್ಯ ಬಂದರೂ ಅದನ್ನು ಇಟ್ಟುಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ನಮಗೆ ಸತ್ಯ ಅಹಿಂಸೆಗಳಿಂದ ಸ್ವರಾಜ್ಯ ಬರುವುದೆಂದು ನಾವು ಹೇಳುತ್ತಿದ್ದೇವೆ. ಹೀಗಿರುವಲ್ಲಿ ನಾವು ಸತ್ಯ ಅಹಿಂಸೆಗಳಿಗೆ ಅನುಸಾರವಾಗಿಯೇ ಬಾಳಬೇಕು. ಇಲ್ಲದಿದ್ದರೆ ಜಗತ್ತಿಗೆ ಮೋಸ ಮಾಡಿದಂತೆ ಆಗುತ್ತದೆ. ಕಳೆದ ಇಪ್ಪತ್ತೈದು ವರುಷಗಳಿಂದ ಭಾರತವು ಸತ್ಯ ಅಹಿಂಸೆಗಳಿಂದ ಸ್ವರಾಜ್ಯವನ್ನು ಗಳಿಸುವುದೆಂದು ನಾವು ಸಾರುತ್ತಿದ್ದೇವೆ. ಜಗತ್ತು ಇದಕ್ಕಾಗಿ ಭಾರತವನ್ನು ಗೌರವಿಸುತ್ತಿದೆ. ನಾವು ೧೯೨೦ರಲ್ಲಿ ಹಿಂಸಾಮಾರ್ಗದಿಂದ ಸ್ವರಾಜ್ಯವನ್ನು ಗಳಿಸುವೆವೆಂದು ನಿರ್ಣಯಿಸಿ, ಹಾಗೆ ಗಳಿಸಿದ್ದರೂ ಈ ವೇಳೆಗೆ ಸ್ವರಾಜ್ಯ ನಮ್ಮ ಕೈಬಿಟ್ಟು ಹೋಗುತ್ತಿದ್ದಿತು. ಈಗ ಮತ್ತೆ ಪೂರ್ಣ ಹೃದಯದಿಂದ ಪ್ರತಿಜ್ಞೆ ಮಾಡಿ. ಸತ್ಯ ಮತ್ತು ಅಹಿಂಸೆಗಳಿಂದಲೇ ಸ್ವರಾಜ್ಯವನ್ನು ಗಳಿಸುವೆವೆಂದು."

ಬಂಗಾಳದಿಂದ ಮದರಾಸಿಗೆ ಬರುವ ಮಾರ್ಗದಲ್ಲಿ ಆಂಧ್ರದೇಶದ ಭಾಗ ಬರುತ್ತದೆ. ಅಲ್ಲೆಲ್ಲಾ ಜನ ಗಾಂಧಿಯವರ ದರ್ಶನಕ್ಕಾಗಿ ಅನೇಕ ಸಹಸ್ರ ಸಂಖೆಯಲ್ಲಿ ನೆರೆದಿದ್ದರು. ಭಾರತದ ಎಲ್ಲಾ ಸಮಸ್ಯೆಗಳಿಗೂ ಗಾಂಧಿಯವರು ಪರಿಹಾರ ಮಾರ್ಗ. ವಿಶಾಖ ಪಟ್ಟಣದಲ್ಲಿ ಬರ್ಮಾದಿಂದ ಹಿಂದಿರುಗಿದವರು ಗಾಂಧಿಯವರಿಗೆ ಬಿನ್ನವತ್ತಳೆ ಅರ್ಪಿಸಿದರು. ತಮಗೆ ಮತ್ತೆ ಬರ್ಮಾಕ್ಕೆ ಹೋಗಲು ಇಷ್ಟವಿಲ್ಲವೆಂದು ಸೂಚಿಸಿದರು. ಮತ್ತೊಂದ್ಕಡೆ "ಕ್ಷಾಮನಿವಾರಣೆಗಾಗಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಶಾಖೆ

ಯೊಂದನ್ನು ವಿಶಾಖ ಪಟ್ಟಣ ಜಿಲ್ಲೆಯಲ್ಲಿ ತೆರೆಯಬೇಕೆಂದು ಕೇಳಿದರು. ರಾಜಮಹೇಂದ್ರಿಯಲ್ಲಿ ಗಾಂಧಿಯವರ ದರ್ಶನಕ್ಕಾಗಿ ಒಂದು ಲಕ್ಷ ಜನ ನೆರೆದಿದ್ದರೂ ಶಾಂತರಾಗಿ ನಿಶ್ಶಬ್ದರಾಗಿದ್ದರು ಗಾಂಧಿಯವರಿಗೆ ಆಂಧ್ರ ದೇಶದಲ್ಲಿ ಸ್ವಲ್ಪ ದಿನಗಳು ನಿಲ್ಲಬೇಕೆಂದು ಇಷ್ಟವಿದ್ದರೂ ಕಾಲಾಭಾವದಿಂದ ಸಾಧ್ಯವಾಗಿರಲಿಲ್ಲ "ನಿಮ್ಮ ಜತೆಯಲ್ಲಿ ಸ್ವಲ್ಪಕಾಲ ಇರಬೇಕು ನಿಮ್ಮ ದೇಶ ತಿರುಗಬೇಕು ಎಂಬುದು ನನ್ನ ಆಸೆ ಆದರೆ ಈಗ ಸಾಧ್ಯವಿಲ್ಲ ನಾನು ಮುದುಕ ಕ್ಷಮಿಸಿ" ಎಂದರು. ಸುಮ್ಮನೆ ಜನ ನೆರೆದು ತಮ್ಮನ್ನು ಸಂದರ್ಶಿಸಿದರೆ ಗಾಂಧಿಜಿ ತೃಪ್ತರಾಗುತ್ತಾರೆಯೆ? ದೇಶ ಅವರ ಕಾರ್ಯಕ್ರಮವನ್ನು ಅನುಸರಿಸಿದರೆ ಅದು ಅವರಿಗೆ ತೃಪ್ತಿ "ನನ್ನ ನಿರ್ಮಾಣ ಕಾರ್ಯಕ್ರಮವನ್ನು ಅನುಸರಿಸಿ, ಅದರಿಂದ ನನಗೆ ಸುಖವಾಗುವುದು. ನನ್ನನ್ನು ಸುಮ್ಮನೆ ನೋಡುವುದರಿಂದಲೇ ತೃಪ್ತರಾಗಬೇಡಿ" ಎಂದರು

ಬೆಜವಾಡದಿಂದ ಮದರಾಸಿಗೆ ಬರುವ ದಾರಿಯಲ್ಲಿ ಎಲ್ಲೂರು ಇದೆ. ಗಾಂಧಿಜಿ ಅಲ್ಲಿ ನಿಲ್ಲುವುದು ಮೊದಲು ನಿಶ್ಚಿತವಾಗಿರಲಿಲ್ಲ. ಆದರೂ ರೈಲ್ವೆ ನಿಲ್ದಾಣದಲ್ಲಿ ಅನೇಕ ಸಹಸ್ರ ಜನರು ನೆರೆದಿದ್ದರು. ಸ್ವಯಂಸೇವಕರು ಆ ಸ್ಥಳದಲ್ಲಿ ಹರಿಜನ ನಿಧಿ ವಸೂಲ್ಮಾಡಲು ಪ್ರಾರಂಭಿಸಿದರು. ಗಾಂಧಿಯವರ ಹೆಸರು ಸ್ಪರ್ಶಶಿಲೆ. ಅದರ ಎದುರಿಗೆ ಎಂತಹ ವಜ್ರಮುಷ್ಟಿಯೂ ಸಡಿಲವಾಗುತ್ತದೆ. ರೈಲ್ವೆ ಸ್ಟೇಶನ್ನಿನಲ್ಲಿಯೇ ಹನ್ನೆರಡು ಜನ ಒಬ್ಬೊಬ್ಬರು ನೂರಾಹದಿನಾರು ರೂಪಾಯಿ ಕೊಟ್ಟರು. ಸ್ತ್ರೀಯರು ತಮ್ಮ ಆಭರಣಗಳನ್ನು ಕೊಟ್ಟರು. ಒಂದು ಕ್ಷಣದೊಳಗೆ ಎರಡುವರೆ ಸಾವಿರ ರೂಪಾಯಿಗಳೂ, ಮತ್ತು ಎರಡೂವರೆ ಸಾವಿರ ರೂಪಾಯಿ ಒಡವೆಗಳೂ ದೊರೆತವು. ಅಂದು ಮಹಾತ್ಮರ ಮೌನ ದಿನ. ಆದುದರಿಂದ ಅವರು ಮಾತನಾಡಲಿಲ್ಲ. ರೈಲುಗಾಡಿಯ ಮುಂದೆ ಒಂದು ಮೇಜು ಹಾಕಿದ್ದರು. ಗಾಂಧಿ ಅದರ ಮೇಲೆ ನಿಂತು ಹದಿನೈದು ನಿಮಿಷ ಜನರಿಗೆ ದರ್ಶನ ಕೊಟ್ಟರು. "ಇದು ನನ್ನ ಮೌನದ ದಿನ, ಮಾತಿಲ್ಲದುದರಿಂದ ಏನೂ ಹೇಳಲಾರೆ. ನನ್ನ ರಚನಾತ್ಮಕ ಕಾರ್ಯಕ್ರಮವನ್ನು ಅನುಸರಿಸಿ" ಎಂಬ ಅವರ ಸಂದೇಶವನ್ನು, ಆಂಧ್ರದ ಕೆಲಸಗಾರರು ಓದಿದರು.

ಬಂಗಾಳದ ಕ್ಷಾಮದ ಫಲ, ದೇಶದ ಎಲ್ಲೆಲ್ಲಿಯೂ, ದೇಹದಲ್ಲಿಯ ಹುಣ್ಣಿನಂತೆ ಕಾಣುತ್ತಿದೆ. ಬಂಗಾಳದ ಅನಾಥ ಶಿಶುಗಳು ತಂದೆತಾಯಿ ಗಳನ್ನು ಕಳೆದುಕೊಂಡು ದೇಶದ ಮೇಲೆ ತಿರುಗುತ್ತಿದ್ದಾರೆ. ಅಂತಹ ಹುಡುಗರ ಒಂದು ಗುಂಪು ಕದರಿನಲ್ಲಿ ನೂಲನ್ನು ತೆಗೆಯುತ್ತಾ ಒಂದು ಸ್ಟೇಶನ್ ಬಳಿ ನೆರೆದಿದ್ದರು. ರಾತ್ರಿಯಾಗಿದ್ದುದರಿಂದ ಗ್ಯಾಸ್ ಲೈಟ್ ಹತ್ತಿಸಿದ್ದರು. ಗಾಂಧಿಯವರು ಆ ಹುಡುಗರನ್ನು ನೋಡಿದರು. ಸರಿಯಾಗಿ ನೂಲುವುದನ್ನು ಕಲಿಯಬೇಕೆಂದರು. ಮುಂದೆ ಬಾಲಸೂರ್‌ನಲ್ಲಿ ಜನ ನಿಶ್ಶಬ್ದವಾಗಿ ಸ್ಟೇಶನ್ನಿನಲ್ಲಿ ನೆರೆದಿದ್ದರು ಗಾಂಧಿಯವರು ನಿದ್ರೆಹೋಗುತ್ತಿದ್ದರು ಆದರೆ ಜನದ ಶಾಂತಿ ಶಿಸ್ತನ್ನು ನೋಡಿ ಅವರಿಗೆ ಆನಂದವಾಯಿತು. ಅವರು ಹೊರಕ್ಕೆ ಬಂದರು. "ನಾನು ಹೇಳುವುದನ್ನೆಲ್ಲಾ ಹೇಳಿ ಆಗಿದೆ. ನನ್ನ ಮಾತಿನಂತೆ ನಡೆಯಿರಿ ಹರಿಜನರ ಸೇವೆ ಮಾಡಿ, ಹರಿಜನರೂ ಉತ್ತಮರೂ ಅಣ್ಣತಮ್ಮಂದಿರಂತೆ ಜೀವಿಸಬೇಕು" ಎಂದರು ಕಟಕ್‌ನಲ್ಲಿ ಶಿಸ್ತನ್ನು ಕುರಿತು ಮತ್ತೆ ಹೇಳಿದರು. "ನಾಳೆ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುತ್ತಾರೆ. ಇದು ನನಗೆ ಗೊತ್ತು. ಆದರೆ ಬ್ರಿಟಿಷರು ನಮ್ಮ ಶಕ್ತಿಯಿಂದ ಈ ದೇಶ ಬಿಡದ ಮೇಲೆ ಏನು ಪ್ರಯೋಜನ? ಬ್ರಿಟಿಷರು ಬರಿಯ ಒಣ ಆಡಂಬರಕ್ಕೆ ಈ ದೇಶದಿಂದ ಹೊರಡುತ್ತಾರೆಂದು ನೀವು ಯೋಚಿಸುವುದಾದರೆ ಅದು ತಪ್ಪು" ಎಂದರು. ರೈಲು ಬರಹಾಂಪುರಕ್ಕೆ ಬಂದಾಗ ಬೆಳಗಿನ ಝಾವವಾಗಿದ್ದಿತು. ಗಾಂಧಿಯವರ ದರ್ಶನಾರ್ಥವಾಗಿ ಜನ ನೆರೆದಿದ್ದರು ಹಿಂದೆ ಕಟಕ್‌ನಲ್ಲಿ ಜನರಲ್ಲಿ ಶಾಂತಿ ಶಿಸ್ತು ಮೌನ ಇರಲಿಲ್ಲ. ಗಾಂಧಿಯವರ ಮನಸ್ಸಿನಲ್ಲಿ ಅದು ಕೆಲಸ ಮಾಡುತ್ತಿದ್ದಿತು ಬರಹಾಂಪುರ್‌ದಲ್ಲಿ ಗಾಂಧಿಯವರು ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು.

"ಈ ಬೆಳಗಿನ ಝಾವ ನಿಮ್ಮನ್ನು ಕಾಣುವುದರಿಂದ ನನಗೆ ಸಂತೋಷ ವಾಗಿದೆ. ನಿಮ್ಮ ಜತೆಯಲ್ಲಿ ಒರಿಸ್ಸಾದಲ್ಲಿ ಒಂದು ದಿನವಾದರೂ ಇರಲು ಸಾಧ್ಯವಾಗದುದಕ್ಕಾಗಿ ವಿಷಾದವಾಗಿದೆ. ನನ್ನನ್ನು ಮನ್ನಿಸಿ. ನನ್ನ ದೇಹದಾರ್ಢ್ಯ ಹಿಂದಿನಂತೆ ಇಲ್ಲ. ಐವತ್ತು ವಯಸ್ಸಾದ ಮೇಲೆ ಆರೋಗ್ಯ ಕೆಡುವುದು ಸ್ವಾಭಾವಿಕ. ದೇವರ ಇಚ್ಛೆಯೇ ಹೀಗೆ. ಭದ್ರಾಕ್ ಮತ್ತು ಬಾಲಸೂರ್‌ನಲ್ಲಿ ಜನ ಬಹಳ ಶಿಸ್ತಿನಿಂದಿದ್ದರು. ಆದುದರಿಂದ ಕಟಕ್

ನಲ್ಲಿಯೂ ಸ್ವಲ್ಪ ರೈಲನ್ನು ನಿಲ್ಲಿಸಬೇಕೆಂದು ಮಾಡಿದೆ. ಮೊದಲಿನ ಕಾರ್ಯ ಕ್ರಮದಲ್ಲಿ ಕಟಕ್‌ನಲ್ಲಿ ನಿಲ್ಲುವುದು ಇರಲಿಲ್ಲ. ಕಟಕ್‌ನಲ್ಲಿ ಜನ ಬಹಳ ಗದ್ದಲ ಮಾಡಿದರು. ರೈಲು ಅಲ್ಲಿಗೆ ಬಂದಾಗ ರಾತ್ರಿ ಒಂದುವರೆ ಗಂಟೆ. ಅಂತಹ ಅವೇಳೆಯಲ್ಲಿ ನಿದ್ರೆಯಲ್ಲಿರುವವರನ್ನು ಎಬ್ಬಿಸಬಾರದು. ಅದರಲ್ಲಿಯೂ ನನ್ನಂತಹ ಮುದುಕನನ್ನು ಎಬ್ಬಿಸಬಾರದು. ಕಡೆಗೆ ಅವರು ಶಾಂತರಾದರು ನೀವು ಈಗ ಶಾಂತರಾಗಿ ಕುಳಿತಿದ್ದೀರಿ. ಎಲ್ಲಾ ಕಡೆ ಗಳಲ್ಲಿಯೂ ಯಾವಾಗಲೂ ಹೀಗೆಯೇ ಇರಬೇಕೆಂಬುದು ನನ್ನ ಪ್ರಾರ್ಥನೆ. ಅಶಾಂತಿಯಿಂದ ನಮಗೆ ಸ್ವರಾಜ್ಯ ದೊರೆಯುವುದಿಲ್ಲ. ನೀವು ನನ್ನನ್ನು ಬಲ್ಲಿರಿ. ನಾನು ನಿಮ್ಮನ್ನು ಬಲ್ಲೆ. ನಾನು ನಿಮಗೆ ಹೊಸಬನಲ್ಲ. ನೀವೆಲ್ಲಾ ನಿರ್ಮಾಣ ಕೆಲಸದಲ್ಲಿ ತೊಡಗಬೇಕು. ಖಾದಿಯ ತಯಾರಿಯಲ್ಲಿಯೂ ಅಸ್ಪೃಶ್ಯತಾ ನಿವಾರಣೆಯಲ್ಲಿಯೂ ಶ್ರದ್ಧೆಯಿಂದ ತೊಡಗಬೇಕು. ಹರಿಜನ ಪ್ರಶ್ನೆಯನ್ನು ನೀವು ಇನ್ನೂ ಪೂರ್ಣವಾಗಿ ಬಗೆಹರಿಸಿಲ್ಲ. ಭಾರತದ ಎಲ್ಲಾ ಕಡೆಗಳಲ್ಲಿಯೂ ಸಮಸ್ಯೆಗಳು ಒಂದೇ ಸಮ. ಈ ಬೆಳಗಿನ ಜಾವ ನಾನು ನಿಮ್ಮ ಎದುರಿಗೆ ಬರಲು ಯಾಕೆ ಒಪ್ಪಿದೆನೆಂದರೆ, ಈ ಎಲ್ಲಾ ವಿಷಯ ಗಳಲ್ಲಿಯೂ ನೀವು ಭಾರತಕ್ಕೆ ಮೇಲುಪಂಗ್ತಿಯಾಗುವಿರೆಂದು."

೨

ಮದರಾಸಿನಲ್ಲಿ

ಜನವರಿ ಇಪ್ಪತ್ತೊಂದನೆಯ ತಾರೀಖು ಮಧ್ಯಾಹ್ನ ನಾಲ್ಕುಕಾಲು ಗಂಟೆಗೆ ಗಾಂಧಿಯವರು ಮದರಾಸಿನಲ್ಲಿ ಇಳಿದರು. ಅದಕ್ಕೆ ಮುಂಚೆ ಒಂದು ವಾರದಿಂದಲೂ ಮದರಾಸು ಭಾರತದ ಯಾತ್ರಾಸ್ಥಳವಾಗಲು ಪ್ರಾರಂಭ ವಾಗಿದ್ದಿತು. ಎರಡು ದಿನ ಮುಂಚೆ ಒಳ್ಳೆ ದೊಡ್ಡ ಮಳೆ ಬಿಡಿದುದರಿಂದ ವ್ಯವಸ್ಥಾಪಕರಿಗೆ ಸ್ವಲ್ಪ ತೊಂದರೆಯಾದರೂ ಹವೆ ತಂಪಾಗಿ ಹಿತವಾಗಿ ದ್ದಿತು ಹಿಂದೀ ಪ್ರಚಾರ ಸಭೆಯ ಆವರಣ, ಒಳ್ಳೆ ಮದುವೆ ಮಂಟಪದಂತೆ ಚಿತ್ರವಿಚಿತ್ರವಾದ ಬಗೆಬಗೆಯ ಆಕಾರದ ತೋರಣಗಳಿಂದ ರಂಜಿತವಾಗಿ ದ್ದಿತು. ಮೂರು ದಿನಗಳು ಮುಂಚಿನಿಂದಲೇ ಸ್ವಯಂಸೇವಕರು ನೀಲಿ ನಿಕ್ಕರ್ ಬಿಳಿಯ ಖಾದಿ ಹಸರು ಹಳದಿ ಕೆಂಪು ಪಟ್ಟೆಗಳ ದವಾಲಿಗಳೊಂದಿಗೆ ತಿಳಿದೂ ತಿಳಿಯದ ಹಿಂದಿಯಲ್ಲಿ ಅರ್ಧ ಬೆರಕೆಯ ಮಾತುಗಳನ್ನಾಡುತ್ತಾ, ರಾಮಸೇನೆಯ ವಾನರರಂತೆ ನಿಂತಲ್ಲಿ ನಿಲ್ಲದೆ ಹಾರಾಡುತ್ತಿದ್ದರು. ಇನ್ನು ಸ್ವಯಂಸೇವಿಕೆಯರೊ? ಅಬ್ಬ, ಅದೊಂದು ಬಗೆಬಗೆಯ ಪುಷ್ಪಪ್ರದರ್ಶನ ದಂತೆಯೇ ತೋರುತ್ತಿದ್ದಿತು. ಧೀರ ಗಂಭೀರೆಯರಾದ ನಗುಮುಖದ ದೃಢಕಾಯರಾದ ಮಹಿಳೆಯರು; ಎಲ್ಲರಿಗೂ ಒಂದೇ ಬಗೆಯಾದ ಕೇಸರಿ ಬಣ್ಣದ ಸೀರೆಗಳು ಹಸಿರು ರವಿಕೆಗಳು; ಸೀರೆಗಳು ಒಂದೇ ಬಗೆಯವಾಗಿ ದ್ದರೂ ಒಬ್ಬೊಬ್ಬ ಸೋದರಿಯೂ ತನ್ನ ಅಭಿರುಚಿ ಸಂಸ್ಕೃತಿಗೆ ಅನುಸಾರ ವಾಗಿ ಸೀರೆಯನ್ನು ಬೇರೆ ಬೇರೆ ಚಂದದಲ್ಲಿ ಉಟ್ಟಿದ್ದರು. ಗಾಂಧಿದರ್ಶನಾ ಕಾಂಕ್ಷಿಗಳಾಗಿ ನುಗ್ಗುತ್ತಿದ್ದ ಜನರನ್ನು ತಡೆಯಲು ಮುಖ್ಯವಾಗಿ ಸ್ವಯಂ ಸೇವಕಿಯರು ಅಗತ್ಯವಾಗಿದ್ದರು. ದೇವರನ್ನು ಕಾಣಲು ಭಕ್ತರು ನುಗ್ಗು ವಂತೆ ತಂಡೋಪತಂಡವಾಗಿ ಸಮುದ್ರದ ಅಲೆಗಳಂತೆ ಏರಿ ಏರಿ ಬರುತ್ತಿದ್ದ ಜನಸಮುದಾಯ ಸ್ವಯಂಸೇವಕರನ್ನು ತಳ್ಳಿಕೊಂಡು ಒಂದೆರಡು ಬಾಗಿಲು ಗಳನ್ನೂ ಮುರಿದು ಒಳಕ್ಕೆ ನುಗ್ಗಿತು ಹೀಗೆ ಮತ್ತರಾಗಿ ನುಗ್ಗುತ್ತಿದ್ದವರಿಗೆ ಆನೆಗೆ ಅಂಕುಶವಿದ್ದಂತೆ ಅವರನ್ನು ತಡೆಯುತ್ತಿದ್ದವರು ಸ್ವಯಂಸೇವಕಿ

ಯರು. ಒಂದೇ ಸಮನಾಗಿ ಮುಂದೆ ಇದ್ದವರನ್ನೆಲ್ಲಾ ತಳ್ಳುತ್ತಾ ಏದುತ್ತಾ ಬಂದವರು, ಸ್ವಯಂಸೇವಕಿಯರನ್ನು ಕಂಡಕೂಡಲೇ ' ಹೊಳೆಗುಂಟ ಓಟ' ಎಂಬಂತೆ ಏನನ್ನೂ ಮಾಡಲು ತೋರದೆ ನಿಂತುಬಿಡುತ್ತಿದ್ದರು. ಸ್ವಯಂ ಸೇವಕಿಯರು ಇಲ್ಲದೆ ಇದ್ದಿದ್ದರೆ ಮಾತ್ರ ಹಿಂದೀ ಪ್ರಚಾರ ಸಭೆಯ ಕಾಂಪೌಂಡು ಒಂದು ಗಳಿಗೆಯೂ ಇರುತ್ತಿರಲಿಲ್ಲ. ಸ್ವಯಂಸೇವಕಿಯರನ್ನು ಸಹ ತಳ್ಳಿ ಅವರೆದುರಿಗೆ ಉದ್ಧತನಾಗಿ ಮುಂದೆ ನುಗ್ಗುವ ಪಶು, ಗಾಂಧಿಭಕ್ತ ರಲ್ಲಿ ಯಾರೂ ಇರಲಿಲ್ಲ.

ಸ್ವಯಂಸೇವಕಿಯರು ಹೀಗೆ ಸಭಾಪ್ರವೇಶವನ್ನು ವ್ಯವಸ್ಥೆಗೊಳಿಸಿದಂತೆ ಪಾಕಶಾಲೆಯಲ್ಲಿಯೂ ವಿತರಣೆಯಿಂದ ಬಡಿಸುವುದರಲ್ಲಿ ನಿಷ್ಣಾತರಾಗಿದ್ದರು. ದಿನಕ್ಕೆ ನಾಲ್ಕು ಸಾವಿರ ಐದು ಸಾವಿರ ಜನ ಊಟಮಾಡುತ್ತಿದ್ದ ಆ ವಲವಿನ ಪಾಕಶಾಲೆಯಲ್ಲಿ " ಸರಿಯಾಗಿ ಬಡಿಸಲಿಲ್ಲ, ಎಲೆ ಚೆನ್ನಾಗಿಲ್ಲ, ನೀರು ಚೆನ್ನಾ ಗಿಲ್ಲ, ಕಾಫಿ ಆರಿದೆ, ಉಪ್ಪಿಟ್ಟು ಹಿಟ್ಟು" ಎಂದು ಗಳಿಗೆಗೊಂದು ಸಲ ಜನ ಹಾರಬೇಕಾಗಿದ್ದಿತು.ಅಂತಹ ಸಮೂಹಕ್ಕೆ ಆಹಾರ ಒದಗಿಸುವುದರಲ್ಲಿ ಸಾಧಾ ರಣವಾಗಿ ಅನೇಕ ಕುಂದುಕೊರತೆಗಳು ಆಗಿಯೇ ಆಗುತ್ತವೆ. ಆದರೆ ಸ್ವಯಂ ಸೇವಕಿಯರ ಪ್ರಭಾವ, ಹಸಿದ ಮನುಷ್ಯನಿಗೆ ಸಹ ತನ್ನ ಗಾಂಭೀರ್ಯವನ್ನು ಬಿಟ್ಟು ಅಲ್ಪತನದಿಂದ ನಡೆಯಲು ಮನಸ್ಸು ಬರುತ್ತಿರಲಿಲ್ಲ. ಸ್ತ್ರೀಯ ಎದುರಿಗೆ ಅಸಭ್ಯತೆಯಿಂದ ವರ್ತಿಸುವುದು ನಮ್ಮ ಸಂಸ್ಕೃತಿಗೆ ಹೊರತು.

ಗಾಂಧಿಯವರು ಮದರಾಸಿಗೆ ಬಂದ ರೈಲಿನಲ್ಲಿ ಮೂರು ಗಾಡಿ ಗಳಿದ್ದವು. ಮೂರರಲ್ಲಿಯೂ ಗಾಂಧಿ ಅನುಯಾಯಿಗಳು ತುಂಬಿದ್ದರು. ಗಾಂಧಿಯವರು ಕುಳಿತಿದ್ದ ಗಾಡಿಯ ಮೇಲೆ ತ್ರಿವರ್ಣ ಧ್ವಜ ಹಾರಾಡುತ್ತಿ ದ್ದಿತು. ಇಂಜನ್ನನ್ನು ಹಸಿರು ಚಿಗರುಗಳಿಂದಲೂ ಹೂವುಗಳಿಂದಲೂ ಅಲಂಕರಿಸಿದ್ದರು. ಗಾಂಧಿಯವರ ಸ್ಪೆಶಲ್ ರೈಲು ಮದರಾಸಿನಲ್ಲಿ ಎಲ್ಲಿ ನಿಲ್ಲುತ್ತದೆಂಬುದು ಯಾರಿಗೂ ತಿಳಿದಿರಲಿಲ್ಲ. ತಿಳಿದಿದ್ದರೆ ಗಾಂಧಿಯವರು ಇಳಿಯುವುದಕ್ಕೇ ಸಾಧ್ಯವಾಗದಷ್ಟು ಜನ ನೆರೆದು ಬಿಡುತ್ತಿದ್ದರು. ಗಾಂಧಿ ಯವರ ಅತಿ ಹತ್ತಿರದ ಅನುಯಾಯಿಗಳಿಗೆ ಸಹ ರೈಲು ನಿಲ್ಲುವ ತಾಣ ಗೊತ್ತಿರಲಿಲ್ಲ. ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟ್ ಸಿರಾಜುದ್ದೀನ್‌ರು ಸಿ. ರಾಜಗೋಪಾಲಾಚಾರಿ, ಸತ್ಯನಾರಾಯಣ ಗೋಪಾಲಸ್ವಾಮಿ,

ಗೋಪಾಲಸ್ವಾಮಯ್ಯಂಗಾರ್ (ಸರ್ ಎಸ್.) ಇವರನ್ನು ಅವರವರ ನಿವಾಸ ಗಳಿಗೆ ಹೋಗಿ ಕರೆದುಕೊಂಡು ಹೋದರು. ಅವರನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಡಾಕ್ಟರ್ ಸುಬ್ರಾಯನ್ ಮುಂತಾದವರು ಮಾರ್ಗ ತಪ್ಪಿದರು. ಅಂಬತ್ತೂರ್ ಸ್ಟೇಶನ್ನಿನಲ್ಲಿದ್ದವರಿಗೆ ಸಹ ಗಾಂಧಿ ಪಾದಸ್ಪರ್ಶದಿಂದ ಆ ಸ್ಟೇಶನ್ನು ಪುನೀತವಾಗುವುದೆಂದು ತಿಳಿದಿರಲಿಲ್ಲ. ಅಂಬತ್ತೂರ್ ಸ್ಟೇಶನ್ನಿನಲ್ಲಿ ಸಿ. ರಾಜಗೋಪಾಲಾಚಾರಿ ತಿರುಗಾಡುತ್ತಿರುವುದನ್ನು ಕಂಡು ಕೆಲವು ಪ್ರೇಕ್ಷಕರು ಇವರು ಯಾಕೆ ಇಲ್ಲಿರಬಹುದೆಂದು ಆಶ್ಚರ್ಯಗೊಂಡರು. ಗಾಂಧಿಜಿ ಇಲ್ಲಿ ಬಂದರೂ ಬರಬಹುದೆಂಬ ಆಸೆಯಿಂದ ಸುತ್ತಲ ಹಳ್ಳಿಯವರೂ ಅಲ್ಲಿ ಸೇರತೊಡಗಿದರು.

ಅಂಬತ್ತೂರಿನಲ್ಲಿ ಇಳಿದ ಕೂಡಲೇ ಗಾಂಧಿಯವರು ಪರಿವಾರ ಸಮೇತರಾಗಿ ಹಿಂದಿ ಪ್ರಚಾರ ಸಭೆಗೆ ಹೊರಟು ಹೋದರು. ಪ್ರಚಾರ ಸಭೆಯ ಬಾಗಿಲಿನಲ್ಲಿ ಸುಮಂಗಲೆಯರು ಅವರನ್ನು ಕುಂಕುಮ ಆರತಿಗಳಿಂದ ಸತ್ಕರಿಸಿದರು. ನೆರೆದಿದ್ದವರಲ್ಲಿ ಒಬ್ಬರು "ನಿಮಗೆ ತಮಿಳು ತಿಳಿಯುವುದೇ" ಎಂದು ಕೇಳಿದರು. ಗಾಂಧಿಯವರು ನಗುತ್ತಾ "ಕೊಂಚಮ್ ಕೊಂಚಮ್" ಎಂದರು. ಎರಡು ದಿನಗಳಿಂದ ಒಂದೇ ಸಮನೆ ಹಗಲು ರಾತ್ರಿ ಪ್ರಯಾಣ ಮಾಡಿ ಅಸಂಖ್ಯಾತ ಸಭೆಗಳಲ್ಲಿ ಭಾಷಣ ಮಾಡಿದ್ದ ಗಾಂಧಿಯವರು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದರಲ್ಲಿದ್ದರು. ಆದರೆ ಆ ವೇಳೆಗೆ ಜನರಿಗೆ ಗಾಂಧಿಯವರು ಮದರಾಸಿಗೆ ಬಂದಿರುವುದು ತಿಳಿಯಿತು. ಅವರು ನಿಧಾನವಾಗಿ ಹಿಂದೀ ಪ್ರಚಾರ ಸಭೆಯ ಮುಂದೆ ನೆರೆಯತೊಡಗಿದರು. ಕೆ ಭಾಷ್ಯಂರವರೂ ಸತ್ಯನಾರಾಯಣರೂ ಜನರಿಗೆ ದಯವಿಟ್ಟು ಹೊರಟು ಹೋಗಿ ಎಂದು ಕೇಳಿಕೊಂಡರು. ಜನ ಎರಡು ಗಂಟೆಯಾದರೂ ಕದಲಲಿಲ್ಲ. ಗಾಂಧಿಯವರು ಅಷ್ಟು ಹತ್ತಿರದಲ್ಲಿರುವಾಗ ಅವರನ್ನು ಕಾಣದೆ ಹೋಗಲು ಜನ ಒಪ್ಪಲಿಲ್ಲ. ಗುಡಿಯ ಬಾಗಿಲು ಹಾಕಿದ್ದರೆ, ತೆರೆಯುವ ವರೆಗೆ ಅಲ್ಲೇ ಕುಳಿತಿದ್ದು ಅನಂತರ ಸೇವೆ ಮಾಡಿಕೊಂಡು ಹೋಗುವ ಧನ್ಯರಂತೆ ಗುಂಪು ಆಗಾಗ್ಗೆ ಗಾಂಧಿಕಿ ಜೈ ಎಂದು ಕೂಗುತ್ತಾ ಶಾಂತವಾಗಿ ಕುಳಿತೇ ಬಿಟ್ಟಿತು. ಸ್ವಲ್ಪ ಹೊತ್ತಿನ ನಂತರ ಈ ವಿಚಾರ ಗಾಂಧಿಯವರಿಗೆ ತಿಳಿಯಿತು. ಬಳಲಿದ್ದರೂ ಸಹ ಸ್ವಾಭಾವಿಕವಾದ ಔದಾರ್ಯದಿಂದ ಅವರು ಹೊರಗೆ ಬರಲು

ಒಪ್ಪಿದರು. ಆ ಸುದ್ದಿ ತಿಳಿದ ಕೂಡಲೇ ಜನ ಅತ್ಯಂತ ಉತ್ಸಾಹದಿಂದ ಜಯಘೋಷ ಮಾಡಿದರು. ಸುಮಾರು ಏಳು ಗಂಟೆಯ ವೇಳೆಗೆ ಗಾಂಧಿ ಯವರು ರಘುವೀರ್ ದಯಾಲ್ ಮಿಶ್ರರ ಮಗಳ ಹೆಗಲಿನ ಮೇಲೆ ಕೈಯಿಟ್ಟುಕೊಂಡು ಜನರೆದುರಿಗೆ ಬಂದರು. ಜನರ ಉತ್ಸಾಹ ಮೇರೆ ಮೀರಿ ಅವರು ಮತ್ತೆ ಜಯಜಯಕಾರ ಮಾಡಿದಾಗ ಗಾಂಧಿಯವರು ತುಟಿಗೆ ಬೆರಳಿಟ್ಟುಕೊಂಡು ಎಚ್ಚರಿಸಿದರು. ಮಂತ್ರಮುಗ್ಧರಾದವರಂತೆ ಜನ ಶಾಂತರಾದರು. ಡಾಕ್ಟರ್ ಅಣ್ಣಂಗರಾಚಾರಿ ಒಂದು ಮೇಜಿನ ಮೇಲೆ ಗಾಂಧಿಯವರನ್ನು ಕೂರಿಸಿದರು. ಆದರೆ ಅವರ ಮೇಲೆ ಸ್ಪಷ್ಟವಾಗಿ ಬೆಳಕು ಬೀಳುತ್ತಿರಲಿಲ್ಲವಾಗಿ ಜನರಿಗೆ ಗಾಂಧಿಯವರ ದರ್ಶನ ಸರಿಯಾಗಿ ಆಗಲಿಲ್ಲ. ಆಗ ಎಲೆಕ್ಟ್ರಿಕ್ ಕೆಲಸಗಾರರು ಗಾಂಧಿಯವರ ಮೇಲೆ ದೀಪದ ಪ್ರಕಾಶ ಬೀಳುವಂತೆ ದೊಡ್ಡ ದೀಪ ಹಾಕಿದರು. ಗಾಂಧಿಯವರು ನಗುತ್ತಾ ನಿಂತು ಕೈಮುಗಿದರು. ಅವರ ಮುಖದಲ್ಲಿ ಮಹಿಳೆಯರು ಇಟ್ಟಿದ್ದ ಕುಂಕುಮ ಆರದೆ ಇದ್ದಿತು. ರಾಮಧುನ್ ಭಜನೆಯ ನಂತರ ಗಾಂಧಿಯವರು "ಮದರಾಸಿನ ಜನ ಹೀಗೆ ಶಿಸ್ತು ಬಿಟ್ಟು ನಡೆಯುತ್ತಾರೆಂದು ನಾನು ನಿರೀ ಕ್ಷಿಸಿರಲಿಲ್ಲ. ನಿಮ್ಮಲ್ಲಿ ಶಿಸ್ತು ಇರದಿದ್ದರೆ ನಾನು ನಿಮ್ಮಲ್ಲಿ ಮತ್ತೆ ಬಂದು ಸೇರುವುದು ಹೇಗೆ? ನಿಮಗೆ ನನ್ನ ದರ್ಶನವಾಯಿತು. ಇನ್ನು ನಿಮ್ಮ ಮನೆ ಗಳಿಗೆ ಹೋಗಿ. ನನ್ನ ಕೆಲಸಕ್ಕೆ ನನ್ನನ್ನು ಬಿಡಿ. ನಾನು ಬಹು ದೂರದಿಂದ ಪ್ರಯಾಣ ಮಾಡಿ ಬಂದಿದ್ದೇನೆ. ಇನ್ನೂ ಸ್ನಾನ ಮಾಡಿಲ್ಲ. ಊಟವಿಲ್ಲ. ನಾನು ಮಾಡಬೇಕಾದ ಕೆಲಸ ಬಹಳವಾಗಿದೆ. ರಾತ್ರಿಯೆಲ್ಲಾ ನಾನು ಇಲ್ಲಿಯೇ ಇರಬೇಕೆಂಬುದು ನಿಮ್ಮ ಇಚ್ಛೆಯೇ?" ಎಂದರು. ನೆರೆದಿದ್ದವರು "ಇಲ್ಲ ಇಲ್ಲ, ನೀವು ಇನ್ನು ಒಳಕ್ಕೆ ಹೋಗಿ" ಎಂದರು. ಗಾಂಧಿದರ್ಶನ ದಿಂದ ತುಷ್ಟರಾದ ಜನ ನಿಧಾನವಾಗಿ ತಮ್ಮ ಮನೆಗಳಿಗೆ ಹೊರಟರು.

೩

ಪ್ರಾರ್ಥನೆ

ಗಾಂಧಿಯವರಂತಹ ಪತಿ ದೊರಕಲು ಪುಣ್ಯ ಬೇಕು. ಕಸ್ತೂರಿಬಾರಂತಹ ಸತೀ ದೊರೆಯಲು ಸಹ ಪುಣ್ಯ ಬೇಕು. ಕಸ್ತೂರಿಬಾ ಜೀವನ, ಭಾರತದ ಸಾಧ್ವಿಯರಿಗೆ ಆದರ್ಶ. ಆಕೆ ಯಾವಾಗಲೂ ನಮಗೆ ಸೀತಾದೇವಿಯ ಜ್ಞಾಪಕವನ್ನು ತರುತ್ತಾಳೆ. ಗಾಂಧಿಯವರೊಂದಿಗೆ ಜೀವನ ಕಳೆಯುವುದು ಸುಲಭವಲ್ಲ. ಅದು ಕತ್ತಿಯ ಮೇಲೆ ನಡೆದಂತೆ. ತಪ್ಪುಹೆಜ್ಜೆ ಯಾರು ಹಾಕಿದರೂ ಗಾಂಧಿ ಒಪ್ಪುವುದಿಲ್ಲ. ಹೆಂಡತಿ, ಮಗ, ಸ್ನೇಹಿತ, ಬಂಧು ಯಾರಾದರೂ ಸರಿಯೆ. ನಿಯಮಕ್ಕೆ ವಿರೋಧವಾಗಿ ನಡೆದರೆ ಗಾಂಧಿಯವರು ತತ್ಕ್ಷಣ ಎಚ್ಚರಿಸುತ್ತಾರೆ. ತಾವೇ ತಪ್ಪು ಮಾಡಿದರೂ, ಮಾಡಿದುದು ತಪ್ಪು ಎಂದು ಸಾರ್ವಜನಿಕರ ಎದುರಿಗೆ ಹತ್ತಾರು ಸಲ ಹೇಳಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾರೆ. ಇತರರ ತಪ್ಪನ್ನು ತಿದ್ದುವಾಗ ಕನಿಕರದಿಂದ, ದಯೆಯಿಂದ ಶಸ್ತ್ರಚಿಕಿತ್ಸಕನಂತೆ ಮಾಡಿದರೂ ತಮ್ಮ ವಿಚಾರದಲ್ಲಿ ಕ್ರೂರರೇ ಆಗುತ್ತಾರೆ. ಕಸ್ತೂರಿಬಾ ಒಂದು ಸಣ್ಣ ಒಡವೆ ಇಟ್ಟುಕೊಂಡಳೆಂಬ ಕಾರಣದಿಂದ ಗಾಂಧಿ ಸಾರ್ವಜನಿಕರ ಎದುರಿಗೇ ಆಕೆಯನ್ನು ದಂಡಿಸಿದರು. ಪುರಿ ದೇವಾಲಯಕ್ಕೆ ಹೋದುದು ತಮ್ಮ ನೀತಿಗೆ ವಿರೋಧವಾದುದರಿಂದ ಮಹದೇವ ದೇಸಾಯಿಯವರನ್ನೇ ದಂಡಿಸಿದರು. ತಮ್ಮವರ ಈ ತಪ್ಪಿನಿಂದ ಅವರಲ್ಲಿ ಗಾಂಧಿಯವರ ಪ್ರೇಮ ಕಡಿಮೆಯಾಗಲಿಲ್ಲ. ಕಸ್ತೂರಿಬಾ ತನಗೆ ಗುರುವಾಗಿದ್ದಳು ಎಂದೂ ಸಹ ಗಾಂಧಿ ಹೇಳಿದ್ದಾರೆ. ಹೆಂಡತಿಯ ವಿಷಯದಲ್ಲಿ ಪ್ರೇಮದ ಮಾತನ್ನಾಡುವವರು ನಮ್ಮಲ್ಲಿ ಅನೇಕರು ಇದ್ದಾರೆ. ಆದರೆ ಹೆಂಡತಿಯು ಗುರು ಎಂಬ ಒಳ್ಳೆಯ ಮಾತನ್ನು ಹೇಳುವ ಔದಾರ್ಯ ಅನೇಕರಲ್ಲಿ ಇಲ್ಲ. ಆಗಾಖಾನ್ ಅರಮನೆಯಲ್ಲಿ ಕಸ್ತೂರಿಬಾ ಅಂತ್ಯಸಂಸ್ಕಾರ ಸ್ಥಳದಲ್ಲಿ ಗಾಂಧಿ ನಿತ್ಯ ಪೂಜೆ ಸಲ್ಲಿಸುತ್ತಿದ್ದರು. ಹಾಗೆಯೇ ಗುರುವಿನಿಂದ ಗೌರವ ಸಲ್ಲಿಸಿಕೊಳ್ಳುವ ಯೋಗ

ಮಹದೇವ ದೇಸಾಯಿಗೂ ದೊರೆಯಿತು. ಅಗಾಖಾನ್ ಅರಮನೆಯು ಸೆರೆಯಿಂದ ಬಿಡುಗಡೆ ಹೊಂದಿ ಬರುವ ಮುನ್ನ ಗಾಂಧಿ, ಪತ್ನಿಯ ಮತ್ತು ಆಪ್ತಕಾರ್ಯದರ್ಶಿಯ ಅಂತ್ಯಕ್ರಿಯಾಸ್ಥಾನಗಳಿಗೆ ಭೇಟಿ ಇತ್ತರು. ಆ ಪ್ರದೇಶಗಳನ್ನು ರಕ್ಷಣೆ ಮಾಡಬೇಕೆಂದೂ ಹೇಳಿದರು.

ಕಸ್ತೂರಿಬಾ ಜ್ಞಾಪಕಾರ್ಥವಾಗಿ ಹಿಂದೀ ಪ್ರಚಾರ ಸಭೆಯವರು ತ್ಯಾಗರಾಜ ನಗರದಲ್ಲಿ "ಕಸ್ತೂರಿಬಾ ಮಾತಾ ದರ್‌ವಾಜ" ಕಸ್ತೂರಿಬಾ ಹೆಬ್ಬಾಗಿಲನ್ನು ನಿರ್ಮಿಸಿದ್ದರು. ಬಾಗಿಲಿನ ಬಣ್ಣ ಚಿತ್ರದ ಕೆಲಸ ಬಹಳ ಅಂದವಾಗಿದ್ದಿತು. ಬಾಗಿಲನ್ನು ನೋಡಿದ ಕೂಡಲೇ ಕಸ್ತೂರಿಬಾ, ಯಾವ ಆದರ್ಶಕ್ಕಾಗಿ ಬಾಳಿ ಮಡಿದಳೆಂಬುದು ಸ್ಪಷ್ಟವಾಗುತ್ತದೆ. ಯಾವ ಕಲೆಗಾರನೂ ಮೆಚ್ಚಬಹುದಾದ ಸುಂದರವಾದ ಅತ್ಯುತ್ತಮವಾದ ಕಲಾಕೃತಿ ಅದು. ಜಮಿನಿ ಸ್ಟುಡಿಯೋ ಎಸ್. ಎಸ್. ವಾಸನ್‌ರವರ ಸಿನಿಮಾ ಕಲೆಗಾರರ ಕೈವಾಡ. ಪ್ರಸಿದ್ಧ ಕಲೆಗಾರರಾದ ಶೇಖರ್ ಅವರ ಚಿತ್ರಕಲೆ. ಬಾಗಿಲು ಕಸ್ತೂರಿಬಾ ಅವರ ಜೀವನದ ಮುಖ್ಯಮುಖ್ಯವಾದ ಘಟನೆಗಳನ್ನೆಲ್ಲಾ ಒಳಗೊಂಡಿದೆ. ಒಂದು ಕಡೆ ರಾಮ ಲಕ್ಷ್ಮಣ ಸೀತಾದೇವಿಯರು ವನವಾಸಕ್ಕೆ ಹೋಗುತ್ತಿರುವುದು ಚಿತ್ರಿತವಾಗಿದೆ. ಅದರ ಕೆಳಗಡೆ ದಂಡಿ ಯಾತ್ರೆಯ ಚಿತ್ರವಿದೆ. ಮತ್ತೊಂದೆಡೆ ಅಶೋಕವನದಲ್ಲಿ ಸೀತಾದೇವಿ ರಾಕ್ಷಸರ ನಡುವೆ ಸೆರೆಯಾಳಾಗಿರುವುದು ಕಾಣುತ್ತದೆ. ಅದರ ತಳದಲ್ಲಿ ಕಸ್ತೂರಿಬಾ ಸೆರೆಮನೆಯಲ್ಲಿರುವುದು ಚಿತ್ರಿತವಾಗಿದೆ. ಈ ದ್ವಾರದ ಪ್ರವೇಶೋತ್ಸವವನ್ನು ದಿವಂಗತ ಜಮುನಾಲಾಲರ ಪತ್ನಿ ಜಾನಕಿದೇವಿಯವರು ೨ನೆಯ ತಾರೀಖು ಬೆಳಿಗ್ಗೆ ನೆರವೇರಿಸಿದರು. ಗಂಡನ ಚಿತೆಯ ಮೇಲೆ ಸಹಗಮನವನ್ನು ಮಾಡಲು ಹಾತೊರೆದ ಸತಿ ಜಾನಕಿದೇವಿ ಜಮುನಾಲಾಲರ ಮರಣಾನಂತರ ಜಾನಕಿದೇವಿಯ ದುಃಖವನ್ನು ಯಾರಿಂದಲೂ ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ. ಆಗ ಬುದ್ಧನು ಸತ್ತ ಮಗುವಿನ ತಾಯಿಯನ್ನು ಸಾಸಿವೆಕಾಳಿನ ನೆಪದಿಂದ ಸಮಾಧಾನಪಡಿಸಿದಂತೆ ಗಾಂಧಿಯವರು ಜಾನಕಿದೇವಿಯ ದುಃಖವನ್ನು ಸಮಾಧಾನಪಡಿಸಿದರು. "ನಿನ್ನ ಗಂಡನಿಗೆ ಪ್ರಿಯವಾದ ಕೆಲಸದಲ್ಲಿ ನಿನ್ನ ಆಯುಸ್ಸನ್ನು ಕಳೆ. ಸಹಗಮನಕ್ಕೆ ನಿಯೋಗಿಸಲು ಉದ್ಯೋಗಿಸಿದ ಜೀವ ಇನ್ನು ನಿನ್ನದಲ್ಲ.

ನಿನ್ನ ಗಂಡನ ಧ್ಯೇಯವಾದ ಗೋಸೇವೆಗೆ ಈ ನಿನ್ನ ಉಳಿದ ಆಯುಸ್ಸನ್ನು ಮೀಸಲಾಗಿರಿಸು” ಎಂದು ಗಾಂಧಿಜಿ ಬೋಧಿಸಿದರು. ಅಂದಿನಿಂದ ಜಾನಕಿ ದೇವಿ ಗೋಸೇವೆಗಾಗಿ ತಮ್ಮ ಆಯುಸ್ಸನ್ನು ಉಪಯೋಗಿಸುತ್ತಿದ್ದಾರೆ. ಹೀಗೆ ಭಾರತದ ಒಬ್ಬ ಸುಪುತ್ರಿ, ಮತ್ತೊಬ್ಬ ಭಾರತಪುತ್ರಿಯ ಹೆಸರಿನ ದ್ವಾರದ ಪ್ರವೇಶೋತ್ಸವವನ್ನು ನೆರವೇರಿಸಿದುದು ನಮ್ಮ ಸಂಸ್ಕೃತಿಗೆ ಅನುಸಾರವಾಗಿದೆ.

ಜಾನಕಿದೇವಿ ಕೆಲಸಗಾರರು. ಮಾತುಗಾರರಲ್ಲ. ಜನವರಿ ೨೨ನೆಯ ತಾರೀಖು ಕಸ್ತೂರಿಬಾ ಮೃತತಿಥಿ. ಆ ಸಾಧ್ವಿಶಿರೋಮಣಿಯ ಜೀವನದ ನೆನಪುಗಳು ಜಾನಕಿದೇವಿಯವರ ಗಂಟಲನ್ನು ಕಟ್ಟಿದವು. ಕಸ್ತೂರಿಬಾ ಮೃತತಿಥಿಯ ದಿನವೇ ಈ ದ್ವಾರದ ಪ್ರವೇಶೋತ್ಸವವು ಸಂಭವಿಸಿದುದು ಒಂದು ವಿಶೇಷ, ಆಕಸ್ಮಿಕ. ಪ್ರಾರಂಭದಲ್ಲಿ ಶ್ರೀ. ಸತ್ಯನಾರಾಯಣರು “ದೊಡ್ಡ ದೊಡ್ಡ ಉತ್ಸವಗಳಿಗೆ ಮುಂಚಿತವಾಗಿ ಮಾತೆಯ ಪ್ರಾರ್ಥನೆ ಮಾಡುವುದು ನಮ್ಮ ಸಂಪ್ರದಾಯ. ಆದುದರಿಂದ ನಾವು ದೇಶದ ಮಾತೆಯಾದ ಕಸ್ತೂರಿಬಾರವರ ಸ್ಮರಣೆಯನ್ನು ಹೀಗೆ ಈಗ ಮಾಡುವುದು ನ್ಯಾಯವಾಗಿಯೇ ಇದೆ. ದೇಶದ ದಾತೃಗಳಾದ ಜಾನಕಿದೇವಿಯವರು ಈ ಉತ್ಸವವನ್ನು ನೆರವೇರಿಸಲು ದೊರೆತುದು ನಮ್ಮ ಪುಣ್ಯ” ಎಂದರು. ಜಾನಕಿದೇವಿಯವರು ಕಸ್ತೂರಿಬಾರವರ ಗುಣಗಾನ ಮಾಡಿದರು. ಆಕೆಯ ತ್ಯಾಗವನ್ನು ಕೊಂಡಾಡಿದರು. ಗಾಂಧಿಯುವರಿಗೆ ಪತ್ನಿಯಿಂದ ದೊರೆತ ಸ್ಫೂರ್ತಿಯನ್ನು ಹೇಳಿದರು. ಕಸ್ತೂರಿಬಾ ಭಾರತದ ವಿವಿಧ ಚಟುವಟಿಕೆಗಳಿಗೆ ಕೊಟ್ಟ ಚೈತನ್ಯವನ್ನು ವಿವರಿಸಿದರು. ದ್ವಾರಪ್ರವೇಶೋತ್ಸವದಲ್ಲಿ ಮೊದಲು ಕರುವಿನೊಡಗೂಡಿದ ಒಂದು ಹಸುವನ್ನು ಪ್ರವೇಶಿಸಿದರು. ಅನಂತರ ಉಳಿದವರ ಪ್ರವೇಶವಾಯಿತು.

ಗಾಂಧಿಜಿ ಮದರಾಸಿಗೆ ಬಂದ ಮರುದಿನವೇ ಕಸ್ತೂರಿಬಾ ಮೃತತಿಥಿ. ಸೇವಾಗ್ರಾಮದಲ್ಲಿಯೂ ಪ್ರತಿ ೨೨ನೆಯ ತಾರೀಖು ಕಸ್ತೂರಿಬಾ ತಿಥಿ ಆಚರಿಸಲ್ಪಡುತ್ತಿದೆ. ಆ ದಿವಸ ಗಾಂಧಿ ಆಶ್ರಮದ ವಾತಾವರಣ ಎಂದಿಗಿಂತಲೂ ಹೆಚ್ಚು ಮೌನವೂ ಪವಿತ್ರವೂ ಆಗುತ್ತದೆ. ಪ್ರಯಾಣದಿಂದ ಬಹಳ ಬಳಲಿದ್ದರೂ ಗಾಂಧಿಯುವರೇ ಹಿಂದುಸ್ಥಾನಿ ನಗರದಲ್ಲಿ ೨೨ನೆಯ ತಾರೀಖು

ಎಲ್ಲರಿಗಿಂತ ಮುಂಚೆ ಎದ್ದರು. ಆ ವೇಳೆಗೆ ಉಳಿದವರೂ ಎದ್ದರು. ಪ್ರಾರ್ಥನೆಯಲ್ಲಿ ಭಾಗ ವಹಿಸಲು ಉತ್ಸುಕರಾಗಿ ಬಂದಿದ್ದ ಕೆಲವು ಹೊರಗಿನವರೂ ನೆರೆದಿದ್ದರು. ಮೊದಲು ಆಶ್ರಮ ಭಜನಾವಳಿಯಿಂದ ಒಂದು ಕೃತಿಯನ್ನು ಹಾಡಿದರು ಅನಂತರ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳನ್ನೂ ಮೊದಲಿನಿಂದ ಕೊನೆಯ ವರೆಗೆ ಹಾಡಿದರು. ಇದಕ್ಕೆ ಸುಮಾರು ಒಂದುವರೆ ಗಂಟೆ ಮಾತ್ರ ಹಿಡಿಯಿತು. ಭಗವದ್ಗೀತೆ ಉಚ್ಚರಿಸುತ್ತಿರುವಾಗ, ಜತೆಯಲ್ಲಿ ಹೊರಗಿನಿಂದ ಬಂದಿದ್ದವರು ಕೆಲವರು ತಮ್ಮ ಧ್ವನಿಯನ್ನು ಸೇರಿಸಿದರು. ಆಶ್ರಮವಾಸಿಗಳ ಧ್ವನಿಗಳಿಗೂ, ಹೊಸಬರ ಧ್ವನಿಗೂ ಸ್ವಲ್ಪ ವ್ಯತ್ಯಾಸ ಕಾಣುತ್ತಿದ್ದಿತು. ಗಾಂಧಿಯವರು ಕಣ್ಣುಮುಚ್ಚಿಕೊಂಡು ಮೌನವಾಗಿ ಕುಳಿತಿದ್ದವರು "ಎಲ್ಲಾ ಧ್ವನಿಗಳೂ ಸಮರಸವಾಗಿ ಬೆರೆಯಬೇಕು" ಎಂದರು.

ಮದರಾಸು ನಗರ ಭಾರತದ ರಾಜಕೀಯ ಇತಿಹಾಸದಲ್ಲಿ ಯಾವಾಗಲೂ ಪ್ರಸಿದ್ಧವಾದುದು. ೧೯೨೧ನೆಯ ಇಸವಿಯಲ್ಲಿ ಅಸಹಕಾರದ ಚಳುವಳಿಯಲ್ಲಿ ಮದರಾಸು ಭಾರತದಲ್ಲೆಲ್ಲಾ ಪ್ರಮುಖವಾಯಿತು. ಉಪ್ಪಿನ ಸತ್ಯಾಗ್ರಹದಲ್ಲಿಯೂ ಮದರಾಸು ಪ್ರಾಂತ್ಯದ್ದು ಮುಂದಿನ ಹೆಜ್ಜೆ. ಗಾಂಧಿಯವರಿಗೆ ಮದರಾಸನ್ನು ಕಂಡರೆ ಯಾವಾಗಲೂ ಪ್ರೇಮ. ಮದರಾಸು ಆಂಧ್ರ ಪ್ರಾಂತಗಳಲ್ಲಿ ಖಾದಿಯ ಉತ್ಪತ್ತಿಯೂ ಹೆಚ್ಚು. ದೇಶದ ಮೇಲೆ ಹತ್ತು ಲಕ್ಷ ರಾಟೆ ಪ್ರಚಾರವಾಗಬೇಕೆಂದು ಮೊದಲು ನಿರ್ಣಯವಾದುದು ಬೆಜವಾಡದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ "ಮದರಾಸು ಪ್ರಾಂತದವರಿಗೆ ನನ್ನಲ್ಲಿ ಪ್ರೇಮ" ಎಂದು ಗಾಂಧಿಯವರೇ ಅನೇಕ ಸಲ ಹೇಳಿದ್ದಾರೆ. ರಾಜಗೋಪಾಲಾಚಾರ್ಯರಿಗೆ ದಕ್ಷಿಣದ ಗಾಂಧಿ ಎಂದು ಹೆಸರು ಬಂದಿರುವುದೂ ಈ ಕಾರಣದಿಂದಲೇ. ಜನವರಿ ೨೨ನೆಯ ತಾರೀಖು ಗಾಂಧಿಯವರು ಮದರಾಸಿನಲ್ಲಿ ಮೊದಲನೆಯ ಸಲ ಸಾರ್ವಜನಿಕ ಪ್ರಾರ್ಥನೆ ನಡೆಸಿದರು. ಗಾಂಧಿಯವರ ಸಾರ್ವಜನಿಕ ಪ್ರಾರ್ಥನೆಗಳಿಗೆ ಈಗ ಸಾಧಾರಣವಾಗಿ ಒಂದು ಲಕ್ಷ ಜನ ನೆರೆಯುತ್ತಾರೆ. ಗಾಂಧಿಯವರು ಸಾರ್ವಜನಿಕರಿಗೆ ದರ್ಶನ ಕೊಡುವುದು ಅದೊಂದೇ ಕಾಲದಲ್ಲಿ ಎಂದು ಹೇಳಬಹುದು. ಎತ್ತರವಾದ ರಂಗಸ್ಥಳ. ಅದರ ಮೇಲೆ, ಎಷ್ಟು ದೂರ ಬೇಕಾದರೂ ಗಾಂಧಿ

ಯುವರು ಕಾಣುವಂತೆ ಒಂದು ಕುರ್ಚಿ, ಮೈಕ್ರೊಫೋನ್; ಗಾಂಧಿಯುವರ ವಾತಾವರಣವೆಲ್ಲಾ ಆ ಬಾಳಿನ ಧ್ಯೇಯಕ್ಕೆ ಅನುಸಾರವಾಗಿಯೇ ಇದೆ. ಆ ಜೀವನದ ಚಟುವಟಿಕೆಗಳು ಬಗೆಬಗೆಯುವಾದರೂ ಗುರಿ ಒಂದೇ ಮುಖ. ಗಾಂಧಿಯುವರಿಗೆ ಸಂಬಂಧಪಟ್ಟ ಯಾವ ವಸ್ತುವನ್ನು ನೋಡಿದರೂ ಸ್ವಲ್ಪ ಹೆಚ್ಚುಕಡಿಮೆ ಆ ಬಾಳಿನ ಪೂರ್ಣ ರೂಪ ಮನಸ್ಸಿಗೆ ನಾಟುವುದು. ಪ್ರಾರ್ಥನೆಯ ರಂಗಸ್ಥಳದ ನಾಲ್ಕು ದಿಕ್ಕುಗಳಿಗೂ ನಾಲ್ಕು ಬಗೆಯ ವೇದಿಕೆಯ ಉದ್ದಕ್ಕೂ ಚಿತ್ರಗಳನ್ನು ಬರೆದಿದ್ದರು ದೇವಸ್ಥಾನಗಳು, ಮಸೀದಿಗಳು, ಬುದ್ಧಸ್ತೂಪಗಳು, ಜೈನವಿಹಾರಗಳು, ಚರ್ಚುಗಳು. ಒಂದು ಕಡೆ "ನಮ್ಯೋಹೋ ರೇಂಗೆ ಕ್ಯೋ" ಎಂಬ ನುಡಿ ಇದು ಬೌದ್ಧ ಪ್ರಾರ್ಥನೆ. ಇದು ಆಶ್ರಮದ ಪ್ರಾರ್ಥನೆಯಲ್ಲಿ ಸೇರಿದ ಬಗೆಯನ್ನು ಕುರಿತು ಗಾಂಧಿಯುವರೇ ಹೀಗೆ ಹೇಳಿದ್ದಾರೆ.—

"ಆಶ್ರಮದಲ್ಲಿ ಚೀಣರು ಬರ್ಮೀಯರು ಯುಹೂದ್ಯರು ಸಿಲೋನಿನವರು ಮುಸಲ್ಮಾನರು ಪಾರಸಿಗಳು ಆಗಿಂದಾಗ್ಗೆ ಬಂದು ವಾಸಿಸುತ್ತಿದ್ದಾರೆ. ೧೯೩೫ರಲ್ಲಿ ಇಬ್ಬರು ಜಪಾನ್ ಸಾಧುಗಳು ಬಂದರು. ಅವರ ಪೈಕಿ ಒಬ್ಬರು ಮೊನ್ನೆಮೊನ್ನೆಯುವರೆಗೆ ಅಂದರೆ ಯುದ್ಧ ಪ್ರಾರಂಭವಾಗುವವರೆಗೆ ಆಶ್ರಮದಲ್ಲಿಯೇ ಇದ್ದರು ಆತ ಸೇವಾಗ್ರಾಮದ ಆದರ್ಶವಾಸಿಯಾಗಿದ್ದ ಆತ ಯಾರೊಂದಿಗೂ ಯಾವಾಗಲೂ ನಿಷ್ಠುರವಾಗಿ ಮಾತನಾಡಲಿಲ್ಲ. ನಿಶ್ಶಬ್ದವಾಗಿ ಕೆಲಸ ಮಾಡುತ್ತಿದ್ದ. ತನಗೆ ಸಾಧ್ಯವಾದಷ್ಟು ಹಿಂದಿಯನ್ನು ಕಲಿತ. ಆತನ ನಿಯಮ ನಿಷ್ಠುರ ತಾನು ಮಾಡಿದ ಪ್ರತಿಜ್ಞೆಗಳನ್ನು ಶಿಸ್ತಿನಿಂದ ಪಾಲಿಸಿದ. ಪ್ರತಿ ಬೆಳಿಗ್ಗೆಯೂ ಸಾಯಂಕಾಲವೂ ತನ್ನ ಮೃದಂಗವನ್ನು ಬಾರಿಸುತ್ತಾ 'ಮಂತ್ರ'ವನ್ನು ಜಪಿಸುತ್ತಾ ಆಶ್ರಮದಲ್ಲೆಲ್ಲಾ ತಿರುಗುತ್ತಿದ್ದ. ಆಶ್ರಮದ ಸಂಧ್ಯಾಕಾಲದ ಪ್ರಾರ್ಥನೆ ಆತನ "ನಮ್ಯೋ ಹೋ ರೇಂಗೆ ಕ್ಯೋ (ಅಂದರೆ ಎಲ್ಲಾ ಧರ್ಮಗಳಿಗೂ ಮೂಲವಾದ ಬುದ್ಧನಿಗೆ ನಮಸ್ಕರಿಸುತ್ತೇನೆ) ಎಂಬ ಮಂತ್ರದಿಂದ ಪ್ರಾರಂಭವಾಗುತ್ತಲಿದ್ದಿತು ಪೋಲಿಸಿನವರು ಮೊದಲು ತಿಳಿಸದೆ ಆತನನ್ನು ಕರೆದುಕೊಂಡು ಹೋಗಲು ಬಂದಾಗ ಆತ ಶಾಂತನಾಗಿ ಅನಾಸಕ್ತಿಯಿಂದ ಎಷ್ಟು ಬೇಗ ಸಿದ್ಧನಾದನೆಂಬುದನ್ನು ಮರೆಯುವುದು ನನ್ನಿಂದ ಸಾಧ್ಯವಿಲ್ಲ. ತನ್ನ ಪ್ರಿಯವಾದ ಮಂತ್ರವನ್ನು ಉಚ್ಚರಿಸಿ ಮೃದಂಗ

ವನ್ನು ನನ್ನಲ್ಲಿಯೇ ಬಿಟ್ಟು ಆತ ಹೊರಟ ನನ್ನ ಬಾಯಿಯಿಂದ ಸ್ವಾಭಾವಿಕ ವಾಗಿ 'ನೀವು ನಮ್ಮನ್ನು ಬಿಟ್ಟು ಹೋಗುತ್ತಿದ್ದೀರಿ. ಆದರೆ ನಿಮ್ಮ ಮಂತ್ರವು ನಮ್ಮ ಪ್ರಾರ್ಥನೆಯ ಭಾಗವಾಗಿ ಉಳಿಯುವುದು" ಎಂಬ ಮಾತುಗಳು ಬಂದವು. ಅಂದಿನಿಂದ ಆತ ಕಣ್ಮರೆಯಾಗಿದ್ದರೂ ನಮ್ಮ ಆಶ್ರಮ ಪ್ರಾರ್ಥನೆ ಬೆಳಿಗ್ಗೆ ಮತ್ತು ಸಂಧ್ಯಾಕಾಲ ಈ ಮಂತ್ರದಿಂದಲೇ ಪ್ರಾರಂಭವಾಗುತ್ತದೆ. ನನಗೆ ಇದು ಸಾಧು ಕೇಶವನ ತೈಲಧಾರಾವಚ್ಛಿನ್ನ ವಾದ ಭಕ್ತಿಯನ್ನೂ ಸಾತ್ವಿಕತೆಯನ್ನೂ ಜ್ಞಾಪಕ ಕೊಡುತ್ತದೆ "

ಹೀಗೆ ಅಂದಿನಿಂದ ಬುದ್ಧಮಂತ್ರ ಆಶ್ರಮ ಪ್ರಾರ್ಥನೆಯ ಭಾಗ ವಾಗಿದೆ. ಪ್ರಾರ್ಥನೆಯ ವೇದಿಕೆಯ ಮತ್ತೊಂದು ಭಾಗದಲ್ಲಿ "ಬಿಸ್ಮಿಲ್ಲಾ ಹಿರ್‌ಹಮಾ ನಿರ್‌ಹೀಮ್" ಎಂಬ ಕುರಾನ್ ವಾಕ್ಯ; ಇನ್ನೊಂದೆಡೆ "ದುಃಖೇಷ್ವನುದ್ವಿಗ್ನ ಮನಾಃ ಸುಖೇಷು ವಿಗತ ಸ್ಪೃಹಃ" ಎಂಬ ಗೀತಾ ವಾಕ್ಯ. ಪ್ರಾರ್ಥನೆಯ ಪ್ರದೇಶವನ್ನು ನೋಡಿದ ಕೂಡಲೇ ಜನರಿಗೆ ಅದು ದೇವಸ್ಥಾನವೆಂಬ ಭಾವವುಂಟಾಗುತ್ತಿದ್ದಿತು.

ಗಾಂಧಿಯವರು ಎಂಟು ವರುಷಗಳಿಗೆ ಹಿಂದೆ ಮದರಾಸಿಗೆ ಬಂದಿದ್ದಾಗ, ತಾವು ಭಾಷಣ ಮಾಡಬೇಕಾಗಿದ್ದ ಸಭೆಯಲ್ಲಿ ಸ್ವಲ್ಪ ಗದ್ದಲ ವಾದುದರಿಂದ ಭಾಷಣವನ್ನೇ ನಿಲ್ಲಿಸಿ ಬಿಟ್ಟಿದ್ದರು. ಮದರಾಸಿನಲ್ಲಿ ಮೊದಲ ದಿನದ ಪ್ರಾರ್ಥನೆಯ ಮುಂಚೆ ಶ್ರೀ ಸಿ. ರಾಜಾಜಿಯವರು ಸಭೆಯಲ್ಲಿ ಶಾಂತಿ ಇರಬೇಕೆಂದು ಕೇಳಿಕೊಂಡರು. ಜನ ನಿಶ್ಶಬ್ದರಾಗಿದ್ದರು.

ಅದು ಮದರಾಸಿಗೆ ಮಹತ್ತಾದ ದಿನ. ಬಿಸಿಲಿನಿಂದ ಬಳಲಿದ ಪೈರು ಮಳೆಯನ್ನು ಎದುರುಗೊಂಡಂತೆ ಜನ ಗಾಂಧಿಯವರನ್ನು ಎದುರುಗೊಂಡರು. ಗಾಂಧಿಜಿ ಸರಿಯಾಗಿ ಐದೂವರೆ ಗಂಟೆಗೆ ಪ್ರಾರ್ಥನೆಗೆ ಬಂದರು ಥಕ್ಕರ್‌ಬಾಪು, ವಿ. ಭಾಷ್ಯಂ, ಸುಧೀರ್ ಘೋಷ್, ಕಾಮರಾಜ ನಾಡರ್, ಕೆ ಭಾಷ್ಯಂ ಮುಂತಾದವರು ವೇದಿಕೆಯ ಮೇಲೆ ಕುಳಿತು ಮಾತನಾಡುತ್ತಿದ್ದರು. ಕುಳಿತು ಕೊಂಡ ಕೂಡಲೆ "ನಮ್ಮೊ" ಎಂದರು. ಅನಂತರ ಗಾಂಧಿಯವರು ಎರಡು ನಿಮಿಷ ಮೌನ ಬೇಡಿದರು. ಜನಸಮುದಾಯ ಸಮುದ್ರ ದಂಡೆ ವಿಶಾಲ ವಾಗಿದ್ದರೂ ನಿಶ್ಶಬ್ದವಾಗಿದ್ದಿತು. ಉಪನಿಷತ್ತು ಭಗವದ್‌ಗೀತೆ ಕುರಾನ್ ಇವುಗಳ ಭಾಗಗಳನ್ನು ಉಚ್ಚರಿಸಿದ ನಂತರ ಮೀರಾಬಾಯಿಯ ಗೀತೆ

ಒಂದನ್ನು ಹಾಡಿದರು. ಗಾಂಧಿಯವರು ಆ ಗೀತೆಯನ್ನು ಹಾಡುವಾಗ ಧ್ಯಾನಾಸಕ್ತರಾಗಿದ್ದರು. ಅನಂತರ ರಾಮಧುನ್ "ಭಜಮನ ಪ್ಯಾರೆ ರಾಜಾರಾಮ್; ಭಜಮನೆ ಪ್ಯಾರೆ ಸೀತಾರಾಮ್" ಪ್ರಾರಂಭವಾಯಿತು. ನೆರೆದಿದ್ದವರೆಲ್ಲಾ ಗಟ್ಟಿಯಾಗಿ ಹಾಡಬೇಕೆಂದೂ ಗಟ್ಟಿಯಾಗಿ ಚಪ್ಪಾಳೆತಟ್ಟಬೇಕೆಂದೂ ಗಾಂಧಿಯವರು ಹೇಳಿದರು. ಅನೇಕ ಸಹಸ್ರ ಕೈಗಳು, ತಲೆಯ ಮೇಲಕ್ಕೆ ಕೈಗಳನ್ನೆಲ್ಲ ಗಟ್ಟಿಯಾಗಿ ಚಪ್ಪಾಳೆತಟ್ಟುವ ನೋಟ ಆಕರ್ಷಣೀಯವಾಗಿದ್ದಿತು ಗಾಂಧಿಯವರ ಭಜನೆ ಚೈತನ್ಯ, ತುಕಾರಾಮ್‌ರ ಜ್ಞಾಪಕ ತರುವದಾಗಿದ್ದಿತು. ಅಂದು ಆ ಭಕ್ತಾಗ್ರೇಸರರು ಈ ಜಗತ್ತನ್ನೇ ಮರೆತು ದೇವರಲ್ಲಿ ತಲ್ಲೀನರಾಗಿ ತಮ್ಮ ಅನುಯಾಯಿಗಳೊಂದಿಗೆ ರಾಮಧ್ಯಾನದಲ್ಲಿ ಮನಸ್ಸನ್ನು ಹರಿಯಬಿಟ್ಟು ಭಾವಪರವಶರಾದಂತೆ ಇಂದು ಜನರು ಗಾಂಧಿ ಸಾನ್ನಿಧ್ಯದಲ್ಲಿ ಭಕ್ತರಾದರು. ಶ್ರೀರಾಮಚಂದ್ರಕೀ ಜೈ ಎಂಬ ಜಯಘೋಷದೊಂದಿಗೆ ಸಭೆ ಮೌನವಾಗಿ ಸೇರಿತು. ಅನಂತರ ಗಾಂಧಿಯವರು ಮುಂದಲ ಭಾಷಣ ಮಾಡಿದರು.

"ಅನೇಕ ವರುಷಗಳ ನಂತರ ಈಗ ನಿಮ್ಮಲ್ಲಿಗೆ ಬರಲು ದೇವರು ಅವಕಾಶ ಕಲ್ಪಿಸಿದುದಕ್ಕಾಗಿ ಸಂತೋಷಪಡುತ್ತೇನೆ. ರೌಲೆಟ್ ಆಕ್ಟ್ ಸತ್ಯಾಗ್ರಹ ಮೊದಲು ಪ್ರಾರಂಭವಾದುದು ತಮಿಳು ನಾಡಿನಲ್ಲಿ ಎಂಬುದು ನಿಮಗೆ ಜ್ಞಾಪಕವಿರಬಹುದು. ಆಗ ನಾನು ಸ್ವರ್ಗೀಯ ಕಸ್ತೂರಿ ರಂಗಯ್ಯಂಗಾರ್ಯರ ಸಲಹೆಯಂತೆ ಮದರಾಸಿಗೆ ಬಂದೆ. ಕಸ್ತೂರಿ ರಂಗಯ್ಯಂಗಾರ್ಯರು ನನ್ನನ್ನು ಶ್ರೀ. ರಾಜಾಜಿಯವರ ಮನೆಯಲ್ಲಿ ಇಳಿಸಿದರು. ರಾಜಾಜಿ ಸೇಲಂನಿಂದ ಆಗ ತಾನೆ ಮದರಾಸಿಗೆ ಬಂದು, ಒಳ್ಳೆಯ ಪ್ರಬಲರಾದ ವಕೀಲರಾಗಿದ್ದರು. ಸೇಲಂನಲ್ಲಿ ಪೌರಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿ ಯಶಸ್ಸುಗಳಿಸಿದ್ದರು. ಕಸ್ತೂರಿ ರಂಗಯ್ಯಂಗಾರ್ಯರು ನನ್ನನ್ನು ರಾಜಾಜಿಯ ಮನೆಯಲ್ಲಿ ಇಳಿಸಿದುದರಿಂದ ನನಗೆ ಮೊದಲು ಸ್ವಲ್ಪ ಬೇಸರಿಕೆಯಾಯಿತು. ರಾಜಾಜಿ ನನಗೆ ಹೊಸಬರಾಗಿದ್ದರು.. ಮತ್ತು ವಕೀಲಿ ವೃತ್ತಿಯಲ್ಲಿದ್ದರು. ಆದರೆ ಸ್ವರ್ಗೀಯ ಮಹದೇವ ದೇಸಾಯಿ "ರಾಜಾಜಿ, ಕಸ್ತೂರಿ ರಂಗಯ್ಯಂಗಾರ್ಯರ ಆಪ್ತಮಿತ್ರರೆಂದೂ ದಕ್ಷಿಣ ಆಫ್ರಿಕದ ನನ್ನ ಕಾರ್ಯಗಳನ್ನು ಮೆಚ್ಚುಗೆಯಿಂದ ಅನುಸರಿಸುತ್ತಿರುವರೆಂದೂ, ನಾನು ಹೇಳಿದರೆ ವಕೀಲಿ ವೃತ್ತಿಯನ್ನು ಸಹ ತೊರೆಯುವರೆಂದೂ ಹೇಳಿದ್ದರು. ಒಳ್ಳೆಯ ಸಂಪಾದನೆಯುಳ್ಳ ವೃತ್ತಿ

ಯನ್ನು ವಕೀಲರು ಇಷ್ಟು ಬೇಗ ತೊರೆಯುವರೆಂಬ ಮಾತಿನಲ್ಲಿ ನನಗೆ ನಂಬಿಕೆ ಇರಲಿಲ್ಲ. ದೇಸಾಯಿಯ ಭರವಸೆಯನ್ನು ನಾನು ಒಪ್ಪಿದೆ. ಅನಂತರದ ಸಂಗತಿಗಳಿಂದ ದೇಸಾಯಿಯ ಮಾತು ಸತ್ಯವೆಂಬುದು ಗೊತ್ತಾಯಿತು. ಇಂದಿನ ರಾಜಾಜಿ, ನಾನು ಅಂದು ಮೊದಲು ನೋಡಿದ ರಾಜಾಜಿಯೇ. ಆ ಸಂದರ್ಭದಲ್ಲಿಯೇ ನನಗೆ ಮೊದಲನೆಯದಾಗಿ ಸ್ವರ್ಗೀಯ ಸಿ. ವಿಜಯರಾಘವಾಚಾರ್ಯರ ಪರಿಚಯವಾಯಿತು.

"ಎಪ್ರೆಲ್ ಆರನೆಯ ತಾರೀಖು ರಾಷ್ಟ್ರೀಯ ವಾರದದಿನವಾಗಿರುವುದು ಸರಿಯಷ್ಟೆ. ಈ ಪವಿತ್ರವಾದ ತೀರ್ಮಾನಕ್ಕೆ ನಾವು ಬಂದುದು ರಾಜಗೋಪಾಲಾಚಾರ್ಯರ ಮನೆಯಲ್ಲಿಯೇ. ಆ ಆರನೆಯ ಎಪ್ರೆಲ್ ನಮ್ಮ ದೇಶಕ್ಕೆ ಅತಿ ಪ್ರಾಮುಖ್ಯವಾದ ದಿನ. ಸತ್ಯಾಗ್ರಹ ಈ ದೇಶದಲ್ಲಿ ಜನ್ಮ ತಾಳಿದುದು ಅಂದು. ದೇಶ ಅದ್ಭುತ ರೀತಿಯಿಂದ ಎಚ್ಚೆತ್ತಿತು. ಅದು ವರೆಗೆ ದೇಶದಲ್ಲಿ ಅಂತಹ ಚೈತನ್ಯ ಕಂಡಿರಲಿಲ್ಲ. ದೇಶವನ್ನು ಹಾಗೆ ಜಾಗ್ರತೆಗೊಳಿಸಿದ ಈ ಪ್ರಾಂತಕ್ಕೆ ಮತ್ತೆ ಬಂದು, ಅವುಗಳನ್ನೆಲ್ಲಾ ನೆನೆಸಿಕೊಳ್ಳಲು ನನಗೆ ಬಹಳ ಆನಂದವಾಗುವುದು.

"ಈಗ ಮದರಾಸಿಗೆ ಬರಲು ನನಗೆ ಇಷ್ಟವಿರಲಿಲ್ಲ ಬಂಗಾಳದಿಂದ ಸೇವಾಗ್ರಾಮಕ್ಕೆ ನೆಟ್ಟಗೆ ಹಿಂದಿರುಗಬೇಕೆಂದು ಮಾಡಿದ್ದೆ. ಆದರೆ ವಿಧಿ ನನ್ನನ್ನು ಮದರಾಸಿಗೆ ತಂದಿದೆ ಎಂದು ಭಾವಿಸುತ್ತೇನೆ. ಇದರಿಂದ ಏನೋ ಒಂದು ಫಲವಿರಬಹುದು. ಹಿಂದಲ ನನ್ನ ಮದರಾಸು ಭೇಟಿಯಂತೆ ಇದೂ ಫಲಕಾರಿಯಾದೀತೆಂದು ಭಾವಿಸುತ್ತೇನೆ

"ನೆನ್ನೆ ನನ್ನ ಮಾತುಗಳು ನಿಮಗೆ ತಿಳಿಯಲಿಲ್ಲ. ನಾನು ಹಿಂದುಸ್ತಾನಿಯಲ್ಲಿ ಹೇಳಿದೆ. ರಾಜಾಜಿಗೆ ಸಹ ಅದು ಪೂರ್ಣವಾಗಿ ತಿಳಿಯಲಿಲ್ಲ ಅವರು ಈ ದೃಷ್ಟಿಯಿಂದ ಮೊದಲನೆಯ ತಪ್ಪಿತಸ್ಥರು. ನಿಮ್ಮೊಂದಿಗೆ ಅವರು ತಮಿಳಿನಲ್ಲಿ ಮಾತನಾಡುತ್ತಾರೆ. ಮದರಾಸು ಪ್ರಾಂತದಿಂದ ಹೊರಗೆ ಹೋದಾಗ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಅವರ ಇಂಗ್ಲಿಷು ಬಹಳ ಚೆನ್ನಾಗಿದೆ. ಆದರೆ ಅವರೂ ಹಿಂದುಸ್ಥಾನಿಯಲ್ಲಿ ಮಾತನಾಡುವುದನ್ನು ಇನ್ನೂ ಕಲಿಯಲಿಲ್ಲ. ಹಿಂದುಸ್ಥಾನಿ ಕಲಿಯುತ್ತೇವೆಂದು ನೀವು ಪ್ರತಿಜ್ಞೆ ಮಾಡಬೇಕು. ಆ ಪ್ರತಿಜ್ಞೆಯನ್ನು ಕಾರ್ಯಕಾರಿಯಾಗಿ ಮಾಡು

ತ್ತೇವೆಂದೂ ಪ್ರತಿಜ್ಞೆ ಮಾಡಬೇಕು. ನಿಮ್ಮ ದೇಶದ ಸ್ವಾತಂತ್ರ್ಯಕ್ಕೆ ಇಷ್ಟನ್ನೂ ಮಾಡಲಾರಿರಾ? ತಮಿಳು ನಾಡಿನ ಎರಡು ಕೋಟಿ ಜನರೂ ಇಂಗ್ಲಿಷ್ ಕಲಿಯುವುದು ಸಾಧ್ಯವೆಂದು ಹೇಳುತ್ತೀರಾ? ಅಥವಾ ಉಳಿದ ಭಾರತೀಯರೆಲ್ಲ ನಿಮ್ಮ ನಾಲ್ಕು ಪ್ರಾಂತಭಾಷೆಗಳನ್ನೂ ಅಥವಾ ನಿಮ್ಮ ಯಾವುದಾದರೂ ಪ್ರಾಂತಭಾಷೆಯನ್ನು ಕಲಿಯಬೇಕೆಂದು ಹೇಳುವಿರಾ? ದಕ್ಷಿಣವನ್ನೂ ಉತ್ತರವನ್ನೂ ಒಂದುಮಾಡುವ ಹಿಂದುಸ್ಥಾನಿಯನ್ನು ಕಲಿಯುವುದು ನಿಮ್ಮ ಧರ್ಮವೆಂದು ನಾನು ಹೇಳುತ್ತೇನೆ

"ಹರಿಜನ ನಿಧಿಗೆ ಹಣ ಕೊಡಿ ಹಿಂದು ಧರ್ಮದ ಪವಿತ್ರವಾದ ಹೆಸರಿಗೆ ಕಳಂಕ ತಂದಿರುವ ಅಸ್ಪೃಶ್ಯತೆಯನ್ನು ತೊಡೆದುಹಾಕುವ ನಿಮ್ಮ ಧ್ಯೇಯದ ಗುರುತಿಗಾಗಿ ನಿಧಿ ಕೊಡಿ

"ಪ್ರಾರ್ಥನೆ ನಮ್ಮ ನಿತ್ಯ ಜೀವನದ ಭಾಗವಾಗಬೇಕು. ನೀವು ಯಾವ ಜಾತಿ ಮತ ಪಂಗಡ ಪಂಥದವರಾದರೂ ಸರಿಯೆ ನಿಮ್ಮ ಆಹಾರ, ನೀರಿಗಿಂತ ಪ್ರಾರ್ಥನೆ ನಿಮಗೆ ಮುಖ್ಯವಾದುದು. ಆಶ್ರಮದ ಪ್ರಾರ್ಥನೆಯನ್ನು ನೀವು ಕಲಿಯಬೇಕು. ಅದರ ಅರ್ಥ ನಿಮಗೆ ತಿಳಿಯಬೇಕು. ಪ್ರಾರ್ಥನೆಗೆ ಬರುವವರು ಪ್ರಾರ್ಥನೆಯಲ್ಲಿ ಭಾಗ ವಹಿಸಬೇಕು. ತಾಳ ಸಹಿತವಾಗಿ ರಾಮಧುನ್ ಭಜನೆಯನ್ನು ಹಾಡಬೇಕು.

ಈ ಭಾಷಣದ ನಂತರ ಗಾಂಧಿಯವರು ಎದ್ದು ನಿಂತು ನೆರೆದಿದ್ದವರಿಗೆ ಕೈಮುಗಿದು ಒಳಕ್ಕೆ ಹೋದರು.

× × × ×

೨೩ನೆಯ ತಾರೀಖು ಪ್ರಾರ್ಥನೆಗೆ ಮೊದಲ ದಿವಸಕ್ಕಿಂತ ಜನ ಹೆಚ್ಚಾಗಿ ಸೇರಿದರು ಮದರಾಸಿನವರಿಗೆ ಆಗ ಇದ್ದುದು ಒಂದೇ ದಾರಿ. ಹಿಂದೀ ಪ್ರಚಾರ ಸಭೆಯ ದಾರಿ ನೆರೆದಿದ್ದವರಲ್ಲಿ ಸ್ತ್ರೀಯರೇ ಬಹಳ. ಸಭೆಯಲ್ಲಿ ಗದ್ದಲ ಹೆಚ್ಚಾಗಿದ್ದಿತು. ರಾಜಾಜಿ, ಗದ್ದಲ ಕಡಿಮೆ ಮಾಡಲು ಪ್ರಯತ್ನಿಸಿದರು. "ಗಾಂಧಿಜಿಯನ್ನು ನೋಡಿ ನಿಮಗೆ ಹುಚ್ಚು ಆನಂದವಾಗುವುದೇನೊ ಸರಿ. ಆದರೆ ನೀವು ಶಾಂತಿಯಿಂದ ಮಾತ್ರ ಇರಬೇಕೆಂದು" ಹೇಳುತ್ತಿದ್ದರು. ಹರಿಜನ ನಿಧಿಗೆ ದುಡ್ಡನ್ನು ಎತ್ತುತ್ತಿದ್ದ ಸ್ವಯಂಸೇವಕಿಯರ ಡಬ್ಬಿ ಗಡಿಗೆಗಳು ಬಹಳ ಸದ್ದುಮಾಡುತ್ತಿದ್ದವು. ರಾಜಾಜಿ ನಗುತ್ತಾ

"ಸ್ವಲ್ಪ ಮೆಲ್ಲಗೆ ಆಡಿಸಿ. ಅದರ ತಳ ಒಡೆದೀತು" ಎಂದರು. ಹಿಂದಿ ಪ್ರಚಾರ ಸಭೆಯ ಮಗ್ಗುಲ ಪ್ರಾರ್ಥನಾ ಮೈದಾನದಲ್ಲಿ ಐವತ್ತು ಸಾವಿರ ಜನ ನೆರೆಯುವ ಅವಕಾಶವಿದ್ದರೂ, ಆ ಸ್ಥಳವೂ ಸಾಲದೆ ಹೋಯಿತು. ಗಾಂಧಿಯವರು ೫-೩೫ಕ್ಕೆ ಸರಿಯಾಗಿ ಬಂದರು. ಪ್ರಾರ್ಥನೆಯಾದ ನಂತರ ಶ್ರೀಮತಿ ಸರೋಜಿನಿ ಮಹದೇವನ್‌ರವರು ಒಂದು ತಮಿಳ್ ಕೀರ್ತನೆ ಹಾಡಿದರು. ಪ್ರಾರ್ಥನೆಯ ಕಾಲದಲ್ಲಿ ಗದ್ದಲ ವಿಶೇಷವಾಗಿದ್ದುದರಿಂದ ಗಾಂಧಿಯವರು ತಮ್ಮ ಪದ್ಧತಿಗೆ ವಿರೋಧವಾಗಿ ನಿಂತುಕೊಂಡೇ ಇದ್ದರು. ಆ ನಿಲುವಿನಿಂದ ಗಾಂಧಿಯವರಿಗೆ ಬೇಸರಿಕೆಯಾಯಿತು. ಸ್ವರಾಜ್ಯ ಬರುತ್ತಿದೆ. ಆದರೆ ಜನ ಅದನ್ನು ಹೇಗೆ ಎದುರುಗೊಳ್ಳುತ್ತಾರೆ ಈ ನಲವತ್ತು ಕೋಟಿ ಜನರ ಮೇಲೆ ಸ್ವಾತಂತ್ರ್ಯದ ಪ್ರತಿಕ್ರಿಯೆ ಹೇಗಾಗುತ್ತದೆ ಎಂಬುದು ಈಚೆಗೆ ಗಾಂಧಿಯವರ ನಿತ್ಯದ ಅಧ್ಯಯನವಾಗುತ್ತಿದೆ. ಗುಂಪು ಎಷ್ಟೇ ದೊಡ್ಡದಾಗಿರಲಿ, ಅವರು ಅದನ್ನು ತಮ್ಮ ನಂಬಿಕೆಗೆ ಪಾತ್ರವಾಗಿ ಮಾಡಿಕೊಂಡು ತಮ್ಮ ಹೃದಯವನ್ನು ಕೂಡಲೇ ಬಿಚ್ಚುತ್ತಾರೆ. ಗಾಂಧಿಯವರು ನಿಂತುಕೊಂಡೇ ಹೀಗೆ ಹೇಳಿದರು.

"ಈಚೆಗೆ ಬಹು ವರುಷಗಳಿಂದ ನಿಂತುಕೊಂಡು ಸಭೆಗಳನ್ನು ಕುರಿತು ಮಾತನಾಡುವುದು ನನಗೆ ತಪ್ಪಿ ಹೋಗಿದೆ. ಅವಲಂಬನವಿಲ್ಲದೆ ನಿಲ್ಲುವುದೂ ಸಹ ನನ್ನಿಂದ ಸಾಧ್ಯವಿಲ್ಲ. ಈಗ ನಿಮ್ಮ ಗದ್ದಲವನ್ನು ನೋಡಿ ನಾನು ಉದ್ದಕ್ಕೂ ನಿಂತೇ ಇದ್ದೇನೆ. ಆದರೆ ನಿಶ್ಶಕ್ತಿಯಿಂದ, ನನಗೆ ನಿಲ್ಲಲು ಸಾಧ್ಯವಿಲ್ಲದುದಾಗಿದೆ. ನಿಮಗೆ ನಿಜವಾಗಿ ಸ್ವಾತಂತ್ರ್ಯ ಬೇಕಾದರೆ, ಇದರ ಹತ್ತರಷ್ಟು ದೊಡ್ಡಗುಂಪು ಇದ್ದರೂ ನಿಮ್ಮಲ್ಲಿ ಶಾಂತಿ ಇರಬೇಕು. ಈ ಜಗತ್ತಿನಲ್ಲಿ ಸ್ವರಾಜ್ಯ ಸ್ವಾತಂತ್ರ್ಯ ದೊರೆಯದಿದ್ದರೆ, ಮುಂದಲ ಜಗತ್ತಿನಲ್ಲಿ ಮೋಕ್ಷ ಖಂಡಿತ ದೊರೆಯುವುದಿಲ್ಲ. ಗುಲಾಮರಿಗೆ ಮೋಕ್ಷವಿಲ್ಲ. ಮುಂದಲ ಜಗತ್ತಿನ ಮೋಕ್ಷದ ಮುನ್ನುಡಿ ಇಲ್ಲಿಯೇ ಆಗಬೇಕು.

"ಆಹಾರ ಎಷ್ಟೇ ಉತ್ತಮವಾದುದಾಗಿರಲಿ, ಜೀರ್ಣಿಸಿಕೊಳ್ಳಲಾರದವನಿಗೆ ಅದು ವಿಷವೇ. ಹಾಗೆಯೇ ಶಿಸ್ತು ಇಲ್ಲದಿದ್ದರೆ ಸ್ವರಾಜ್ಯದಿಂದ ನಮಗೆ ಲಾಭವೇ ನಷ್ಟವೇ ಎಂಬುದು ಸಹ ಸಂಶಯದ ಪ್ರಶ್ನೆ. ಸ್ವರಾಜ್ಯ ಸಾಧನೆಗಾಗಿ ನಾನು ನಿಮ್ಮ ಮುಂದೆ ಇಟ್ಟಿರುವ ಮಾರ್ಗ ಅತಿ ಸುಲಭ

ವಾಗಿದೆ. ಎಳೆಯ ಮಗು ಸಹ ಇದನ್ನು ಅನುಸರಿಸಬಹುದು. ಆದರೆ ಈ ಗದ್ದಲದಲ್ಲಿ ನಾನು ಅದನ್ನು ಕುರಿತು ನಿಮ್ಮೊಂದಿಗೆ ಮಾತನಾಡುವುದಿಲ್ಲ.

"ನಾನು ಅನೇಕ ವರುಷಗಳಿಂದ ಹೀಗೆ ಸಾರ್ವಜನಿಕ ಪ್ರಾರ್ಥನೆಯನ್ನು ನಡೆಸುತ್ತೇನೆ. ಆಗಿಂದಾಗ್ಗೆ ಪ್ರಾರ್ಥನೆಯಲ್ಲಿ ಅನೇಕ ಒಳ್ಳೆಯ ಬದಲಾವಣೆಗಳನ್ನು ಮಾಡಿದೆ. ಎಲ್ಲವನ್ನೂ ಇವತ್ತು ವಿವರಿಸಬೇಕೆಂದು ಮಾಡಿದ್ದೆ. ಆದರೆ ಈ ಗದ್ದಲದಲ್ಲಿ ಯಾವುದೂ ಸಾಧ್ಯವಿಲ್ಲ.

"ಈಗ ಹಾಡಿದ ತಮಿಳು ಗೀತೆ ಈಶ್ವರ ಪ್ರಾರ್ಥನೆ ಸೋದೆಪುರದಲ್ಲಿದ್ದಾಗ ಕೇಳಿದ ಗುರುದೇವರ ಗೀತೆ ಜ್ಞಾಪಕಕ್ಕೆ ಬರುತ್ತದೆ. ಆ ಗೀತೆಯಲ್ಲಿ ಭಕ್ತನು ದೇವರನ್ನು ಹೀಗೆ ಪ್ರಾರ್ಥಿಸುತ್ತಾನೆ" ನನ್ನ ದೌರ್ಬಲ್ಯವನ್ನು ಜಯಿಸಲು ನನ್ನಿಂದ ಸಾಧ್ಯವಾಗದಾಗ ರುದ್ರನ ಭಯಂಕರ ರೂಪಿನಲ್ಲಿ ಪ್ರತ್ಯಕ್ಷನಾಗು. ದೌರ್ಬಲ್ಯವು ಭಸ್ಮವಾಗಲಿ ಅಥವಾ ನಾನೇ ಭಸ್ಮವಾಗುತ್ತೇನೆ.

"ಪ್ರಾರ್ಥನೆಯ ಈ ಕೊನೆಯಲ್ಲಿಯಾದರೂ ಶಾಂತವಾಗಿರುವುದಕ್ಕೆ ಸಂತೋಷಪಡುತ್ತೇನೆ. ಸ್ವಯಂಸೇವಕರು ಎಲ್ಲರಿಗೂ ಶಾಂತಿಯನ್ನು ಕಲಿಸಬೇಕು. ಅಸ್ಸಾಂ ಬಂಗಾಳಗಳಲ್ಲಿ ನಾವು ಕಂಡ ಶಾಂತಿ ಇಲ್ಲಿಯೂ ಬರಲಿ"

೨೪ನೆಯ ತಾರೀಖಿನ ಪ್ರಾರ್ಥನಾ ಸಭೆ ಮೊದಲ ದಿನಕ್ಕಿಂತ ಪ್ರಚಂಡವಾಗಿದ್ದಿತು. ಸ್ವಯಂಸೇವಕರ ವ್ಯವಸ್ಥೆಯಿಂದ ಸ್ವಲ್ಪ ಶಾಂತಿ ನೆಲೆಸಿದ್ದಿತು. ಗಾಂಧಿಯವರಿಗಾಗಿಯೂ ಅವರ ಜತೆಯವರಿಗಾಗಿಯೂ ಎತ್ತರವಾದ ವೇದಿಕೆಯನ್ನು ನಿರ್ಮಿಸಿದ್ದರು. ವೇದಿಕೆಯ ಮೇಲೆ ದೊಡ್ಡ ವಿದ್ಯುದ್ದೀಪಗಳನ್ನು ಹಾಕಿದ್ದುದರಿಂದ ಗಾಂಧಿಯವರ ದರ್ಶನ ನೆರೆದಿದ್ದವರಿಗೆ ಚೆನ್ನಾಗಿ ಆಗುತ್ತಿದ್ದಿತು.

ಗಾಂಧಿಯವರು ಮಿತ್ರರೊಂದಿಗೆ ೫-೩೫ಕ್ಕೆ ಸರಿಯಾಗಿ ಬಂದರು. ಬಂದವರೇ 'ಶಾಂತರಾಗಿರಿ' ಎಂದು ಹಿಂದಿಯಲ್ಲಿ ಹೇಳಿದರು. ಒಬ್ಬರು ಅದರ ತಮಿಳು ಅನುವಾದವನ್ನು ಹೇಳಿದರು. ಮತ್ತೊಬ್ಬರು ತೆಲುಗಿನಲ್ಲಿಯೂ ಹೇಳಿ ಎಂದರು. ಗಾಂಧಿಯವರು ಆಗಲಿ ತೆಲುಗಿನಲ್ಲಿಯೂ ಹೇಳಿ ಎಂದರು. ತೆಲುಗಿನಲ್ಲಿಯೂ ಹೇಳಿದುದಾಯಿತು. ಗಾಂಧಿ ನಗುತ್ತಾ ಮಲೆಯಾಳದವರೂ ಕನ್ನಡದವರೂ ಇಲ್ಲಿ ಇಲ್ಲವೋ ಎಂದು ಕೇಳಿದರು.

ಭಜನೆ ಪ್ರಾರಂಭವಾಯಿತು. ಅಂದು ತೆಲುಗಿನಲ್ಲಿ ಒಂದು ಹಾಡನ್ನು ಹಾಡಿದರು. ರಾಮಧುನ್ ಆದನಂತರ ಗಾಂಧಿಯವರು ನಾಲ್ಕು ಮಾತು ಗಳನ್ನಾಡಿದರು. ಗಾಂಧಿಯವರು ಮೊದಲು ಈ ಪ್ರಾಂತಾಭಿಮಾನವನ್ನೂ ಭಾಷೆಗಳ ಅಂಧಪ್ರೇಮವನ್ನೂ ತೆಗಳಿದರು. ಇವೆಲ್ಲಾ ದೇಶದ ಸ್ವಾತಂತ್ರ್ಯ ಘಾತಕಗಳೆಂದರು. ಹಿಂದೂ ದೇಶದ ಜನರೆಲ್ಲ ಒಬ್ಬ ತಾಯಿಯ ಮಕ್ಕಳು. ಇವತ್ತು ನಮ್ಮದು ಭಾಷೆಗಾಗಿ ಹೋರಾಟವಾಗಿದೆ. ನಾಳೆ ಬೇರೆ ಯಾವು ದಕ್ಕಾಗಿಯಾದರೂ ಹೋರಾಟವಾಗಬಹುದು. ಇದರಿಂದ ದೇಶಕ್ಕೆ ಕೆಡಕು ಉಂಟಾಗುತ್ತದೆ. ಈ ಸಣ್ಣ ವ್ಯತ್ಯಾಸಗಳನ್ನು ದೊಡ್ಡದು ಮಾಡಿಕೊಳ್ಳ ಬೇಡಿ. ದೇಶಕ್ಕಾಗಿ ಹೋರಾಡಿ " ಎಂದು ಬೋಧಿಸಿದರು.

ಅದೇ ಹಾಡಿದ್ದ ತ್ಯಾಗರಾಜರ ಕೀರ್ತನೆಯನ್ನು ಕುರಿತು ಗಾಂಧಿ ಹೀಗೆ ಹೇಳಿದರು "ತ್ಯಾಗರಾಜರ ಸ್ಥಾನ ಎಷ್ಟು ದೊಡ್ಡದೆಂಬುದು ನನಗೆ ಗೊತ್ತು. ತಮಿಳುನಾಡು ಆಂಧ್ರ ಮಲೆಯಾಳ ಕರ್ನಾಟಕ ಕೇರಳ ಎಲ್ಲಲ್ಲಿಯೂ ಗಾಯಕರು ತ್ಯಾಗರಾಜರ ಕೀರ್ತನೆಗಳನ್ನು ಹೃದಯಂಗಮ ವಾಗಿ ಧ್ವನಿಯಲ್ಲಿ ಹಾಡುವುದನ್ನು ನಾನು ಕೇಳಿದ್ದೇನೆ. ಈ ಪ್ರಾಂತೀಯ ದುರಭಿಮಾನ ತ್ಯಾಗರಾಜ ಭಕ್ತರಿಗೆ ಅರ್ಹವಾದುದಲ್ಲ. ಕೆಲವರಿಗೆ ತಮಿಳು ಬೇಕು. ಕೆಲವರಿಗೆ ತೆಲುಗು ಬೇಕು. ಹೀಗೆಯೇ ಇನ್ನು ದಕ್ಷಿಣ ಭಾರತ ಬೇರೆ, ಉತ್ತರ ಭಾರತ ಬೇರೆ ಎಂಬ ಭಾವವೂ ಇದೆ ಪೂರ್ಣ ಸ್ವತಂತ್ರ ರಾಗಬೇಕೆಂಬ ಭಾರತೀಯರ ಆಸೆ, ಇಂತಹ ಪ್ರಾಂತೀಯ ಭಾವನೆಗಳೊಡ ನಿರುವುದು ಸಾಧ್ಯವೇ ಇಲ್ಲ. ಒಬ್ಬ ಬಂಗಾಳಿ, ಯಾವುದಾದರೂ ಬಾಬಿನಲ್ಲಿ ಹೆಸರನ್ನು ಗಳಿಸಿದನೆಂದು ಭಾವಿಸೋಣ. ಆ ಗೌರವ ಬರಿಯ ಬಂಗಾಳಕ್ಕೆ ಮಾತ್ರವೇ ಸೇರುತ್ತದೆಯೇ? ಇಲ್ಲ ಅದು ಎಲ್ಲ ಪ್ರಾಂತಗಳಿಗೂ ಸೇರಿದುದು. ನಲವತ್ತು ಕೋಟಿ ಜನರಿಗೂ ಸೇರಿದುದು. ಸ್ವತಂತ್ರರಾಗಬಯಸುವವರಿಗೆ ಈ ಮನೋಭಾವ ಇರಬೇಕು. ತ್ಯಾಗರಾಜರು ಹೀಗೆ ಹೇಳಿದ್ದಾರೆ. "ರಾಮ ನನ್ನು ಕುರಿತು ಹೇಳಿರುವ ಗುಣಗಳನ್ನೆಲ್ಲಾ ಒಂದೆಡೆ ಹಾಕಿ. ರಾಮನ ಮಹಿಮೆಯನ್ನು ಮತ್ತೊಂದೆಡೆ ಹಾಕಿ. ಆಗ ರಾಮನಾಮದ ಮಹಿಮೆಯೇ ಹೆಚ್ಚು ತೂಕವಾಗುವುದು." ತುಳಸೀದಾಸರ ಅಥವಾ ವಾಲ್ಮೀಕಿಯ ರಾಮಾಯಣವನ್ನು ಇತಿಹಾಸದ ದೃಷ್ಟಿಯಿಂದ ಅಭ್ಯಾಸ ಮಾಡುವವರಿಗೆ

ರಾಮನು ಸೀತೆಯನ್ನು ಯಾಕೆ ತ್ಯಾಗ ಮಾಡಿದ? ಮುಂತಾದ ಅನೇಕ ಅನುಮಾನಗಳು ಬರಬಹುದು. ಆದರೆ ರಾಮನು ಏನು ಮಾಡಿದ ಏನು ಹೇಳಿದ ಎಂಬುದನ್ನು ಮರೆತು, ರಾಮನಾಮದ ಮಹಿಮೆಯನ್ನು ಮಾತ್ರ ಯೋಚಿಸಿದರೆ ಆಗ ರಾಮನಾಮವೂ ರಾಮನೂ ಸರ್ವಾಂತರ್ಯಾಮಿಯಾದ ಸಂಶಯ, ವಿಮರ್ಶೆಗಳನ್ನು ಮೀರಿದ ದೇವರೇ ಆಗುತ್ತಾರೆ. ಹಾಗೆಯೇ ಭಾರತೀಯರು ತಮಿಳರು, ಆಂಧ್ರರು, ಗುಜರಾತಿ, ಬಂಗಾಳಿ ಎಂಬ ಭೇದ ಗಳನ್ನು ಮರೆಯಬೇಕು. ಹಿಂದುಸ್ಥಾನದ ವೈಭವವನ್ನೇ ಎಲ್ಲರೂ ಜ್ಞಾಪಿಸಿ ಕೊಳ್ಳಬೇಕು. 'ರಾಮ' ಎಂಬ ಎರಡು ಅಕ್ಷರದಲ್ಲಿ ಅದ್ವಿತೀಯವಾದ ಮಹಿಮೆ ಇದೆ ಹಾಗೆಯೇ 'ಹಿಂದ್' ಎಂಬ ಪದದಲ್ಲಿಯೂ ಅದ್ವಿತೀಯವಾದ ಮಹಿಮೆ ಇದೆ. ಜಗತ್ತಿಗೆ ಭಾರತ ಗೊತ್ತಾಗಿರುವುದು ಅದು ಬೇರೆ ಬೇರೆ ಪ್ರಾಂತಗಳಿಂದಲ್ಲ, ಅಹಿಂಸೆ ಸತ್ಯದಿಂದ ಸ್ವಾತಂತ್ರ್ಯವನ್ನು ಗಳಿಸಲು ನಿಶ್ಚಯಿಸಿರುವ ಪೂರ್ಣ ಭಾರತವೆಂದು, ಆದುದರಿಂದ ತ್ಯಾಗರಾಜರ ಹೆಸರಿ ನಲ್ಲಿ ಈ ಪ್ರಾಂತ್ಯಾಭಿಮಾನವನ್ನು ಸಮುದ್ರಕ್ಕೆ ದೂಡಿ; ಭಾರತೀಯರಾಗಿ ಭಾರತಸ್ವಾತಂತ್ರ್ಯಕ್ಕಾಗಿ ಹೋರಾಡಿ

೨೫ನೆ ತಾರೀಖು ಪ್ರಾರ್ಥನೆಯ ಸಭೆ ಮೊದಲನೆಯ ದಿನಕ್ಕಿಂತಲೂ ದೊಡ್ಡದಾಗಿದ್ದಿತು. ಒಂದು ಲಕ್ಷಕ್ಕಿಂತ ಹೆಚ್ಚು ಜನ ನೆರೆದಿದ್ದರು. ಗಾಂಧಿಯವರು ೫-೪೦ಕ್ಕೆ ಪ್ರಾರ್ಥನಾ ಸಭೆಗೆ ಬಂದರು. ಮೊದಲು ಶ್ರೀ ನಾನಾವತಿಯವರು ಈಶಾವಾಸ್ಯೋಪನಿಷತ್ತಿನಿಂದ ಕೆಲವು ಶ್ಲೋಕ ಗಳನ್ನು ಉಚ್ಚರಿಸಿದರು ಸಭೆಯಲ್ಲಿ ಗದ್ದಲವಾಗುತ್ತಿದ್ದುದರಿಂದ ಸಂಸ್ಕೃತ ಶ್ಲೋಕಗಳನ್ನು, ಕುರಾನ, ಜೆಂಡ್‌ಅವಸ್ತಗಳನ್ನು ಉಚ್ಚರಿಸಲಿಲ್ಲ. ಒಬ್ಬ ಮಹಿಳೆ ಬಂದು ತಮಿಳು ಗೀತವನ್ನು ಹಾಡಿದಳು. ಅದಾದ ಮೇಲೆ ಗಾಂಧಿಯವರು "ರಾಮಧುನ್ ಪ್ರಾರಂಭಿಸಿ" ಎಂದರು. ರಾಮಧುನ್‌ದ ನಂತರ ಗಾಂಧಿಯವರು 'ಸಭೆಯಲ್ಲಿ ಪೂರ್ಣವಾಗಿ ಮೌನ ಮತ್ತು ಶಾಂತಿ ಇಲ್ಲದುದರಿಂದ ನಾನು ಪ್ರಾರ್ಥನೆಯನ್ನು ಪೂರ್ತಿಮಾಡುತ್ತಿಲ್ಲ. ಆದರೆ ರಾಮಧುನ್ ಆಗುತ್ತಿರುವಾಗ ಸ್ವಲ್ಪ ಶಾಂತವಾಗಿದ್ದಿತು' ಎಂದರು. ಗಾಂಧಿಯವರ ಇಷ್ಟು ಮಾತನ್ನು ಒಬ್ಬರು ತಮಿಳಿಗೆ ಅನುವಾದಿಸಿ ಹೇಳಿದರು. ಆವೇಳೆಗೆ ಜನರ ಗುಂಪಿನಿಂದ ಒಂದು ದೊಡ್ಡಧ್ವನಿ ಎದ್ದಿತು.

ಒಬ್ಬ ಆಂಧ್ರರು, ಆ ಪ್ರಾರ್ಥನಾ ಸಭೆಯಲ್ಲಿ ತಮ್ಮ ತೆಲುಗಿನ ಅಭಿಮಾನವನ್ನು ಪ್ರಕಟಿಸತೊಡಗಿದರು ತೆಲುಗಿನಲ್ಲಿ ಗಾಂಧಿಯವರ ಭಾಷಣದ ಅನುವಾದ ಆಗಬೇಕೆಂದರು. ಹಿಂದೆ ಒಂದು ದಿನ ತೆಲುಗಿನಲ್ಲಿ ಆಗಬೇಕೆಂದಾಗ ಗಾಂಧಿಯವರು ನಗುತ್ತಾ "ಆಗಲಿ" ಎಂದಿದ್ದರು. ಆದರೆ ಇಂದು ಎದ್ದು-ನಿಂತವರ ಧ್ವನಿಯನ್ನೂ ಕಾವನ್ನೂ ಅಸಹನೆಯನ್ನೂ ನೋಡಿ ಗಾಂಧಿಯವರಿಗೆ ಬೇಸರ ಬಂದಿತು. ಅವರು "ಇದು ಸಾಧ್ಯವಿಲ್ಲ" ಎಂದರು. ಸುತ್ತಮುತ್ತ ಇದ್ದವರು ಆ ಆಂಧ್ರರಿಗೆ ಎಷ್ಟು ಶಾಂತಿಯನ್ನು ಬೋಧಿಸಿದರೂ ಅವರು ಕೇಳಲೇ ಇಲ್ಲ. ಸಭೆಯೆಲ್ಲ ಅಶಾಂತವಾಯಿತು. ಗಾಂಧಿಯವರು ತುಂಬ ದುಃಖದಿಂದ ಹೀಗೆ ಹೇಳಿದರು "ಈ ಬಗೆಯ ಬಲಾತ್ಕಾರಕ್ಕೆ ನಾನು ಒಪ್ಪುವದಿಲ್ಲ. ಇನ್ನು ತೆಲುಗು ತಮಿಳುಗಳಲ್ಲಿ ನನ್ನ ಭಾಷಣದ ಅನುವಾದವಿಲ್ಲ. ಹಿಂದುಸ್ಥಾನಿ ಕಲಿಯದವರು ಪತ್ರಿಕೆಗಳಲ್ಲಿ ಭಾಷಣದ ಸಾರಾಂಶವನ್ನು ಅರಿತುಕೊಳ್ಳಲಿ. ನಾನು ಹಿಂದುಸ್ಥಾನಿಯಲ್ಲಿ ಮಾತನಾಡುವುದು ನಿಮಗೆ ಬೇಡವಾದರೆ ನಾನು ಮಾತನಾಡುವುದೇ ಇಲ್ಲ, ಹೋಗುತ್ತೇನೆ. ಈ ಭಾಷಾ ದುರಭಿಮಾನದಿಂದ ನನಗೆ ಬಹಳ ದುಃಖವಾಗಿದೆ. ನೆನ್ನೆ ನಾನು ಪ್ರಾರ್ಥನೆಯ ಸಭೆಯಲ್ಲಿ ಮಾಡಿದ ಭಾಷಣ ವ್ಯರ್ಥವಾದಂತೆ ಕಾಣುತ್ತದೆ.

ಸಾಧಾರಣವಾದ ಸಭಾಮರ್ಯಾದೆಯನ್ನಾದರೂ ಅನುಸರಿಸುವುದನ್ನೂ ನೀವು ಕಲಿಯಬೇಕು. ಯಾರಿಗೆ ಅಧಿಕಾರವನ್ನು ವಹಿಸುತ್ತಿರೋ ಅವನು ಮಗುವಾದರೂ ಸರಿ, ಅವನ ಅಪ್ಪಣೆಯನ್ನು ಪಾಲಿಸಬೇಕು. ನೆನ್ನೆ ಗದ್ದಲದಲ್ಲಿ ಒಂದು ಮಗುವಿಗೆ ಘಾಯವಾಯಿತಂತೆ, ಇದು ಬಹಳ ಅನ್ಯಾಯ. ಸ್ತ್ರೀಯರನ್ನು ಮಕ್ಕಳನ್ನು ಮೊದಲು ಮರ್ಯಾದೆ ದಯೆಯಿಂದ ರಕ್ಷಿಸುವುದನ್ನು ಸಹ ನೀವು ಕಲಿಯದಿದ್ದ ಮೇಲೆ ಪ್ರಾರ್ಥನೆಗೆ ನೀವು ಬಂದುದು ವ್ಯರ್ಥ. ಪ್ರಾರ್ಥನೆಯಾದ ಮೇಲೆ ಮನೆಗೆ ಹೋಗಲು ಇಂತಹ ನುಗ್ಗು ಯಾತಕ್ಕೆ ಸ್ವಲ್ಪ ನಿಧಾನವಾದರೆ ಏನು ಬಾಧಕ?"

ಶಿಸ್ತು ಇಲ್ಲದ ಸ್ವಾತಂತ್ರ್ಯ ಉಳಿಯುವದಿಲ್ಲ

ಮರುದಿನ ಅಂದರೆ ಜನವರಿ ೨೬ ಸ್ವಾತಂತ್ರ್ಯ ದಿನಾಚರಣೆಯಾಗಿದ್ದಿತು. ಗಾಂಧಿಯವರು "ನೀವು ನಾಳೆ ಪೂರ್ಣ ಶಿಸ್ತನ್ನು ಪಾಲಿಸಬೇಕು.

ಶಿಸ್ತು ಭಂಗವಾದರೆ ನನಗೆ ಬಹಳ ದುಃಖವಾಗುವುದು. ನಾನು ಭಾರತ ಸ್ವಾತಂತ್ರ್ಯಕ್ಕಾಗಿಯೇ ಬದುಕುವೆನು; ಸಾಯುವೆನು, ಆ ಶಿಸ್ತಿನಿಂದ ಸ್ವರಾಜ್ಯದ ಬರುವಿಕೆಗೆ ತಡವಾಗುವುದು. ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಅಹಿಂಸೆ ಸತ್ಯದಿಂದಲೇ ಸ್ವರಾಜ್ಯ ಸಾಧ್ಯವೆಂದು ಹೇಳಿದೆ. ಇದು ಸಾಧ್ಯವಾಗ ಬೇಕಾದರೆ ಶಿಸ್ತು ಇರಬೇಕು. ಇತರರಿಗೆ ಹಿಂಸೆ ಮಾಡದಿರುವುದು ಮಾತ್ರವೇ ಅಹಿಂಸೆಯಲ್ಲ. ಇತರರನ್ನು ಉದ್ರೇಕಗೊಳಿಸಬಾರದು. ಬೈಯುವದೂ ಇತರರನ್ನು ಉದ್ರೇಕಗೊಳಿಸಿ ಹಿಂಸೆ ಮಾಡುವಂತೆ ಮಾಡುವುದೂ, ತಾನೇ ಹಿಂಸೆ ಮಾಡುವದಕ್ಕಿಂತ ಹೆಚ್ಚು ಪಾಪ ”

೨೬ನೆ ತಾರೀಖು ಸ್ವಾತಂತ್ರ್ಯ ದಿನಾಚರಣೆ. ಪ್ರಾರ್ಥನೆ ನಡೆಯಿತು. ಆ ದಿನ ಪ್ರಾರ್ಥನೆಯಲ್ಲಿ ಉಪನಿಷತ್ ಶ್ಲೋಕಗಳೂ ಗೀತೆಯ ಶ್ಲೋಕಗಳೂ ಹೇಳಲ್ಪಡಲಿಲ್ಲ ರಾಮಧುನ್ ಮಾತ್ರ ಆಯಿತು. ಆನಂತರ ಒಂದು ಹಿಂದುಸ್ಥಾನಿ ಹಾಡು ರಾಮಧುನ್. ಅನಂತರ ಗಾಂಧಿಯವರು ಹೀಗೆ ಹೇಳಿದರು. “ಉತ್ಸವಗಳೂ ಹಬ್ಬಗಳೂ ಕಾಲಕ್ಕೆ ಅನುಗುಣ ಬದಲಾಯಿಸುತ್ತವೆ. ಭಾರತೀಯರಿಗೆ ಈ ಸ್ವಾತಂತ್ರ್ಯದಿನಾಚರಣೆ ಪವಿತ್ರ. ಇಂದು ಜನ ಕೋಟಿಸಂಖ್ಯೆಯಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಮಾಡುತ್ತಿದ್ದಾರೆ. ಪ್ರತಿಯೊಬ್ಬರೂ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು. ಸಾಧ್ಯವಾದರೆ ಸಾರ್ವಜನಿಕವಾಗಿ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ತಮ್ಮ ತಮ್ಮ ಮನೆಯಲ್ಲಿ ತೆಗೆದುಕೊಳ್ಳಬೇಕು. ಈ ಪ್ರತಿಜ್ಞೆಯ ಮುಖ್ಯ ಲಕ್ಷಣ ಅಹಿಂಸೆ ಸತ್ಯದ ಮಾರ್ಗದಿಂದ ಸ್ವರಾಜ್ಯಸಾಧನೆ, ಕಳೆದ ೨೫ ವರುಷಗಳಿಂದ ಅನೇಕ ಕೋಟಿ ಜನ ಈ ಪ್ರಾರ್ಥನೆಯನ್ನು ಭಗವಂತನಲ್ಲಿ ಮಾಡುತ್ತಿದ್ದಾರೆ. ಭಗವಂತ ದೂರದಲ್ಲಿದ್ದರೂ ಹತ್ತಿರದಲ್ಲಿದ್ದಾನೆ. ಅಲ್ಲ, ರಾಮ, ರಹಿಮ್ ಗಾಡ್ ಎಲ್ಲರೂ ಒಂದೇ. ಆತನಿಗೆ ಅಸಂಖ್ಯಾತ ನಾಮಗಳು. ಆತನ ಗುಣಗಳೂ ಆತನ ಹೆಸರುಗಳಂತೆಯೇ ಸಹಸ್ರ. ಈ ಅದೃಶ್ಯ ಜಗತ್ ಶಕ್ತಿಗೇ ನಾವು ಪ್ರಾರ್ಥಿಸುವುದು ನಮ್ಮ ಗುರಿಯು, ನಮ್ಮ ದಾರಿಯು, ಶುದ್ಧವಾಗಿದ್ದರೆ ಈ ಪ್ರಾರ್ಥನೆಯನ್ನು ದೇವರು ಕೇಳಿ ನಡೆಸುತ್ತಾನೆ.

ನಮ್ಮ ಮಾರ್ಗದಲ್ಲಿ ಅನ್ಯಾಯ ಮೋಸ ಹಿಂಸೆ ಕಪಟಗಳಿರುವುದಾದರೆ ನಮ್ಮ ಪ್ರಯತ್ನಕ್ಕೆ ದೇವರು ಜಯವನ್ನು ಕೊಡುವದಿಲ್ಲ ಮೋಸಕ್ಕೆ

ಜಯವಾಗಲೆಂಬ ನಮ್ಮ ಪ್ರಾರ್ಥನೆ ಸ್ವರ್ಗವನ್ನು ಮುಟ್ಟುವುದಿಲ್ಲ. ಅಂತಹ ಪ್ರಾರ್ಥನೆ ಮಾಡುವವರು ಹಾಸ್ಯಾಸ್ಪದರಾಗುತ್ತಾರೆ. ನಿಜವಾದ ಪ್ರಾರ್ಥನೆ ನಮ್ಮ ನಡತೆಯನ್ನು ತಿದ್ದಬೇಕು. ಅಹಿಂಸೆಯ ಅನುಯಾಯಿಗಳಾದವರು ಮೊದಲು ಗದ್ದಲಮಾಡಬಹುದೆ ? ಪ್ರಾರ್ಥನೆಯಿಂದ ಆತ್ಮಶುದ್ಧಿ ಮತ್ತು ನಮ್ರತೆಯುಂಟಾಗದಿದ್ದರೆ ಆ ಪ್ರಾರ್ಥನೆಯಿಂದ ಫಲವಿಲ್ಲ. ಪ್ರಾರ್ಥಿಸಿ ಹೃದಯದ ಅಹಂಕಾರವನ್ನೂ ಹೆಮ್ಮೆಯನ್ನೂ ಕೊಳೆಯನ್ನೂ ತೊಳೆಯಬೇಕು.

ನೆನ್ನೆ ಒಬ್ಬರು ತೆಲುಗಿನಲ್ಲಿ ಭಾಷಣದ ಅನುವಾದಬೇಕೆಂದರು ಆ ಹಟಮಾರಿತನದಿಂದ ನನಗೆ ನೋವಾಯಿತು. ಆದರೆ ಅದರಲ್ಲಿಯೂ ಒಂದು ಒಳ್ಳೆಯದು ಕಂಡಿತು. ಒಬ್ಬರು ಹುಚ್ಚರಾದರೂ ಅವರ ಸುತ್ತ ಇದ್ದವರು ಆ ಹುಚ್ಚಿನಲ್ಲಿ ಸೇರಲಿಲ್ಲ, ವ್ಯವಸ್ಥಿತವಾದ ಸಭೆಯಲ್ಲಿ ಹೇಗೆ ನಡೆಯಬೇಕೋ ಹಾಗೆ ಉಳಿದವರು ಶಿಸ್ತಿನಿಂದ ನಡೆದರು. ಇನ್ನು ನಾನು ಭಾಷಣದ ಸಾರಾಂಶವನ್ನು ತೆಲುಗಿನಲ್ಲಿಯೂ ಹೇಳಿಸುವುದಿಲ್ಲ. ತಮಿಳಿನಲ್ಲಿಯೂ ಹೇಳಿಸುವುದಿಲ್ಲ. ಭಾಷೆ ವಾದಕ್ಕೆ ಕಾರಣವಾಗುವುದು ಬೇಡ. ಇನ್ನು ಮೇಲೆ ಪ್ರಾರ್ಥನೆಯ ಹಾಡು ಸಹ ಹಿಂದುಸ್ಥಾನಿಯಲ್ಲಿ. ತಮಿಳರೂ ಆಂಧ್ರರೂ ಮಲೆಯಾಳಿಗಳೂ ಕನ್ನಡದವರೂ ಭಾಷೆಯ ಹೆಸರಿನಲ್ಲಿ ಹೋರಾಡುವುದನ್ನು ನಾನು ಒಪ್ಪುವುದಿಲ್ಲ. ಈ ಭಾಷೆಗಳು ಪರಸ್ಪರ ವಿರೋಧಿಗಳಲ್ಲ, ಇವೆಲ್ಲವೂ ಒಂದೇ ಮರದ ಕೊಂಬೆಗಳು. ಈ ಭಿನ್ನತೆಯ ಹಿಂದೆ ಇರುವ ಐಕ್ಯವನ್ನು ಜನ ತಿಳಿಯಬೇಕು.

ಪ್ರಾರ್ಥನೆಯ ಸಭೆಯಲ್ಲಿ ಸಹ ಗದ್ದಲವಾಗುವದಕ್ಕೆ ಕಾರಣ ದೂರದಲ್ಲಿರುವವರಿಗೆ ಪ್ರಾರ್ಥನೆ ಕೇಳದಿರುವುದೇ ಕುಳಿತುಕೊಳ್ಳಲು ಸ್ಥಳ ಸಿಕ್ಕದ ಕಡೆ ನಿಂತ ಜನರಿಂದಲೇ ಗದ್ದಲ ಪ್ರಾರಂಭವಾಗುತ್ತಿದೆ ಜಾಗ ಸಿಕ್ಕದವರು ಹಿಂದೆ ಹೋಗಿ ಗದ್ದಲವಿಲ್ಲದೆ ನಿಂತುಕೊಳ್ಳಬೇಕು. ನಮ್ಮ ಜನರು ಅಹಿಂಸಾ ತತ್ವವನ್ನು ಚೆನ್ನಾಗಿ ಜೀರ್ಣಿಸಿಕೊಂಡಿದ್ದರೆ, ನಾನು ಒಂದು ಮನೆಯೊಳಗೆ ಕುಳಿತುಕೊಂಡಿರಬೇಕಾದ ಅವಶ್ಯಕವಿರಲಿಲ್ಲ. ಜನರ ಮೂಢ ಭಕ್ತಿಯ ಭಯದಿಂದ ನಾನು ಸಂಧ್ಯಾಕಾಲದ ಸಂಚಾರಕ್ಕೆ ಸಹ

ಹೋಗುತ್ತಿಲ್ಲ. ನಿಜವಾಗಿ ಪ್ರೀತಿಸುವವರು ಆ ಪ್ರೀತಿಯಲ್ಲಿಯೂ ಇನ್ನೂ ಹೆಚ್ಚು ವಿವೇಕ ತೋರಿಸಬೇಕು.

ನಮಗೆ ಸ್ವಾತಂತ್ರ್ಯ ಬರಲೆಂದು ಪ್ರಾರ್ಥಿಸಿ. ಸ್ವಾತಂತ್ರ್ಯಕ್ಕಾಗಿ ಸಾಯುವ ಶಕ್ತಿ ನಮಗೆ ಬರಲೆಂದು ಪ್ರಾರ್ಥಿಸಿ. ಆ ಪ್ರಯೋಗವನ್ನು ಡೆಳವೆಯೇ ನಮಗೆ ಸ್ವಾತಂತ್ರ್ಯ ಬರುವುದೆಂದು ನಿರೀಕ್ಷಿಸೋಣ್ಯ. ಪ್ರಯತ್ನಿಸುವುದು ನಮ್ಮ ಕೆಲಸ ಫಲ ದೇವರ ಕೈಯಲ್ಲಿದೆ ಅಹಿಂಸೆ ಸತ್ಯಗಳು ನಮ್ಮ ಆಯುಧಗಳಾದರೆ ನಮ್ಮ ಪ್ರಾರ್ಥನೆ ವ್ಯರ್ಥವಾಗುವುದಿಲ್ಲ

ದೇವರೇ ರಕ್ಷಕ

ಮರುದಿನ (ತಾ. ೨೭-೧-೪೬) ಭಾನುವಾರವಾಗಿದ್ದುದರಿಂದ ಪ್ರಾರ್ಥನೆಗೆ ನಿತ್ಯಕಿಂತ ಹೆಚ್ಚು ಜನ ನೆರೆದಿದ್ದರು. ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಸ್ಥಳವನ್ನು ಏರ್ಪಡಿಸಿದ್ದರು. ಗಾಂಧಿಯವರು ಪ್ರಾರ್ಥನೆಯ ವೇದಿಕೆಗೆ ಬರಲು ಒಂದು ಮನೆಯ ಕಂಪೌಂಡಿನ ಮೂಲಕ ಗದ್ದಲವಿಲ್ಲದ ದಾರಿಮಾಡಿದ್ದರು. ಗಾಂಧಿಯವರ ದರ್ಶನವಾದ ಕೂಡಲೇ ಜನರ ಗದ್ದಲ ಕಡಿಮೆಯಾಯಿತು. ಅನಂತರ ಪ್ರಾರ್ಥನೆ ಪ್ರಾರಂಭವಾಯಿತು. ಅನಂತರ ಶ್ರೀಮತಿ ಸರಸ್ವತಿ ದೇವಿಯವರು ಒಂದು ಹಿಂದಿ ಹಾಡನ್ನು ಹಾಡಿದರು. ಗಾಂಧಿಯವರು ನಾಲ್ಕು ಮಾತುಗಳನ್ನಾಡಿದರು

“ಈ ಪ್ರಾರ್ಥನೆಯಲ್ಲಿ ದೇವರೇ ನಮ್ಮ ಮಾನರಕ್ಷಕನೆಂದು ಹೇಳಿದೆ. ಭಕ್ತನು ದ್ರೌಪದಿಯ ಉದಾಹರಣೆಯನ್ನು ಹೇಳುತ್ತಾನೆ. ದುರ್ಯೋಧನನು ಸಾವಿರಾರು ಜನರ ಮುಂದೆ ದ್ರೌಪದಿಯ ಮಾನಭಂಗಮಾಡಲು ನಿಶ್ಚಯಿಸಿದಾಗ ಕೃಷ್ಣನು ಅವಳ ಮಾನರಕ್ಷಣೆ ಮಾಡಿದನು. ದ್ರೌಪದಿಗೆ ಭಗವಂತನಲ್ಲಿ ಅಚಲವಾದ ಭಕ್ತಿ ಇದ್ದುದೇ ಇದಕ್ಕೆ ಕಾರಣ. ದೇವರೇ ಕೈನೀಡಿ ದ್ರೌಪದಿಯನ್ನು ಕಾಪಾಡಿದನೆಂದು ಪುರಾಣಗಳು ಹೇಳುತ್ತವೆ ಇಲ್ಲಿ ದೇವರು ಎಂದರೆ ಸರ್ವಾಂತರ್ಯಾಮಿಯಾದ ಸರ್ವಶಕ್ತ. ಭಕ್ತಿಯುಳ್ಳವರಿಗೆ ದೇವರು ಹತ್ತಿರದವನೇ ಆಗುತ್ತಾನೆ

ದ್ರೌಪದಿಯ ಕತೆ ಇಂದಿನ ಭಾರತಕ್ಕೆ ಅನ್ವಯಿಸುತ್ತದೆ. ದ್ರೌಪದಿಯನ್ನು ಬೆತ್ತಲೆ ಮಾಡಲು ಪ್ರಯತ್ನಿಸಿದರು. ಭಾರತ ಬೆತ್ತಲೆಯಾಗಿಯೇ

ಇದೆ. ಗುಲಾಮಗಿರಿಯು ನಾಚಿಕೆಯಿಂದ ಬೆತ್ತಲೆಯಾಗಿದೆ. ಭಾರತದ ಮಾನ ಮುಚ್ಚುವುದು ಸ್ವಾತಂತ್ರ್ಯದಿಂದ ಮಾತ್ರವೇ.

ನೆನ್ನೆ ನೀವು ಅಹಿಂಸಾ ಮತ್ತು ಸತ್ಯದ ಮಾರ್ಗದಲ್ಲಿಯೇ ಸ್ವಾತಂತ್ರ್ಯವನ್ನು ಗಳಿಸುತ್ತೇವೆಂದು ಪ್ರತಿಜ್ಞೆಮಾಡಿದಿರಿ. ಇಂದು ಈ ಬಯಲು ಬಹಳ ದೊಡ್ಡದಾಗಿದ್ದರೂ ನೀವು ಗದ್ದಲ ಮಾಡುತ್ತಿದ್ದೀರಿ ಭಜನೆಯಲ್ಲಿ ಸಹ ನೀವು ಗಂಭೀರವಾಗಿ ನಡೆದುಕೊಳ್ಳದ ಮೇಲೆ ಸ್ವಾತಂತ್ರ್ಯ ಬಂದಮೇಲೆ ನಡೆದುಕೊಳ್ಳುತ್ತೀರಾ? ಅಹಿಂಸೆಯ ಮಾರ್ಗದಿಂದ ಸ್ವತಂತ್ರವಾಗಿ ಆ ಸ್ವಾತಂತ್ರ್ಯವನ್ನು ಅಹಿಂಸೆಯಿಂದಲೇ ಉಳಿಸಿಕೊಳ್ಳಬೇಕೆನ್ನುವವರಿಗೆ ಈ ಗುಂಪು ಅಂತಹ ದೊಡ್ಡ ಗುಂಪೇನೂ ಅಲ್ಲ. ನಲವತ್ತು ಕೋಟಿ ಜನರ ಗುಂಪು ಇದ್ದರೂ ಸಹ ಒಬ್ಬ ವ್ಯಕ್ತಿಯಂತೆ ನಡೆಯಬೇಕು. ನಲವತ್ತು ಕೋಟಿ ಜನ ಒಟ್ಟಿಗೆ ಧ್ವನಿಮಾಡಿದರೆ ಅದರ ಪರಿಣಾಮ ಅದ್ಭುತವಾಗುತ್ತದೆ. ಆದರೆ ಕೂಗುವುದಕ್ಕೂ ಒಂದು ಕಾಲವುಂಟು ಮೌನವಾಗಿರುವುದಕ್ಕೂ ಒಂದು ಕಾಲವುಂಟು ಆದದರ ಕಾಲದಲ್ಲಿ ಅದನ್ನು ಮಾಡಬೇಕು.

'ದೇವರ ದಯದಿಂದ ನಾನು ಮತ್ತೆ ಇಲ್ಲಿ ಬಂದಾಗ ನಿಮಗೆಲ್ಲ ಹಿಂದುಸ್ಥಾನಿ ತಿಳಿಯುವುದೆಂದೂ ಈ ತಮಿಳು ತೆಲುಗು ಹೋರಾಟವಿರುವುದಿಲ್ಲವೆಂದೂ ಭಾವಿಸುತ್ತೇನೆ. ಸ್ವಾತಂತ್ರ್ಯಕ್ಕೆ ಅರ್ಹರಾದವರಂತೆ ನಡೆದುಕೊಳ್ಳುವ ಯೋಗ್ಯತೆ ನಮಗೆ ಉಂಟಾಗಲೆಂದು ಪ್ರಾರ್ಥಿಸುತ್ತೇನೆ.'

ಪ್ರಾರ್ಥನೆ ಮುಗಿದ ನಂತರ ಗಾಂಧಿಯವರು ಕಾರಿನಲ್ಲಿ ಕುಳಿತು ತಮ್ಮ ನಿವಾಸದ ಕಡೆ ಹೊರಟರು. ದಾರಿಯಲ್ಲಿ ಅವರ ದರ್ಶನಕ್ಕಾಗಿ ದೊಡ್ಡ ಗುಂಪು ನೆರೆದಿದ್ದಿತು ಅದನ್ನು ನೋಡಿ ಗಾಂಧಿ ಕಾರಿನಿಂದ ಇಳಿದು ಎರಡು ನಿಮಿಷ ನಿಂತರು. ನೆರೆದಿದ್ದವರಿಗೆ ಬಹಳ ಆನಂದವಾಯಿತು ಅವರ ಆನಂದವನ್ನು ಕಂಡು ಗಾಂಧಿಯವರು ನಾಲ್ಕು ಮಾತುಗಳನ್ನಾಡಿದರು. "ನಿಮ್ಮ ಈ ಅತ್ಯಂತ ಹೆಚ್ಚಾದ ಪ್ರೇಮವನ್ನು ನೋಡಿ ನಾನು ನನ್ನ ಸಂಧ್ಯಾಕಾಲದ ಸಂಚಾರವನ್ನೂ ಬಿಟ್ಟು ಇಲ್ಲಿ ನಿಂತೆ ಇನ್ನು ಬೇಗ ಬೇಗ ನಿಮ್ಮ ನಿಮ್ಮ ಮನೆಗಳಿಗೆ ಹೋಗಿ" ಎಂದರು ಗಾಂಧಿಯವರು ಹಿಂದುಸ್ಥಾನಿಯಲ್ಲಿ ಮಾತನಾಡಿದರು. ಇದರ ಅನುವಾದ ತಮಿಳಿನಲ್ಲಿ ಹೇಳಿ ಎಂದು ಸುಬ್ಬಯ್ಯರಿಗೆ ಹೇಳಿ ತಮ್ಮ ನಿವಾಸಕ್ಕೆ ಹೋದರು

ಅಂದು ಗಾಂಧಿಯವರಿಗೆ ಬಹಳ ಶ್ರಮವಾಗಿದ್ದಿತು; ಪ್ರಾರ್ಥನೆ ಯಿಂದ ಹಿಂದಿರುಗಿದಾಗ ಅವರು ಬಹಳ ಬಳಲಿದ್ದರು. ಇದನ್ನು ನೋಡಿ ಠಕ್ಕರ್ ಬಾಪಾ ಬಂದು ಗಾಂಧಿಯವರ ಬಾಗಿಲಿನಲ್ಲಿ ಕಾವಲು ಕುಳಿತರು. ಠಕ್ಕರ್ ಬಾಪಾ ಹೀಗೆ ಕುಳಿತರೆ ಅದು ಸುಗ್ರೀವಾಜ್ಞೆ. ಯಾರೂ ಗಾಂಧಿ ಯವರನ್ನು ಮಾತನಾಡಿಸ ಕೂಡದೆಂದು.

ಅಂದು ಗಾಂಧಿಯವರ ಕಾಂಪೌಂಡಿನಲ್ಲಿ ಗಾಂಧಿಯವರ ದರ್ಶನಕ್ಕೆ ಬಂದ ಒಬ್ಬರಿಗೆ ದರ್ಶನವಾಗಲಿಲ್ಲ. ಅವರು ನೆಲದ ಮೇಲೆ ಗಾಂಧಿ ಮತ್ತು ಸುಬಾಷ ಬೋಸರ ಚಿತ್ರಗಳನ್ನು ಮಾಡಿ ಅದನ್ನು ಮಾತ್ರ ಹೂ ಹಣ್ಣು ಗಳಿಂದ ಅಲಂಕರಿಸಿ ದಕ್ಷಿಣೆ ಸಹ ಅದರ ಮುಂದೆ ಇಟ್ಟಿದ್ದರು ಗಾಂಧಿಯವರು ರಚನಾತ್ಮಕ ಕಾರ್ಯಕರ್ತರ ಸಮ್ಮೇಳನವನ್ನು ಮುಗಿಸಿಕೊಂಡು ತಮ್ಮ ನಿವಾಸಕ್ಕೆ ಹೋಗುತ್ತಿರುವಾಗ ಇದು ಕಣ್ಣಿಗೆ ಬಿದ್ದು ನಕ್ಕರು.

ಮೌನದ ಮಹಿಮೆ

೨೭ನೆಯ ತಾರೀಖು ಸಾಯಂಕಾಲ ೭॥ ಗಂಟೆಗೆ ಗಾಂಧಿಯವರು ಮೌನವನ್ನು ಪ್ರಾರಂಭಿಸಿದರು. ಆ ಮೌನ ೨೮ನೆ ರಾತ್ರಿ ೭॥ ಗಂಟೆಗೆ ಭಂಗವಾಗುವುದಾಗಿದ್ದಿತು. ಆದರೆ ೨೮ನೆ ಸಾಯಂಕಾಲದ ಪ್ರಾರ್ಥನೆ ಪದ್ಧತಿಯಂತೆ ೫॥ಗೆ ಪ್ರಾರಂಭವಾಯಿತು. ಅಂದು ಜನ ತುಂಬ ಶಾಂತ ರಾಗಿದ್ದರು. ಗಾಂಧಿಯವರಿಗೂ ಆನಂದವಾಯಿತು. ಅಂದು ಪ್ರಾರ್ಥನೆ ನಿಧಾನವಾಗಿ ಪೂರ್ಣವಾಗಿ ನಡೆಯಿತು ಉಪನಿಷತ್ ಕುರಾನ್ ಗೀತ ಜೆಂಡವಸ್ತ ಎಲ್ಲವುಗಳಿಂದಲೂ ಪ್ರಾರ್ಥನೆಗಳಾದವು. ಅನಂತರ ರಾಮಧುನ್. ಗಾಂಧಿಯವರ ಭಾಷಣವನ್ನು ಕನು ಗಾಂಧಿ ಓದಿದರು. ಗಾಂಧಿಯವರು ಹಿಂದಿಯಲ್ಲಿ ಹೀಗೆ ಬರೆದಿದ್ದರು.

' ಆಜ್ ಮೇರಿ ಮೌನ್ ಹೈ. ಇಸ್‌ಲಿಯೆ ಬೋಲ್ ನಹಿ ಸಕ್ತಾ ಹುಂ ಮುಝೆ ಕ್ಷಮಾ ಕರೆ. ಮೌನ್ ಕೈಸಿ ಅಚ್ಛಿ ಚೀಸ್ ಹೈ! ಮುಝೆತೋ ಸಾಕ್ಷಾತ್ ಅನುಭವ ಹೈ. ಉಸ್ ಸಮಯ್ ಜೊ ಆನಂದ ಮಿಲ್ತಾ ಹೈ ವಹ್‌ಭಿ ಅನೋಕಿ ವಸ್ತೂ ಹೈ. ಕೈಸಾ ಅಚ್ಛ ಹೋಗಾ ಯದಿ ಸಬ್

ತೋಡ ಸಮಯ್ ಭಿ ರೋಜ್ ಮೌನ್ ಕೆ ಲಿಯೆ ನಿಕಲೆ ಔರ್ ಶಾಂತಿಕಾ ಅನುಭವ ಕರೆ ಮೌನ್ ಕೋಯಿ ಮಹಾತ್ಮಾಕೇ ಲಿಯೆ ನಹಿ ಹೈ ಮೈ ತೋ ಜಾನತಾ ಹುಂಕಿ ಜೋ ಕುಚ್ ಏಕ್ ಮನುಷ್ಯ ಕರ್ ಸಕ್ತಾ ಹೈ ವಹ್ ಸಬ್ ಹರ್ ಕೋಯಿ ಪ್ರಯತ್ನಸೇ ಕರ್ ಸಕ್ತಾ ಹೈ. ಹಮಾರೆಮೆ ಕಹವಟ್ ಹೈಕಿ ಮೌನ್‌ಸೆ ಸಬ್ ಅರ್ಥ ಸಿದ್ಧ ಹೋತೆ ಹೈ. ಇಸ್ ಕಹಾ-ವಟ್‌ಮೆ ಬಹುತ್ ರಹಸ್ಯ ಹೈ.

"ಇಂದು ನನಗೆ ಮೌನದ ದಿನ. ಆದುದರಿಂದ ನಾನು ನಿಮ್ಮೊಂದಿಗೆ ಮಾತನಾಡಲಾರೆ. ನನ್ನನ್ನು ಕ್ಷಮಿಸಿ ಮೌನ ಎಷ್ಟು ಒಳ್ಳೆಯದು! ನನಗೆ ಅನುಭವವಿದೆ. ಮೌನದಿಂದ ಉಂಟಾಗುವ ಆನಂದವೂ ಅದ್ವಿತೀಯ. ಎಲ್ಲರೂ ಪ್ರತಿ ದಿನವೂ ಸ್ವಲ್ಪಕಾಲ ಮೌನವನ್ನು ಆಚರಿಸಿದರೆ ಎಷ್ಟು ಒಳ್ಳೆಯದಾದೀತು! ಮೌನವು ಕೆಲವು ಬರಿಯ ಮಹಾತ್ಮರಿಗೆ ಮಾತ್ರವೇ ಸಾಧ್ಯವೆಂದಲ್ಲ. ಒಬ್ಬನಿಗೆ ಸಾಧ್ಯವಾದುದು ಎಲ್ಲರಿಗೂ ಸಾಧ್ಯವೆಂದು ನನಗೆ ಗೊತ್ತು ಮೌನಂ ಸರ್ವತ್ರ ಸಾಧನೆಂಬ ಮಾತು ನಮ್ಮಲ್ಲಿದೆ. ಈ ಮಾತಿನಲ್ಲಿ ತುಂಬ ಸತ್ಯವಿದೆ."

೨೯ನೆಯ ತಾರೀಖು ಪ್ರಾರ್ಥನೆಯಲ್ಲಿ ಜನ ಬಹಳ ಶಾಂತವಾಗಿದ್ದರು. ರಾಮಧುನ್ ಧ್ಯಾನದಲ್ಲಿ ಎಲ್ಲರೂ ಸೇರಿದರು. ಗೀತ ಕುರಾನ್ ಉಪನಿಷತ್ ಜೆಂಡ್‌ಅವಸ್ತ ಇವುಗಳಿಂದ ಪ್ರಾರ್ಥನೆಗಳಾದ ನಂತರ ಇಬ್ಬರು ಸ್ತ್ರೀಯರು ಗುರು ನಾನಕರ ಒಂದು ಕೀರ್ತನೆಯನ್ನು ಹಾಡಿದರು. ನಾನಕರ ಗೀತೆಯನ್ನು ಕುರಿತು ಗಾಂಧಿ ಹೀಗೆ ಹೇಳಿದರು.

"ನಾನಕರ ಈ ಹಾಡಿನ ಅರ್ಥ ನಿಮ್ಮಲ್ಲಿ ಅನೇಕರಿಗೆ ತಿಳಿದಿಲ್ಲವೆಂದು ಕೇಳುತ್ತೇನೆ. ನಾನಕ್ ಇದನ್ನು ಬರೆದಿರುವುದು ಅವಿದ್ಯಾವಂತರಾದ ಸ್ತ್ರೀ ಪುರುಷರಿಗಾಗಿ ನಾನಕ್ ಹೀಗೆ ಹೇಳುತ್ತಾನೆ. 'ಕೆಲವರು ದೇವರನ್ನು ನೋಡಲು ಕಾಡಿಗೆ ಹೋಗುತ್ತಾರೆ. ಜಗತ್ತಿನಲ್ಲಿರುವ ಈ ಕೋಟಿ ಸಂಖ್ಯೆಯ ಜನರಿಗೆಲ್ಲಾ ದೇವರು ಇದ್ದಾನೆ. ಬರಿಯ ಕಾಡಿಗೆ ಹೋಗುವವರಿಗೆ ಮಾತ್ರವೇ ಅಲ್ಲ ಕಾಡಿನಲ್ಲಿ ಹುಲಿಗಳೂ ಸಿಂಹಗಳೂ ಕರಡಿಗಳೂ ವಾಸಿಸುತ್ತವೆ ಆದುದರಿಂದ ಎಲ್ಲರೂ ಕಾಡಿಗೆ ಹೋಗುವುದು ಸಾಧ್ಯವಿಲ್ಲ.

ನಾನಕ ಹೀಗೆ ಕೇಳುತ್ತಾನೆ: ದೇವರು ನಿನ್ನೊಳಗೇ ಇರುವಾಗ ಕಾಡಿಗೆ ಯಾಕೆ ಹೋಗುತ್ತಿ? ಈ ಜಗತ್ತಿನಲ್ಲಿದ್ದು ಈ ಜಗತ್ತಿನ ಕೆಲಸಗಳನ್ನು ಮಾಡು. ಅಂದರೆ ಜೂಜಾಡುವುದೂ ಸಟ್ಟ ವ್ಯಾಪಾರ ಮಾಡುವುದು ಈ ಜಗತ್ತಿನ ಕೆಲಸಗಳೆಂದಲ್ಲ. ದೇವರು ಎಲ್ಲೆಲ್ಲಿಯೂ ಇದ್ದಾನೆ. ಚೇಳಿನಲ್ಲಿಯೂ ನಾಯಿಯಲ್ಲಿಯೂ ಇದ್ದಾನೆ. ನಾಯಿ ನಮ್ಮನ್ನು ಕಡಿಯಬಹುದು. ಆದರೆ ದೇವರು ಯಾವಾಗಲೂ ಒಳ್ಳೆಯವನೇ.

" ದೇವರು ದೂರದಲ್ಲಿ ಕಾಡಿನಲ್ಲಿ ಇಲ್ಲ. ನಮ್ಮಲ್ಲಿಯೇ ಇದ್ದಾನೆ"

ದೇವರ ದಯದಿಂದ ಎಲ್ಲವೂ ಸಾಧ್ಯ

೩೦ನೆಯ ತಾರೀಖಿನ ಪ್ರಾರ್ಥನಾ ಸಭೆಯಲ್ಲಿ ಗಾಂಧಿಯವರು ಮತ್ತೆ ಶಿಸ್ತಿನ ಆವಶ್ಯಕತೆಯನ್ನು ಕುರಿತೇ ಬೋಧಿಸಬೇಕಾಯಿತು. ಭಜನೆಯಲ್ಲಿ ಹಾಡಿದ ಗೀತೆಯನ್ನು ಕುರಿತು ಗಾಂಧಿಜಿ ಹೀಗೆ ಹೇಳಿದರು 'ಈ ಹಾಡಿನ ತತ್ವ " ದೇವರ ದಯದಿಂದ ಎಲ್ಲವೂ ಸಾಧ್ಯ " ಎಂದು. ಆದರೆ ಈ ಗುಂಪಿನ ಗದ್ದಲವನ್ನು ನಿಲ್ಲಿಸಲು ದೇವರ ದಯವೇ ಬರಬೇಕು. ಸಭೆಯಲ್ಲಿ ಇನ್ನೊಂದೆಡೆ ಅಷ್ಟೊಂದು ಜನ "ಭಾಷಣಮಾಡುತ್ತಿರುವಾಗ" ನಾನು ಇಲ್ಲಿ ಹೇಗೆ ತಾನೆ ಭಾಷಣಮಾಡಲಿ. ಸರ್ಕಾರದ ಆಶ್ರಯದಲ್ಲಿ ಇಂತಹ ಸಭೆ ನಡೆದರೆ ದೊಣ್ಣೆಯನ್ನು ಉಪಯೋಗಿಸಿ ಶಾಂತಿಯನ್ನು ಸ್ಥಾಪಿಸುತ್ತಿದ್ದರು. ಆದರೆ ಇಲ್ಲಿ ಸ್ವಯಂಸೇವಕರ ಪ್ರಾರ್ಥನೆಯೊಂದೇ ಇರುವುದು. ಆದರೆ ಸ್ವಾತಂತ್ರ್ಯ ಭಾವನೆಗಳುಳ್ಳ ಜನ ಸ್ವಯಂಸೇವಕರ ಪ್ರಾರ್ಥನೆಯನ್ನು ಮನ್ನಿಸುತ್ತಿಲ್ಲ. ಜನರ ಪ್ರೀತಿ ನನ್ನಲ್ಲಿ ಹೆಚ್ಚಾಗಿರುವುದರಿಂದ ಅವರು ಹಾಗೆ ಗದ್ದಲ ಮಾಡುತ್ತಿರುವರೆಂಬುದು ನನಗೆ ಗೊತ್ತು, ನನ್ನನ್ನು ಹತ್ತಿರದಲ್ಲಿ ನೋಡಬೇಕೆಂಬುದು ಅವರ ಆಸೆ. ಆದರೆ ಜನ ಇಂತಹ ವಿಷಯಗಳಲ್ಲಿ ಶಿಸ್ತನ್ನು ಕಲಿಯಬೇಕು. ಎಲ್ಲರ ಒಳ್ಳೆಯದಕ್ಕಾಗಿ ತಮ್ಮ ಸ್ವಂತ ಒಳ್ಳೆಯದನ್ನೂ ಬಿಡಬೇಕು. ನಿಮ್ಮಲ್ಲಿ ರಾಮನನ್ನು ತುಂಬಿಕೊಂಡ ಹೊರತು ಇದು ಸಾಧ್ಯವಿಲ್ಲ. ಭಜನೆಯ ಹಾಡಿನಲ್ಲಿ ಹೇಳಿರುವಂತೆ ರಾಮನು ನಮ್ಮಲ್ಲಿ ತುಂಬಿಕೊಂಡರೆ, ನಾವು ರಾಮಮಯರಾದರೆ ಉಳಿದುವೆಲ್ಲಾ ಮರೆಯಾಗುವುವು.

ಗಾಂಧಿಯವರು ಮುಂದೆ ಹೀಗೆ ಹೇಳಿದರು 'ಮದರಾಸಿನಲ್ಲಿ ಬಹಳ ಜನ ಕುಡಿಯುವ ದುರಭ್ಯಾಸಕ್ಕೆ ಸಿಕ್ಕಿ ಬಿದ್ದಿದ್ದಾರೆ, ಇದರ ಅನಾಹುತ ಹೃದಯವನ್ನು ಒಡಿಯುತ್ತದೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಬೇರೆ ಬೇರೆ ಕಡೆಗಳಲ್ಲಿ ಕುಡಿತವನ್ನು ತಪ್ಪಿಸಿದ್ದರು. ಇದರಿಂದ ಸರ್ಕಾರದ ಆದಾಯ ಕಡಿಮೆ ಆಯಿತು. ಆದರೆ ಜನ ಹೊಟ್ಟೆತುಂಬ ಊಟಮಾಡುತ್ತಿದ್ದರು; ಅವರ ಹೆಂಡತಿ ಮಕ್ಕಳು ಸುಖವಾಗಿದ್ದರು. ಕಾನೂನಿನ ಬಲಾತ್ಕಾರಕ್ಕಿಂತ, ಜನರ ಮನಸ್ಸು ಕುಡಿಯಬಾರದೆಂಬ ನೀತಿಗೆ ಪರಿವರ್ತನೆಯಾಗಿದ್ದರೆ ಚೆನ್ನಾಗಿರುತ್ತಿದ್ದಿತು. ಈ ಅದ್ಭುತ ಯಾವಾಗ ನಡೆಯಬಹುದೊ? ಭಜನೆಯ ಹಾಡಿನಲ್ಲಿ ಹೇಳಿದಂತೆ ಜನರು ಗುರುಕೃಪೆ ಮತ್ತು ರಾಮನಾಮ ದಿಂದ ತುಂಬಿದಾಗ ಮಾತ್ರ.

ಒಬ್ಬ ಧನಿಕ, ಚಿನ್ನ, ಬೆಳ್ಳಿ, ಹಣ ಕೊಡುತ್ತೇನೆ ಎಂದರೆ ಜನ ಅವನ ಮನೆಯಲ್ಲಿ ನೆರೆಯುತ್ತಾರೆ. ಆದರೆ ನಿಜವಾಗಿಯೂ ಮನುಷ್ಯನಿಗೆ ಚಿನ್ನ ಬೆಳ್ಳಿಯಿಂದ ಏನು ಪ್ರಯೋಜನ? ಗುರುಕೃಪೆಗಿಂತ ದೊಡ್ಡದು ಯಾವುದೂ ಇಲ್ಲ. ದೇವರಿಗೆ ಬೇರೆ ಬೇರೆ ಹೆಸರುಗಳಿವೆ. ಆದರೆ ದೇವರು ಒಂದೆ. ದೇವರ ದಯ ಪೂರ್ಣವಾಗಿದ್ದರೆ, ಏನನ್ನೂ ಸಾಧಿಸುವುದು ಕಷ್ಟವಿಲ್ಲ."

ಮಹಾತ್ಮಾ ಗಾಂಧಿಯವರ ಪ್ರಾರ್ಥನೆಯ ಸಾರಾಂಶವನ್ನು ಮುಂದೆ ಕೊಡಲಾಗಿದೆ.

"ಅಹಿಂಸೆಯಲ್ಲಿಯೂ ಸತ್ಯದಲ್ಲಿಯೂ ನನ್ನ ನಂಬಿಕೆ ದಿನದಿನಕ್ಕೆ ಬೆಳೆಯುತ್ತಿದೆ. ನನ್ನ ಬಾಳಿನಲ್ಲಿ ಪ್ರತಿ ಗಳಿಗೆಯಲ್ಲಿಯೂ ಅವನ್ನು ಅನುಸರಿಸಲು ನಾನು ಪ್ರಯತ್ನಿಸುತ್ತಿದ್ದೇನೆ. ನನಗೆ ನಿತ್ಯ ಅದರ ಹೊಸ ಹೊಸ ಅರ್ಥ ಹೊಳೆಯುತ್ತಿದೆ. ನಾನೂ ಬೆಳೆಯುತ್ತಿದ್ದೇನೆ. ಗಳಿಗೆ ಗಳಿಗೆಗೂ ನನಗೆ ಹೊಸ ಸತ್ಯ ಕಾಣುತ್ತಿದೆ. ಆದುದರಿಂದ ನಾನು ನಿತ್ಯ ಹೊಸ ಹೊಸ ಯೋಜನೆಗಳನ್ನು ದೇಶದ ಮುಂದೆ ಇಡುತ್ತಿದ್ದೇನೆ.

ಗಾಂಧಿವಾದ ಒಂದು ಹೊಸ ಮತವಾಗಬಾರದು. ನನ್ನ ಅನಂತರ ನನ್ನ ತತ್ವಗಳೆಲ್ಲ ಬರಿಯ ಮತ ಸಂಪ್ರದಾಯವಾಗುವುದು ನನಗೆ ಇಷ್ಟವಿಲ್ಲ. ನಾನು ಮೌನವಾಗಿ ಕೆಲಸ ಮಾಡಬೇಕು. ನಾನು ಗಾಂಧಿಯ

ಅನುಯಾಯಿ ಎಂದು ಯಾರೂ ಹೇಳುವುದು ಬೇಡ. ನಾನು ನನ್ನ ಅನುಯಾಯಿಯಾದರೆ ಸಾಕು. ನಾನು ನನ್ನ ಪೂರ್ಣ ಅನುಯಾಯಿಯಲ್ಲವೆಂಬುದು ನನಗೆ ಗೊತ್ತು. ಯಾಕೆಂದರೆ ನನ್ನ ಆದರ್ಶವನ್ನು ನಾನೇ ಪೂರ್ಣವಾಗಿ ಮುಟ್ಟಿಲ್ಲ ನನ್ನ ತತ್ವಗಳು ಕೊಳೆತ ನೀರಲ್ಲ. ಮರದಂತೆ ಅದು ಯಾವಾಗಲೂ ಬೆಳೆಯುತ್ತಲೇ ಇರುತ್ತದೆ ನೀವು ನನ್ನ ಅನುಯಾಯಿಗಳಲ್ಲ. ಸಹ ಪಾಂಥಿಗಳು, ಸಹ ಯಾತ್ರಿಕರು ಸಹ ಸತ್ಯಾನ್ವೇಷಕರು ಸಹೋದ್ಯೋಗಿಗಳು.

ನಾವು ಸತ್ಯ ಅಹಿಂಸೆಗಳನ್ನು ವ್ಯಕ್ತಿಗಳ ಆಚರಣೆ ಮಾತ್ರವೇ ಅಲ್ಲ. ದೇಶಗಳ, ರಾಷ್ಟ್ರಗಳ ಜನಸ್ತೋಮದ ಆಚರಣೆಯಾಗಿ ಮಾಡಬೇಕಾಗಿದೆ. ಅದು ನನ್ನ ಕನಸು. ಅದರ ಸಾಧನೆಗಾಗಿಯೇ ನಾನು ಬದುಕುವುದು ಸಾಯುವುದು ನನ್ನ ನಂಬಿಕೆಯಿಂದ ನನಗೆ ನಿತ್ಯ ಹೊಸ ಸತ್ಯ ಕಾಣುತ್ತಿದೆ. ಅಹಿಂಸೆಯು ಆತ್ಮದ ಗುಣ. ಆದುದರಿಂದ ಇದನ್ನು ನಿತ್ಯದ ವ್ಯವಹಾರದಲ್ಲಿಯೂ, ಮನುಷ್ಯ ಸಾಮಾನ್ಯರ ಎಲ್ಲ ನಡವಳಿಕೆಗಳಲ್ಲಿಯೂ ಆಚರಿಸಬೇಕು ಎಲ್ಲೆಲ್ಲಿಯೂ ಆಚರಿಸಲು ಸಾಧ್ಯವಾಗದಿದ್ದರೆ ಅದಕ್ಕೆ ವ್ಯಾವಹಾರಿಕವಾದ ಬೆಲೆ ಇಲ್ಲ. ನನ್ನ ಮಿತ್ರರು ನನಗೆ ತೋರಿಸಬಹುದಾದ ಅಂತ್ಯದ ದೊಡ್ಡ ಗೌರವ ತಮ್ಮ ಜೀವನದಲ್ಲಿ ನನ್ನ ಕಾರ್ಯಕ್ರಮಗಳನ್ನು ಆಚರಣೆಗೆ ತರುವುದೇ ಆಗಿದೆ

ದೇವರಲ್ಲಿ ನಂಬಿಕೆಯಿಲ್ಲದಿದ್ದಲ್ಲಿ ಬಾಳುವೆ ಸಾಧ್ಯವಿಲ್ಲವೆಂಬುದು ನನ್ನ ದೃಢನಂಬಿಕೆ. ನಂಬಿಕೆಯಿಲ್ಲದವನು, ಸಮುದ್ರದಿಂದ ಈಚೆಗೆ ಹಾರಿದ ಹನಿಯಂತೆ ಅವನು ನಾಶವಾಗುವುದು ಖಂಡಿತ.

ಸಮಸ್ತವನ್ನು ಆಚರಿಸಿರುವ, ಕಣ್ಣಿಗೆ ಕಾಣದ ಶಕ್ತಿ ಒಂದು ಇದೆ. ನನ್ನ ಕಣ್ಣಿಗೆ ಕಾಣದಿದ್ದರೂ ಅದು ನನಗೆ ಅನುಭವವಾಗುತ್ತಿದೆ. ಅದು ಪಂಚೇಂದ್ರಿಯಗಳನ್ನು ಮೀರಿದುದರಿಂದ, ಅನುಭವ ಗೋಚರವಾದರೂ ಇಂದ್ರಿಯ ಗೋಚರವಾಗುವುದಿಲ್ಲ. ಸ್ವಲ್ಪ ಮಟ್ಟಿಗೆ ದೇವರು ಇದ್ದಾನೆಂಬುದನ್ನು ಸಕಾರಣವಾಗಿಯೂ ಅರಿಯುವುದು ಸಾಧ್ಯ

ದೇವರ ವಿಷಯದಲ್ಲಿ ಜಗತ್ತಿಗೆ ಇರುವ ನಂಬಿಕೆಯೆಲ್ಲಾ ನನ್ನ ನಂಬಿಕೆಯೇ. ಆ ನಂಬಿಕೆಯು ದೃಢವೂ ಶಾಶ್ವತವೂ ಆದುದರಿಂದ ನಾನು

ಅದನ್ನು ಅನುಭವವೆಂದೇ ಕರೆಯುತ್ತೇನೆ. ಆದರೆ ನಂಬಿಕೆಯನ್ನು ಅನುಭವವೆಂದು ಹೇಳುವುದು ಸತ್ಯಕ್ಕೆ ವಿರೋಧವಾದುದರಿಂದ, ದೇವರಲ್ಲಿಯ ನನ್ನ ನಂಬಿಕೆ ಯಾವ ಸೂತ್ರಕ್ಕೂ ಒಳಪಡುವದಿಲ್ಲವೆಂದು ಹೇಳುವುದು ಅಷ್ಟು ಸರಿಯಾಗುವುದು.

ನಮಗೆಲ್ಲಾ ಅನುಭವದಿಂದ ಗೊತ್ತಾಗುವ, ಆದರೆ ಕಣ್ಣಿಗೆ ಕಾಣದ ಶಕ್ತಿಯೇ ದೇವರು. ನನಗೆ ದೇವರೇ ಸತ್ಯ, ಪ್ರೇಮ, ನೀತಿ, ಸನ್ಮಾರ್ಗ ಎಲ್ಲವೂ. ದೇವರು ನಿರ್ಭಯ, ದೇವರು ಜ್ಯೋತಿ ಮತ್ತು ಜೀವನದ ಮೂಲ. ಆದರೆ ಆತ ಇವೆಲ್ಲವನ್ನೂ ಮೀರಿದವನು; ಇದರ ಆಚೆಗೂ ಸಹ ದೇವರೇ ಆತ್ಮಸಾಕ್ಷಿ. ನಾಸ್ತಿಕನ ನಾಸ್ತಿಕವಾದವೇ ದೇವರು. ಆತ ಮಾತಿಗೂ ತರ್ಕಕ್ಕೂ ಹೊರಗಾದವನು. ಮುಟ್ಟುವ ಆಸೆಯುಳ್ಳವನಿಗೆ ದೇವರು ಸಾಕಾರ. ಅದೇ ಅತ್ಯಂತ ಶುದ್ಧವಾದ ಸತ್ವ. ನಂಬಿಕೆಯುಳ್ಳವರಿಗಂತೂ ದೇವರು ಇದ್ದೇ ಇದ್ದಾನೆ. ದೇವರು ಬಹಳ ಸಹಿಷ್ಣು. ದೇವರು ಶಾಂತ ಮತ್ತೂ ಭಯಂಕರ, ಸೌಮ್ಯ ಮತ್ತೂ ಘೋರ. ದೇವರು ಸತ್ಯ. ನಾವು ಅಸತ್ಯ. ಇರುವವನು ದೇವರೇ. ನಾವು ಅಲ್ಲ.

ದೇವರು ಒಬ್ಬ ವ್ಯಕ್ತಿ ಅಲ್ಲ. ದೇವರು ನಮ್ಮನ್ನು ಆಳುತ್ತಾನೆ ಎಂದು ನಾವು ಹೇಳುವಾಗ ಮನುಷ್ಯ ಭಾಷೆಯಲ್ಲಿ ಹೇಳುತ್ತೇವೆ. ಈ ಭಾಷೆಯೇ ಇದಕ್ಕೆ ಒಂದು ಬಂಧನ. ದೇವರೇ ಧರ್ಮ. ದೇವರೂ ಅವನ ಧರ್ಮವೂ ಸರ್ವಾಂತರ್ಯಾಮಿ. ಆದರೆ ದೇವರು ನಮ್ಮ ಪ್ರತಿಯೊಂದು ಪ್ರಾರ್ಥನೆಯನ್ನು ನೆರವೇರಿಸುತ್ತಾನೆಂದು ನಾನು ನಂಬುವುದಿಲ್ಲ. ಆದರೆ ನಮ್ಮ ಪ್ರತಿಯೊಂದು ಕಾರ್ಯವನ್ನೂ ಆಳುವವನು ಅವನೇ ಎಂಬುದರಲ್ಲಿ ಸಂದೇಹವಿಲ್ಲ. 'ತೇನ ವಿನಾ ತೃಣಮಪಿ ನ ಚಲತಿ' ಎಂಬುದು ಪೂರ್ಣ ಸತ್ಯ.

ಸತ್ಯವು ಸ್ವಯಂಪ್ರಕಾಶ. ಅದಕ್ಕೆ ಸುತ್ತಿಕೊಂಡಿರುವ ಅಜ್ಞಾನವೆಂಬ ಕೊಳೆಯನ್ನು ಹೋಗಲಾಡಿಸಿದ ಕೂಡಲೇ ಅದು ಹೊಳೆಯಲು ಪ್ರಾರಂಭಿಸುವುದು. ಸತ್ಯವು ತಾನೇ ತನ್ನ ಪ್ರಚಾರಕ. ಸೂರ್ಯ ತನ್ನ ಬೆಳಕನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲದಂತೆ.

ತನ್ನ "ಆತ್ಮಸಾಕ್ಷಿ"ಯನ್ನು ಕುರಿತು ಮಾತನಾಡುವಾಗ, ಪ್ರತಿ

ಯೊಬ್ಬರೂ ತಮ್ಮ ಬಲಾಬಲಗಳನ್ನು ಅರಿತು ಮಾತನಾಡಬೇಕು. ಭಗವಂತನ ಅನ್ವೇಷಕರು ಕೆಲವು ನಿಯಮಗಳನ್ನು ಅನುಸರಿಸಲೇಬೇಕು. ಆದುದರಿಂದ ಅವರ ಅನುಭವದ ಮೇಲಿನ ನಂಬಿಕೆ ನನಗೆ ದೊರೆಯುತ್ತದೆ ತಮ್ಮ ಜೀವಿತದಲ್ಲಿ ಭಗವಂತನನ್ನು ಅರಸುವವರು ಅನೇಕ ಕಠಿಣ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸತ್ಯ, ಬ್ರಹ್ಮಚರ್ಯ ಮುಂತಾದ ವ್ರತಗಳನ್ನು ಪಾಲಿಸಬೇಕಾಗುತ್ತದೆ. ಅಹಿಂಸೆ, ಅಸಂಗ್ರಹ, ದಾರಿದ್ರ್ಯ ಇವನ್ನು ಅನುಸರಿಸಬೇಕಾಗುತ್ತದೆ. ಸತ್ಯ ದೇವರನ್ನು ಅರ್ಧ ಮನಸ್ಸಿನಿಂದ ಹುಡುಕುವುದು ಸಾಧ್ಯವಿಲ್ಲ. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸಂಗ್ರಹ, ದಾರಿದ್ರ್ಯ ಈ ಐದು ನಿಯಮಗಳನ್ನು ಪಾಲಿಸದೆ ಭಗವಂತನ ಅನ್ವೇಷಣೆ ಸಾಧ್ಯವಲ್ಲ. ಈ ನಿಯಮಗಳಲ್ಲದೆ ಇನ್ನೂ ಅನೇಕ ಇವೆ. ಇಷ್ಟು ಹೇಳಿದರೆ ಸಾಕು. ಈ ನಿಯಮಗಳನ್ನೆಲ್ಲಾ ಪಾಲಿಸದಿರುವವರು ತಮ್ಮ ಆತ್ಮಸಾಕ್ಷಿಯ ಧ್ವನಿ ತಮಗೆ ಕೇಳಿತೆಂದು ಹೇಳುವುದು ಸರಿಯಲ್ಲ. ಈಗ ಎಲ್ಲರೂ ತಮ್ಮ ತಮ್ಮ ಸಾಕ್ಷಿ ತಮಗೆ ಕೇಳಿತೆಂದು ಹೇಳಿಕೊಂಡು ಜಗತ್ತಿಗೆ ಅಸತ್ಯದ ಉಪದೇಶ ಮಾಡುತ್ತಿದ್ದಾರೆ. ನಾನು ಅತ್ಯಂತ ವಿನಯದಿಂದ ನಿಮಗೆ ಹೇಳಿಕೊಳ್ಳುವುದೇನೆಂದರೆ ನಿಜವಾದ ನಮ್ರತೆಯಿಲ್ಲದವನಿಗೆ ಸತ್ಯ ದೊರೆಯುವುದಿಲ್ಲ. ಸತ್ಯವೆಂಬ ಸಮುದ್ರದ ತಳದಲ್ಲಿ ನೀವು ಈಜಬೇಕಾದರೆ ನೀವು ಪೂರ್ಣವಾಗಿ ಸೊನ್ನೆಯಾಗಬೇಕು.

ಜೀವನ, ತೊಡಕುಗಳುಳ್ಳ ಸಮಸ್ಯೆ. ಸತ್ಯ ಮತ್ತು ಅಹಿಂಸೆಗಳು ವಾದಕ್ಕೆ ಒಳಪಡದ ಅನೇಕ ಸಮಸ್ಯೆಗಳನ್ನು ಒದಗಿಸುತ್ತವೆ. ಸತ್ಯವೂ ಸತ್ಯಾಗ್ರಹವೂ ಶಾಂತವಾದ ಆಚರಣೆಯಿಂದಲೂ ಮೌನವಾದ ಪ್ರಾರ್ಥನೆಯಿಂದ ಮಾತ್ರ ದೊರೆಯುತ್ತದೆ. ನಾನು ಸತ್ಯವನ್ನು ಹುಡುಕುತ್ತಿದ್ದೇನೆ. ಈ ಇಕ್ಕಟ್ಟಾದ ಆದರೆ ಸುಂದರವಾದ ಮಾರ್ಗದಲ್ಲಿ ನಮ್ರತೆಯೂ ಮೌನವಾದ ಪ್ರಾರ್ಥನೆಯೂ ನನ್ನ ಜತೆಗಾರರಾಗಿದ್ದಾರೆ.

ಬುದ್ಧಿಯನ್ನೂ ವಿವೇಕವನ್ನೂ ದೇಹವನ್ನೂ ಪೂರ್ಣವಾಗಿ ಸೊನ್ನೆ ಮಾಡಿದ ಹೊರತು ಅತೀತವಾದ ಆತ್ಮ ಸಾಕ್ಷಾತ್ಕಾರ ದೊರೆಯುವುದಿಲ್ಲ.

ಅಹಿಂಸೆಯಲ್ಲಿ ನಮ್ಮ ನಂಬಿಕೆ ಶಾಶ್ವತವಾಗಿರಲು ದೇವರು ಎಂಬ ದೈವೀ ಶಕ್ತಿಯಲ್ಲಿ ನಂಬಿಕೆ ಇರಬೇಕಾದುದು ಆವಶ್ಯಕವಿಲ್ಲ. ಆದರೆ

ದೇವರು ಆಕಾಶದಲ್ಲಿರುವ ಶಕ್ತಿಯಲ್ಲ. ದೇವರು ನಮ್ಮಲ್ಲಿಯೇ ನೆಲಸಿರುವ ಶಕ್ತಿ. ಬೆರಳಿಗೆ ಉಗುರುಗಳಿಗಿಂತ ಆತ ನಮಗೆ ಹತ್ತಿರವಾಗಿದ್ದಾನೆ. ನಮ್ಮಲ್ಲಿ ಅನೇಕ ಶಕ್ತಿಗಳು ಅಡಗಿವೆ ಅವು ಸಾಧನೆಯಿಂದ ಮಾತ್ರ ನಮಗೆ ತಿಳಿಯಲು ಸಾಧ್ಯ. ಹಾಗೆಯೇ ನಾವು ಶ್ರದ್ಧೆಯಿಂದ ಹುಡುಕಿದರೆ ದೇವರು ಸಹ ನಮಗೆ ದೊರೆಯುತ್ತಾನೆ. ಇದಕ್ಕೆ ಒಂದು ಮಾರ್ಗ ಅಹಿಂಸಾ. ದೇವರು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಇದ್ದಾನೆ. ನಾವು ಎಲ್ಲರೊಂದಿಗೂ ಒಂದಾಗಬೇಕು. ಈ ಸಮಭಾವಕ್ಕೆ ಯಾರೂ ಹೊರಗಾದವರಲ್ಲ, ಇದೇ ಪ್ರೇಮ. ಇದು ನಮ್ಮನ್ನು ಒಬ್ಬರನ್ನೊಬ್ಬರನ್ನೂ ಪರಸ್ಪರ ಬಂಧಿಸುತ್ತದೆ. ದೇವರೊಂದಿಗೂ ಬಂಧಿಸುತ್ತದೆ. ಅಹಿಂಸೆಯೂ ದೇವರೂ ಎರಡೂ ಒಂದೇ.

ಸತ್ಯದ ಭಕ್ತರಾಗಿರುವುದೇ ನಾವು ಬದುಕಿರುವುದಕ್ಕೆ ಸಾರ್ಥಕ. ದೇವರು ಬರಿಯ ಬುದ್ಧಿಗೆ ಸಮಾಧಾನವನ್ನುಂಟು ಮಾಡುವವನಲ್ಲ. ದೇವರು ನಮ್ಮ ಹೃದಯದಲ್ಲಿದ್ದುಕೊಂಡು ಅದನ್ನು ಆಳಬೇಕು. ದೇವರು ತನ್ನ ಭಕ್ತನ ಅತ್ಯಂತ ಅಲ್ಪವಾದ ಪ್ರತಿಸಣ್ಣ ಕಾರ್ಯದಲ್ಲಿಯೂ ಕಾಣಬೇಕು. ಇದು ಪಂಚೇಂದ್ರಿಯಗಳನ್ನು ಮೀರಿದುದರ ಆಚೆಯ ಮಾತು. ಪಂಚೇಂದ್ರಿಯಗಳಿಗೆ ಗೋಚರವಾಗುವುದು ನಿಜವಾಗಿ ಕಂಡರೂ ಅನೇಕ ವೇಳೆ ಮಾಯೆ. ಇಂದ್ರಿಯಗಳ ವ್ಯಾಪ್ತಿಯನ್ನು ಮೀರಿದ ಅನುಭವವೇ ನಿಜ. ಅದಕ್ಕೆ ಹೊರಗಣ ಸಾಕ್ಷ್ಯ ಇಲ್ಲ. ಭಕ್ತನ ಆಚರಣೆಯೇ ಬದಲಾಗುವುದು. ಜಗತ್ತಿನ ಭಕ್ತರ ಜ್ಞಾನಿಗಳ ಅನುಭವದಿಂದ ಇದು ವ್ಯಕ್ತವಾಗುತ್ತದೆ. ಈ ಸಾಕ್ಷ್ಯವನ್ನು ನಂಬದಿರುವುದು ತನ್ನನ್ನೇ ತಾನು ನಂಬದಂತೆ.

ಈ ದೇಹವೆಂಬ ಪಂಜರದಲ್ಲಿ ನಾವು ಸಿಕ್ಕಿಕೊಂಡಿರುವ ವರೆಗೆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ, ನಾವು ಅದನ್ನು ಊಹನೆಯಿಂದ ಮಾತ್ರ ಕಾಣಬಹುದು. ಶಾಶ್ವತವಾದ ಸತ್ಯವನ್ನು ಈ ನಶ್ವರ ದೇಹದ ಮೂಲಕ ಪ್ರತ್ಯಕ್ಷವಾಗಿ ಕಾಣುವುದು ಸಾಧ್ಯವಿಲ್ಲ. ಆದುದರಿಂದ ಕೊನೆಗೆ ನಾವು ನಂಬಿಕೆಗೇ ಶರಣು ಹೋಗಬೇಕು:

ಮನುಷ್ಯ ಯಾವಾಗಲೂ ಅಪೂರ್ಣ. ಪೂರ್ಣನಾಗಲು ಪ್ರಯತ್ನ ಮಾಡುವುದೇ ಅವನ ಗುರಿ. ಅಹಿಂಸೆ ಮತ್ತು ಅಸಂಗ್ರಹ ದೃಷ್ಟಿಯಿಂದ

ಪೂರ್ಣರಾಗಲು ಸಾಧ್ಯವೇ ಇಲ್ಲ. ಅದು ದೂರದ ಆದರ್ಶ ಮಾತ್ರ. ಆದರೆ ಆ ಸಾಧನೆಗಾಗಿ ನಾವು ಒಂದು ಗಳಿಗೆಯೂ ವಿಶ್ರಾಂತಿಯಿಲ್ಲದೆ ದುಡಿಯ ಬೇಕು

ದೇವರನ್ನು ನೋಡುವುದೇ ಮನುಷ್ಯನ ಅಂತಿಮ ಗುರಿ ಅವರ ಸಾಮಾಜಿಕ ರಾಜಕೀಯ ಧಾರ್ಮಿಕ ಚಟುವಟಿಕೆಗಳೆಲ್ಲಾ ಭಗವತ್ ದರ್ಶನದ ಗುರಿಯಿಂದಲೇ ಆಗುತ್ತಿವೆ. ಜಗತ್ತಿನ ಜನತೆಯ ಸೇವೆ ಈ ಮಾರ್ಗದಲ್ಲಿ ಮೊದಲನೆಯ ಮೆಟ್ಟಲು. ಯಾಕೆಂದರೆ ಭಗವಂತನ ಸೃಷ್ಟಿ ಯೊಂದಿಗೆ ಒಂದಾಗುವುದೇ ಅವನನ್ನು ಕಾಣುವ ಸುಲಭಮಾರ್ಗ. ನಾನು ಪೂರ್ಣದ ಒಂದು ಭಾಗ. ಉಳಿದ ಮನುಷ್ಯ ಜಗತ್ತಿಗೆ ದೊರಕದೆ ದೇವರು ನನಗೆ ಮಾತ್ರವೇ ದೊರಕುವುದು ಸಾಧ್ಯವಿಲ್ಲ. ನಮ್ಮ ದೇಶೀಯರು ನನ್ನ ಸಮೀಪ ಬಂಧುಗಳು. ಅವರು ದೀನರೂ ಜಡರೂ ಆಗಿದ್ದಾರೆ. ಅವರನ್ನು ಉದ್ಧಾರಮಾಡಲು ನಾನು ಕಂಕಣ ಬದ್ಧನಾಗಿದ್ದೇನೆ. ದೇವರು ಹಿಮಾ ಲಯದ ಗವಿಯಲ್ಲಿ ಸಿಕ್ಕುತ್ತಾನೆಂದು ನನಗೆ ನಂಬಿಗೆಯಾದರೆ ನಾನು ತತ್ ಕ್ಷಣ ಅಲ್ಲಿಗೆ ಹೊರಡುವವನೇ. ಆದರೆ ಮನುಷ್ಯ ಪ್ರಪಂಚವನ್ನು ಬಿಟ್ಟು ಅವನು ಬೇರೆ ಎಲ್ಲಿಯೂ ದೊರೆಯುವುದಿಲ್ಲವೆಂದು ನನಗೆ ಗೊತ್ತು.

ಭಗವಂತನ ಸೇವೆ; ಆ ಕಾರಣದಿಂದ ಮನುಷ್ಯನ ಸೇವೆ ಇದೇ ನನ್ನ ಮತ.

ಪ್ರತಿಫಲದ ಆಸೆ ಇಲ್ಲದೆ ಸೇವೆ ಮಾಡುವುದು, ಇತರರಿಗೆ ಮಾಡುವ ಸಹಾಯವಲ್ಲ. ನಮಗೇ ಮಾಡಿಕೊಳ್ಳುವ ಸಹಾಯ. ಸಾಲವನ್ನು ತೀರಿಸಿ ಋಣಮುಕ್ತರಾಗಿ ನಮ್ಮ ಹೊರೆಯನ್ನು ಕಳೆದುಕೊಳ್ಳುವಂತೆ ಸತ್ಪುರುಷರು ಮಾತ್ರವೇ ಅಲ್ಲ, ಎಲ್ಲರೂ ಮನುಷ್ಯನ ಸೇವೆಗೆ ತನ್ನನ್ನು ಮೀಸಲು ಮಾಡಿ ಕೊಳ್ಳಬೇಕು. ತ್ಯಾಗದಿಂದಲೇ ಮನುಷ್ಯನು ಪ್ರಾಣಿಗಳಿಗಿಂತ ಉತ್ತಮ ಎನ್ನಿಸಿಕೊಳ್ಳುತ್ತಾನೆ.

ಇತರರಿಗಾಗಿ ಎಷ್ಟೆಷ್ಟು ಕೆಲಸವನ್ನು ಮನುಷ್ಯನು ಮಾಡುತ್ತಾನೋ ಅಷ್ಟಷ್ಟೂ ಅವನು ಮಹನೀಯನಾಗುತ್ತಾನೆ.

ದೇವರು ಒಬ್ಬನೇ. ಆದುದರಿಂದ ಮನುಷ್ಯ ಜಗಕ್ಕೆಲ್ಲ ಒಂದೇ.

ದೇಹಗಳು ಬಹಳವಾಗಿದ್ದರೇನು? ನಮಗೆ ಇರುವುದು ಒಂದೇ ಆತ್ಮ. ಸೂರ್ಯನ ಕಿರಣಗಳು ಅನೇಕವಾದರೂ ಸೂರ್ಯನು ಒಂದೇ.

ಒಬ್ಬ ವ್ಯಕ್ತಿ ತಾನು ಮಾತ್ರ ಆತ್ಮಶಕ್ತಿಯನ್ನು ಸಂಪಾದಿಸುವುದೂ, ಅವನ ಸುತ್ತಲಿನವರು ಕಷ್ಟಪಡುವುದೂ ಸಾಧ್ಯವಿಲ್ಲ. ಸಜೀವವಾದ ಪ್ರಾಣಿಗಳಿಗೆಲ್ಲಾ ಒಂದೇ ತತ್ವ. ಒಬ್ಬ ಮನುಷ್ಯನಿಗೆ ಆತ್ಮಶಕ್ತಿಯುಂಟಾದರೆ ಅದರ ಲಾಭ ಜಗತ್ತಿಗೇ ಉಂಟು. ಒಬ್ಬನಿಗೆ ಅಧೋಗತಿಯಾದರೆ ಜಗತ್ತೂ ಕೆಳಕ್ಕೆ ಬೀಳುವುದು. ಯಾವ ಸುಗುಣದಿಂದಲೂ ವ್ಯಕ್ತಿಗೆ ಮಾತ್ರವೇ ಒಳ್ಳೆಯದಾಗುವುದಿಲ್ಲ. ಯಾವ ದುರ್ಗುಣದಿಂದಲೂ ವ್ಯಕ್ತಿಗೆ ಮಾತ್ರವೇ ಕೆಡಕಾಗುವುದಿಲ್ಲ. ಆದುದರಿಂದ ಮನುಷ್ಯನು ಒಳ್ಳೆಯವನು. ಕೆಟ್ಟವನು ಆಗಿರುವುದು ಅವನಿಗೆ ಮಾತ್ರ ಸಂಬಂಧಪಟ್ಟ ವಿಷಯುವಲ್ಲ. ಇದು ಆ ಜನಾಂಗಕ್ಕೂ ಅಷ್ಟೆ ಅಲ್ಲ, ಜಗತ್ತಿಗೂ ಸಂಬಂಧಪಟ್ಟ ವಿಚಾರ.

ಜಗತ್ತಿನಲ್ಲಿ ಅನೇಕ ಸಹಸ್ರವರುಷಗಳಿಂದ ಪಶುಶಕ್ತಿಯೇ ರಾಜನಾಗಿದೆ. ಅದರಿಂದ ಆಗುತ್ತಿರುವ ಫಲವೂ ನೋಡಿದ ಕೂಡಲೇ ಗೊತ್ತಾಗುತ್ತಿದೆ. ಈ ಫಲವಲ್ಲದೆ ಬೇರೆ ಫಲ ದೊರೆಯುವ ಸೂಚನೆಗಳೂ ಇಲ್ಲ. ಕತ್ತಲೆಯಿಂದ ಬೆಳಕು ಹೇಗೆ ಬರುವುದಿಲ್ಲವೋ ಹಾಗೆಯೇ ದ್ವೇಷದಿಂದ ಪ್ರೇಮ ಹುಟ್ಟುವುದಿಲ್ಲ. ಹಿಂಸೆಯ ಆಧಾರದ ಮೇಲೆ ಶಾಶ್ವತವಾದುದು ಯಾವುದನ್ನೂ ಕಟ್ಟುವುದು ಸಾಧ್ಯವಿಲ್ಲ.

ಕೆಲವರು ಮಾರ್ಗವು ಮಾರ್ಗವೇ ಎಂದು ಹೇಳುತ್ತಾರೆ. ನಾನು ಮಾರ್ಗವೇ ಎಲ್ಲವೂ ಎನ್ನುತ್ತೇನೆ. ಸಾಧನೆ ಹೇಗೋ ಗುರಿಯೂ ಹಾಗೆಯೇ. ಸಾಧನೆಗೂ ಗುರಿಗೂ ಮಧ್ಯೆ ಅಂತಹ ಗೋಡೆ ಇಲ್ಲ ದೇವರು ಸಾಧನೆಯ ಮಾರ್ಗದ ಮೇಲೆ ನಮಗೆ ಸ್ವಲ್ಪ ಅಧಿಕಾರ ಕೊಟ್ಟಿದ್ದಾನೆ. ಗುರಿಯ ಮೇಲೆ ಏನೂ ಇಲ್ಲ, ಸಾಧನೆಯು ಎಷ್ಟು ಸರಿಯೋ ಗುರಿಯೂ ಅಷ್ಟು ಸಾಧ್ಯ. ಈ ನಿಯಮಕ್ಕೆ ಅಪವಾದವೇ ಇಲ್ಲ. ಸಾಧನೆ ಬೀಜ. ಗುರಿ ಮರ. ಬೀಜಕ್ಕೂ ಮರಕ್ಕೂ ಎಷ್ಟು ಸಂಬಂಧವಿದೆಯೋ ಗುರಿಗೂ ಸಾಧನೆಗೂ ಅಷ್ಟೇ ಸಂಬಂಧವಿದೆ. ಒಂದು ಸಲ ರಾಟೆಯಲ್ಲಿ ಸ್ವರಾಜ್ಯವಿದೆ ಎಂದೆ. ಅನಂತರ ಪಾನನಿರೋಧದಲ್ಲಿ ಸ್ವರಾಜ್ಯವೆಂದೆ. ಅನಂತರ ಪೂರ್ಣ

ಸ್ವದೇಶಿಯಲ್ಲಿ ಎಂದೆ. ಎಲ್ಲಾ ಸರಿ. ಕುರುಡರು ಆನೆಯನ್ನು ವರ್ಣಿಸಿದಂತೆ ಯಾವುದೂ ಪೂರ್ತಿ ಸರಿ ಇಲ್ಲ

ನಮ್ಮ ಆವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುವುದಲ್ಲ, ಕಡಿಮೆ ಮಾಡಿಕೊಳ್ಳುವುದೇ ನಾಗರೀಕತೆ. ಉದ್ದೇಶಪೂರ್ವಕವಾಗಿ ಕಡಿಮೆಮಾಡಿಕೊಳ್ಳಬೇಕು. ಇದರಿಂದ ತೃಪ್ತಿಯೂ ಸುಖವೂ ಸೇವಾಶಕ್ತಿಯೂ ಹೆಚ್ಚುತ್ತದೆ. ಆದರೆ ಆತ್ಮದ ಉದ್ಧಾರಕ್ಕೂ ಕೆಲವು ಸುಖಗಳು ಬೇಕಾಗುತ್ತವೆ. ಹಳ್ಳಿಯ ಕೊಳಕು, ಅಜ್ಞಾನದೊಂದಿಗೆ ಒಂದಾಗುವುದರಿಂದ ಯಾರಿಗೂ ಆತ್ಮೋದ್ಧಾರವಾಗುವುದಿಲ್ಲ.

ಸ್ವಲ್ಪ ಮಟ್ಟಿನ ಸುಖ ಸಮರಸಬೇಕು. ಅದಕ್ಕೆ ಮೀರಿದ ಸುಖದಿಂದ ತೊಂದರೆಯೇ ಹೊರತು ಸುಖವಿಲ್ಲ. ಆವಶ್ಯಕತೆಗಳನ್ನು ಹೆಚ್ಚಿಸಿಕೊಂಡು ಅವುಗಳನ್ನು ಪೂರೈಸಿಕೊಳ್ಳುವುದು ಒಂದು ಬಲೆಗೆ ಬಿದ್ದಂತೆ. ದೇಹದ ಆವಶ್ಯಕತೆಗಳಿಗೂ ಬುದ್ಧಿಯ ಆವಶ್ಯಕತೆಗಳಿಗೂ ಒಂದು ಮಿತಿಯುಂಟು. ಅದರಿಂದ ಆಚೆಗೆ ದೇಹದ ಮತ್ತು ಬುದ್ಧಿಯ ಹೊಟ್ಟೆಬಾಕತನವಾಗುತ್ತದೆ. ಮನುಷ್ಯನು ತನ್ನ ಆವಶ್ಯಕತೆಗಳನ್ನು ಬುದ್ಧಿಯ ಆವಶ್ಯಕತೆಗಳನ್ನು ಸರಿಯಾಗಿ ಏರ್ಪಡಿಸಿಕೊಳ್ಳಬೇಕು. ತನ್ನ ಆವಶ್ಯಕತೆಗಳ ಪೂರೈಕೆಯಲ್ಲಿ ಅವನ ಸೇವೆ ಕಡಿಮೆಯಾಗಬಾರದು. ಅವನ ಶಕ್ತಿಯಲ್ಲಾ ಸೇವೆಗೇ ವೆಚ್ಚವಾಗಬೇಕು.

೪

ನಿರ್ಮಾಣಕಾರ್ಯಕರ್ತರ ಸಭೆ

ಗಾಂಧಿಯವರ ಮದರಾಸು ಯಾತ್ರೆಯ ಸಂದರ್ಭದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸ್ವಾಗತ ಸಮಿತಿಯವರು ನಾಲ್ಕು ದಿಕ್ಕುಗಳಿಗೂ ನಾಲ್ಕು ಮಹಾದ್ವಾರಗಳನ್ನು ಏರ್ಪಡಿಸಿದ್ದರು. ಒಂದು ಕಸ್ತೂರಿಬಾ ಮಹಾದ್ವಾರ. ಎರಡು ಜಮುನಾಲಾಲ್ ಬಜಾಜ್ ಮಹಾದ್ವಾರ ಮೂರು ಹಿಂದುಸ್ಥಾನಿ ಮಹಾದ್ವಾರ, ನಾಲ್ಕು ನಿರ್ಮಾಣಕಾರ್ಯ ಮಹಾದ್ವಾರ. ನಾಲ್ಕು ಮಹಾದ್ವಾರಗಳೂ ಹೆಸರಿಗೆ ಅನ್ವರ್ಥವಾಗಿ ಚಿತ್ರಗಳನ್ನೊಳಗೊಂಡಿದ್ದವು. ಕಸ್ತೂರಿಬಾ ಮಹಾದ್ವಾರದ ವಿಷಯ ಹಿಂದೆಯೇ ಹೇಳಿದೆವು. ಕನಿಕಾಚಲಮ್ ಚೆಟ್ಟಿ ರಸ್ತೆಯಲ್ಲಿ ಸ್ಥಾಪಿತವಾದ ಬಜಾಜ್ ಮಹಾದ್ವಾರದ ಪ್ರಾರಂಭೋತ್ಸವವನ್ನು ರಾಜಾಜಿ ೨೪ನೆ ಪ್ರಾತಃಕಾಲ ನೆರವೇರಿಸಿದರು. ಕಾಕಾ ಕಾಲೇಲ್ಕರರು ಅಧ್ಯಕ್ಷರಾಗಿದ್ದರು.

ಗಾಂಧಿಯವರು ಭಾರತದ ಹೃದಯ ಅವರು ಒಬ್ಬರೇ ಅನೇಕ ಸಂಸ್ಥೆ, ಅವರು ಹೋದಕಡೆ ಭಾರತದ ಎಲ್ಲಾ ಸಂಸ್ಥೆಗಳೂ ಹೋಗುತ್ತವೆ ಅವರು ಇರುವ ಸ್ಥಳದಲ್ಲಿ ಕಾಂಗ್ರೆಸ್ಸಿನಲ್ಲಿರುವಷ್ಟು ಗದ್ದಲ, ಸಂಭ್ರಮ. ಹಿಂದೆ ಗಾಂಧಿ ನಂದಿಗೆ ಬಂದಿದ್ದಾಗ ಹೀಗೆಯೇ ಆಯಿತು. ಪಂಚಾಗ್ನಿಯಂತಹ ಸಣ್ಣ ಊರಿನಲ್ಲಿ ಸಹ ಭಾರತ ಮುಖಂಡರೆಲ್ಲಾ ನೆರೆದರು. ಮದರಾಸಿನಲ್ಲಿಯೂ ಹಾಗೆಯೇ. ಅಖಿಲ ಭಾರತ ಚರಖ ಸಂಘದ ಅಧ್ಯಕ್ಷ ಕೃಷ್ಣದಾಸ್ ಜಾಜು, ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಜೆ. ಸಿ ಕುಮಾರಪ್ಪ, ಸಹಾಯಕ ಕಾರ್ಯದರ್ಶಿ ಭರತನ್ ಕುಮಾರಪ್ಪ, ಕಾಕಾ ಕಾಲೇಲ್ಕರ್, ಗಾಂಧಿ ಸೇವಾ ಸಂಘದ ಕಾರ್ಯದರ್ಶಿ ಧೋತ್ರೆ; ಗೋ ಸೇವಾ ಸಂಘದ ಕಾರ್ಯದರ್ಶಿ ಕಮಲನಯನ ಬಜಾಜ್; ನಯಿತಾಲಿಂ ವ್ಯವಸ್ಥಾಪಕರಾದ ನರಹರಿ ಪರೀಖ್, ಜಿ. ರಾಮಚಂದ್ರನ್ ಹೀಗೆ ಎಲ್ಲಿ ನೋಡಿದರೂ ದೇಶದ ಹೆಸರೆತ್ತ ಮುಂದಾಳುಗಳು ಅವರಾ

ಗಾಂಧಿಯಾತ್ರೆಯಲ್ಲಿ ವಿನೋದಕ್ಕಾಗಿ ಬಂದವರಲ್ಲ. ಪ್ರತಿಯೊಬ್ಬರೂ ಗಾಂಧಿಯವರ ಸಾನ್ನಿಧ್ಯದಿಂದ ಸುಗಮವಾಗಬಹುದಾದ ತಮ್ಮ ತಮ್ಮ ಸಂಸ್ಥೆಗಳ ಉದ್ದೇಶಗಳನ್ನು ಸಾಧಿಸಲು ಬಂದಿದ್ದರು. ಕರ್ನಾಟಕ ಚರಖ ಸಂಘದ ಕಾರ್ಯದರ್ಶಿ ಸರದಾರ್ ವೆಂಕಟರಾಮಯ್ಯ, ತಮಿಳುನಾಡು ಆಂಧ್ರ ಕೇರಳ ಚರಖ ಸಂಘದ ಕಾರ್ಯದರ್ಶಿಗಳು, ಗಾಂಧಿಯೋಜನೆಯ ಕರ್ತೃವಾದ ಶ್ರೀಮನ್ನಾರಾಯಣ ಅಗರ್‌ವಾಲ, ಮೈಸೂರ ಕಾಂಗ್ರೆಸ್ ಮುಖಂಡರು, ಶ್ರೀ ದಿವಾಕರ ಇವರೇ ಮೊದಲಾದ ಮುಖಂಡರು ಹಿಂದೀ ಪ್ರಚಾರ ಸಭೆಯ ಆವರಣದಲ್ಲಿ ಎಲ್ಲೆಲ್ಲಿಯೂ ಓಡಾಟ ಹೆಚ್ಚಾಗಿದ್ದಿತು.

೨೯ನೆಯ ಪ್ರಾತಃಕಾಲ ಶ್ರೀ ರಾಜಾಜಿಯವರು ಬಜಾಜ್ ದ್ವಾರದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಆ ದ್ವಾರದಲ್ಲಿ ಜಮುನಾಲಾಲರ ಜೀವಿತದ ಅತ್ಯಂತ ಮುಖ್ಯವಾದ ಘಟನೆಗಳು ಚಿತ್ರಿತವಾಗಿವೆ. ಕಸ್ತೂರಿಬಾ ದ್ವಾರದಲ್ಲಿಯಂತೆ ಈ ಚಿತ್ರಗಳೂ ಕಲಾಪೂರ್ಣವಾದ ಆಕೃತಿಗಳು. ಈ ದ್ವಾರಗಳು ನಮ್ಮ ಹಳೆಯ ಸಂಸ್ಕೃತಿಯನ್ನು ಜ್ಞಾಪಕ ತರುತ್ತವೆ. ವಿಕ್ರಮಾದಿತ್ಯ ಭೋಜ ಇವರ ರಾಜಧಾನಿಗಳ ಮಹಾದ್ವಾರಗಳು ಹೀಗೆ ಇದ್ದವೇನೋ ಎಂಬ ಆಸೆಯ ನಂಬಿಕೆಯುಂಟಾಗುತ್ತದೆ. ಒಂದು ಕಡೆ ಕಮಲದಲ್ಲಿ ಪಾದಕಮಲಗಳನ್ನು ಇಟ್ಟು ನಿಂತಿರುವ ಲಕ್ಷ್ಮೀದೇವಿ, ಮಗು ಬಜಾಜರನ್ನು ಭಾರತ ಮಾತೆಯ ಕೈಗೆ ಕೊಡುತ್ತಾಳೆ. ಮತ್ತೊಂದು ಕಡೆ ಒಂದು ವಿಶಾಲವಾದ ಮರದ ಕೆಳಗೆ ಗಾಂಧಿ ಕಸ್ತುರಿಬಾ ಮಹದೇವ್ ದೇಸಾಯಿ, ಬಜಾಜ್ ರಾಜಾಜಿ ಇವರು ಕುಳಿತಿರುವ ಚಿತ್ರವಿದೆ. ಒಂದು ಕಡೆ ನಾಗಪುರ್ ಸತ್ಯಾಗ್ರಹದ ಚಿತ್ರವಿದೆ.

ಬಜಾಜ್ ದ್ವಾರದ ಪ್ರಾರಂಭೋತ್ಸವವನ್ನು ನಡೆಸುತ್ತಾ ರಾಜಾಜಿ ಹೀಗೆ ಹೇಳಿದರು. “ಈ ಮಹಾದ್ವಾರ ಹಿಂದೀ ಪ್ರಚಾರ ಸಭೆ ನಡೆಸುತ್ತಿರುವ ಕಾರ್ಯಗಳ ಒಂದು ಗುರುತು, ಹಿಂದುಸ್ಥಾನಿ ಪ್ರಚಾರದಿಂದ ತಮ್ಮ ಮಾತೃಭಾಷೆ ದೇಶಭಾಷೆಗಳಿಗೆ ಕುಂದಕ ಬರುವುದೆಂದು ದಕ್ಷಿಣ ಹಿಂದುಸ್ಥಾನದವರು ಯೋಚಿಸಕೂಡದು. ಹಿಂದೆ ಮದರಾಸಿನಲ್ಲಿಯೇ ಹಿಂದುಸ್ಥಾನಿಗೆ ವಿರೋಧವಾಗಿ ಒಂದು ಪ್ರಚಾರ ನಡೆಯಿತು. ಹಿಂದುಸ್ಥಾನಿಗೂ ದೇಶಭಾಷೆಗಳಿಗೂ ವಿರೋಧವಿಲ್ಲ. ಈಗ ನನ್ನ ಉದಾಹರಣೆಯನ್ನೇ

ತೆಗೆದುಕೊಳ್ಳಿ. ನಾನು ರಾಷ್ಟ್ರಭಾಷೆಯಾದ ಹಿಂದುಸ್ಥಾನಿಗಾಗಿ ಕೆಲಸ ಮಾಡುತ್ತಿದ್ದರೂ ತಮಿಳನ್ನು ಬಿಟ್ಟಿಲ್ಲ. ತಿರಸ್ಕರಿಸಿಲ್ಲ.

ಭಾರತದಲ್ಲಿರುವ ಭಾಷೆ ಹತ್ತು ಮಾತ್ರ

"ಸರಿಯಾಗಿ ನೋಡಿದರೆ ಭಾರತದಲ್ಲಿ ಇರುವ ದೊಡ್ಡ ಭಾಷೆಗಳು ಹತ್ತು ಮಾತ್ರ. ಕೆಲವರು ಹೇಳುವಂತೆ ಇಲ್ಲಿ ನೂರಾರು ಭಾಷೆಗಳಿರುವುದೆಂಬುದನ್ನು ನಂಬಬೇಡಿ. ಈ ಹತ್ತು ಭಾಷೆಗಳಲ್ಲಿ ಹಿಂದುಸ್ತಾನಿಯೊಂದೇ ರಾಷ್ಟ್ರಭಾಷೆಯಾಗಬಲ್ಲದು. ರಾಷ್ಟ್ರಭಾಷೆ ಇಲ್ಲದಿದ್ದರೆ ಭಾರತ ಒಂದು ರಾಷ್ಟ್ರವಾಗುವುದು ಹೇಗೆ? ಈ ಎಲ್ಲಾ ಭಾಷೆಗಳನ್ನೂ ಕಲಿತವನನ್ನು ಮಾತ್ರ ನಾವು ನಿಜವಾದ ವಿದ್ಯಾವಂತನೆನ್ನಬಹುದು. ದಕ್ಷಿಣ ಭಾರತದಲ್ಲಿ, ಒಂದು ಪ್ರಾಂತ-ಭಾಷೆಯವರು ಇತರರ ಪ್ರಾಂತ ಭಾಷೆಯನ್ನು ಕಲಿಯಲೇಬೇಕು. ಭಾರತದ ಎಲ್ಲಾ ಭಾಷೆಗಳಲ್ಲಿಯೂ ಒಂದೇ ಅರ್ಥವುಳ್ಳ ಪದಗಳು ಅನೇಕವಾಗಿವೆ. ಈ ಎಲ್ಲಾ ಭಾಷೆಗಳೂ ಸಂಸ್ಕೃತದಿಂದ ಜನಿಸಿರುವುದೇ ಇದಕ್ಕೆ ಕಾರಣ. ಹಿಂದುಸ್ತಾನಿಯನ್ನು ಕಲಿತ ಮಾತ್ರಕ್ಕೆ ನೀವು ಉತ್ತರ ದೇಶದವರ ಪ್ರಾಬಲ್ಯಕ್ಕೆ ಒಳಗಾಗಿ ಬಿಡುತ್ತೀರೆಂದು ಹೆದರಬೇಡಿ. ಹಿಂದುಸ್ಥಾನಿಯನ್ನೂ ಕಲಿಯುವುದರಿಂದ ಭಾರತದ ಆಗುಹೋಗುಗಳಲ್ಲಿ ಪೂರ್ಣವಾಗಿ ಭಾಗವಹಿಸಲು ನಿಮಗೆ ಶಕ್ತಿಯೂ ಧೈರ್ಯವೂ ಉಂಟಾಗುವುದು

"ಬಜಾಜರು ಹಿಂದುಸ್ಥಾನಿ ಪ್ರಚಾರಕ್ಕಾಗಿ ಬಹಳ ದುಡಿದರು. ಪ್ರಾರಂಭದಲ್ಲಿ ಸಣ್ಣದಾಗಿದ್ದ ಸಂಸ್ಥೆ ಈಚೆಗೆ ದೊಡ್ಡದಾಗಿ ಬೆಳೆದಿದೆ. ಭಾರತದಲ್ಲಿ ಬಜಾಜರ ಪ್ರೋತ್ಸಾಹವಿಲ್ಲದೆ ಬೆಳೆದ ಸಂಸ್ಥೆ ಯಾವುದೂ ಇಲ್ಲವೇ ಇಲ್ಲ. ಇನ್ನು ಕೆಲವು ದಿನಗಳಿಗೆ ಈ ದ್ವಾರವನ್ನು ಇಲ್ಲಿಂದ ತೆಗೆದು ಹಾಕುತ್ತಾರೆ. ಆದರೆ ದೇಶ ಬಜಾಜರ ಸೇವೆಯನ್ನು ಮರೆಯುವುದಿಲ್ಲ."

ನಿರ್ಮಾಣ ಕಾರ್ಯದಿಂದಲೇ ರಾಮರಾಜ್ಯ

ಜನವರಿ ೨೪ನೆಯ ತಾರೀಖು ನಿರ್ಮಾಣ ಕೆಲಸಗಾರರ ಸುದಿನ. ಗಾಂಧಿಯವರ ಮದರಾಸು ಪ್ರವಾಸದ ಕಾಲದಲ್ಲಿ ಆಂಧ್ರ ಕರ್ನಾಟಕ ತಮಿಳುನಾಡು ಕೇರಳಗಳ ನಿರ್ಮಾಣ ಕೆಲಸಗಾರರ ಸಮ್ಮೇಳನವನ್ನು,

ವರ್ಧಾನಯಿ ತಾಲೀಂ ವ್ಯವಸ್ಥಾಪಕರಾದ ಶ್ರೀ. ಜಿ. ರಾಮಚಂದ್ರನ್ ಏರ್ಪಡಿಸಿದ್ದರು. ದಕ್ಷಿಣದ ನಾಲ್ಕು ಪ್ರಾಂತಗಳಿಂದ ಆರಿಸಿದ ಸುಮಾರು ೨೦೦ ಕೆಲಸಗಾರರು ಸಮ್ಮೇಳನದಲ್ಲಿ ಭಾಗವಹಿಸಿದರು. ಅನೇಕ ಸ್ತ್ರೀಯರೂ ಸಮ್ಮೇಳನದಲ್ಲಿ ಭಾಗವಹಿಸಿದರು. ನಿರ್ಮಾಣ ಕಾರ್ಯದ ೧೮ ಅಂಶಗಳೂ ಚರ್ಚೆಯಾಗಿ, ಎದ್ದ ಪ್ರಶ್ನೆಗಳಿಗೆಲ್ಲಾ ಮಹಾತ್ಮ ಗಾಂಧಿಯವರೇ ಉತ್ತರ ಕೊಡುತ್ತಿದ್ದರು. ಮಹಾತ್ಮರ ಸಾನ್ನಿಧ್ಯದಲ್ಲಿ ಹೀಗೆ ಐದು ದಿನ ಚರ್ಚಿಸಿ ಅನುಮಾನಗಳನ್ನೆಲ್ಲಾ ಅವರ ಮುಂದೆ ಇಟ್ಟು ಸ್ಫೂರ್ತಿಯನ್ನು ಪಡೆಯುವ ಭಾಗ್ಯ ದಕ್ಷಿಣ ದೇಶದ ಕೆಲಸಗಾರರಿಗೆ ಉಂಟಾಯಿತು.

ಬೆಳಗಿನ ೮ ಗಂಟೆಗೆ ಹಿಂದಿ ಪ್ರಚಾರ ಸಭೆಯಲ್ಲಿ ನಿರ್ಮಾಣ ಕೆಲಸಗಾರರು ಬಂದು ನೆರೆದರು. ವೇದಿಕೆಯ ಮೇಲೆ ರಾಜಾಜಿ ಬಂದು ಮಂಡಿಸಿದರು. ಗಾಂಧಿಜಿ ಎಂಟುಕಾಲು ಗಂಟೆಗೆ ಸರಿಯಾಗಿ ಬಂದರು. ದಿವಸಕ್ಕೆ ನೂರಾರು ಕಾರ್ಯಕ್ರಮಗಳಿದ್ದರೂ ಗಾಂಧಿಜಿ ಯಾವ ಕಾರ್ಯಕ್ಕೂ ಕಾಲಮೀರಿ ಬರುವುದಿಲ್ಲ. ಅಖಿಲ ಭಾರತ ಚರಖ ಸಂಘದ ಅಧ್ಯಕ್ಷ ಶ್ರೀಕೃಷ್ಣದಾಸ ಜಾಜು ಅಂದು ಅಧ್ಯಕ್ಷರು ಗಾಂಧಿಯವರು ಬಂದು ವೇದಿಕೆ ಏರಿ ಕುಳಿತ ಕೂಡಲೇ ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದ ಕಾರ್ಯಕ್ರಮದ ಪಟ್ಟಿ ಅವರಿಗೆ ದೊರೆಯಿತು ಯಾವ ಸಣ್ಣ ವಿಷಯವನ್ನೂ ಗಾಂಧಿಯವರು ಉದಾಸೀನದಿಂದ ಬಿಡುವವರಲ್ಲ. ಅವರು ಅಲ್ಲಿಯೇ ವ್ಯವಸ್ಥಾಪಕರನ್ನು ಎಚ್ಚರಿಸಿದರು. ಕಾರ್ಯಕ್ರಮದ ಪಟ್ಟಿ ದೇಶಭಾಷೆಯಲ್ಲಿರಬೇಕು ಇಲ್ಲದಿದ್ದರೆ ರಾಷ್ಟ್ರ ಭಾಷೆಯಾದ ಹಿಂದುಸ್ಥಾನಿಯಲ್ಲಿರಬೇಕು ಎಂದರು. ಗಾಂಧಿಜಿ ಪ್ರಾರಂಭ ಭಾಷಣವನ್ನು ಪ್ರಾರಂಭಿಸಿದ ಕೂಡಲೇ ಸಭೆಯಲ್ಲಿ ಒಬ್ಬರು ಎದ್ದು ತೆಲುಗಿನಲ್ಲಿಯೂ ತಮಿಳಿನಲ್ಲಿಯೂ "ನಮಗೆ ತಿಳಿಯುವುದಿಲ್ಲ" ಎಂದು ಕೂಗಿದರು. ಗಾಂಧಿಯವರು ನಗುತ್ತಾ "ಕೂಚೋಯ್ಯ ಉಕ್ಕಾರು. ಅಯ್ಯ ಉಕ್ಕಾರು" ಎಂದರು. ಸಭೆಯಲ್ಲೆಲ್ಲಾ ನಗುವುಂಟಾಯಿತು.

ಮೊದಲನೆಯದಾಗಿ ಗಾಂಧಿಯವರು, ನಿರ್ಮಾಣ ಕೆಲಸಗಾರರು ಹಿಂದುಸ್ಥಾನಿ ಕಲಿಯದುದಕ್ಕಾಗಿ ಅವರನ್ನು ಆಕ್ಷೇಪಿಸಿದರು. ಹಿಂದುಸ್ಥಾನಿ ತಿಳಿಯದವರ ತೃಪ್ತಿಗಾಗಿ ನಾನು ಇಂಗ್ಲಿಷು ಮಾತನಾಡುವ ಕಾಲ ಹೋಯಿತು. ಇನ್ನುಮೇಲೆ ಇಂಗ್ಲಿಷಿನಲ್ಲಿ ಮಾತನಾಡುವುದು ಇಂಗ್ಲಿಷಿ

ನಜರೊಂದಿಗೆ ಮಾತ್ರ. ನಾನು ಇಂಗ್ಲಿಷಿನಲ್ಲಿ ಮಾತನಾಡಿದರೆ ನಿಮಗೆ ಚೆನ್ನಾಗಿ ತಿಳಿಯುತ್ತದೆ. ನಾನೂ ಚೆನ್ನಾಗಿ ಮಾತನಾಡಬಲ್ಲೆ ಆದರೂ ಹಿಂದುಸ್ಥಾನಿಯಲ್ಲಿಯೇ ಮಾತನಾಡುತ್ತೇನೆ.

"ನನಗೆ ವಿರಾಮವಿಲ್ಲ. ಇದ್ದಿದ್ದರೆ ನಾನು ನಿಮ್ಮ ಅಡಿಗೆಮನೆ ಊಟದ ಕೋಣೆ ಪಾಯಖಾನೆ ಗೃಹಗಳಿಗೆ ಹೋಗಿ ನೀವು ಹೇಗೆ ಊಟಮಾಡುತ್ತಿದ್ದೀರಿ, ಕುಳಿತುಕೊಳ್ಳುತ್ತೀರಿ ಎಲ್ಲವನ್ನೂ ನೋಡುತ್ತಿದ್ದೆ. ಶಿಬಿರಗಳಲ್ಲಿ ಸರಿಯಾದ ವಾಸವ್ಯವಸ್ಥೆ ಏರ್ಪಡಿಸಿಕೊಳ್ಳುವುದು, ನಿರ್ಮಾಣ ಕಾರ್ಯದ ೧೮ ಅಂಶಗಳ ಜತೆಗೆ ಸೇರಬೇಕಾದುದು.

"ನಿರ್ಮಾಣ ಕಾರ್ಯ, ಪಾರ್ಲಿಮೆಂಟರಿ ಕಾರ್ಯ ಎರಡೂ ದೇಶದ ಮುಂದೆ ಇದೆ. ಯಾವುದು ಹೆಚ್ಚು ಯಾವುದು ಕಡಿಮೆ ಎಂಬುದಲ್ಲ ಇಂದಿನ ಪ್ರಶ್ನೆ. ಭಾರತಕ್ಕೆ ಸ್ವರಾಜ್ಯ, ಅಹಿಂಸೆ ಮತ್ತು ಸತ್ಯದಿಂದ ಲಭಿಸಬೇಕಾದರೆ ನಿರ್ಮಾಣ ಕಾರ್ಯ ಅತ್ಯಗತ್ಯ ಶಾಸನ ಸಭೆಗಳಿಗೆ ದೇಶಪ್ರೇಮಿಗಳು ಹೋಗಬೇಕು. ಇಲ್ಲವಾದರೆ ಸ್ವಾರ್ಥಿಗಳು ಅಲ್ಲಿ ಸೇರಿ ದೇಶದ್ರೋಹಕರವಾದ ಕೆಲಸಗಳನ್ನು ಮಾಡಬಹುದು.

ಸ್ವಯಂಸೇವಕರೂ ಕೆಲಸಗಾರರೂ ಒಂದು ವಿಷಯವನ್ನು ತಿಳಿಯಬೇಕು. ಅಹಿಂಸಾ ಮಾರ್ಗದಿಂದ ಸ್ವರಾಜ್ಯ ಸಾಧನೆಯಾಗಬೇಕಾದರೆ ರಚನಾತ್ಮಕ ಕಾರ್ಯದಿಂದಲೇ ಸಾಧ್ಯ. ನಿರ್ಮಾಣ ಕಾರ್ಯವನ್ನು ಪೂರ್ಣವಾಗಿ ಸಾಧಿಸುವುದರಿಂದ ಪೂರ್ಣ ಸ್ವರಾಜ್ಯದೊರೆಯುತ್ತದೆ. ದೇಶವನ್ನು ತಳಪದಿಯಿಂದ ಮೇಲಕ್ಕೆ ಕಟ್ಟುವ ಈ ರಚನಾತ್ಮಕ ಕಾರ್ಯದಲ್ಲಿ ನಲವತ್ತು ಕೋಟಿ ಜನರೂ ತೊಡಗಿದ್ದಾರೆಂದು ಭಾವಿಸಿ. ಅದು ಎಲ್ಲಾ ದೃಷ್ಟಿಯಿಂದಲೂ ಸ್ವಾತಂತ್ರ್ಯ; ನನ್ನ ಮಾತನ್ನು ಕೇಳಿ ವಿಮರ್ಶನಕಾರರು ನಗುವುದಕ್ಕೆ ಕಾರಣ, ಈ ನಲವತ್ತು ಕೋಟಿ ಜನರೂ ಈ ಕಾರ್ಯವನ್ನು ಕೈಕೊಳ್ಳುವುದಿಲ್ಲವೆಂದು ಆ ಹಾಸ್ಯದಲ್ಲಿ ಅರ್ಥವಿದೆ. ನನ್ನ ಉತ್ತರ ಇದೆಯೆ. ಇದು ಶ್ರಮಕ್ಕೆ ಅರ್ಹವಾದುದು. ಶ್ರದ್ಧಾಳುಗಳಾದ ಹಠವಾದಿಗಳಾದ ಕೆಲಸಗಾರರು ಸಿಕ್ಕಿದರೆ ಈ ಕಾರ್ಯಕ್ರಮ, ಇತರ ಕಾರ್ಯಕ್ರಮಗಳಿಗಿಂತ ಹೆಚ್ಚು ಕಾರ್ಯಕಾರಿಯಾಗುವುದು. ಅಹಿಂಸೆಯಿಂದ ಸ್ವರಾಜ್ಯವನ್ನು ಗಳಿಸುವುದಾದರೆ ನನಗಂತೂ ಬೇರೆ ದಾರಿ ಇಲ್ಲ

"ಸಾಮೂಹಿಕ ಅಥವ ವ್ಯಕ್ತಿ ಕಾಯಿದೆಭಂಗ, ಆಯುಧಸಹಿತರಾಗಿ ದಂಗೆ ಏಳುವುದಕ್ಕೆ ಪ್ರತಿಯಾದುದು. ದಂಗೆ ಏಳಲು ತಯಾರಿ ಹೇಗೆ ಆವಶ್ಯಕವೋ ಕಾಯಿದೆಭಂಗಕ್ಕೂ ಹಾಗೆಯೇ ಆವಶ್ಯಕ. ಮಾರ್ಗಗಳು ಮಾತ್ರ ಬೇರೆ. ಎರಡು ವಿಧವಾದ ದಂಗೆಗಳೂ ಆವಶ್ಯಕವಾದಾಗ ಮಾತ್ರ ಉಂಟಾಗುತ್ತವೆ. ಹಿಂಸಾಮಾರ್ಗದ ತಯಾರಿ, ಅಣುಬಾಂಬಿನ ಉಪಯೋಗದಲ್ಲಿ ಕೊನೆಯಾಗುತ್ತದೆ. ಕಾಯಿದೆ ಭಂಗಕ್ಕೆ ತಯಾರಿ ನಿರ್ಮಾಣಕಾರ್ಯ.

"ಆದುದರಿಂದ ಕೆಲಸಗಾರರು ಕಾಯಿದೆ ಭಂಗವನ್ನು ಮಾತ್ರ ನಿರೀಕ್ಷಿಸುತ್ತಾ ಕುಳಿತಿರಬಾರದು. ನಿರ್ಮಾಣಕಾರ್ಯವನ್ನು ತಡೆಗಟ್ಟಲು ಸರ್ಕಾರ ಬಂದರೆ ಆಗ ಕಾಯಿದೆ ಭಂಗಕ್ಕೆ ಅವರು ಸಿದ್ಧರಾಗಿರಬೇಕು. ಕಾಯಿದೆ ಭಂಗವನ್ನು ಯಾವಾಗ ಮಾಡಬಹುದು, ಯಾವಾಗ ಮಾಡಬಾರದು ಎಂದುದಕ್ಕೆ ಒಂದೆರಡು ಉದಾಹರಣೆ ಕೊಡುತ್ತೇನೆ. ರಾಜಕೀಯ ಪಕ್ಷಗಳು ದೇಶದಲ್ಲಿ ಇವೆ, ಇರಬಲ್ಲವು. ಆದರೆ ವ್ಯಕ್ತಿಗಳಿಗೆ ವ್ಯಕ್ತಿಗಳಿಗೆ ಸ್ನೇಹವಿದ್ದೇ ಇದೆ. ಇಂತಹ ನಿಸ್ವಾರ್ಥವಾದ ಸ್ನೇಹದ ಮೇಲೆಯೇ ರಾಜಕೀಯ ಪಕ್ಷಗಳನ್ನೂ ಕಟ್ಟಬೇಕು. ಹಾಗೆಯೇ ಕೇಂದ್ರೀಕೃತವಾದ ಖಾದಿಯನ್ನು ಸರ್ಕಾರ ನಾಶಪಡಿಸಬಲ್ಲದು. ಆದರೆ ವ್ಯಕ್ತಿಗಳು ಖಾದಿ ತಯಾರಿಸುವುದನ್ನು ಯಾರೂ ನಾಶಮಾಡಲಾರರು. ಖಾದಿಯ ತಯಾರಿ, ಉಪಯೋಗವನು ಜನರ ಮೇಲೆ ಬಲಾತ್ಕಾರವಾಗಿ ಹೇರಬಾರದು. ಇದು ಸ್ವಾತಂತ್ರ್ಯ ಚಳುವಳಿಯ ಅಂಗವೆಂದು ಜನರು ತಾವೇ ಇದನ್ನು ತೆಗೆದುಕೊಳ್ಳಬೇಕು. ಒಂದೊಂದು ಸಂಸ್ಥೆಯಾದರೆ ಮಾತ್ರ ಇದು ಸಾಧ್ಯ. ಅದರಲ್ಲಿಯೂ ಮುಂದಾಳಾದುವುಗಳನ್ನು ಸರ್ಕಾರ ತಡೆಯಬಹುದು. ಮುಂದಾಳುಗಳಾದವರು ಜಗತ್ತಿನಲ್ಲಿ ಯಾವಾಗಲೂ ನೋವಿಗೆ ಒಳಗಾಗಬೇಕಾಗುತ್ತದೆ. ನೋವಿಲ್ಲದೆ ಸ್ವರಾಜ್ಯವಿಲ್ಲ. ಆದರೆ ಹಿಂಸಾಮಾರ್ಗದಲ್ಲಿ, ಸತ್ಯ ಮೊದಲು ಸಾಯುತ್ತದೆ. ಅಹಿಂಸೆಯ ಮಾರ್ಗದಲ್ಲಿ ಸತ್ಯ ಎಂದೆಂದೂ ಜಯಿಸುತ್ತದೆ. ಸರ್ಕಾರದ ಅಧಿಕಾರಿಗಳನ್ನು ಶತ್ರುಗಳೆಂದು ಪರಿಗಣಿಸಬಾರದು. ಹಾಗೆ ಅವರನ್ನು ಭಾವಿಸುವುದು ಅಹಿಂಸಾ ಮನೋಭಾವಕ್ಕೆ ವಿರೋಧವಾದುದು. ಇದನ್ನು ಚೆನ್ನಾಗಿ ಅರಿತವರಿಗೆ. ನಿರ್ಮಾಣಕಾರ್ಯ ಪಾರ್ಲಿಮೆಂಟರಿ ಕಾರ್ಯ

ಕ್ರಮದ ಭಾಷಣ ಸಮಾರಂಭಗಳಷ್ಟೇ ಹಿತವಾಗಿರುವುದೆಂದೂ, ಅದಕ್ಕಿಂತ ಹೆಚ್ಚು ಉಪಯುಕ್ತವಾದುದೆಂದೂ ಗೊತ್ತಾಗುವುದು.

× × × ×

ರಚನಾತ್ಮಕ ಕಾರ್ಯ

ರಚನಾತ್ಮಕ ಕಾರ್ಯಕ್ರಮಕ್ಕೆ, ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ಪೂರ್ಣ ಸ್ವರಾಜ್ಯ ಸಾಧನೆ ಎಂಬ ಹೆಸರು ಹೆಚ್ಚು ಒಪ್ಪುವುದು.

ಹಿಂಸಾ ಮಾರ್ಗದಿಂದ ಸ್ವಾತಂತ್ರ್ಯಸಾಧನೆ ಅಸತ್ಯವೆಂಬುದು ನಮಗೆ ಚೆನ್ನಾಗಿ ಗೊತ್ತು. ಈ ಯುದ್ಧದಲ್ಲಿ ದಿನದಿನವೂ ಬಲಿಯಾಗುತ್ತಿರುವ ಹಣವನ್ನೂ ಜನವನ್ನೂ ಸತ್ಯವನ್ನೂ ನೋಡಿ.

ತತ್ವಶಃ, ಸತ್ಯ ಮತ್ತು ಅಹಿಂಸೆಯಿಂದ ಸ್ವರಾಜ್ಯವೆಂದರೆ ದೇಶದ ಪ್ರತಿಯೊಂದು ಪ್ರಾಣಿಯ ಸ್ವಾತಂತ್ರ್ಯವೆಂದರ್ಥ. ಆ ಪ್ರಾಣಿ ಎಷ್ಟೆ ಚಿಕ್ಕವನಾಗಿದ್ದರೂ ಯಾವ ಜಾತಿ ಮತ ಬಣ್ಣದವನಾಗಿದ್ದರೂ ಚಿಂತೆಯಿಲ್ಲ. ಅದು ಎಲ್ಲರದು. ಆದುದರಿಂದ ಇದು ಪರಸ್ಪರ ಅವಲಂಬನೆಯೊಡನೆ ಇರಬಹುದು. ಆಚರಣೆ ತತ್ವದ ಮಟ್ಟಕ್ಕೆ ಬರುವುದಿಲ್ಲ. ಯೂಕ್ಲಿಡ್‌ನ ಬರೆದ ಗೆರೆ ಬರೆಯದ ಗೆರಗಿಂತ ಕಮ್ಮಿ ನೇರ. ಆದುದರಿಂದ ನಮ್ಮ ಜೀವನದಲ್ಲಿ ಎಷ್ಟು ಸಾಧಿಸುವೆವೋ ಪೂರ್ಣ ಸ್ವಾತಂತ್ರ್ಯವು ಅಷ್ಟರಮಟ್ಟಿಗೇ ಇರುವುದು. ವಾಚಕರು ರಚನಾತ್ಮಕ ಕಾರ್ಯಕ್ರಮವನ್ನು ನಿಧಾನವಾಗಿ ಮನಸ್ಸಿನಲ್ಲಿಯೇ ಚಿತ್ರಿಸಿಕೊಳ್ಳಲಿ. ಆ ಕಾರ್ಯಕ್ರಮವನ್ನು ಜಯಕಾರಿಯಾಗಿ ನಡೆಸಿದರೆ ಅದರ ಕೊನೆ ಸ್ವಾತಂತ್ರ್ಯ ಎಂದು ಅವನೇ ಒಪ್ಪುತ್ತಾನೆ. ಒಗ್ಗಟ್ಟನ್ನು ಅಹಿಂಸೆಯಿಂದ ಸಂಪಾದಿಸಿಕೊಂಡರೆ ಅದರ ಶಕ್ತಿಯಿಂದಲೇ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಶಕ್ತಿ ಅದರಲ್ಲಿಯೇ ಅಡಗಿದೆ.

ಆದರೆ ಹಿಂಸೆಯಿಂದ ಬರುವ ಸ್ವಾತಂತ್ರ್ಯದಲ್ಲಿ ಈ ನಿಯಮದ ನೆಪವೂ ಇಲ್ಲ ಯಾರು ಹೆಚ್ಚು ಹಿಂಸೆ ಅನುಸಂಸುತ್ತಾರೆಯೋ ಅವರ ಕೈಬಲ ಅಲ್ಲಿ. ಹಿಂಸಾ ರಾಜ್ಯದಲ್ಲಿ ಯಾವ ವಿಧವಾದ ಸಮಾನತೆಯೂ ಸಾಧ್ಯವಿಲ್ಲ.

ಅಹಿಂಸಾ ಮಾರ್ಗದಿಂದ ರಚನಾತ್ಮಕ ಕಾರ್ಯಕ್ರಮವನ್ನು ಸಾಧಿಸು ವುದು ಆವಶ್ಯಕವೆಂದು ನಾನು ಹೇಳುವುದನ್ನು ನಂಬುವವರು, ಹಿಂಸಾ ಮಾರ್ಗದಿಂದಲೂ ಸಾಧ್ಯವೆಂದು ನಂಬಬಹುದು. ಅದು ಅವರ ಅಭಿಪ್ರಾಯ.

ಅಧ್ಯಕ್ಷರ ಭಾಷಣ

ಗಾಂಧಿಯವರ ಪ್ರಾರಂಭ ಭಾಷಣದನಂತರ ಶ್ರೀ ಕೃಷ್ಣದಾಸ ಜಾಜು ಅಧ್ಯಕ್ಷ ಭಾಷಣ ಮಾಡಿದರು. ಅವರದು ಒಳ್ಳೆ ಗಂಭೀರವಾದ ಪ್ರಕೃತಿ. ಹೆಚ್ಚಾಗಿ ಮಾತನಾಡುವವರಲ್ಲ. ಆಡುವ ಮಾತುಗಳೆಲ್ಲಾ ತೂಕವಾದವು ಇವರ ಜೀವನದಲ್ಲಿಯೂ ಶಿಸ್ತು ಹೆಚ್ಚು. ಮೂರು ಗಂಟೆ ನಾಲ್ಕು ಗಂಟೆ ಗಳಾದರೂ ನಿರ್ಮಾಣಕಾರ್ಯಕರ್ತರು ಸ್ಥಳ ಬಿಟ್ಟು ಹೊರಟರೂ ಜಾಜು ರವರು ಮಾತ್ರ ಕದಲದೆ "ಗರುಡ"ನಂತೆ ಸಭೆಯಲ್ಲಿ ಕುಳಿತೇ ಇರುತ್ತಿದ್ದರು. ಕೆಲಸಗಾರರು ತೆಲುಗು ತಮಿಳು ಮಲೆಯಾಳ ಕನ್ನಡದಲ್ಲಿ ಮಾತನಾಡಿದರೂ ಜಾಜುರವರು ಬೇಸರಿಕೆಯಿಂದ ಎದ್ದು ಹೋಗಲಿಲ್ಲ. ಜಾಜುರವರು ಹೀಗೆ ಹೇಳಿದರು.

" ಈ ನಿರ್ಮಾಣಕಾರ್ಯಕರ್ತರ ಸಭೆಯಲ್ಲಿ ಮಾಡಬೇಕಾದ ಕೆಲಸಗಳು ಬಹಳವಾಗಿವೆ. ಕಾಲವಿರುವುದು ಸ್ವಲ್ಪ. ಆದುದರಿಂದ ಉದ್ದವಾದ ಭಾಷಣ ಮಾಡಿ ಈ ಸಮ್ಮೇಳನದ ಕಾಲವ್ಯಯ ಮಾಡಬಾರದು. ಇಂಗ್ಲಿಷಿನಲ್ಲಿ ಮಾತನಾಡುವುದು ಅನಿವಾರ್ಯವಾದರೆ ಎಷ್ಟು ಆವಶ್ಯಕವೋ ಅಷ್ಟರಮಟ್ಟಿಗೆ ಮಾತ್ರ ಇಂಗ್ಲಿಷು ಉಪಯೋಗಿಸಬೇಕು. ಗ್ರಾಮ ಕೈಗಾರಿಕೆಗಳನ್ನೂ ನಿರ್ಮಾಣ ಕಾರ್ಯವನ್ನೂ ಅಭಿವೃದ್ಧಿ ಮಾಡಬೇಕೆಂಬುದನ್ನು ಒತ್ತಿ ಹೇಳುವ ಕಾಲ ಹೋಯಿತು. ದೊಡ್ಡ ದೊಡ್ಡ ಕೈಗಾರಿಕೆ ಯೋಜನೆಗಳನ್ನು ತಯಾರಿಸುವವರು ಸಹ, ಸಣ್ಣ ಕೈಗಾರಿಕೆಗಳ ಪ್ರಾಮುಖ್ಯತೆಯನ್ನು ಅರಿಯಲು ತೊಡಗಿದ್ದಾರೆ ಅಖಿಲ ಭಾರತ ಚರಖ ಸಂಘವೂ ಈ ವರೆಗೆ ಮಾಡಿರುವ ಕೆಲಸ ಅಲ್ಪವಲ್ಲ, ಆದರೆ ಇನ್ನೂ ಮಾಡಬೇಕಾದ ಕೆಲಸ ಬಹಳ ಇದೆ. ಖಾದಿ ಮತ್ತು ನೂಲುವ ಕೈಗಾರಿಕೆಗಳಿಂದ ದೇಶದಲ್ಲಿ ಒಂದು ಹೊಸ ಚೈತನ್ಯವುಂಟಾಗಿದೆ. ಇದರಿಂದ ನಿರುದ್ಯೋಗ ನಿರ್ಮೂಲವಾಗುವುದರ ಜತೆಗೆ, ಜನತೆಯ ಆತ್ಮವಿಶ್ವಾಸ ಹೆಚ್ಚುವುದು. ಖಾದಿ, ವ್ಯವಸಾಯದಂತೆ ಇದನ್ನು ಪ್ರತಿಯೊಂದು ಮನೆಯಲ್ಲಿಯೂ ಮಾಡಬಹುದು. ಇದು ಪರಿ

ಶುದ್ಧವಾದ ಕಾರ್ಯ. ನೂಲುವುದು ಗ್ರಾಮೋದ್ಯೋಗಗಳಲ್ಲಿ ಅತಿಮುಖ್ಯವಾದುದು. ನಿರ್ಮಾಣಕಾರ್ಯದ ಈ ಅಂಶದಿಂದ ಹಳ್ಳಿ ಹಳ್ಳಿಯಲ್ಲಿಯೂ ಹೊಸ ಚೈತನ್ಯವುಂಟಾಗುವುದು ಸ್ವರಾಜ್ಯವನ್ನು ಸಂಪಾದಿಸಿ ಇಟ್ಟುಕೊಳ್ಳುವ ಶಕ್ತಿ ನಮ್ಮ ನಾಡಿಗೆ ಉಂಟಾಗುವುದು." ಎಂದರು.

ಜಾಜು ರವರ ಭಾಷಣದನಂತರ ದಕ್ಷಿಣದ ನಾಲ್ಕು ಪ್ರಾಂತ್ಯಗಳ (ತಮಿಳುನಾಡು, ಆಂಧ್ರ, ಕೇರಳ, ಕರ್ನಾಟಕ) ಖಾದಿಯ ಬೆಳವಣಿಗೆಯನ್ನು ಕುರಿತು ಸಮ್ಮೇಳನಕ್ಕೆ ವರದಿ ಒಪ್ಪಿಸಲ್ಪಟ್ಟಿತು. ಈ ಪ್ರಾಂತಗಳಲ್ಲಿ ಈ ವರೆಗೆ ೪೨ ಕೋಟಿ ರುಪಾಯಿಗಳ ಖಾದಿ ಉತ್ಪತ್ತಿಯಾಗಿರುವುದೆಂದೂ ೧೯೪೩ ರಲ್ಲಿ ತಮಿಳುನಾಡು ಎಂದಿಗಿಂತಲೂ ಹೆಚ್ಚಾಗಿ ಅಂದರೆ ೩೩ ಲಕ್ಷ ಚದರಗಜ ಬಟ್ಟೆಯನ್ನು ತಯಾರಿಸಿತೆಂದೂ ಹೇಳಲಾಯಿತು ಕರ್ನಾಟಕದ ಕ್ಷಾಮಪೀಡಿತ ಭಾಗಗಳಲ್ಲಿ ಖಾದಿಯಿಂದಲೇ ಜನರ ಜೀವ ಉಳಿಯಿತೆಂದೂ, ಬದನವಾಳು ಮತ್ತು ಅದಕ್ಕೆ ಸಂಬಂಧಪಟ್ಟ ಕೇಂದ್ರಗಳಲ್ಲಿ ೧೯೪೪-೪೫ರಲ್ಲಿ ೨೩೪೦೦೦ ರುಪಾಯಿಗಳ ಖಾದಿ ತಯಾರಾಯಿತು ಎಂದರು

೧ ಖಾದಿ

ಗಾಂಧಿಜಿ:— ಖಾದಿ ಚರ್ಚಾಸ್ಪದವಾದ ವಿಷಯ. ಖಾದಿ ಪ್ರಚಾರ ನಾನು ಮಾಡುವುದರಿಂದ ಸ್ವರಾಜ್ಯದ ಹಡಗನ್ನು ಮುಳುಗಿಸುತ್ತಿದ್ದೇನೆಂದೂ ದೇಶವನ್ನು ಹಿಂದಲ ಯುಗಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆಂದೂ ಅನೇಕರು ಯೋಚಿಸುತ್ತಿದ್ದಾರೆ. ಈ ಚಿಕ್ಕ ಬಂಧದಲ್ಲಿ ಖಾದಿಯಪರ ನಾನು ವಕಾಲತ್ತು ವಹಿಸಿ ವಾದ ಮಾಡುವುದಿಲ್ಲ. ಹಿಂದೆ ನಾನು ಬೇಕಾದಷ್ಟು ವಾದಮಾಡಿದ್ದೇನೆ. ಈಗ ಎಲ್ಲಾ ಕಾಂಗ್ರೆಸ್ಸಿನವರೂ ಎಲ್ಲ ಭಾರತೀಯರೂ ಖಾದಿಯ ಏಳಿಗೆಗೆ ಏನು ಮಾಡಬಹುದೆಂಬುದನ್ನು ಹೇಳುತ್ತೇನೆ ಖಾದಿ ಎಂದರೆ ಎಲ್ಲರಿಗೂ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆ "ಅಡಿಗೆಯ ರುಚಿ ಊಟದಲ್ಲಿ" ಎಂದು ಕೇಳಿದ್ದೀರಿ. ಪ್ರತಿಯೊಬ್ಬರೂ ಪ್ರಯತ್ನಪಡಲಿ ನನ್ನ ಮಾತಿನ ಸತ್ಯ ಗೊತ್ತಾಗುವುದು. ಖಾದಿಯನ್ನು ಅದರ ಎಲ್ಲಾ ಅರ್ಥದಲ್ಲಿಯೂ ಗ್ರಹಿಸಬೇಕು. ಖಾದಿ ಎಂದರೆ ಸ್ವದೇಶಿಯ ಮನೋಭಾವ; ಭಾರತದಲ್ಲಿ ತಯಾರಾದ ಪದಾರ್ಥಗಳಲ್ಲಿಯೇ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ನಿರ್ಧಾರ, ಹಳ್ಳಿಯ ಕೂಲಿ, ಬುದ್ಧಿಗೇ ಪ್ರಾಧಾನ್ಯ.

ಇವೆಲ್ಲಾ ಕಣ್ಣಮುಂದೆ ನಿಲ್ಲುತ್ತವೆ. ಅಂದರೆ ಪರಿಸ್ಥಿತಿಯೇ ಪಲ್ಲಟವಾಗಿ ಭಾರತದ ಹಳ್ಳಿಗಳ ಸುಲಿಗೆಯ ಬದಲು ಭಾರತದ ಹಳ್ಳಿಗಳು ಸ್ವಯಂ ಪರಿಪೂರ್ಣವಾಗುತ್ತವೆ. ತಮ್ಮ ಕೈಲಾದ ಮಟ್ಟಿಗೆ ಭಾರತದ ಪಟ್ಟಣಗಳ ಮತ್ತು ಜಗತ್ತಿನ ಸೇವೆಯನ್ನು ಮಾಡುತ್ತವೆ.

ಹೀಗೆ ಆಗಬೇಕಾದರೆ ಜನರ ಮನೋಭಾವಗಳಲ್ಲಿಯೇ ಕ್ರಾಂತಿ ನಡೆಯಬೇಕು. ಕೆಲವು ಮಾರ್ಗಗಳಲ್ಲಿ ಅಹಿಂಸೆ ಸುಲಭವಾದರೂ ಅನೇಕ ಮಾರ್ಗಗಳಲ್ಲಿ ಅದು ಕಷ್ಟ. ಇದು ಪ್ರತಿಯೊಬ್ಬ ಭಾರತೀಯನ ಹೃದಯದ ತಂತಿಯನ್ನೂ ಮಿಡಿಯುತ್ತದೆ ಅವನಲ್ಲಿ ಹುದುಗಿರುವ ಶಕ್ತಿಯ ಅನುಭವ ವನ್ನು ಅವನಿಗೆ ಉಂಟುಮಾಡಿಕೊಡುತ್ತದೆ. ಭಾರತದ ಜನಸಮುದ್ರದಲ್ಲಿ ತಾನು ಒಂದು ತೊಟ್ಟು ರಕ್ತ ಎಂಬ ಹೆಮ್ಮೆಯನ್ನು ಅವನಿಗೆ ಉಂಟು ಮಾಡುತ್ತದೆ. ಈ ಅಹಿಂಸೆ, ನಾವು ಇದುವರೆಗೆ ತಪ್ಪಾಗಿ ತಿಳಿದುಕೊಂಡಿದ್ದ ಹೇಡಿತನದ ಅಹಿಂಸೆಯಲ್ಲ, ಮನುಷ್ಯಜಗತ್ತಿಗೆ ತಿಳಿದ ಶಕ್ತಿಗಳಲ್ಲಿ ಇದು ಅತಿ ಬಲಿಷ್ಠವಾದ ಶಕ್ತಿ ಎಂದು ತಿಳಿಯುವದು ಅಹಿಂಸೆಯ ಅಸ್ತಿತ್ವ ಅದರ ಶಕ್ತಿಯೇ. ಈ ಶಕ್ತಿಯನ್ನೇ ನಾನು ಕಾಂಗ್ರೆಸ್ಸಿಗೂ ಅದರ ಮೂಲಕ ಜಗತ್ತಿಗೂ ತೋರಿಸಲು ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ನನ್ನ ಅಭಿ ಪ್ರಾಯದಲ್ಲಿ ಖಾದಿಯು ಭಾರತ ಸ್ವಾತಂತ್ರ್ಯದ ಗುರುತು, ಭಾರತೀಯರ ಏಳಿಗೆ ಮತ್ತು ಸಮತೆಯ ಗುರುತು. ಜವಹರ್‌ಲಾಲ ನೆಹ್ರುರವರ ಕಾವ್ಯ ಮಯವಾಣಿಯಲ್ಲಿ ಖಾದಿ ಭಾರತ ಸ್ವಾತಂತ್ರ್ಯ ಧ್ವಜ

ಖಾದಿ ಮನೋಭಾವ ಬಂದರೆ ಪದಾರ್ಥಗಳ ತಯಾರಿ ಮತ್ತು ಹಂಚಿಕೆ ಕೇಂದ್ರೀಕೃತವಾಗಿರುವುದು ಹೋಗಿ ಬೇರೆ ಬೇರೆಯಾಗಬೇಕು ಆದುದರಿಂದ ಪ್ರತಿ ಹಳ್ಳಿಯೂ ತನಗೆ ಬೇಕಾದಷ್ಟನ್ನು ತಯಾರಿಸಿ ಸ್ವಯಂ ಪೂರ್ಣವಾಗಿರಬೇಕು. ಪಟ್ಟಣಗಳಿಗಾಗಿಯೂ ಸ್ವಲ್ಪ ತಯಾರಿಸಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳು ಕೇಂದ್ರೀಕೃತವಾಗಿ ರಾಷ್ಟ್ರದ ಸ್ವತ್ತಾಗುವುದು ಅನಿವಾರ್ಯ. ಆದರೆ ಅದು ಹಳ್ಳಿಯ ರಾಷ್ಟ್ರಜೀವನದಲ್ಲಿ ಕೊನೆಯ ಭಾಗ

ಖಾದಿಯ ಅರ್ಥ ಹೀಗೆ ಹೇಳಿದ ಮೇಲೆ ಕಾಂಗ್ರೆಸ್ಸಿನವರು ಖಾದಿಯ ಏಳಿಗೆಗೆ ಮಾಡಬೇಕಾದುದೇನು ಎಂಬುದನ್ನು ಹೇಳುತ್ತೇನೆ. ಖಾದಿ

ತಯಾರಿಯಲ್ಲಿ ಹತ್ತಿ ಬೆಳೆಯುವುದರಿಂದ ಮೊದಲುಮಾಡಿ ಬಟ್ಟೆ ಸಿದ್ಧವಾಗುವ ವರೆಗಿನ ಎಲ್ಲಾ ಬಾಬುಗಳನ್ನೂ ಎಲ್ಲಾ ಹಳ್ಳಿಗಳಲ್ಲಿಯೂ ಮಾಡಬಹುದು. ಅಖಿಲ ಭಾರತ ಚರಕ ಸಂಘ ತನ್ನ ವ್ಯಾಪ್ತಿನಡೆಯುತ್ತಿರುವ ಹಳ್ಳಿಗಳಲ್ಲೆಲ್ಲಾ ಈ ಎಲ್ಲಾ ಕೆಲಸಗಳನ್ನೂ ಮಾಡುತ್ತಿದೆ. ಅದರ ಅಂಕಿ ಅಂಶಗಳು ಹೀಗಿವೆ.

೧೯೪೨ನೆ ಇಸವಿಯಲ್ಲಿ ಖಾದಿ ಕೆಲಸ ೧೩೪೫೧ ಹಳ್ಳಿಗಳಲ್ಲಿ ನಡೆಯಿತು. ೧೯೬೪೫ ಹರಿಜನರು, ೫೭೩೭೮ ಮುಸಲ್ಮಾನರು, ಉಳಿದವರು ಹಿಂದುಗಳು ಅಂತೂ ಒಟ್ಟು ೨೭೫೧೪೬ ಹಳ್ಳಿಯವರಿಗೆ ಕೆಲಸ ದೊರೆಯಿತು. ನೆಯ್ಗೆಯವರಿಗೂ ನೂಲುವವರಿಗೂ ೩೪೮೫೬೦೯ ರುಪಾಯಿ ಕೂಲಿ ಕೊಟ್ಟಿತು ನೂಲುವವರಲ್ಲಿ ಬಹು ಸಂಖೆ ಸ್ತ್ರೀಯರು

ಕಾಂಗ್ರೆಸ್‌ನವರೆಲ್ಲಾ ಶ್ರದ್ಧೆಯಿಂದ ಕೆಲಸ ಮಾಡಿದರೆ ಇದರ ನೂರರಷ್ಟು ಕೆಲಸಮಾಡಬಹುದು. ಈ ಕೈಗಾರಿಕೆಯನ್ನು ಉದ್ದೇಶ ಪೂರ್ವಕವಾಗಿ ನಾಶಮಾಡಿದಂದಿನಿಂದ ಹಳ್ಳಿಯವರ ಬುದ್ಧಿಯೇ ಮಂಕಾಗಿದೆ. ಅವರು ಸೋಮಾರಿಗಳಾಗಿದ್ದಾರೆ. ಅವರ ಸ್ಥಿತಿ ದನಗಳ ಸ್ಥಿತಿಗಿಂತ ಕೀಳಾಗಿದೆ.

ಕಾಂಗ್ರೆಸ್ ನಿಯಮದಂತೆ ಕಾಂಗ್ರೆಸ್‌ನವರು ನಡೆಯುವುದಾದರೆ ಅವರು ಚರಖ ಸಂಘದ ಖಾದಿ ಕಾರ್ಯದಲ್ಲಿ ಭಾಗಿಗಳಾಗಬೇಕು. ಇಲ್ಲಿ ಕೆಲವು ನಿಯಮಗಳನ್ನು ತಿಳಿಸುತ್ತೇನೆ.

(೧) ಜಮೀನು ಇರುವ ಪ್ರತಿ ಸಂಸಾರವೂ, ಮನೆಗೆ ಬೇಕಾಗುವಷ್ಟಾದರೂ ಹತ್ತಿ ಬೆಳೆಯಬೇಕು. ಹತ್ತಿ ಬೆಳೆಯುವುದು ಸುಲಭ. ಬಿಹಾರಿನಲ್ಲಿ ರೈತರು ತಮ್ಮ ಜಮೀನಿನ ⅓ ಭಾಗದಲ್ಲಿ ನೀಲಿ ಬೆಳೆಯಲೇಬೇಕೆಂದು ಸರ್ಕಾರದವರು ಬಲಾತ್ಕರಿಸಿದರು. ಇದನ್ನು ಮಾಡಿದುದು ಪರದೇಶದ ನೀಲಿ ಜಮೀನದಾರರ ಹಿತಕ್ಕಾಗಿ. ನಮ್ಮ ರಾಷ್ಟ್ರದ ಹಿತಕ್ಕಾಗಿ ನಾವು ನಮ್ಮ ಜಮೀನಿನ ಒಂದು ಭಾಗದಲ್ಲಿ ಯಾಕೆ ಹತ್ತಿ ಬೆಳೆಯಬಾರದು? ಬೇರೆ ಬೇರೆಯಾಗುವುದು ಖಾದಿಯ ಪ್ರಾರಂಭದಿಂದಲೇ ಪ್ರಾರಂಭವಾಗುತ್ತದೆ. ಇಂದು ಭಾರತದಲ್ಲಿ ಹತ್ತಿಯ ಬೆಳೆ ಕೇಂದ್ರೀಕೃತವಾಗಿದೆ. ಹತ್ತಿ

ಭಾರತದ ಬೇರೆ ಬೇರೆ ಭಾಗಗಳಿಗೆ ಹೋಗುತ್ತಿದೆ. ಯುದ್ಧಕ್ಕಿಂತ ಮುಂಚಿತ ವಾಗಿ ಬ್ರಿಟನ್ನಿಗೂ ಜಪಾನಿಗೂ ಹೋಗುತ್ತಿದ್ದಿತು. ಹತ್ತಿ ಯಾವಾಗಲೂ ದುಡ್ಡು ತರುವ ಬೆಳೆ. ಖಾದಿಯ ಈ ಕಾರ್ಯಕ್ರಮವನ್ನು ಆಚರಿಸಿದರೆ ಹತ್ತಿ ಬೆಳೆಯುವವನು ಬೆಲೆಯ ಜೂಜಿನ ಮೇಲೆ ಅವಲಂಬಿಸಬೇಕಾದುದಿಲ್ಲ, ಬೆಳೆಯುವವನು ತನಗೆ ಬೇಕಾದುದನ್ನೇ ಬೆಳೆಯುತ್ತಾನೆ. ತನಗೆ ಬೇಕಾ ದುದನ್ನು ಬೆಳೆಯುವುದು ತನ್ನ ಮೊದಲನೆಯ ಕರ್ತವ್ಯವೆಂಬುದು ರೈತನಿಗೆ ತಿಳಿಯಬೇಕು ಹಾಗೆ ಮಾಡಲು ಅವನು ಪ್ರಾರಂಭಿಸಿದಾಗ, ತನ್ನ ಪದಾರ್ಥಕ್ಕೆ ಕಡಿಮೆ ಬೆಲೆಯಿಂದ ಅವನಿಗೆ ನಷ್ಟವುಂಟಾಗುವುದು ತಪ್ಪುವುದು.

(೨) ಸ್ವಂತ ಹತ್ತಿಯಿಲ್ಲದೆ ನೂಲುವವರು ಹತ್ತಿ ಕೊಳ್ಳಬೇಕು. ಅದರ ಬೀಜವನ್ನು ಕೈರಾಟೆಯಲ್ಲಿ ಬಿಡಿಸಬಹುದು. ಒಂದು ಹಲಗೆ ಕಬ್ಬಿಣದ ತಂತಿ ಸಾಕು. ಇದು ಸಾಧ್ಯವಿಲ್ಲದ ಕಡೆ ಬೀಜತೆಗೆದ ಹತ್ತಿ ತೆಗೆದುಕೊಂಡು ಎಕ್ಕಿ ಹಂಜಿ ಮಾಡಿಕೊಳ್ಳಬೇಕು. ಸ್ವಂತಕ್ಕಾಗಿ ಸಣ್ಣ ಬಿಲ್ಲಿನಲ್ಲಿ ಸುಲಭವಾಗಿ ಎಕ್ಕಿಕೊಳ್ಳಬಹುದು. ಕೆಲಸಗಳು ಬೇರೆ ಬೇರೆ ಯಾದಂತೆ ಬೇಕಾದ ಸಾಮಾನುಗಳು ಸುಲಭವೂ ಅಗ್ಗವೂ ಆಗುತ್ತವೆ. ಹಂಜಿ ಮಾಡಿದ ಕೂಡಲೇ ನೂಲುವುದು ಪ್ರಾರಂಭ. ಧನುಷ್ ತಕ್ಲಿ ಎಲ್ಲರೂ ಉಪಯೋಗಿಸಬೇಕೆಂಬುದು ನನ್ನ ಸಲಹೆ. ಈಚೆಗೆ ನಾನು ಅದನ್ನೇ ಉಪ ಯೋಗಿಸುತ್ತಿದ್ದೇನೆ. ಚರಕದಲ್ಲಿ ನೂಲುವಷ್ಟೆ ವೇಗ ಇದರಲ್ಲಿಯೂ ನನಗೆ. ಈ ತಕ್ಲಿಯಲ್ಲಿ ಇನ್ನೂ ಸಣ್ಣ ನೂಲು ತೆಗೆಯುತ್ತೇನೆ. ಈ ನೂಲಿನ ಶಕ್ತಿ ಮತ್ತು ಸಮತೆ ಚರಕದ ನೂಲಿಗಿಂತ ಹೆಚ್ಚು. ನಾನು ತಕಲಿ ಉಪಯೋಗಿಸಿ ಎಂದು ಒತ್ತಿ ಹೇಳುವುದಕ್ಕೆ ಕಾರಣ ಅದನ್ನು ಮಾಡಲು ಸುಲಭವಾಗಿರು ವುದು, ಅದು ಅಗ್ಗವಾಗಿರುವುದು, ಹೆಚ್ಚಾಗಿ ಕೆಡದೆ ಇರುವುದು ಇದೆಯೆ. ಅದಕ್ಕೆ ಚರಕದಂತೆ "ರಿಪೇರಿ" ಅಗತ್ಯವಿಲ್ಲ. ಯುದ್ಧಕಾಲದಲ್ಲಿ ಮಾಡಿರ ಬೇಕಾಗಿದ್ದಂತೆ ಕೋಟ್ಯಾಂತರ ಜನ ನೂಲಲು ಪ್ರಾರಂಭಿಸಿದ್ದರೆ ಎಲ್ಲರೂ ಸುಲಭವಾಗಿ ಉಪಯೋಗಿಸಬಹುದಾದ ಚರಕ ಧನುಷ್ ತಕಲಿ ಒಂದೇ. ದೇಶವೆಲ್ಲಾ ಒಟ್ಟಾಗಿ ನೂಲುವ ವರೆಗಿನ .ಎಲ್ಲಾ ಕಾರ್ಯಕ್ರಮವನ್ನೂ ಮಾಡಿದರೆ ಅದರಿಂದ ದೇಶಕ್ಕೆ ದೊರೆಯುವ ಶಿಕ್ಷಣದಬೆಲೆಯನ್ನು

ಯೋಚಿಸಿ. ಧನಿಕರನ್ನೂ ಬಡವರನ್ನೂ ಒಂದು ಮಾಡುವ ಈ ಕೆಲಸದ ಫಲವನ್ನು ಯೋಚಿಸಿ.

ಹೀಗೆ ತಯಾರಿಸಿದ ನೂಲನ್ನು ಮೂರು ವಿಧದಲ್ಲಿ ಉಪಯೋಗಿಸ ಬಹುದು. ಅದನ್ನು ಬಡವರಿಗಾಗಿ ಚರಖಾ ಸಂಘಕ್ಕೆ ಉಚಿತವಾಗಿ ಕೊಡ ಬಹುದು; ಬಟ್ಟೆನೆಯಿಸಬಹುದು. ಅಥವಾ ಆ ನೂಲಿಗೆ ದೊರೆಯುವಷ್ಟು ಬಟ್ಟೆಯನ್ನು ಕೊಳ್ಳಬಹುದು. ಕಾಂಗ್ರೆಸ್ಸಿನವರು ಮನಸ್ಸಿಟ್ಟು ಈ ಕೆಲಸ ವನ್ನು ಕೈಕೊಂಡರೆ ಉಪಕರಣಗಳನ್ನು ಸುಧಾರಿಸಬಹುದು ಹೊಸದಾಗಿ ಕಂಡು ಹಿಡಿಯಬಹುದು ನಮ್ಮ ದೇಶದಲ್ಲಿ ಬುದ್ಧಿಗೂ ಕೆಲಸಕ್ಕೂ ಸಂಬಂಧವಿಲ್ಲ. ಯಾವುದೂ ಬೆಳೆಯುವಂತೆಯೇ ಇಲ್ಲ ಇಲ್ಲಿ ಸೂಚಿಸಿದ ರೀತಿಯಲ್ಲಿ ದೇಹಶ್ರಮವನ್ನೂ ಬುದ್ಧಿಯನ್ನೂ ಮಿಳನ ಮಾಡಿದರೆ ಅಮೌಲ್ಯ ವಾದ ಲಾಭವುಂಟಾಗುವುದು.

ನೂಲುವುದನ್ನು ಯಜ್ಞವೆಂದು ಭಾವಿಸಿ ದೇಶವೆಲ್ಲ ಕೈಕೊಳ್ಳುವ ಈ ಏರ್ಪಾಡಿಗೆ ದೇಶದ ಗಂಡು ಹೆಣ್ಣುಗಳೆಲ್ಲಾ ದಿನಕ್ಕೆ ಒಂದು ಗಂಟೆ ವಿನಿ ಯೋಗಿಸಿದರೆ ಸಾಕು

ರಾಜೇಂದ್ರ ಪ್ರಸಾದ್:—ದಕ್ಷಿಣ ಆಫ್ರಿಕದಿಂದ ಗಾಂಧಿಯವರು ಬಂದಂದಿನಿಂದ ಖಾದಿ ಜನರ ಮುಂದೆ ಇದೆ ಖಾದಿಯ ಮೇಲೆ ಬೇಕಾದಷ್ಟು ಸಾಹಿತ್ಯ ಹುಟ್ಟಿದೆ. ತಕ್ಕಮಟ್ಟಿಗೆ ಕೆಲಸವೂ ಆಗಿದೆ. ಅದರ ಆವಶ್ಯಕತೆ ಯೋಗ್ಯತೆ ಕುರಿತು ಹೆಚ್ಚು ಹೇಳಬೇಕಾದುದಿಲ್ಲ.

ಖಾದಿ ಹಾಗು ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ಚಳುವಳಿಯು ಎರಡು ಮುಖ್ಯ ವಿಚಾರಗಳ ಮೇಲೆ ಅವಲಂಬಿಸಿದೆ. ಭಾರ ತದ ಜನಸಂಖ್ಯೆಯಲ್ಲಿ ನೂರರಲ್ಲಿ ೮೦ ಜನ ವ್ಯವಸಾಯ ಮಾಡುವವರು. ಆದರೆ ವ್ಯವಸಾಯದಲ್ಲಿ ಹೆಚ್ಚು ಲಾಭವಿಲ್ಲದುದರಿಂದ ವ್ಯವಸಾಯ ರೈತನ ಕಾಲವನ್ನೆಲ್ಲಾ ತೆಗೆದುಕೊಳ್ಳುವುದಿಲ್ಲ. ಇತರ ಕೆಲಸಗಳನ್ನು ಮಾಡಲು ರೈತನಿಗೆ ಬೇಕಾದಷ್ಟು ಕಾಲಾವಕಾಶವಿದೆ. ನೂಲುವುದು ನೇಯುವುದ ರಿಂದ ರೈತನಿಗೆ ಕೆಲಸ ದೊರೆಯುವುದಲ್ಲದೆ ನಮ್ಮ ಹಳ್ಳಿಗಳ ಬಟ್ಟೆಯ ಆವಶ್ಯಕತೆಯ ಪೂರೈಕೆಯಾಗುತ್ತದೆ. ಹಳ್ಳಿಯವನಿಗೆ ನಾಲ್ಕು ಕಾಸು

ಸಿಕ್ಕುವುದು. ಇತರ ಕೆಲಸಗಳಲ್ಲಿ ಹೆಚ್ಚು ಸಂಪಾದನೆ ಮಾಡುವವರು ಆ ಕಸಬನ್ನು ಬಿಟ್ಟು ನೂಲುವುದನ್ನು ಪ್ರಾರಂಭಿಸಬೇಕೆಂದು ಎಂದೂ ಹೇಳಿಲ್ಲ. ಇದು ಒಂದು ಉಪಕಸಬು ಮಾತ್ರ

ಖಾದಿಯನ್ನು ತನ್ನ ಉಪಯೋಗಕ್ಕಾಗಿ ತಯಾರಿಸಬಹುದು. ವ್ಯಾಪಾರಕ್ಕಾಗಿಯೂ ತಯಾರಿಸಬಹುದು. ವ್ಯಾಪಾರಕ್ಕಾಗಿ ತಯಾರಿಸುವ ಖಾದಿ, ತಾವೇ ನೂಲದವರ ಸಲುವಾಗಿ. ಇನ್ನೂ ಉತ್ತಮವಾದ ಮತ್ತು ಗಟ್ಟಿಯಾದ ನೂಲು ತಯಾರಾಗಲು ಅನುಕೂಲವಾಗುವಂತೆ ಉಪಕರಣಗಳನ್ನು ಉತ್ತಮಗೊಳಿಸಲಾಗುತ್ತಿದೆ. ಇದರ ಫಲ ಆಶ್ಚರ್ಯಕರವಾಗಿದೆ ಇಪ್ಪತ್ತೆರಡು ವರುಷಗಳಿಂದ ಬಂದ ಖಾದಿಗೂ, ಇವತ್ತಿನ ಸೊಗಸಾದ ನೇಯ್ಗೆಯ ಬಗೆ ಬಗೆಯ ಖಾದಿಗೂ ಇರುವ ವ್ಯತ್ಯಾಸ ಯಾರು ಬೇಕಾದರೂ ನೋಡಬಹುದು ಎಂತಹ ನಾಜೋಕಿನವರಿಗಾದರೂ ಈಗ ಖಾದಿಯಲ್ಲಿ ಬಟ್ಟೆ ಸಿಕ್ಕುತ್ತೆ. ಆದರೆ ಖಾದಿ, ಗಿರಣಿಬಟ್ಟೆಯೊಂದಿಗೆ ಪೈಪೋಟಿಗೆ ನಿಲ್ಲಲಾರದು. ಅದು ಅದರ ಉದ್ದೇಶವೂ ಅಲ್ಲ. ಭಾರತಸ್ವಾತಂತ್ರ್ಯಪ್ರೇಮಿಗಳೂ ಗ್ರಾಮಪ್ರೇಮಿಗಳೂ ಅದು ಎಷ್ಟು ಬೆಲೆಯಾದರೂ ಸರಿಯೆ, ಅದನ್ನೇ ಉಪಯೋಗಿಸಬೇಕು. ಚರಖಸಂಘ ಅನೇಕ ತಯಾರಿ ಕ್ಷೇತ್ರಗಳನ್ನೂ ಮಾರಾಟದ ಕ್ಷೇತ್ರಗಳನ್ನೂ ತೆರೆದಿದೆ. ಪ್ರತಿಯೊಬ್ಬ ಕೆಲಸಗಾರರೂ ಈ ಕೆಲಸಕ್ಕೆ ತಾವೇ ಸ್ವಯಂಸೇವಕರಾಗಬೇಕು. ಕೆಲಸಗಾರರು ಖಾದಿಯ ನೀತಿ ಅರ್ಥಶಾಸ್ತ್ರಗಳನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಆಗ ಖಾದಿಯ ಜನೋಪಕಾರಕವಾದ ಸಂದೇಶವನ್ನು ಜನರಿಗೆ ತಿಳಿಸಲು ಅವರಿಗೆ ಶಕ್ತಿಯುಂಟಾಗುವುದು. ತನ್ನ ಪ್ರಾಂತದಲ್ಲಿ ಖಾದಿಯ ಗಿರಾಕಿಯನ್ನು ಹೆಚ್ಚಿಸುವುದರಿಂದ ಭಂಡಾರಗಳಲ್ಲಿ ಶೇಖರವಾಗುವ ಖಾದಿಯೂ ವೆಚ್ಚವಾಗುವುದು. ಒಂದೇ ಕಡೆ ಹಣ ಉಳಿಯುವುದೂ ತಪ್ಪುವುದು.

ಖಾದಿ ವ್ಯಾಪಾರದಲ್ಲಿ ಒಂದು ಎಚ್ಚರಿಕೆ ಕೊಡಬೇಕು. ಈ ಚಳುವಳಿಯ ಉದ್ದೇಶ ಎಂತಹ ಬಡವರಿಗೂ ಗೌರವವಾದ ಉದ್ಯೋಗದ ಮೂಲಕ ಜೀವನ ಕಲ್ಪಿಸುವುದು. ಈ ಕಾರಣದಿಂದ ಚರಖ ಸಂಘವು ನೂಲುವವರು ಕೇಳದಿದ್ದರೂ ದಿನಕ್ಕೆ ಅವರಿಗೆ ಎಂಟಾಣೆ ಕೂಲಿಕೊಡಬೇಕೆಂದು ಗೊತ್ತುಮಾಡಿತು. ಬಂಡವಾಳ ಸಂಸ್ಥೆ ಯಾವುದೂ ಹೀಗೆ

ಮಾಡುವುದಿಲ್ಲ ಇದರಲ್ಲಿಯೂ ನಮ್ಮ ಆದರ್ಶವಿನ್ನೂ ಸಿದ್ಧಿಸಿಲ್ಲ. ಮೊದಲು ಒಂದು ಆಣೆ ಕೂಲಿ ಕೊಡುತ್ತಿದ್ದ ಜಾಗಾದಲ್ಲಿ ಮೂರು ಆಣೆ ಕೂಲಿ ಮಾಡಿದಾಗಲೂ, ಬಟ್ಟೆಯ ಬೆಲೆ ಏರಿದುದರಿಂದ ವ್ಯಾಪಾರಕ್ಕೆ ತೊಂದರೆಯುಂಟಾಗಲಿಲ್ಲ. ಆದರೂ ತಮ್ಮ ಸ್ವಂತ ಪ್ರಯೋಜನಕ್ಕಾಗಿ ಇನ್ನೂ ಅನೇಕರು ನೂಲುವವರನ್ನೂ ನೇಯ್ಗೆಯವರನ್ನೂ ಲೂಟಿಮಾಡುತ್ತಿದ್ದಾರೆ. ಈ ನಿಯಮಕ್ಕೆ ಅನುಸಾರವಾಗಿ ಮಾತ್ರ ಖಾದಿಯನ್ನು ತಯಾರಿಸುವವರಿಗೆ ಸರ್ಟಿಫಿಕೇಟುಗಳನ್ನು ಕೊಡಬೇಕೆಂದು ಚರಖ ಸಂಘವು ನಿಶ್ಚಯಿಸಿದ್ದರೂ, ಅನೇಕ ವ್ಯಾಪಾರಿಗಳು ಕೆಲಸಗಾರರಿಗೆ ಕಡಿಮೆ ಕೂಲಿ ಕೊಟ್ಟು ಬಟ್ಟೆ ತಯಾರಿಸಿ ಅದು ಖಾದಿ ಎಂದು ಮಾರುತ್ತಿದ್ದಾರೆ. ಇಂತಹ ಪೋಲಿಖಾದಿ ಕೊಳ್ಳದಂತೆ ಕೆಲಸಗಾರರು ಜನರಿಗೆ ಎಚ್ಚರಿಕೆ ಕೊಡಬೇಕು.

ವ್ಯಾಪಾರಕ್ಕಾಗಿ ತಯಾರಿಸುವ ಖಾದಿಯನ್ನು ಹೀಗೆ ವ್ಯವಸ್ಥೆಗೊಳಿಸುವುದಂತೂ ಸರಿ. ಆದರೆ ರಾಷ್ಟ್ರದ ಜೀವನದಲ್ಲಿ ನೂಲುವುದು ನೆಯ್ಯುವುದು ಇವುಗಳ ಪ್ರಾಮುಖ್ಯತೆ ಸ್ಪಷ್ಟವಾಗಬೇಕಾದರೆ ಜನರೆಲ್ಲಾ ನೂಲುವುದನ್ನು ಪ್ರಾರಂಭಿಸಬೇಕು. ಸಾಧಾರಣವಾಗಿ ನೂಲುವ ಅಭ್ಯಾಸವುಳ್ಳವರು ಗಂಟೆಗೆ ೪೦೦ ಗಜ ನೂಲಬಹುದು. ಒಂದು ತಿಂಗಳಿಗೆ ೧೨ ಸಾವಿರ ಗಜಗಳಾಗುತ್ತದೆ. ನಮ್ಮ ದೇಶದಲ್ಲಿ ಒಬ್ಬ ಮನುಷ್ಯನ ಉಪಯೋಗಕ್ಕೆ ವರುಷಕ್ಕೆ ೧೬ ಗಜ ಬಟ್ಟೆ ಸಾಕು. ಒಬ್ಬ ಮನುಷ್ಯ ನಿತ್ಯ ಒಂದು ಗಂಟೆ ನೂತರೆ ವರುಷಕ್ಕೆ ೯ ಜನರಿಗೆ ಸಾಕಾಗುವ ಬಟ್ಟೆ ಆಗುತ್ತದೆ. ವ್ಯವಸಾಯಗಾರರೂ, ಇತರ ಉದ್ಯೋಗಗಳಲ್ಲಿ ತೊಡಗಿರುವವರೂ ದಿನಕ್ಕೆ ಒಂದು ಗಂಟೆ ನೂಲಬೇಕು. ಇದರಿಂದ ರಾಷ್ಟ್ರಕ್ಕೆ ಒಳ್ಳೆಯ ಲಾಭವಾಗುವುದು. ೧೬ ಗಜ ಮಿಲ್ ಬಟ್ಟೆಗೆ ಕೊನೆಯಪಕ್ಷ ೪ ರುಪಾಯಿ ಬೆಲೆಯಾಗುವುದು. ನಮ್ಮ ದೇಶದ ಬಡವರ ಸಂಪಾದನೆಗೆ ವರುಷಕ್ಕೆ ನಾಲ್ಕು ರುಪಾಯಿ ಸೇರಿದರೆ ಅದೇನೂ ಕಡಿಮೆ ಅಲ್ಲ. ಅದರ ಜತೆಗೆ ಬಟ್ಟೆಗಳಲ್ಲಿ ಆತ್ಮಾವಲಂಬನೆ, ಸ್ವಂತವಾಗಿ ನೂಲುವುದರಿಂದ ಉಂಟಾಗುವ ನೀತಿ ಬಲ ಇವನ್ನೆಲ್ಲಾ ಪರಿಗಣಿಸಿ ಐದು ಜನರಿರುವ ಸಂಸಾರದಲ್ಲಿ ಇಬ್ಬರು ನಿತ್ಯ ಒಂದು ಗಂಟೆ ನೂತರೆ ಐದು ಜನರಿಗೂ ವರುಷಕ್ಕೆ ಆಗುವಷ್ಟು ಬಟ್ಟೆಯಾಗುವುದು.

ಪ್ರತಿಯೊಬ್ಬ ಕೆಲಸಗಾರನೂ ತನಗೆ ಬೇಕಾಗುವಷ್ಟು ಬಟ್ಟೆಯ ನೂಲನ್ನು ತಾನೇ ನೂಲಬೇಕು. ಅವನಿಗೆ ರಾಟೆ, ಧನುಷ್ ತಕ್ಲಿ, ಕದರು ಇವುಗಳಲ್ಲಿ ನೂಲುವುದು ಚೆನ್ನಾಗಿ ಗೊತ್ತಿರಬೇಕು. ನೂಲುವುದರ ಹಿಂದಲ ಅಂಗಗಳಾದ ಹತ್ತಿಯನ್ನು ಶುದ್ಧಮಾಡಿ ಎಕ್ಕಿ ಹಂಜಿ ಮಾಡುವುದೆಲ್ಲಾ ಆತನಿಗೆ ಚೆನ್ನಾಗಿ ಬಂದಿರಬೇಕು. ಅವನ ಉಪಕರಣಗಳು ಶುದ್ಧವಾಗಿಯೂ ಕೆಲಸಕ್ಕೆ ಬರುವವುಗಳಾಗಿಯೂ ಇರಬೇಕು. ಅವನ ಚುರುಕು, ದಕ್ಷತೆ, ಕಾರ್ಯಕುಶಲತೆ ಇವು ಖಾದಿಯ ಮೇಲಿನ ಉಪನ್ಯಾಸಗಳಿಗಿಂತ ಹೆಚ್ಚಾಗಿ ಜನರನ್ನು ಖಾದಿಯ ಕಡೆಗೆ ಎಳೆಯಬೇಕು. ನೇಯುವುದು ಸಹ ಅವನಿಗೆ ತಿಳಿದಿರಬೇಕು. ಖಾದಿ ತಯಾರು ಮಾಡಿಸಿ ಮಾರಿಸುವ ಜವಾಬ್ದಾರಿಯನ್ನು ಆತ ಅಖಿಲಭಾರತ ಚರಖಾ ಸಂಘಕ್ಕೆ ಬಿಟ್ಟು ಸ್ವಾವಲಂಬನೆಯ ದೃಷ್ಟಿಯಿಂದ ತನ್ನ ನೆಯಿಗೆಯ ಉದ್ಯಮವನ್ನು ನಡೆಸಬಹುದು. ಇದಕ್ಕೆ ಮೂಲ ಧನ ಬೇಕಿಲ್ಲ. ಕೆಲಸಗಾರನಿಗೆ ಮೇಲೆ ಹೇಳಿದ ಯೋಗ್ಯತೆಗಳ ಜತೆಗೆ ತನ್ನ ಉದ್ಯಮವನ್ನು ಇತರರಿಗೆ ಬೋಧಿಸುವ ಶಕ್ತಿ ಇದ್ದರೆ ಸಾಕು. ಪ್ರತಿಯೊಬ್ಬ ಕೆಲಸಗಾರನೂ ತನ್ನ ವಾತಾವರಣ ಪರಿಸ್ಥಿತಿಗಳಿಗನುಸಾರವಾಗಿ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ಅವನು ಆರು ತಿಂಗಳಿನಲ್ಲಿ ತನ್ನಂತೆ ದಕ್ಷರಾದ ಹನ್ನೆರಡು ಜನರನ್ನು ನೂಲಲು ಪ್ರೇರಿಸಿದರೆ, ಖಾದಿಯ ಬೆಳವಣಿಗೆಗೆ ಅವನು ಬಹಳ ಕೆಲಸ ಮಾಡಿದಂತೆ ಆಗುತ್ತದೆ. ಹತ್ತಿ ಬೆಳೆಯದ, ಸಿಕ್ಕದ ಸ್ಥಳ ಇಲ್ಲ. ಅಷ್ಟೇ ಅಲ್ಲ, ಪ್ರತಿ ರೈತನೂ ತನಗೆ ಬೇಕಾಗುವಷ್ಟು ಖಾದಿಯನ್ನು ಬೆಳೆಯುವಂತೆ ಪ್ರೋತ್ಸಾಹಿಸಬೇಕು. ಎಲ್ಲಾ ಕಡೆಗಳಲ್ಲಿಯೂ ಕೆಲಸವಿಲ್ಲದ ನೆಯ್ಗೆಯವರು ಇದ್ದಾರೆ. ಈ ಜಮೀನನ್ನು ಕೆಲಸಗಾರ ಉತ್ತು ಬಿತ್ತಿ ಪಾಕಮಾಡಬೇಕು. ಶ್ರದ್ಧೆ, ಉತ್ಸಾಹ, ಬುದ್ಧಿವಂತಿಕೆ, ಚುರುಕು, ದಕ್ಷತೆ ಇವುಗಳೆಲ್ಲಾ ಖಾದಿಯ ತಯಾರಿಯಲ್ಲಿ ಮಾತ್ರ ಉಪಯೋಗವಾದರೆ ದೇಶದ ಲಕ್ಷಾಂತರ ಗ್ರಾಮ ಜೀವನದಲ್ಲಿ ಕ್ರಾಂತಿಯುಂಟಾಗುವುದು.

೨ ಗ್ರಾಮ ಕೈಗಾರಿಕೆ

ನಿರ್ಮಾಣ ಕೆಲಸಗಾರರ ಸಮ್ಮೇಳನದಲ್ಲಿ ಚರ್ಚಿತವಾದ ಎರಡನೆಯ ವಿಷಯ ಗ್ರಾಮಕೈಗಾರಿಕೆಗಳನ್ನು ಕುರಿತು.

ಗಾಂಧಿಜಿಯವರು:—ಖಾದಿ ಬೇರೆ. ಗ್ರಾಮಕೈಗಾರಿಕೆಗಳು ಬೇರೆ. ಗ್ರಾಮೋದ್ಯೋಗಗಳಲ್ಲಿ ಸ್ವಯಂ ಸೇವಕರಿಗೆ ಹೆಚ್ಚು ಕೆಲಸಕ್ಕೆ ಆಸ್ಪದವಿರುವುದಿಲ್ಲ, ಪ್ರತಿಯೊಂದು ಗ್ರಾಮೋದ್ಯೋಗಕ್ಕೂ ಕೆಲವರು ಮಾತ್ರ ಸಾಕು. ಈ ಉದ್ಯೋಗಗಳೆಲ್ಲಾ ಖಾದಿಗೆ ಸಖಿಯರಂತೆ ಖಾದಿಯಿಲ್ಲದೆ ಉಳಿದ ಉದ್ಯೋಗಗಳು ನಿಲ್ಲಲಾರವು. ಗ್ರಾಮೋದ್ಯೋಗಗಳಿಲ್ಲದಿದ್ದರೆ ಖಾದಿಯ ವೈಭವ ಕಡಿಮೆಯಾಗುವುದು. ಕೈಯಿಂದ ಬೀಸುವುದು, ಕೊಟ್ಟಣದ ಅಕ್ಕಿ, ಹಳ್ಳಿಗಳಲ್ಲಿ ಸಾಬೂನು, ಕೈಕಾಗದ, ಬೆಂಕಿಪಟ್ಟಣ, ಚರ್ಮದ ಹದ, ಗಾಣ ಇವುಗಳ ಕೈಗಾರಿಕೆಗಳಿಲ್ಲದಿದ್ದಲ್ಲಿ ಗ್ರಾಮದ ಆರ್ಥಿಕ ಜೀವನವು ಪೂರ್ಣವಾಗುವುದಿಲ್ಲ. ಈ ಕಾರ್ಯದಲ್ಲೆಲ್ಲಾ ಕಾಂಗ್ರೆಸ್ಸಿಗರು ಶ್ರದ್ಧೆವಹಿಸಬೇಕು. ಅವರು ಹಳ್ಳಿಯವರಾದರೆ ಹಳ್ಳಿಯಲ್ಲಿ ನೆಲೆಸಿ ಈ ಕೈಗಾರಿಕೆಗಳಿಗೆ ಹೊಸ ಜೀವವನ್ನೂ ರೂಪವನ್ನೂ ಕೊಡಬೇಕು. ಎಲ್ಲೆಲ್ಲಿ ಸಿಕ್ಕುವುದೋ ಯಾವಾಗ ಸಿಕ್ಕುವುದೋ ಆಗೆಲ್ಲಾ ಹಳ್ಳಿಯಲ್ಲಿ ತಯಾರಾದ ಪದಾರ್ಥಗಳನ್ನೇ ಉಪಯೋಗಿಸುವುದಾಗಿ ಎಲ್ಲರೂ ಪ್ರತಿಜ್ಞೆಮಾಡಿಕೊಳ್ಳಬೇಕು. ಕೊಳ್ಳುವವರಿದ್ದರೆ, ನಮ್ಮ ಅನೇಕ ಆವಶ್ಯಕತೆಗಳನ್ನು ಹಳ್ಳಿಗರು ಪೂರೈಸುವರೆಂಬುದರಲ್ಲಿ ಸಂದೇಹವಿಲ್ಲ. ನಮ್ಮ ಮನಸ್ಸು ಹಳ್ಳಿಗಳ ಕಡೆ ತಿರುಗಿದರೆ ನಮಗೆ ಪಾಶ್ಚಾತ್ಯರ ಅನುಕರಣೆಗಳೂ ಯಂತ್ರಗಳಿಂದ ಮಾಡಿದ ಪದಾರ್ಥಗಳೂ ಬೇಕಾಗುವುದಿಲ್ಲ. ನಮ್ಮ ಅಭಿರುಚಿ ನಿಜವಾಗಿ ರಾಷ್ಟ್ರೀಯವಾಗಿ ನಮಗೆ ಸ್ವತಂತ್ರಭಾರತದ ಭವ್ಯದರ್ಶನವಾಗುವುದು. ಆ ಸ್ವತಂತ್ರ ಭಾರತದಲ್ಲಿ ದಾರಿದ್ರ್ಯ ಹಸಿವು ನಿರುದ್ಯೋಗ ಇವು ಹೇಳಹೆಸರಿಲ್ಲದೆ ಹೋಗುವುವು.

ರಾಜೇಂದ್ರ ಬಾಬು:—“ವ್ಯವಸಾಯವೇ ಅತ್ಯುತ್ತಮವಾದ ಗ್ರಾಮ ಕೈಗಾರಿಕೆ. ಯಾಕೆಂದರೆ ಅದರಿಂದ ಆಹಾರವೂ, ಬಟ್ಟೆಗೆ ಆವಶ್ಯಕವಾದ ಕಚ್ಚಾ ಮಾಲೂ ನಮಗೆ ದೊರೆಯುವುದು. ಆದರೆ ಗ್ರಾಮಕೈಗಾರಿಕೆ ಎಂಬಲ್ಲಿ ಕೈಗಾರಿಕೆ ಎನ್ನುವುದಕ್ಕೆ ಒಂದು ಬೇರೆ ಅಧಿಕವ್ಯಾಪ್ತಿ ಇದೆ. ಆದುದರಿಂದ ಇವನ್ನು ಗ್ರಾಮೋದ್ಯೋಗ ಎನ್ನೋಣ. ನಮ್ಮ ಹಳ್ಳಿಗಳ ಗ್ರಾಮಕೈಗಾರಿಕೆಗಳು ನಾಶವಾದುದರಿಂದ ಹಳ್ಳಿಗಳೂ ನಾಶವಾಗಿವೆ. ವ್ಯವಸಾಯ ಸಹ ಬೇಸರಿಕೆಯ ಕಸಬಾಗಿ ಅದರಲ್ಲಿಯೂ ರೈತನಿಗೆ ನಷ್ಟವೇ

ಆಗುತ್ತಿದೆ. ಯಾಕೆಂದರೆ ವ್ಯವಸಾಯಗಾರ ವರುಷಕ್ಕೆ ಆರು ತಿಂಗಳಾದರೂ ನಿರುದ್ಯೋಗಿಯಾಗಿರುತ್ತಾನೆ.

ವ್ಯವಸಾಯಗಾರ, ತನ್ನ ನಿರುದ್ಯೋಗದ ಕಾಲವನ್ನು ಹೇಗೆ ಖಾದಿಗೆ ಉಪಯೋಗಿಸಬಹುದೆಂಬುದನ್ನು ಖಾದಿಯ ಮಾತು ಬಂದಾಗ ಹೇಳಿದೆ. ಗಾಂಧಿಯವರು ಸ್ಥಾಪಿಸಿರುವ ಅಖಿಲ ಭಾರತ ಗ್ರಾಮೋದ್ಯೋಗ ಸಂಘದಿಂದ ಹೇಗೆ ಗ್ರಾಮಕೈಗಾರಿಕೆಗಳು ಬೆಳೆದು ಹಳ್ಳಿಗಳು ಸ್ವಾವಲಂಬಿಗಳಾಗುವುವೆಂಬುದನ್ನೂ ನಮ್ಮ ದೇಶದ ಜನರ ಬುದ್ಧಿ, ದೇಹ, ನೀತಿ ಇವೆಲ್ಲಾ ಈ ಕೈಗಾರಿಕೆಗಳಿಂದ ಹೇಗೆ ಬೆಳೆಯುವುದೆಂಬುದನ್ನೂ ಈಗ ನೋಡೋಣ.

ಧಾನ್ಯ ಭೂಮಿಯಲ್ಲಿ ಬೆಳೆಯುತ್ತದೆ. ಗೋಧಿಯನ್ನೂ ಇತರ ಧಾನ್ಯಗಳನ್ನೂ ಬೀಸಿ ಹಿಟ್ಟು ಮಾಡಬೇಕು. ಭತ್ತವನ್ನು ಕುಟ್ಟಿ ಅಕ್ಕಿ ಮಾಡಬೇಕು. ದ್ವಿದಳ ಧಾನ್ಯಗಳನ್ನು ಒಡೆದು ಹೊಟ್ಟನ್ನು ಬೇರ್ಪಡಿಸಬೇಕು. ಹಿಂದೆ ಇವೆಲ್ಲವನ್ನೂ ಹಳ್ಳಿಗಳಲ್ಲಿ ಮನೆಗಳಲ್ಲಿ ಮಾಡುತ್ತಿದ್ದರು. ಈಗ ಭತ್ತದ ಗಿರಣಿ, ಹಿಟ್ಟಿನ ಗಿರಣಿಗಳು, ಯಾತ, ಚಕ್ಕಿ ಒಡೆಯುವ ಕಲ್ಲುಗಳ ಸ್ಥಳಗಳನ್ನು ಆಕ್ರಮಿಸಿವೆ. ಇದರಿಂದ ನಮ್ಮವರಿಗೆ ಕೆಲಸ ಹೋದುದು ಮಾತ್ರವೇ ಅಲ್ಲ. ನಮ್ಮ ಆಹಾರದ ಸಾರ ಕಡಿಮೆಯಾಗಿ ನಮ್ಮವರ ಆರೋಗ್ಯ ಕೆಡುತ್ತಿದೆ. ಈ ಮಾತು ಎಣ್ಣೆ ಬೀಜಗಳಿಗೆ ಸಹ ಅನ್ವಯಿಸುತ್ತದೆ. ಎಣ್ಣೆ ನಮ್ಮ ಆಹಾರಕ್ಕೆ ಅತ್ಯವಶ್ಯಕ. ಅದರ ಸಾರ ವ್ಯರ್ಥವಾಗಲು ನಾವು ಬಿಡುಕೂಡದು. ಸಕ್ಕರೆಯೂ ನಮ್ಮ ಆವಶ್ಯಕವಾದ ನಿತ್ಯದ ಆಹಾರ. ಅನಾದಿಕಾಲದಿಂದಲೂ ಕಬ್ಬಿನ ಬೇಸಾಯಗಾರರು ಹಳ್ಳಿಗೆ ಬೇಕಾದ ಬೆಲ್ಲ ಸಕ್ಕರೆ ಒದಗಿಸುತ್ತಿದ್ದಾರೆ. ಆಗ ಈಗ ಸಕ್ಕರೆಗೂ ಯಂತ್ರಗಳು ಬಂದಿವೆ. ಸಕ್ಕರೆ ಸಿಕ್ಕುವ ಮತ್ತೊಂದು ಮಾರ್ಗ ಜೇನುತುಪ್ಪದಿಂದ. ಜೇನನ್ನು ಸುಲಭವಾಗಿ ಸಾಕಬಹುದು. ತರಕಾರಿ ಮತ್ತೂ ಹಣ್ಣುಗಳು ನಮ್ಮ ಆಹಾರದ ಮುಖ್ಯ ಭಾಗ. ಇವನ್ನೂ ಹಳ್ಳಿಗಳಲ್ಲಿ ಬೆಳೆಯಬೇಕು. ಇನ್ನು ಹಾಲು, ಹಾಲಿನ ಪದಾರ್ಥಗಳು. ಇವುಗಳಿಗೆ ದನಗಳನ್ನು ಸಾಕುವುದೂ ಹಾಲು ಬೆಣ್ಣೆಗಳ ವ್ಯವಸಾಯವೂ ಚೆನ್ನಾಗಿ ತಿಳಿದಿರಬೇಕು. ಪಶುಪಾಲನ ವಿಜ್ಞಾನ ಬೇಕು. ಕೆಳಗಿನ ವಿಷಯಗಳಿಗೆ ಹೆಚ್ಚು ಲಕ್ಷ್ಯಕೊಡಬೇಕು.

(೧) ಧಾನ್ಯ ಹತ್ತಿ ಕಬ್ಬುಗಳ ವ್ಯವಸಾಯದಲ್ಲಿ ಹೊಸ ಸುಧಾರಣಾ ಕ್ರಮ.

(೨) ಕಾಳುಗಳನ್ನು ಒಡೆಯಲು, ಗೋದಿಬೀಸಲು, ಅಕ್ಕಿ ಮಾಡಲು ಯಾತ, ಒಡೆಯುವ ಕಲ್ಲುಗಳ ಸ್ಥಾಪನೆ.

(೩ ಎಣ್ಣೆ ತೆಗೆಯಲು ಎಣ್ಣೆ ಗಾಣಗಳು.

(೪) ಹಳ್ಳಿಯ ಸಕ್ಕರೆ ಬೆಲ್ಲ ತಯಾರಿಕೆಯ ಪುನರುದ್ಧಾರ.

(೫) ಶಾಸ್ತ್ರೀಯವಾದ ಜೇನಿನ ವ್ಯವಸಾಯ.

(೬) ತರ್ಕಾರಿ ಮತ್ತು ಹಣ್ಣುಗಳ ವ್ಯವಸಾಯ.

(೭) ಕಸವನ್ನೆಲ್ಲಾ ಬುದ್ಧಿವಂತಿಕೆಯಿಂದ ರಸಮಾಡಬೇಕು. ದನಗಳ ಸಗಣಿ, ಮನುಷ್ಯನ ಪಾಯಖಾನೆ, ಬೀದಿಯ ಕಸ, ಆಹಾರದ ಶೇಷ, ತರಕಾರಿ ಹಣ್ಣುಗಳ ಸಿಪ್ಪೆ, ಪ್ರಾಣಿಗಳ ಮೂಳೆ, ಬೂದಿ ಎಲ್ಲವನ್ನೂ ಸೇರಿಸಿ ಉತ್ತಮವಾದ ಗೊಬ್ಬರಮಾಡಬೇಕು.

(೮) ವ್ಯವಸಾಯದ ಮುಟ್ಟುಗಳನ್ನು ಉತ್ತಮಗೊಳಿಸಬೇಕು. ಮುಟ್ಟುಗಳ ತಯಾರಿ ಹಳ್ಳಿಗಳಲ್ಲಿಯೇ ನಡೆಯಬೇಕು.

ಆಹಾರದ ನಂತರ ನಮಗೆ ಬೇಕಾದುದು ಮನೆ. ಕೆಲವು ವೇಳೆ ಆಹಾರ ಬಟ್ಟೆಗಳಿಗಿಂತ ಮನೆಗೆ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಹಳ್ಳಿಯ ಆರ್ಥಿಕದ ದೃಷ್ಟಿಯಿಂದ, ಮನೆ ಕಟ್ಟುವ ಸಾಮಾನುಗಳೆಲ್ಲಾ ಹಳ್ಳಿಯವೇ ಆಗಿರಬೇಕು. ಕೆಲಸಗಾರರೂ ಹಳ್ಳಿಯವರೇ ಆಗಿರಬೇಕು. ಪ್ರಕೃತಿಯಲ್ಲಿ ಒಂದು ವಿಧವಾದ ಮಿತವ್ಯಯವಿದೆ. ಆಧುನಿಕಯುಗ ಇದನ್ನು ಗಮನಿಸಿದಂತೆ ತೋರುವುದಿಲ್ಲ. ಕಲ್ಲಿದ್ದಲುಗಣಿ, ಕಬ್ಬಿಣದಗಣಿ ಎಣ್ಣೆಗಣಿ ಅಥವಾ ಇತರ ಲೋಹದ ಗಣಿಗಳು ಸಿದ್ಧವಾಗಬೇಕಾದರೆ ಅನೇಕ ಕೋಟಿ ಸಂವತ್ಸರಗಳು ಬೇಕೆಂದು ಭೂಗರ್ಭ ಶಾಸ್ತ್ರಜ್ಞರು ಹೇಳುತ್ತಾರೆ. ನಾವು ಕಲ್ಲಿದ್ದಲನ್ನೂ ಎಣ್ಣೆಗಳನ್ನೂ ಇತರ ಲೋಹಗಳನ್ನೂ ಧಾರಾಳವಾಗಿ ದುಂದು ವೆಚ್ಚಮಾಡುತ್ತೇವೆ. ನಾವು ಉಪಯೋಗಿಸಿದುದನ್ನು ಮತ್ತೆ ಶೇಖರಿಸುವ ಯೋಚನೆಯೇ ನಮಗೆ ಇಲ್ಲ. ಪ್ರಕೃತಿ ಮಿತವ್ಯಯ ಮಾಡುತ್ತದೆ. ಆದರೆ ನಾವು ನಮ್ಮ ವಿಜ್ಞಾನದ ಹೆಮ್ಮೆಯಿಂದ ಪ್ರಕೃತಿಯ ಕೆಲಸದಲ್ಲಿ ಕೈಹಾಕುತ್ತೇವೆ. ನಾವು

ಇದರಿಂದ ಪ್ರಕೃತಿಯ ಭಂಡಾರವನ್ನು ಬರಿದು ಮಾಡುತ್ತೇವೆಂಬುದು ನಮಗೆ ತಿಳಿಯದು. ಈಗ ನಾವು ಉಪಯೋಗಿಸುತ್ತಿರುವಂತೆ ಕಲ್ಲಿದ್ದಲನ್ನೂ ಎಣ್ಣೆಗಳನ್ನೂ ಲೋಹಗಳನ್ನೂ ದುಂದು ವೆಚ್ಚಮಾಡುತ್ತಾ ಬಂದರೆ ಇವು ಎಷ್ಟು ಬೇಗ ಮುಗಿದು ಹೋಗುವುದೆಂಬುದನ್ನು ಈಗಾಗಲೇ ವಿವೇಕಿಗಳೂ ದೂರದರ್ಶಿಗಳೂ ಆದವರು ಯೋಚಿಸುತ್ತಿದ್ದಾರೆ ಆದರೆ ಇದು ಮುಖ್ಯವಾಗಿ ಯಂತ್ರಗಳ ಮೇಲೆ ಅವಲಂಬಿಸಿರುವ ದೇಶಗಳು ಎದುರಿಸಬೇಕಾದ ಸಮಸ್ಯೆ ನಮ್ಮ ಹಳ್ಳಿಯ ಆರ್ಥಿಕ ಜೀವನ ನಾವು ಉಪಯೋಗಿಸಿದ ದನ್ನು ಮತ್ತೆ ಭೂಮಿಗೆ ಸೇರಿಸುವುದನ್ನು ಅವಲಂಬಿಸಿದೆ ಉದಾಹರಣೆಗೆ ಹಳ್ಳಿಯಲ್ಲಿ ಉಪಯೋಗಿಸುವ ಸೌದೆಯನ್ನು ತೆಗೆದುಕೊಳ್ಳಿ. ನಾವು ಉಪಯೋಗಿಸುವ ಸೌದೆ ಎಂದೆಂದಿಗೂ ಬೆಳೆಯುತ್ತಿರುವುದೇ. ಮನೆಗಳನ್ನು ಕಟ್ಟುವುದರಲ್ಲಿಯೂ ನಾವು ಬೇಗ ಬೇಗ ಸೃಷ್ಟಿಯಾಗುವ ಪದಾರ್ಥಗಳನ್ನೇ ಉಪಯೋಗಿಸಬೇಕು. ಹಂಚು ಇಟ್ಟಿಗೆಗಳನ್ನು ಕಲ್ಲಿದ್ದಲಿನ ಸಹಾಯವಿಲ್ಲದೆ ಸುಡಬಹುದು. ಮನೆಗಳಿಗೆ ಬೇಕಾದ ಮರಗಳು ನಮ್ಮ ಕಾಡುಗಳಲ್ಲಿ ಅಸಂಖ್ಯಾತವಾಗಿ ಬೆಳೆದಿವೆ. ಲೋಹದ ಪದಾರ್ಥಗಳನ್ನು ಎಷ್ಟು ಕಡಿಮೆ ಆವಶ್ಯಕವೋ ಅಷ್ಟು ಕಡಿಮೆ ಉಪಯೋಗಿಸಬೇಕು ಹೀಗೆ ಹೆಚ್ಚು ವೆಚ್ಚವಿಲ್ಲದೆ ಸುಖವಾದ ವಾಸದ ಮನೆಗಳನ್ನು ನಿರ್ಮಿಸಬಹುದು. ಜಗತ್ತಿನಲ್ಲೆಲ್ಲಾ ಅತ್ಯುತ್ಕೃಷ್ಟವಾದ ನಮ್ಮ ಕಟ್ಟಡ ಶಿಲ್ಪಿ ಕಲೆಯ ತುದಿಯನ್ನೇರಿದುದು ಕಬ್ಬಿಣ ಉಕ್ಕು ಸಿಮೆಂಟು ಪ್ರಚಾರಕ್ಕೆ ಬರುವುದಕ್ಕೆ ಮುಂಚೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಅತ್ಯವಶ್ಯಕವಾದ ಈ ಪದಾರ್ಥಗಳಲ್ಲದೆ ಮನುಷ್ಯನಿಗೆ ಬೇಕಾದ ವಸ್ತುಗಳು ಇಂದು ಇನ್ನೂ ಅನೇಕ ಇವೆ. ಹಡಗದಿಂದ ಹಿಡಿದು ರೈಲು, ಸೂಜಿಯಿಂದ ಹಿಡಿದು ಮೋಟಾರು ವರೆಗೆ ಈ ಪದಾರ್ಥಗಳ ವಿಸ್ತಾರ. ಲೇಖನಿ ಶಾಯಿ ಬೇಕಾದಂತೆ ಅಚ್ಚುಕೂಟ ಬೇಕು. ಮಣ್ಣಿನ ಹಣತೆ ಬೇಕಾದಂತೆ ವಿದ್ಯುತ್‌ದೀಪ ಬೇಕು. ನಮ್ಮ ಆವಶ್ಯಕತೆಗಳನ್ನೆಲ್ಲಾ ವಿವೇಕದಿಂದ ಯೋಚಿಸಿ ಹಳ್ಳಿಗಳಲ್ಲಿಯೇ ಯಾವುದರ ತಯಾರಿ ಸಾಧ್ಯವೆಂಬುದನ್ನು ನೋಡಬೇಕು. ಹಳ್ಳಿಯ ಕುಶಲ ಕರ್ಮಿಗಳು ಮಾಡಬಹುದಾದ ಪದಾರ್ಥಗಳು ನೂರಾರು ಇರುವುದು ನಮಗೆ ಗೊತ್ತಾಗುತ್ತದೆ. ಹಳ್ಳಿಗಳಲ್ಲಿ ಕಚ್ಚಾ

ಮಾಲು ಸುಲಭವಾಗಿ ದೊರೆಯುತ್ತದೆ. ಮಾಡುವ ಅಭ್ಯಾಸ ಜನರಿಗೆ ಇನ್ನೂ ಇದೆ. ಹವೆ, ವಾತಾವರಣಗಳಿಂದ ಆ ಪದಾರ್ಥಗಳು ಅವಶ್ಯಕ ವಾಗುತ್ತವೆ. ನಾವು ಹುಡುಕಿ ಹುಡುಕಿ ಅಂತಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು. ಉದಾಹರಣೆಗಾಗಿ ಕೈಕಾಗದ ಅಥವಾ ಚರ್ಮದ ಪದಾರ್ಥಗಳ ತಯಾರಿ ತೆಗೆದುಕೊಳ್ಳಿ. ಹಳ್ಳಿಗಳಲ್ಲಿ ಈ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲು, ಕೆಲಸಗಾರರು ದೊರೆಯುತ್ತಾರೆ. ಚುರುಕು ದಕ್ಷತೆ ಬೇಕು. ನಮ್ಮ ದೇಶದಂತಹ ವಿಶಾಲವಾದ ದೇಶದಲ್ಲಿ ಇಲ್ಲಿಯ ಪ್ರಕೃತಿಯು ಐಶ್ವರ್ಯ ನಮ್ಮವರಿಗೆಲ್ಲಾ ಉದ್ಯೋಗವನ್ನು ಕಲ್ಪಿಸಬಲ್ಲದೆಂಬ ದೃಢವಾದ ನಂಬಿಕೆ ನಮ್ಮಲ್ಲಿ ಇರಬೇಕು ನಮ್ಮ ಕೆಲವು ಆವಶ್ಯಕತೆಗಳಿಗೆ ದೊಡ್ಡ ದೊಡ್ಡ ಕೈಗಾರಿಕೆಗಳ ಸ್ಥಾಪನೆ ಬೇಕಾಗಬಹುದು. ಆದರೆ ನಮ್ಮ ಗ್ರಾಮ ಜೀವನ ಕಲೆ ಸಂಸ್ಕೃತಿ ಇವು ನಾಶವಾಗಿರುವುದಕ್ಕೆ ಕಾರಣ ನಮ್ಮ ಗ್ರಾಮ ಕೈಗಾರಿಕೆಗಳ ನಾಶವೇ. ಭಾರತದಲ್ಲಿ ಗ್ರಾಮ ಪುನರುಜ್ಜೀವನವಾಗ ಬೇಕಾದರೆ ಈ ಕೈಗಾರಿಕೆಗಳು ಮತ್ತೆ ಬೆಳೆಯಬೇಕು. ಆದುದರಿಂದ ಗಾಂಧಿಯವರ ಕಾವ್ಯವಾಣಿಯಲ್ಲಿ ವಿವರಿಸುವಂತೆ ಖಾದಿ ಗ್ರಾಮೋದ್ಯೋಗದ ಸೂರ್ಯನಾಗಲಿ. ಇತರ ಕೈಗಾರಿಕೆಗಳು ಅದರ ಸುತ್ತ ಚಲಿಸುವ ಗ್ರಹ ಗಳಾಗಲಿ. ಗ್ರಾಮಸೇವೆ ಮಾಡಬೇಕೆನ್ನುವವರು ಸಾಧ್ಯವಾದ ಮಟ್ಟಿಗೆ ಹಳ್ಳಿಗಳಲ್ಲಿ ತಯಾರಾದ ಪದಾರ್ಥಗಳನ್ನೇ ಉಪಯೋಗಿಸಲಿ.

ಗ್ರಾಮಕೈಗಾರಿಕೆಗಳನ್ನು ಕುರಿತು ಮಾತನಾಡುತ್ತ ಶ್ರೀ. ಜಿ. ಸೀತಾ ರಾಮ ಶಾಸ್ತ್ರಿಗಳು ಗ್ರಾಮ ಕೈಗಾರಿಕೆಗಳಲ್ಲಿ ತೊಡಗಿರುವ ಕೆಲಸಗಾರರಿಗೆ ಮತ್ತು ಕುಶಲ ಕರ್ಮಿಗಳಿಗೆ ಬೇಕಾದ ಉಪಕರಣಗಳು ಸುಲಭವಾಗಿ ದೊರೆಯಬೇಕೆಂದು ಹೇಳಿದರು. ಏನೆಂ ಸುಬ್ರಹ್ಮಣ್ಯಂ ರವರು ಗ್ರಾಮ ಕೈಗಾರಿಕೆಗಳ ಮೂಲಕ ಭಾರತವು ತನ್ನ ಹಿಂದಲ ವೈಭವವನ್ನು ಏರುವು ದೆಂದರು.

೩ ಆರ್ಥಿಕ ಸಮಾನತೆ

ಆರ್ಥಿಕ ಸಮಾನತೆಯನ್ನು ಕುರಿತು ಗಾಂಧಿ ಬೋಧೆ ಇದು "ಆರ್ಥಿಕ ಸಮಾನತೆ, ಅಹಿಂಸಾ ಸ್ವರಾಜ್ಯದ ಅಡಿಗಲ್ಲು. ಆರ್ಥಿಕ ಸಮಾನತೆಗಾಗಿ

ಕೆಲಸ ಮಾಡುವುದೆಂದರೆ ಬಂಡವಾಳಕ್ಕೂ ಕೂಲಿಗೂ ಇರುವ ಹೋರಾಟ ವನ್ನು ಶಾಶ್ವತವಾಗಿ ನಾಶಗೊಳಿಸುವುದು. ದೇಶದ ಐಶ್ವರ್ಯವನ್ನೆಲ್ಲಾ ಕೈಯಲ್ಲಿಟ್ಟುಕೊಂಡಿರುವ ಕೆಲವರಿಂದ ಆ ಐಶ್ವರ್ಯವನ್ನು ಬಿಡಿಸುವುದು, ಅರೆ ಬೆತ್ತಲೆಯ ಈ ನಲವತ್ತು ಕೋಟಿ ಜನರಿಗೆ ಅನ್ನ ಬಟ್ಟೆ ಒದಗಿಸಿ ಅವರನ್ನು ಸಮಾನತೆಗೆ ತರುವುದು, ಹಸಿದಿರುವ ಅನೇಕ ಕೋಟಿ ಜನ ನಮ್ಮಲ್ಲಿರುವ ವರೆಗೆ, ಧನಿಕರಿಗೂ ಬಡವರಿಗೂ ಅಂತರ ಇರುವ ವರೆಗೆ, ಅಹಿಂಸೆಯಿಂದ ಸ್ವರಾಜ್ಯಸಾಧನೆ ಸಾಧ್ಯವಿಲ್ಲ. ಹೊಸ ದಿಲ್ಲಿಯ ಅರಮನೆಗಳಿಗೂ ಅದರ ಸುತ್ತಲ ಗುಡಿಸಲುಗಳಿಗೂ ಇರುವ ಅಂತರ ಅಜಗಜಾಂತರ. ಸ್ವತಂತ್ರ ಭಾರತದಲ್ಲಿ ಈ ಬಗೆಯ ವ್ಯತ್ಯಾಸಗಳು ಇರಲಾರವು. ಸ್ವತಂತ್ರ ಭಾರತದಲ್ಲಿ ಅತಿ ಬಡವರೂ ಕೂಡ ಅತಿ ಧನಿಕರಷ್ಟೇ ಸುಖಿಗಳಾಗಿರುತ್ತಾರೆ. ಧನಿಕರು ತಮ್ಮ ಐಶ್ವರ್ಯವನ್ನೂ, ಆ ಐಶ್ವರ್ಯದಿಂದ ತಮಗೆ ದೊರಕುವ ಅಧಿಕಾರದರ್ಪಗಳನ್ನೂ ಜನಸಾಮಾನ್ಯರ ಹಿತಕ್ಕಾಗಿ ತಾವಾಗಿಯೇ ಬಿಟ್ಟು ಕೊಡಬೇಕು. ಇಲ್ಲದಿದ್ದರೆ ರಕ್ತಕ್ರಾಂತಿಯಾಗುವುದು ಸತ್ಯ.

ಧನಿಕರು ದೇಶದ ಐಶ್ವರ್ಯದ ಟ್ರಸ್ಟಿ ಎಂಬ ತತ್ವಕ್ಕೆ ನಾನು ಇನ್ನೂ ಗಂಟುಬಿದ್ದಿದ್ದೇನೆ. ಆ ತತ್ವ ಬಹಳ ಹಾಸ್ಯಕ್ಕೂ ವಿಡಂಬನೆಗೂ ಈಡಾಗಿದೆ, ಈ ಗುರಿಯನ್ನು ಮುಟ್ಟುವುದು ಕಷ್ಟ. ಅಹಿಂಸೆಯೂ ಹಾಗೆಯೇ ಕಷ್ಟ ಆದರೆ ಅಹಿಂಸೆಯ ಕಡಿದಾದ ಎತ್ತರವಾದ ಮೆಟ್ಟಲುಗಳನ್ನು ಹತ್ತುವೆವೆಂದು ನಾವು ೧೯೨೦ರಲ್ಲಿ ತೀರ್ಮಾನಿಸಿದೆವು. ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿದೆ ಅಹಿಂಸೆ ದಿನದಿನಕ್ಕೂ ಹೆಚ್ಚು ಪರಿಣಾಮಕಾರಿಯಾಗು ತ್ತಿರುವುದು ನಮಗೆ ಕಾಣುತ್ತಿದೆ. ಅಹಿಂಸೆಯ ಆದಿ ಅಂತ್ಯಗಳನ್ನು ಕಾಂಗ್ರೆಸ್ಸಿಗರು ಚೆನ್ನಾಗಿ ವಿಮರ್ಶಿಸಬೇಕು. ಈ ಆರ್ಥಿಕ ಏರು ಪೇರು ಗಳನ್ನು ಹಿಂಸೆಯಿಂದ ಪರಿಹರಿಸಬಹುದೇ ಅಹಿಂಸೆಯಿಂದಲೇ ಎಂಬುದನ್ನು ಯೋಚಿಸಬೇಕು. ಹಿಂಸಾಮಾರ್ಗ ನಮಗೆ ಗೊತ್ತು. ಇತರ ಕಡೆ ಅದಕ್ಕೆ ಜಯವಾಗಿಲ್ಲ.

ನಮ್ಮ ಅಹಿಂಸಾ ಪ್ರಯೋಗ ಇನ್ನೂ ನಡೆಯುತ್ತಲೇ ಇದೆ. ಪ್ರದರ್ಶಿಸುವಂತಹ ಫಲ ನಮಗೆ ಇನ್ನೂ ಏನೂ ಹೆಚ್ಚಾಗಿ ದೊರೆತಿಲ್ಲ. ಸಮತೆಗಾಗಿ ಅಹಿಂಸಾ ಮಾರ್ಗದಿಂದ ನಿಧಾನವಾಗಿ ಕೆಲಸ ನಡೆಯುತ್ತಿದೆ

ಎಂಬುದು ನಿಶ್ಚಯ. ಅಹಿಂಸೆಯು ಮನಸ್ಸನ್ನು ಬದಲಾಯಿಸುವ ಪ್ರಯೋಗವಾದುದರಿಂದ, ಬದಲಾವಣೆ ಸಾಧ್ಯವಾದರೆ, ಶಾಶ್ವತವಾಗಿರಬೇಕು. ಅಹಿಂಸೆಯ ಆಧಾರದಿಂದ ನಿಂತಿರುವ ಸಮಾಜ ಅಥವ ದೇಶವು, ತನ್ನನ್ನು ಹೊರಗಿನವರು ಎದುರಿಸಿದರೂ ತಡೆಯಬೇಕು. ಒಳಗಿನವರು ಎದುರಿಸಿದರೂ ತಡೆಯಬೇಕು ಕಾಂಗ್ರೆಸ್ ಸಂಸ್ಥೆಯಲ್ಲಿ ಧನಿಕರೂ ಇದ್ದಾರೆ. ಅವರು ಮಾರ್ಗದರ್ಶಕರಾಗಬೇಕು ಪ್ರತಿ ಕಾಂಗ್ರೆಸ್ ಸದಸ್ಯರೂ ತಮ್ಮ ಹೃದಯಗಳನ್ನು ತಾವೇ ಸ್ಪಷ್ಟವಾಗಿ ಹುಡುಕಬೇಕು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಸಮತೆಯುಂಟಾಗಬೇಕಾದರೆ ಅದಕ್ಕೆ ತಳಹದಿ ಈಗಲೇ ಬೀಳಬೇಕು. ಸ್ವರಾಜ್ಯವು ಬಂದನಂತರ, ಮುಖ್ಯವಾದ ಸುಧಾರಣೆಗಳನ್ನು ಮಾಡಿಕೊಳ್ಳುವೆವೆನ್ನುವವರು ಅಹಿಂಸಾ ಸ್ವರಾಜ್ಯದ ಮೂಲ ತತ್ವಗಳನ್ನೇ ತಿಳಿದಿಲ್ಲ. ಸ್ವರಾಜ್ಯವು ಒಂದು ಸುಖವಾದ ಪ್ರಾತಃಕಾಲ. ಇದ್ದಕ್ಕಿದ್ದಂತೆ ಅಂತರಕ್ಷದಿಂದ ಬೀಳುವುದಿಲ್ಲ ಈ ಸ್ವರಾಜ್ಯ ಕಟ್ಟಡವನ್ನು ಎಲ್ಲರೂ ಸೇರಿ ಇಟ್ಟಿಗೆ ಇಟ್ಟಿಗೆಯಾಗಿ ಕಟ್ಟಬೇಕಾಗಿದೆ ಆ ಮಾರ್ಗದಲ್ಲಿ ನಾವು ಸುಮಾರು ದೂರನಾಗಿದ್ದೇವೆ. ಆದರೆ ಸ್ವರಾಜ್ಯವನ್ನು ಅದರ ವೈಭವ ರೂಪದಲ್ಲಿ ಕಾಣಬೇಕಾದರೆ ನಾವು ಇನ್ನೂ ಬಹಳ ದೂರ ಕಷ್ಟವಾದ ದಾರಿಯನ್ನು ದಾಟಬೇಕಾಗಿದೆ ಆರ್ಥಿಕ ಸಮಾನತೆಗಾಗಿ ತಾನು ಮಾಡಿರುವುದೇನು ಎಂದು ಪ್ರತಿಯೊಬ್ಬ ಕಾಂಗ್ರೆಸ್ಸಿನವರೂ ತಮ್ಮನ್ನು ತಾವು ಕೇಳಿಕೊಳ್ಳಬೇಕಾಗಿದೆ.

ರಾಜೇಂದ್ರ ಬಾಬು: – ಇಂದಿನ ಸಮಾಜದಲ್ಲಿ ಆರ್ಥಿಕ ಅಂತರ ಬಹಳವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಕೆಲವು ದೇಶಗಳು ಉಳಿದ ದೇಶಗಳಿಗಿಂತ ಧನಿಕವಾಗಿವೆ ಅಷ್ಟೇ ಅಲ್ಲ. ಒಂದೇ ದೇಶದಲ್ಲಿಯೇ ಒಂದು ಪಂಗಡ ಮತ್ತೊಂದು ಪಂಗಡಕ್ಕಿಂತ ತುಂಬ ಧನಿಕವಾಗಿದೆ. ಒಬ್ಬ ವ್ಯಕ್ತಿಗೂ ಮತ್ತೊಬ್ಬ ವ್ಯಕ್ತಿಗೂ ಬಹಳ ಆರ್ಥಿಕ ಅಂತರವಿದೆ. ಇಂಗ್ಲೆಂಡು ಮತ್ತು ಅಮೇರಿಕ ದೇಶಗಳು ಭಾರತಕ್ಕಿಂತ ಬಹಳ ಧನಿಕವಾಗಿವೆ. ಭಾರತೀಯರ ಸರಾಸರಿ ಉತ್ಪನ್ನ ವರುಷಕ್ಕೆ ೫೦ ರೂಪಾಯಿ ಎನ್ನಬಹುದು. ಇಂಗ್ಲಿಷಿನವರ ಉತ್ಪನ್ನ ವರುಷಕ್ಕೆ ೧೪೦೦ ರೂ. ಇದೆ ಅಮೆರಿಕದವರದು ೩೦೦೦ ರೂ. ಇದೆ. ಆ ದೇಶಗಳಲ್ಲಿ ಕೂಡ ಕೋಟ್ಯಾಧಿಪತಿಗಳು ಇದ್ದಾರೆ. ನಿರುದ್ಯೋಗಿಗಳಾಗಿ ಸರ್ಕಾರದ ಭಿಕ್ಷದಿಂದ ಜೀವಿಸುವ

ಬಡಪಾಯಿಗಳೂ ಇದ್ದಾರೆ. ನಮ್ಮ ದೇಶದಲ್ಲಿ ಒಂದೇ ಸ್ಥಳದಲ್ಲಿ ಒಂದು ಕಡೆ ಅರಮನೆಯೂ ಮತ್ತೊಂದು ಕಡೆ ಹುಲ್ಲು ಗುಡಿಸಲೂ ಇದೆ. ನಮ್ಮ ದೇಶ ಒಂದರಲ್ಲಿಯೇ ಅರಮನೆಗಳಿಗಿಂತ ಗುಡಿಸಲುಗಳ ಸಂಖೆ ಹೆಚ್ಚು. ಭಯಂಕರವಾದ ಯುದ್ಧಗಳು (ಇಂದಿನ ಮಹಾಯುದ್ಧ) ನಡೆಯುತ್ತಿರುವುದೆಲ್ಲ ಇಂದು, ಎಲ್ಲಾ ದೇಶಗಳಿಗೂ ಹೆಚ್ಚು ಹೆಚ್ಚು ರಾಜ್ಯವೂ ಐಶ್ವರ್ಯವೂ ಬೇಕೆಂದು ಪೈಪೋಟಿ ಬಿದ್ದಿರುವುದರಿಂದಲೇ ಸಮಾಜದ ತಳಹದಿ ಈಗ ಇರುವಂತೆ ಇರುವ ವರೆಗೆ, ಜನರ ಮನೋಭಾವ ಬದಲಾಯಿಸದಿರುವ ವರೆಗೆ ಇದು ಹೀಗೆಯೇ. ಭೂಮಿಯಲ್ಲಿ ಶಾಂತಿಯೂ ಸುಖವೂ ಸ್ಥಾಪನೆಯಾಗಬೇಕಾದರೆ ಈಗ ಇರುವ ಈ ಅಂತರ ನಿರ್ಮೂಲವಾಗಬೇಕು. ಈ ಗುರಿಯನ್ನು ಮುಟ್ಟಲು ಹಿಂಸಾಮಯ ಕ್ರಾಂತಿಯ ಪ್ರಯತ್ನಗಳು ನಡೆದಿವೆ. ಈ ಬದಲಾವಣೆಗಳನ್ನು ಉಂಟುಮಾಡಿದ ಹಿಂಸೆಯ ಶಕ್ತಿಗಳು ಮರೆಯಾದರೆ ಬದಲಾವಣೆಗಳು ಉಳಿಯುತ್ತವೆಯೇ ಎಂಬುದನ್ನು ಇನ್ನೂ ನೋಡಬೇಕು. ಶಾಶ್ವತವಾದ ಸಮತೆ ಹೊರಗಿನ ಬಲಾತ್ಕಾರದಿಂದ ಬರುವುದಲ್ಲ. ಸಂಪಾದಿಸಬೇಕೆಂಬ, ಕೂಡಿಸಬೇಕೆಂಬ ದುರಾಸೆಯನ್ನು ಮನುಷ್ಯ ತಾನಾಗಿಯೇ ಬಿಡುವುದರಿಂದ ಅದು ಉಂಟಾಗುತ್ತದೆ. ಬಾಳನ್ನು ಈ ಹೊಸ ಬೆಳಕಿನಲ್ಲಿ ನೋಡಬೇಕಾದರೆ, ಅದಕ್ಕೆ ತಕ್ಕ ತಯಾರಿ ತೆಗೆದುಕೊಳ್ಳಬೇಕು. ರಾಷ್ಟ್ರ ಪೂರ್ತಿಯಾಗಿ ಈ ಪ್ರಯತ್ನದಲ್ಲಿ ತೊಡಗಿದರೆ, ಬಹಳ ಕಷ್ಟದ ಪ್ರಯತ್ನವಾದರೂ ಜಯವಾಗುವುದು. ಆದರೆ ಈ ಬಗೆಯ ಮನೋಭಾವ ಅಹಿಂಸೆಯ ಮೇಲೆ ಅವಲಂಬಿಸಿರುವ ಸಮಾಜದಲ್ಲಿ ಮಾತ್ರ ಸಾಧ್ಯ. ಮನುಷ್ಯರೆಲ್ಲರ ಸ್ವಭಾವವೂ ಒಂದೇ ಸಮನಲ್ಲ. ಎಲ್ಲರಿಗೂ ಒಂದೇ ಸಮನಾದ ಬುದ್ಧಿ ಶಕ್ತಿ ದಕ್ಷತೆ ಇರುವುದಿಲ್ಲ. ಇಂದಿನ ಸಮಾಜದಲ್ಲಿ ಈ ಅಂತರ ಬಹಳ ಹೆಚ್ಚು ಕಾಣುತ್ತದೆ. ಹುಟ್ಟು ವಿದ್ಯೆ ಸಂಪಾದನೆ ಇವುಗಳ ಹಿರಿಮೆ ಕಿರಿಮೆಗಳು ನಮ್ಮ ಸಮಾಜದಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಹಿಂಸಾಶಕ್ತಿಯಿಂದ ಕೃತಕವಾದ ಸಾಮಾಜಿಕ ವ್ಯತ್ಯಾಸಗಳನ್ನು ತೊಡೆದು ಹಾಕಬಹುದು ಆದರೆ ಹಿಂಸೆ ಬೇರೆ ಬೇರೆ ವ್ಯಕ್ತಿಗಳ ಸ್ವಭಾವವನ್ನು ಒಂದು ಸಮ ಮಾಡಲಾರದು. ಮನುಷ್ಯ ತನ್ನಲ್ಲಿರುವ ಶಕ್ತಿಗಳನ್ನು ತನ್ನ ಸ್ವಂತಕ್ಕೆ ಬೇಕಾದರೂ ಉಪಯೋಗಿಸಬಹುದು. ಸಮಾಜದ ಏಳಿಗೆಗೆ ಬೇಕಾದರೂ ಉಪಯೋಗಿಸ

ಬಹುದು. ಹಿಂಸೆಯ ಆಧಾರದಿಂದ ನಿರ್ಮಿತವಾದ ಸಮಾಜ, ವ್ಯಕ್ತಿಯ ಶಕ್ತಿಗಳನ್ನು ವ್ಯಕ್ತಿಯ ದೊಡ್ಡಸ್ತಿಕೆಯ ಬೆಳವಣಿಗೆಗಾಗಿಯಾಗಲಿ, ಒಂದು ಸಂಗಡ ಅಥವ ಒಂದು ದೇಶದ ಏಳಿಗೆಗಾಗಿಯಾಗಲಿ ಉಪಯೋಗಿಸಿಕೊಳ್ಳುವುದು. ಅಹಿಂಸೆಯ ಮೇಲೆ ಅವಲಂಬಿಸಿರುವ ಸಮಾಜದಲ್ಲಿ ವ್ಯಕ್ತಿಯ ಶಕ್ತಿಗಳು ದೇಶದ ಏಳಿಗೆಗೆ ಉಪಯೋಗವಾಗುವುವು.—ಆದರೆ—ಅಂತಹ ಸಮಾಜವು ಇನ್ನೂ ಸ್ಥಾಪನೆಯಾಗಿಲ್ಲ. ಈಗ ಇರುವ ಅಸಮಾನತೆಗಳನ್ನು ಕಡಿಮೆ ಮಾಡಬೇಕು. ಅಹಿಂಸಾ ಮಾರ್ಗದಿಂದ ಕೊನೆಯಲ್ಲಿ ಅವನ್ನು ಪೂರ್ಣವಾಗಿ ಹೋಗಲಾಡಿಸಬೇಕು. ಇದನ್ನು ಸಾಧಿಸುವುದು ಹೇಗೆ?

ವ್ಯಕ್ತಿಗಳು ಈ ತತ್ವದ ಆಚರಣೆಯನ್ನು ಪ್ರಾರಂಭಿಸಿ ಉಳಿದವರಿಗೆ ಮೇಲು ಪಂಕ್ತಿಗಳಾಗಬೇಕು. ನಮ್ಮ ಆರೋಗ್ಯವೂ ಸುಖವೂ ನಮ್ಮ ಐಶ್ವರ್ಯದ ಮೇಲೆ ಅವಲಂಬಿಸಿರುವುದೆಂಬ ಹುಚ್ಚು ನಂಬಿಕೆಯನ್ನು ನಾವು ಬಿಡಬೇಕು. ನಮ್ಮ ಆವಶ್ಯಕತೆಗಳಿಗಾಗಿ ಎಷ್ಟು ಕಡಿಮೆಯೋ ಅಷ್ಟನ್ನು ಮಾತ್ರ ವೆಚ್ಚಮಾಡಿ ಉಳಿದುದಕ್ಕೆ ನಾವು ಟ್ರಸ್ಟಿಗಳಾಗಿರಬೇಕಾದುದು ನಮ್ಮ ಧರ್ಮ, ಕರ್ತವ್ಯವೆಂಬುದನ್ನು ನಾವು ಅರಿಯಬೇಕು. ಸರಳವಾಗಿ ಜೀವಿಸುವುದು ಮಹತ್ತಾದುದನ್ನು ಯೋಚಿಸುವುದು ಇವು ಮನುಷ್ಯನನ್ನು ಉನ್ನತಿಗೆ ಒಯ್ಯುತ್ತವೆ. ಸಮಾನತೆಯನ್ನುಂಟುಮಾಡುವ ಈ ತತ್ವ, ತೃಪ್ತವಾದ ಸರಳ ಜೀವನ, ಕೆಲಸಗಾರರಲ್ಲಿ ನಿಧಾನವಾಗಿ ಹರಡುತ್ತದೆ. ಹುಟ್ಟು ಮತ್ತು ಆಸ್ತಿಗಳಿಗೆ ಸಮಾಜದಲ್ಲಿ ದೊರೆಯುವ ಗೌರವ ನಾಶವಾಗಿ ಆ ಸ್ಥಾನವನ್ನು ಯೋಗ್ಯತೆ ಮತ್ತು ಸೇವೆ ಆಕ್ರಮಿಸುವುದು. ನಮ್ಮ ಧ್ಯೇಯ ಸಾಧನೆಗೆ ಸರ್ಕಾರವೂ ಸಹಾಯವಾಗಬಹುದು. ಆರ್ಥಿಕ ಅಂತರವನ್ನು ಕಡಿಮೆಮಾಡುವ ತೆರಿಗೆಗಳನ್ನು ಸರ್ಕಾರ ವಿಧಿಸಬಹುದು. ಆದರೆ ಅಹಿಂಸೆಯ ಸಮಾಜದಲ್ಲಿ ಸರ್ಕಾರಕ್ಕೆ ಕೆಲಸವೇ ಇಲ್ಲ. ನಮ್ಮ ದೇಶದಲ್ಲಿ ನಾವು ಇನ್ನೂ ಯಜಮಾನರಲ್ಲ. ಆದುದರಿಂದ ನಾವು ನಮ್ಮ ಸ್ವಂತ ಇಚ್ಛೆಯಿಂದ ಮಾಡುವುದನ್ನು ಮಾಡಬಹುದು. ಬಂಡವಾಳಗಾರರೂ ಕಾರ್ಖಾನೆಯ ಯಜಮಾನರೂ ಕೂಲಿಗಳಿಗೆ ಹೆಚ್ಚು ಕೂಲಿ ಕೊಡಬಹುದು. ಅಂದರೆ ಕೂಲಿಗೆ ಒಳ್ಳೆಯ ಆಹಾರ, ಬಟ್ಟೆಗಳು, ಮನೆ, ಮಕ್ಕಳ ವಿದ್ಯೆ, ವ್ಯಾಯಾಮ, ವಿನೋದ, ಸಂಸ್ಕೃತಿಯ ಬೆಳವಣಿಗೆ ಇವುಗಳಿಗೆ ಸಾಕಾಗು

ವಷ್ಟು ಕೂಲಿ ಕೊಡಬಹುದು. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಲಾಭವನ್ನು ಕೂಲಿಗಳಿಗೂ ಹಂಚಬಹುದು. ಲಾಭದಲ್ಲಿ ತಮ್ಮ ವೆಚ್ಚಕ್ಕೆ ಬೇಕಾದುದನ್ನು ಇಟ್ಟುಕೊಂಡು ಉಳಿದುದನ್ನು ದೇಶದ ಕಾರ್ಯಕ್ಕೆ ಕೊಡಬಹುದು. ಜಮೀನುದಾರರು ರೈತರನ್ನು ನ್ಯಾಯದಿಂದ ಧರ್ಮದಿಂದ ನಡೆಸಿಕೊಳ್ಳಬೇಕು. ಹೆಚ್ಚಾಗಿ ಬಂದ ಆದಾಯವನ್ನು ರೈತರ ಆವಶ್ಯಕತೆಗಳಿಗೆ ಖರ್ಚುಮಾಡಬೇಕು. ವೈದ್ಯರಿಗೂ ವಕೀಲರಿಗೂ ಇದೇ ಅನ್ವಯಿಸುತ್ತದೆ. ಶಕ್ತಿಯಿರುವವರೆಲ್ಲಾ ತಮ್ಮ ಹೆಚ್ಚಾದ ಆದಾಯವನ್ನು ದೇಶದ ಜನರ ಹಿತಕ್ಕಾಗಿ ಒಟ್ಟುಗೂಡಿಸಿದರೆ ದೇಶದ ಸರ್ವಸಮಾನತೆಗೆ ಅವರು ಬಹಳ ಒಳ್ಳೆಯ ಪ್ರಯತ್ನದ ಪ್ರಾರಂಭ ಮಾಡಿದಂತಾಗುತ್ತದೆ. ಧನಿಕರು ಮುಖ್ಯವಾಗಿ ತಮ್ಮ ಖರ್ಚುಗಳನ್ನು ಕಡಿಮೆಮಾಡಬೇಕು. ಆದರ್ಶ ಸಮಾಜದಲ್ಲಿ ಕೂಲಿ ಸುಖವಾಗಿರಲು ಎಷ್ಟು ವೆಚ್ಚಮಾಡುತ್ತಾನೆಯೋ ಅಷ್ಟರ ಮಟ್ಟಕ್ಕೆ ಧನಿಕರು ತಮ್ಮ ವೆಚ್ಚವನ್ನು ತರಬೇಕು."

ಶ್ರೀ. ಜಿ. ರಾಮಚಂದ್ರನ್‌ರವರು ಆರ್ಥಿಕ ಸಮತೆಯನ್ನು ಕುರಿತು ಹೇಳಿದರು. ಕೆಲಸಗಾರರಲ್ಲಿ ಈ ವಿಚಾರದಲ್ಲಿ ಬಹಳ ಚರ್ಚೆಯಾಯಿತು. ಗಾಂಧಿಯವರು ಧನಿಕರ ಪರ ಎಂಬ ಯುವಕರ ವಾದವೂ ಬಹಳ ದಪ್ಪ ಧ್ವನಿಯಲ್ಲಿ ಎದ್ದಿತು, ಧನಿಕರ ಜೀವನದಲ್ಲಿ ಗಾಂಧಿಯವರ ಪ್ರಭಾವದಿಂದ ಆಗಿರುವ ಬದಲಾವಣೆಗಳು ಧನಿಕರಿಗೇ ಗೊತ್ತು. ಗಾಂಧಿಯವರಿಗೇ ಗೊತ್ತು. ಒಂದು ಸಲ ಬಿರ್ಲಾರವರನ್ನು ಕುರಿತು ಮಾತನಾಡುತ್ತಾ ಗಾಂಧಿಜಿ "ಅವರ ಜೀವನದಲ್ಲಿ ನನ್ನ ಸಂಪರ್ಕದಿಂದ ಅದ್ಭುತ ಬದಲಾವಣೆಯಾಗಿದೆ. ಅದು ನನಗೆ ಗೊತ್ತು. ಅದು ಅವರವರ ಹೃದಯಕ್ಕೂ ಆತ್ಮಕ್ಕೂ ಸಂಬಂಧಿಸಿದುದು" ಎಂದು ಹೇಳಿದ್ದಾರೆ.

ಆ ಮಧ್ಯಾಹ್ನ ಗಾಂಧಿಯವರು ರಚನಾತ್ಮಕ ಕೆಲಸಗಾರರ ಪ್ರಶ್ನೆಗಳಿಗೆ, ಸಂದೇಹಗಳಿಗೆ ಉತ್ತರ ಕೊಟ್ಟರು. ಗಾಂಧಿಯವರು ಮೊದಲು ಖಾದಿಯನ್ನು ಕುರಿತ ಪ್ರಶ್ನೆಗೆ ಉತ್ತರ ಕೊಟ್ಟರು "ಖಾದಿ, ಭಾರತ, ಅಹಿಂಸಾ ಸ್ವರಾಜ್ಯದ ಅಡಿಗಲ್ಲು. ನನ್ನ ಗುರಿಯಲ್ಲಿ ಸ್ವರಾಜ್ಯಕ್ಕೂ ಖಾದಿಗೂ ಯಾವಾಗಲೂ ನಿಕಟ ಸಂಬಂಧ. ಹೆಚ್ಚು ಹೆಚ್ಚು ಖಾದಿ ತಯಾರಾದಂತೆ ಸ್ವರಾಜ್ಯ ಹೆಚ್ಚು ಹತ್ತಿರವಾಗುವುದು. ನನ್ನ ಸ್ವರಾಜ್ಯ ಕಾರ್ಯಕ್ರಮದಲ್ಲಿ

ದೇಹಶ್ರಮ ಮುಖ್ಯ. ಬಡವರೂ ಧನಿಕರೂ ದೇಹಶ್ರಮ ಪಡಲೇಬೇಕು. ನೂಲುವುದು. ಶ್ಲಾಘ್ಯವಾದ ದೇಹಶ್ರಮ. ಇದರಿಂದ ಬಡವರು ಸ್ವಾವಲಂಬಿಗಳಾಗುವರು. ಚರಕವೇ ಅಹಿಂಸೆಯ ಗುರುತು. ಅನವಶ್ಯವಾದ ಒಣ ಚರ್ಚೆಗಳಲ್ಲಿ ಕಾಲಕಳೆಯಬೇಡಿ. ರಚನಾತ್ಮಕ ಕಾರ್ಯದ ಮುಖ್ಯ ಭಾಗವಾದ ಖಾದಿಯನ್ನು ತಯಾರಿಸಿ."

ಗಾಂಧಿಯವರು ಮತ್ತೊಂದು ಪ್ರಶ್ನೆಗೆ ಉತ್ತರ ಕೊಟ್ಟರು. "ಬಡವರ ಸಂಪಾದನೆಯಲ್ಲಿ ಶೇಕಡ ೮೦ ಆಹಾರಕ್ಕೆ ಹೋಗುತ್ತದೆ. ಹೀಗಿರುವಾಗ ಬಟ್ಟೆಗೆ ಶೇಕಡ ೧೨ ಕ್ಕಿಂತ ಹೆಚ್ಚು ಉಳಿಯುವುದಿಲ್ಲ. ಖಾದಿ ಧರಿಸುವುದು ಹೇಗೆ" ಎಂಬುದಕ್ಕೆ "ಖಾದಿಗೆ ದುಡ್ಡು ಸ್ವಲ್ಪ ಹೆಚ್ಚಾದರೂ ಚಿಂತೆಯಿಲ್ಲ. ಖಾದಿ ಇಂದಿಲ್ಲ ನಾಳೆ ಜಗತ್ತಿನ ಸಂದೇಶವಾಗುತ್ತದೆ. ಭಾರತದ ೪೦ ಕೋಟಿಯೂ ಇದರ ಪ್ರಭಾವಕ್ಕೆ ಒಳಗಾಗುತ್ತಾರೆ" ಎಂದರು. ಆರ್ಥಿಕ ಸಮಾನತೆಯನ್ನು ಕುರಿತು ಪ್ರಶ್ನೆ ಕೇಳಿದಾಗ ಗಾಂಧಿಯವರು "ಎಲ್ಲರೂ ಸಮಾನರಾಗಿರುವುದು ಸಾಧ್ಯವಿಲ್ಲ. ಕೆಲವರಿಗೆ ಆಹಾರ ಹೆಚ್ಚಾಗಿ ಬೇಕಾಗಬಹುದು. ಕೆಲವರಿಗೆ ಛಳಿಗಾಲದಲ್ಲಿ ಬೆಚ್ಚಗಿರುವ ಬಟ್ಟೆ ಹೆಚ್ಚಾಗಿ ಬೇಕಾಗಬಹುದು. ಸಮಾನತೆ ಎಂದರೆ ಅವರವರಿಗೆ ಅವರವರ ಆವಶ್ಯಕತೆಗೆ ಅನುಸಾರವಾಗಿ ಎಂದು ಅರ್ಥಮಾಡಬೇಕು. ನನ್ನ ಆರ್ಥಿಕ ವ್ಯವಸ್ಥೆಯಲ್ಲಿ ಧನಿಕರು ಧನಿಕರಾಗುತ್ತಾ ಹೋಗುತ್ತಿರುವುದೂ ಬಡವರು ಬಡವರಾಗುತ್ತಲೇ ಹೋಗುತ್ತಿರುವುದೂ ಸಾಧ್ಯವಿಲ್ಲ" ಎಂದರು.

ರಷ್ಯದ, ಲೆನಿನ್ ಮಾರ್ಕ್ಸ್, ಸ್ಟಾಲಿನ್‌ರ ಹೆಣಗಳನ್ನು ಹೊತ್ತುಕೊಂಡು ತಿರುಗುತ್ತಿರುವ ತೀವ್ರ ಸಮತಾವಾದಿ, ಸಮಷ್ಟಿವಾದಿಗಳಿಗಿಂತ ಗಾಂಧಿಯವರು ಹೆಚ್ಚು ಸಮತಾವಾದಿಗಳು. ಗಾಂಧಿಯವರು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದಂದಿನಿಂದ ಹೀಗೆಯೇ ಇದ್ದಾರೆ. ಈ ಆರ್ಥಿಕ ಸಮಾನತೆ ಅಹಿಂಸೆಯಿಂದ ಉಂಟಾಗಬೇಕೆಂಬುದೇ ಅವರಿಗೂ ರಷ್ಯಾದವರಿಗೂ ಇರುವ ವ್ಯತ್ಯಾಸ. ಗಾಂಧಿಯವರ ಮನಸ್ಸು ಇವತ್ತಿಗೂ ಬೆಳೆಯುತ್ತಲೇ ಇದೆ. ಈಗಲೂ ಅವರು ಸಮತಾವಾದ ಸಮಷ್ಟಿವಾದ ಗ್ರಂಥಗಳನ್ನು ವ್ಯಾಸಂಗ ಮಾಡುತ್ತಿದ್ದಾರೆ. ೧೯೪೨ರ ಸೆರೆವಾಸದಲ್ಲಿಯೂ ಅವರು ಆಗಾಖಾನ್ ಅರಮನೆಯಲ್ಲಿ ಮಾರ್ಕ್ಸ್, ಸ್ಟಾಲಿನ್, ಲೆನಿನ್‌ರ ಗ್ರಂಥಗಳನ್ನು

ಓದಿದರು. ಗಾಂಧಿಯವರ ಸಮತಾವಾದದ ತಿರುಳು ಇದು ಎನ್ನಬಹುದು. "ಎಲ್ಲರಿಂದಲೂ ಅವರವರ ಶಕ್ತ್ಯಾನುಸಾರ ತೆಗೆದುಕೋ. ಆವಶ್ಯಕತೆಗಳಿಗನುಸಾರ ಕೊಡು" ಗಾಂಧಿಯವರ ಸಂಸ್ಥೆಗಳೂ ಆಶ್ರಮಗಳೂ ಈ ಧ್ಯೇಯದಿಂದಲೇ ಕೆಲಸಮಾಡುತ್ತಿವೆ. ಸೇವಾಗ್ರಾಮದ ಆಶ್ರಮದಲ್ಲಿ ಕೆಲಸ ನಡೆಯುತ್ತಿರುವುದು ಈ ಧ್ಯೇಯದಿಂದಲೇ. ಹಳ್ಳಿಯವರು ಬೇಕು ಎಂದುದರಿಂದ ಆ ಆಶ್ರಮ ಅಲ್ಲಿದೆ. ಒಂದು ಉದಾಹರಣೆ ಕೇಳಿ. ಒಬ್ಬ ದುರಾಶೆಯವನು, ಆಶ್ರಮದ ಕೆಲವು ಮರಗಳನ್ನು ಕಡಿದು ಸೌದೆಗೆ ಉಪಯೋಗಿಸಿದ. ಆ ಮರಗಳ ಮೇಲೆ ಅವನಿಗೇನೂ ಹಕ್ಕು ಇರಲಿಲ್ಲ ಇನ್ನೊಬ್ಬನ ಜಮೀನಿಗೆ ಮೊದಲೇ ಹಣ ಕೊಟ್ಟು ಆಶ್ರಮಕ್ಕೆ ಬಿಡಿಸಿಕೊಂಡಿದ್ದರೂ ಅದರಲ್ಲಿ ತಿರುಗುವ ದಾರಿ ಮಾಡಕೊಂಡ. ಆಶ್ರಮದವರು ಕೋರ್ಟು ಕಚೇರಿಗೆ ಹೋಗಲಿಲ್ಲ. ಒಂದು ಪ್ರಕಟನೆ ಹೊರಡಿಸಿದರು. "ನಾವು ಇಲ್ಲಿರುವುದು ಹಳ್ಳಿಯವರ ಸೇವೆಗಾಗಿ. ನಮ್ಮ ಸೇವೆ ನಿಮಗೆ ಬೇಡವಾದರೆ ಬೇರೆ ಕಡೆಗೆ ಹೋಗುತ್ತೇವೆ" ಎಂದು. ಕೊನೆಯಲ್ಲಿ ಹಳ್ಳಿಯವರೇ ಆ ಇಬ್ಬರಿಗೂ ಬೋಧಿಸಿ ಸರಿಮಾಡಿದರು. ಸಾಬರಮತಿ ಆಶ್ರಮದಲ್ಲಿ ಸ್ತ್ರೀಯರು ತಮ್ಮ ಪಾಕಶಾಲೆಯನ್ನು ಆಶ್ರಮ ಪಾಕಶಾಲೆಯಾಗಿ ಮಾಡಿದರು ಎಲ್ಲರ ಮಕ್ಕಳನ್ನೂ ತಾವು ಸಾಕುತ್ತಿದ್ದುದಲ್ಲದೆ ತಮ್ಮ ಮಕ್ಕಳನ್ನು ಇತರರೊಂದಿಗೆ ಬೆಳೆಯಲು ಬಿಟ್ಟರು. ಹೀಗೆ ಇಲ್ಲಿ ಸ್ತ್ರೀಯರು ಸ್ವತಂತ್ರರೇ ಆದರು. ಆದರೆ ಸಂಸಾರದ ಕಟ್ಟು ಸಡಿಲವಾಗಲಿಲ್ಲ ಹೀಗೆಯೇ ಹಿಂದುಸ್ಥಾನಿ ತಾಲ್ಮಿ ಸಂಘದಲ್ಲಿ ನೂರಕ್ಕಿಂತ ಹೆಚ್ಚು ಜನ ಊಟಮಾಡುತ್ತಿದ್ದಾರೆ. ಒಬ್ಬ ಮಿತ್ರರು ಅಲ್ಲಿ ಊಟಮಾಡಿದನಂತರ ನಗುತ್ತಾ "ಗಾಂಧಿಜಿ ಇದನ್ನು ರಸೋಇ (ಪಾಕಶಾಲೆ) ಎನ್ನುತ್ತಾರೆ. ಕಮ್ಯುನಿಸ್ಟರು ಇದನ್ನು ಕಮ್ಯೂನ್ ಎಂದು ಬಿಡುತ್ತಿದ್ದರು. ಕಮ್ಯೂನ್ ಎಂಬ ಹೆಸರು ಕೇಳಿ ಎಲ್ಲರೂ ಬಾಯಿ ಬಿಡುತ್ತಿದ್ದರು." ಎಂದರು.

ರಚನಾತ್ಮಕ ಕೆಲಸಗಾರರ ಸಭೆಯಲ್ಲಿ ಗಾಂಧಿಯವರನ್ನು ಆರ್ಥಿಕ ಸಮತೆ ಎಂಬ ನಿಮ್ಮ ಮಾತಿಗೆ ಸರಿಯಾದ ಅರ್ಥವೇನು ಎಂದು ಕೇಳಿದರು ಗಾಂಧಿ ಹೀಗೆ ಹೇಳಿದರು "ಆರ್ಥಿಕ ಸಮಾನತೆ ಎಂದರೆ ಎಲ್ಲರಿಗೂ ಒಂದೇ ಸಮನಾದ ಹಣ ಇರಬೇಕೆಂದಲ್ಲ. ಆವಶ್ಯಕವಿದ್ದಷ್ಟು ದೊರಕಬೇಕು.

ಉದಾಹರಣೆಗೆ ನನಗೆ ಛಳಿಯಲ್ಲಿ ಎರಡು ಶಾಲು ಬೇಕು. ಆದರೆ ನನಗೆ ಮಗನೋಪಾದಿಯಲ್ಲಿರುವ ಕನೂ ಗಾಂಧಿಗೆ ಬೆಚ್ಚಗಿರುವ ಬಟ್ಟೆಯೇ ಬೇಕಿಲ್ಲ. ನನಗೆ ಆಡಿನ ಹಾಲು ಹಣ್ಣು ಬೇಕು. ಕನುವಿಗೆ ಸಾಧಾರಣ ಆಹಾರವೇ ಸಾಕು. ಕನುವನ್ನು ಕಂಡು ನನಗೆ ಹೊಟ್ಟೆಗಿಚ್ಚು ಸಹ ಆಗುತ್ತಿದೆ ಆದರೆ ಇಲ್ಲಿ ಅದು ಮುಖ್ಯವಿಷಯವಲ್ಲ. ಕನು ಇನ್ನೂ ಯುವಕ. ನಾನು ೭೬ರ ಮುದುಕ. ನನ್ನ ಆಹಾರದ ವೆಚ್ಚ ಕನುವಿನ ಆಹಾರದ ವೆಚ್ಚಕ್ಕಿಂತ ಹೆಚ್ಚು. ಹಾಗೆಂದ ಮಾತ್ರಕ್ಕೆ ಕನುವಿಗೂ ನನಗೂ ಆರ್ಥಿಕ ಸಮಾನತೆ ಇಲ್ಲವೆಂದಲ್ಲ. ಆನೆಗೆ ಇರುವೆಯ ಸಾವಿರದಷ್ಟು ಆಹಾರಬೇಕು. ಆದರೆ ಇದು ಅಸಮಾನತೆಯಲ್ಲ. ಅವರವರಿಗೆ ಬೇಕಾದಷ್ಟು ಇದು ಮಾರ್ಕ್ಸನ ತತ್ವವೇ. ಒಂಟಿಯಾದ ಮನುಷ್ಯ, ಹೆಂಡತಿ ಮತ್ತು ನಾಲ್ಕು ಮಕ್ಕಳಿರುವವ ನಷ್ಟು ತೆಗೆದುಕೊಂಡರೆ ಅದು ಆರ್ಥಿಕ ಅಸಮಾನತೆಯಾಗುವುದು

"ಧನಿಕರಿಗೂ ಬಡವರಿಗೂ ರಾಜರಿಗೂ ತಿರುಕರಿಗೂ ಇರುವ ವ್ಯತ್ಯಾಸ ಸರಿ ಎಂದು ಯಾರೂ ಹೇಳದಿರಿ. ರಾಜರಿಗೆ ಹೆಚ್ಚಾಗಿ ಬೇಕಾ ದುದರಿಂದ ಅದು ಅವರ ಆವಶ್ಯಕತೆ ಎನ್ನಬೇಡಿ. ಇದು ಸತ್ಯದ ಅಪಪ್ರಚಾರ, ನನ್ನ ಅಭಿಪ್ರಾಯದ ಪೂರ್ಣವಿರೋಧ. ಇಂದು ಬಡವರಿಗೂ ಧನಿಕರಿಗೂ ಇರುವ ವ್ಯತ್ಯಾಸ ಕಣ್ಣು ಘೋರ. ಹಳ್ಳಿಯವರನ್ನು ಪರಕೀಯ ಸರ್ಕಾರವೂ ಲೂಟಿ ಮಾಡುತ್ತಿದೆ. ಪಟ್ಟಣಿಗರಾದ ನಮ್ಮವರೂ ಲೂಟಿ ಮಾಡುತ್ತಾರೆ. ಹಳ್ಳಿಯವರು ಆಹಾರವನ್ನು ಬೆಳೆಯುತ್ತಾರೆ ಆದರೆ ಹಸಿದುಕೊಂಡಿರು ತ್ತಾರೆ. ಹಳ್ಳಿಯವರು ಹಾಲನ್ನು ಉತ್ಪತ್ತಿಮಾಡುತ್ತಾರೆ ಆದರೆ ಅವರ ಮಕ್ಕಳಿಗೆ ಹಾಲಿಗೆ ಗತಿಯಿಲ್ಲ. ಇದು ನಾಚಿಕೆಗೇಡು. ಎಲ್ಲರಿಗೂ ಪುಷ್ಟಿ ಯಾದ ಆಹಾರ ಒಳ್ಳೆಯ ಮನೆ, ಮಕ್ಕಳಿಗೆ ವಿದ್ಯೆ, ವೈದ್ಯ ಸಹಾಯ ಇರಬೇಕು. ಧನಿಕರು ಆವಶ್ಯಕತೆಗಿಂತ ಹೆಚ್ಚಾದವುಗಳನ್ನೆಲ್ಲಾ ಬಹಿಷ್ಕರಿಸಿ ಎಂದು ನಾನು ಹೇಳುವುದಿಲ್ಲ. ಆದರೆ ಬಡವರ ಆವಶ್ಯಕತೆಗಳು ಪೂರೈಸಿದ ನಂತರ ಇವು ಆಗಬೇಕು. ಯಾವುದು ಮೊದಲು ಆಗಬೇಕೊ ಅದು ಮೊದಲು ಆಗಬೇಕು.

"ಇಂದಿನ ಧನಿಕರು ತಮ್ಮ ಐಶ್ವರ್ಯವನ್ನು ತಾವಾಗಿಯೇ ಬಿಟ್ಟು ವಿಶ್ವಸ್ತ (ಟ್ರಸ್ಟಿ)ಗಳಾಗಬೇಕು. ಇಲ್ಲವಾದರೆ ಪಂಗಡಗಳ ಕಲಹವುಂಟಾ

ಗುತ್ತದೆ. ಅವರು ಈ ಐಶ್ವರ್ಯದ ಮೇಲು ವಿಚಾರಕರಾಗಿ, ತಮ್ಮ ಶಕ್ತಿಯನ್ನು ಉಪಯೋಗಿಸಿ ಇದನ್ನು ವೃದ್ಧಿ ಮಾಡಬಹುದು. ಆದರೆ ಆ ಲಾಭ ರಾಷ್ಟ್ರಕ್ಕೆ ಹೊರತು ಅವರಿಗಲ್ಲ. ಅವರ ಸೇವೆಗೆ ಪ್ರತಿಫಲ ಏನೆಂಬುದನ್ನು ಸರ್ಕಾರ ನಿರ್ಣಯಿಸುತ್ತದೆ. ಅವರ ಮಕ್ಕಳು—ತಾವೂ ಅವರಂತೆಯೇ ಅರ್ಹರಾದರೆ—ವಿಶ್ವಸ್ತ (ಟ್ರಸ್ಟಿ)ಗಳಾಗಬಹುದು.

"ಭಾರತ ನಾಳೆ ಸ್ವತಂತ್ರವಾದರೆ, ಬಂಡವಾಳಗಾರರೆಲ್ಲ ಕಾನೂನಿಂದ ನಿಬದ್ಧಿತರಾದ ಟ್ರಸ್ಟಿಗಳಾಗುತ್ತಾರೆ ಈ ಕಾನೂನು ಮೇಲಿನಿಂದ ಬರುವುದಿಲ್ಲ. ಕೆಳಗಿನಿಂದ ಕೆಲಸ ಮಾಡುತ್ತದೆ. ಟ್ರಸ್ಟಿ ಎಂದರೆ ಏನೆಂಬುದು ಜನರಿಗೆ ಗೊತ್ತಾದ ಕೂಡಲೇ, ವಾತಾವರಣ ಸಿದ್ಧವಾದ ಕೂಡಲೇ ಜನರೇ ಗ್ರಾಮಪಂಚಾಯ್ತಿಯಿಂದ ಪ್ರಾರಂಭಿಸಿ ಇಂತಹ ಕಾನೂನನ್ನು ಮಾಡುತ್ತಾರೆ. ತಳದಿಂದ ಬಂದರೆ ಅದು ನುಂಗುವುದಕ್ಕೆ ಸುಲಭ. ಮೇಲಿನಿಂದ ಬಂದರೆ ಅದು ಸಹಿಸಲಸಾಧ್ಯವಾದ ಹೊರೆಯಾಗುತ್ತದೆ."

ಗಾಂಧಿಯವರಿಗೆ ಹಾಕಿದ ಮತ್ತೊಂದು ಪ್ರಶ್ನೆ ಈ ರೀತಿ ಇದ್ದಿತು. "ಆರ್ಥಿಕ ಸಮಾನತೆ" ನಿಮಗೂ ಬೇಕು. ಸಾಮ್ಯವಾದಿ, ಸಮಷ್ಟಿವಾದಿಗಳಿಗೂ ಬೇಕು ನಿಮ್ಮ ನಿಮ್ಮಲ್ಲಿ ವ್ಯತ್ಯಾಸಗಳಾವವು?

ಗಾಂಧಿಯವರ ಉತ್ತರ "ಸಮತಾವಾದಿಗಳೂ ಸಮಷ್ಟಿವಾದಿಗಳೂ, ಆರ್ಥಿಕ ಸಮಾನತೆಯುಂಟುಮಾಡಲು ಇವತ್ತು ಏನು ಮಾಡಲೂ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಅವರು ಆರ್ಥಿಕ ಸಮಾನತೆಗಾಗಿ ಪ್ರಚಾರ ಮಾಡುತ್ತಾರೆ. ಪರಸ್ಪರ ದ್ವೇಷ ಕ್ರೋಧ ಬೆಳೆಸುತ್ತಾರೆ. "ನಮಗೆ ಅಧಿಕಾರ ಬರಲಿ. ಸಮತೆಯನ್ನು ಬಲಾತ್ಕಾರವಾಗಿ ಮಾಡುತ್ತೇವೆ" ಎನ್ನುತ್ತಾರೆ ಅವರು. ನನ್ನ ಯೋಜನೆಗನುಸಾರವಾಗಿ ಸರ್ಕಾರ ಜನರ ಇಚ್ಛೆಯನ್ನು ನಡೆಸುವ ಸೇವಕನೇ ಹೊರತು, ಜನರ ಧಣಿಯಲ್ಲ. ನಾನು ಅಹಿಂಸೆಯಿಂದ ಸಮತೆಯನ್ನುಂಟು ಮಾಡುತ್ತೇನೆ. ಪ್ರೀತಿಯಿಂದ ಜನರ ಮನಸ್ಸನ್ನು ಬದಲಾಯಿಸಿ ಸಮತೆಯನ್ನುಂಟುಮಾಡುತ್ತೇನೆ. ಸಮಾಜವನ್ನೆಲ್ಲಾ ಹೀಗೆ ತಿದ್ದುವವರೆಗೆ ನಾನು ಕಾಯುವುದಿಲ್ಲ. ನನ್ನಿಂದಲೇ ನೇರವಾಗಿ ತತ್‌ಕ್ಷಣ ಪ್ರಾರಂಭಿಸುತ್ತೇನೆ. ನನ್ನಲ್ಲಿ ೫೦ ಮೋಟಾರುಕಾರು

ಗಳಾಗಲಿ ಹತ್ತು ಎಕರೆ ಜಮೀನಾಗಲಿ ಇದ್ದರೆ ನನ್ನ ಧ್ಯೇಯಕ್ಕೆ ಅನುಸಾರವಾದ ಆರ್ಥಿಕ ಸಮತೆ ಉಂಟುಮಾಡುವುದು ಸಾಧ್ಯವಿಲ್ಲ. ಎಂಬುದು ನನಗೆ ಗೊತ್ತು ಯಾಕೆಂದರೆ ನಾನು ಬಡವರಿಗಿಂತ ಬಡವನಾಗಬೇಕು ಹಾಗಾಗಲು ಕಳೆದ ಐವತ್ತು ವರುಷಗಳಿಂದ ನಾನು ಪ್ರಯತ್ನಿಸುತ್ತಿದ್ದೇನೆ. ಆದುದರಿಂದಲೇ ನನ್ನನ್ನು ನಾನು ಕಮ್ಯುನಿಸ್ಟ್ ಅಥವಾ ಸಮಷ್ಟಿವಾದಿ ಎಂದುಕೊಳ್ಳುವುದು. ಧನಿಕರು ಒದಗಿಸುವ ಮೋಟಾರು ಕಾರು ಮುಂತಾದುವನ್ನು ನಾನು ಉಪಯೋಗಿಸುತ್ತಿದ್ದರೂ ಆ ವಸ್ತುಗಳ ಬಂಧನ ನನಗೆ ಇಲ್ಲ. ಒಂದೇ ಗಳಿಗೆಯಲ್ಲಿ ಬೇಕಾದಾಗ ಸಾರ್ವಜನಿಕರ ಹಿತಕ್ಕೆ ಆವಶ್ಯಕವೆಂದು ತೋರಿದರೆ ಅವನ್ನೆಲ್ಲಾ ನಾನು ಬಿಡಬಲ್ಲೆ.

ಪ್ರಶ್ನೆ:— ಧನಿಕರು, ಬಡವರ ವಿಷಯದಲ್ಲಿ ನ್ಯಾಯವಾಗಿ "ನಡೆಯುವಂತೆ ಮಾಡುವುದರಲ್ಲಿ ಸತ್ಯಾಗ್ರಹದ ಸ್ಥಾನವೇನು? ಗಾಂಧಿಯವರ ಉತ್ತರ:— ಪರಕೀಯ ಸರ್ಕಾರಕ್ಕೆ ಎದುರಾಗಿ ಸತ್ಯಾಗ್ರಹಕ್ಕೆ ಯಾವ ಸ್ಥಾನವೋ ಇಲ್ಲಿಯೂ ಅದೇ ಸ್ಥಾನ. ಸತ್ಯಾಗ್ರಹದ ಉಪಯೋಗವನ್ನು ಸಂಸಾರದಿಂದ ಪ್ರಾರಂಭಿಸಿ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸಬಹುದು. ಜಮೀನ್‌ದಾರನೊಬ್ಬ ರೈತರನ್ನು ಹಿಂಸಿಸುತ್ತಾನೆಂದೂ ಯೋಚಿಸೋಣ. ರೈತರು ವಾದಿಸಿದರೆ ಜಮೀನ್‌ದಾರ ಒಪ್ಪುವುದಿಲ್ಲವೆಂದೂ ಹೆಂಡರು ಮಕ್ಕಳಿಗೆ ಅಷ್ಟು ಬೇಕು ಇಷ್ಟು ಬೇಕು ಎಂದು ಹೇಳುತ್ತಾನೆಂದೂ ಭಾವಿಸೋಣ. ರೈತರೂ, ರೈತರ ಮಿತ್ರರೂ ಜಮೀನ್‌ದಾರನನ್ನು ತಿದ್ದುವಂತೆ ಅವನ ಹೆಂಡತಿಯನ್ನು ಬೇಡುತ್ತಾರೆ ಆಕೆ, ಸಾಧಾರಣವಾಗಿ ನನ್ನ ಮಟ್ಟಿಗೆ ರೈತರಿಂದ ಅಪಹರಿಸಿದ ಈ ಹಣ ನನಗೆ ಬೇಡವೆನ್ನಬಹುದು. ಮಕ್ಕಳೂ ಸಹ ನಮಗೆ ಬೇಕಾದುದನ್ನು ನಾವು ಸಂಪಾದಿಸಿಕೊಳ್ಳುತ್ತೇವೆ" ಎನ್ನಬಹುದು.

ಅಥವಾ ಮುಂದೆ ಹೀಗೆಯೂ ಊಹಿಸೋಣ. ಜಮೀನ್‌ದಾರರ ಹೆಂಡತಿ ಮಕ್ಕಳ ಮಾತುಗಳನ್ನೂ ಕೇಳುವುದಿಲ್ಲ ರೈತರನ್ನು ಹಿಂಸಿಸಿಯೇ ಹಿಂಸಿಸುತ್ತಾನೆ ಆದರೆ ರೈತರು ಅದಕ್ಕೆ ಒಪ್ಪಕೂಡದು. ಜಮೀನನ್ನು ಬಿಡು ಎಂದರೆ ಬಿಡಬೇಕು. ಆದರೆ ಭೂಮಿ, ಉಳುವವನದು ಎಂಬುದನ್ನು

ಅವರು ಸ್ಪಷ್ಟಪಡಿಸಬೇಕು. ಜಮೀನ್‌ದಾರನು ತಾನೇ ಎಲ್ಲಾ ಭೂಮಿಗಳನ್ನೂ ಉಳುವುದು ಸಾಧ್ಯವಿಲ್ಲ. ಅವನು ರೈತರ ಬೇಡಿಕೆಗಳನ್ನು ಮನ್ನಿಸಬಹುದು. ಒಂದು ಪಕ್ಷ, ಬೇರೆ ರೈತರು ಬರುತ್ತಾರೆಂದು ಭಾವಿಸೋಣ. ಆಗ ಅಹಿಂಸಾಯುತವಾದ ಚಳವಳಿ ನಡೆಸಬೇಕು. ಹೊಸ ರೈತರು ಹಳೆಯ ರೈತರೊಡನೆ ಸಹಾನುಭೂತಿಯುಳ್ಳವರಾಗುವ ವರೆಗೆ ಚಳುವಳಿ ನಡೆಸಬೇಕು. ಹೀಗೆ ಸತ್ಯಾಗ್ರಹವು ಸಾರ್ವಜನಿಕ ಅಭಿಪ್ರಾಯವನ್ನು ಪರಿಷ್ಕಾರಗೊಳಿಸುವ ಒಂದು ಕ್ರಮ. ಇದರ ವ್ಯಾಪ್ತಿ ಜೀವನದ ಎಲ್ಲಾ ಅಂಗಗಳಲ್ಲಿಯೂ ಉಂಟು. ಕೊನೆಯಲ್ಲಿ ಇದೇ ಅಜೇಯವಾಗುತ್ತದೆ. ಹಿಂಸಾಮಾರ್ಗದಿಂದ ಈ ಕ್ರಮಕ್ಕೆ ಲೋಪಬರುತ್ತದೆ. ಸಮಾಜದ ಈ ಶಾಂತವಾದ ಕ್ರಾಂತಿ, ಹಿಂಸೆಯಿಂದ ಅಡ್ಡದಾರಿ ಹಿಡಿಯುತ್ತದೆ

ಸತ್ಯಾಗ್ರಹ ಜಯಿಸಬೇಕಾದರೆ ಮೂರು ನಿಯಮಗಳನ್ನು ಪಾಲಿಸಬೇಕು. (೧) ಸತ್ಯಾಗ್ರಹಿಯ ಹೃದಯದಲ್ಲಿ ಎದುರಾಳಿಯ ಮೇಲೆ ದ್ವೇಷವಿರಬಾರದು. (೨) ಹೋರಾಟದ ಕಾರಣ ನಿಜವಾಗಿರಬೇಕು. ಅಲ್ಪವಾಗಿರಬಾರದು. (೩) ತನ್ನ ಧ್ಯೇಯಕ್ಕಾಗಿ ಕೊನೆಯವರೆಗೆ ಕಷ್ಟವನ್ನು ಅನುಭವಿಸಲು ಸತ್ಯಾಗ್ರಹಿ ಸಿದ್ಧನಾಗಿರಬೇಕು"

ಸೇವಾಗ್ರಾಮದ ರಚನಾತ್ಮಕ ಕಾರ್ಯಕ್ರಮ ಪ್ರದರ್ಶನ, ಗಾಂಧಿಯವರ ಮದರಾಸು ಯಾತ್ರೆಯ ಒಂದು ವಿಶೇಷ. ಪ್ರದರ್ಶನದ ಮಹಾದ್ವಾರ ಹಿಂದುಸ್ಥಾನದ ಗ್ರಾಮಕೈಗಾರಿಕೆಗಳ ಚಿತ್ರಗಳನ್ನೆಲ್ಲಾ ಒಳಗೊಂಡ ಕಲಾಕೃತಿ ಅದನ್ನು ರಾಜಾಜಿ ತೆರೆದರು. ಪ್ರದರ್ಶನದಲ್ಲಿ ಅಖಿಲ ಭಾರತ ಚರಖ ಸಂಘ, ಗ್ರಾಮೋದ್ಯೋಗಸಂಘ, ತಾಲ್ಮಿಸಂಘ ಮುಂತಾದ ಸಂಸ್ಥೆಗಳ ಕಾರ್ಯಕ್ರಮಗಳು ಸಜ್ಜುಗೊಳಿಸಲ್ಪಟ್ಟಿದ್ದವು. ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಶ್ರೀ. ಜೆ. ಸಿ. ಕುಮಾರಪ್ಪನವರು ಪ್ರದರ್ಶನದ ಪ್ರಾರಂಭ ಭಾಷಣ ಮಾಡಿದರು

ಕುಮಾರಪ್ಪನವರು ಗಾಂಧಿಜಿಗಿಂತ ಗೊಡ್ಡು ವೈದೀಕರು. ಅವರ ಭಾಷಣದ ಸಾರಾಂಶ ಹೀಗಿತ್ತು.

"ಅಣು ಬಾಂಬಿನ ಈ ಯುಗದಲ್ಲಿ ಜಗತ್ತು ದಿನದಿನಕ್ಕೂ ಹೊಸ ಹೊಸ ಸಂಶೋಧನೆಗಳನ್ನು ಕಂಡುಹಿಡಿಯುತ್ತಿದೆ. ನಾಗರೀಕತೆಯ ಈ ಯುಗದಲ್ಲಿ ಈ ಓಬಿರಾಯನ ಕಾಲದ ಪ್ರದರ್ಶನ ನಾಗರೀಕತೆಯನ್ನು ಹಿಂದಕ್ಕೆ ಅಟ್ಟುವಂತೆ ಕೆಲವರಿಗೆ ಕಾಣಬಹುದು. ಆದರೆ ಇದು ನಿಜವೇ ? ನಾವು ನಾಗರೀಕತೆಯನ್ನು ಹಿಂದಕ್ಕೆ ತಳ್ಳುತ್ತಿದ್ದೇವೆಯೇ ಎಂಬುದನ್ನು ಎಲ್ಲರೂ ಸಾವಧಾನವಾಗಿ ಯೋಚಿಸಬೇಕು. ಈ ದೇಶ ಕಳೆದ ೧೦೦-೧೫೦ ವರುಷಗಳಿಂದ ತುಂಬ ಹೀನವಾಗಿಬಿಟ್ಟಿದೆ. ಗಾಂಧಿಯವರ ನೇತೃತ್ವದಲ್ಲಿ ನಾವು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದೇವೆ. ನನ್ನ ದೃಷ್ಟಿಯಲ್ಲಿ ಈ ಪ್ರದರ್ಶನದಲ್ಲಿ ಭವಿಷ್ಯದ ಮಂಗಳದಾಯಕ ಮೊಳಕೆಗಳಿವೆ. ಪಾಶ್ಚಾತ್ಯ ಕೈಗಾರಿಕೆಗಳ ಸಂಪರ್ಕದಿಂದ ಭಾರತದಲ್ಲಿ ಜೀವ, ನಿರ್ಜೀವವಾಗಿದೆ. ಇಂದು ನಮ್ಮ ಅದೃಷ್ಟದಿಂದ ಗಾಂಧಿಜಿ ನಮ್ಮ ನಡುವೆ ಇದ್ದಾರೆ. ರೋಗಿಗೆ ವೈದ್ಯ ದಾರಿ ತೋರಿಸುವಂತೆ ನಮಗೆ ದಾರಿ ತೋರಿಸುತ್ತಿದ್ದಾರೆ. ಅಣು ಬಾಂಬೂ ಅದು ಪ್ರತಿಪಾದಿಸುವ ನಾಗರೀಕತೆಯೂ ಕೊನೆಗೊಂಡಿದೆ ಎಂಬುದನ್ನು ತಿಳಿಯಿರಿ. ಈ ಪ್ರದರ್ಶನ ಸಂಯಮದ ಗುರುತು; ಇದು ತ್ಯಾಗ ನಿಷ್ಠೆಗಳ ಒಂದು ಸಂಕೇತ. ಇಲ್ಲಿ ಭೋಗದ ಸಾಮಗ್ರಿಗಳು ಇಲ್ಲ. ಈಗಿನ ನಾಗರೀಕತೆ ನಮ್ಮ ನಾಶ. ಇದರಿಂದ ಬೇರೆ ಕಡೆಗೆ ಮುಖ ತಿರುಗಿಸುವ ಕಾಲ ಬಂದಿದೆ.

"ಪಾಶ್ಚಾತ್ಯರು ಜನರ ಆವಶ್ಯಕತೆಗಳನ್ನು ಹೆಚ್ಚಿಸಿ ಆ ಆವಶ್ಯಕತೆಗಳನ್ನು ಆಧುನಿಕ ಮಾರ್ಗಗಳಿಂದ ಪೂರೈಸುತ್ತಿದ್ದಾರೆ. ಈ ಕ್ರಮ ಪಾಶ್ಚಾತ್ಯರಿಗೆ ಒಳ್ಳೆಯದಲ್ಲ, ಒಟ್ಟು ಜಗತ್ತಿಗೂ ಒಳ್ಳೆಯದಲ್ಲ. ಆದುದರಿಂದ ಈಗ ನಮ್ಮ ಒಳ್ಳೆಯದಕ್ಕೆ ಬೇರೆ ಕಡೆ ನೋಡಬೇಕಾಗಿದೆ. ಈ ಸಂದರ್ಭದಲ್ಲಿ, ಯುದ್ಧದಲ್ಲಿ ಜಯಶಾಲಿಗಳಾಗಿರುವ ನಮ್ಮ ಮಿತ್ರ ರಾಷ್ಟ್ರಗಳ ಆರ್ಥಿಕ ಸಮ್ಮೇಳನಗಳ ಕಡೆ ನೋಡಿ. ಈ ಆರ್ಥಿಕ ಸಮ್ಮೇಳನಗಳಲ್ಲಿ ನಡೆಯುವ ವ್ಯವಸ್ಥೆ ಬರಿಯ ಯಂತ್ರ ಕೈಗಾರಿಕೆ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವಂತಹುದು. ಇಂತಹ ಅಂತರ ರಾಷ್ಟ್ರಸಮ್ಮೇಳನಗಳು ಒಂದು ಬಗೆಯ ಫಿತೂರಿಗಾರರ ಗುಂಪಿನಂತೆ. ಆರ್ಥಿಕ ವ್ಯವಸ್ಥೆ ಸಂವಿಧಾನಗಳನ್ನು ಕೆಲವು ಪ್ರಮುಖ ರಾಷ್ಟ್ರಗಳ ಕೈಯಲ್ಲಿ ಕೊಡುವುದೇ ಈ ಬಗೆಯ ಸಮ್ಮೇಳನಗಳ ಗುರಿ. ಈ ರಾಷ್ಟ್ರಗಳು ಭಾರತದಂತಹ ದೇಶಗಳನ್ನು ಕೈಕಾಲು ಕಟ್ಟಿ

ನಿಲ್ಲಿಸಿವೆ. ಭಾರತ, ಅವರ ಕಾರ್ಖಾನೆಗಳಿಗಾಗಿ ಕಚ್ಚಾವಸ್ತುಗಳನ್ನು ತಯಾರಿಸಬೇಕಾಗಿದೆ. ಈ ಪ್ರದರ್ಶನದಲ್ಲಿ ನಾವು ಜನರಿಗೆ ಈ ಆರ್ಥಿಕ ಸಾಮ್ರಾಜ್ಯಕ್ಕೆ ವಿರುದ್ಧವಾಗಿ ಹೋರಾಡುವುದನ್ನು ತೋರಿಸುತ್ತಿದ್ದೇವೆ. ನಮ್ಮ ದೇಶದ ಕಚ್ಚಾವಸ್ತುಗಳನ್ನು ಇಲ್ಲೇ ತಯಾರಿಸಿ ನಮ್ಮ ಹಳ್ಳಿಗಳವರಿಗೆ ಅವನ್ನು ಕೊಡಬಹುದೆಂಬುದನ್ನು ತೋರಿಸುತ್ತಿದ್ದೇವೆ.

" ನಮ್ಮ ಅನೇಕ ಆವಶ್ಯಕತೆಗಳನ್ನು ನಾವು ನಮ್ಮ ದೇಶದಲ್ಲಿಯೇ ಪೂರೈಸಿಕೊಳ್ಳಬಹುದೆಂಬುದನ್ನು ಈ ಪ್ರದರ್ಶನ ನಮಗೆ ತೋರಿಸುವುದು. ಆದರೆ ಇದಕ್ಕೆ ಸತತವಾದ ಪ್ರಯತ್ನ ಬೇಕು. ನಾವು ಆ ಪ್ರಯತ್ನ ಮಾಡುತ್ತಾ ಹೋದರೆ ನಿರುದ್ಯೋಗ ನಿರ್ಮೂಲವಾಗುವುದು. ನಮ್ಮ ದೇಶದಿಂದ ಹೊರಕ್ಕೆ ಎಷ್ಟು ಹೆಚ್ಚು ಕಚ್ಚಾವಸ್ತುಗಳನ್ನು ರವಾನಿಸುತ್ತೇವೆಯೋ ಅಷ್ಟು ಹೆಚ್ಚಾಗಿ ನಿರುದ್ಯೋಗ ನಮ್ಮಲ್ಲಿಗೆ ಆಮದಾಗುತ್ತದೆ. ಪರದೇಶದ ಪದಾರ್ಥಗಳನ್ನು ಕೊಂಡಷ್ಟೂ ಪರದೇಶದ ಕೂಲಿಯನ್ನು ನಾವು ಉಪಯೋಗಿಸುತ್ತೇವೆ. ಇದು ನಿಮಗೆ ತಿಳಿದರೆ ಭಾರತದ ದಾರಿದ್ರ್ಯಕಾರಣ ತಿಳಿಯುವುದು. ಯಂತ್ರ ಸಾಮಗ್ರಿಗಳನ್ನು ಉಪಯೋಗಿಸುವವರು, ತಮ್ಮ ಕಾರ್ಯದಿಂದ ಯಂತ್ರಸಾಮಗ್ರಿಗಳಿಗೆ ಪ್ರಚಾರವಾಗುವುದು ಮಾತ್ರವಲ್ಲದೆ ದೇಶದ ದಾರಿದ್ರ್ಯ ಹೆಚ್ಚುವುದೆಂಬುದನ್ನು ತಿಳಿಯಬೇಕು. ಭಾರತವು ಸ್ವತಂತ್ರವಾಗಿ ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳಬೇಕಾದರೆ, ಭಾರತೀಯರು ಗ್ರಾಮೋದ್ಯೋಗಗಳನ್ನು ಅವಲಂಬಿಸಬೇಕು. ಇದಕ್ಕಾಗಿ ನಾವು ಕಷ್ಟಪಡಬೇಕಾಗಬಹುದು. ತ್ಯಾಗ ಮಾಡಬೇಕಾಗಬಹುದು. ಆದರೆ ತ್ಯಾಗವಿಲ್ಲದೆ ಏನೂ ಸಾಧ್ಯವಿಲ್ಲ. ಬ್ರಿಟಿಷರಿಂದ ಸ್ವತಂತ್ರರಾಗಬೇಕೆಂಬುದು ನಮ್ಮ ಇಚ್ಛೆ. ಆದರೆ ಸ್ವಾತಂತ್ರ್ಯ ಕೇಳಿದ ಮಾತ್ರಕ್ಕೆ ಮೇಲಿನಿಂದ ಬರುವುದೇ? ನಮಗೆ ಸ್ವಾತಂತ್ರ್ಯಬೇಕಾದರೆ ನಾವು ಪಾರತಂತ್ರದ ಕಾರಣಗಳನ್ನು ನಾಶಮಾಡಬೇಕು.

'ಬ್ರಿಟನ್ನು ಭಾರತವನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಯಾಕೆ ಇಷ್ಟು ಆತುರವಾಗಿದೆ ಗೊತ್ತೆ ? ಇದರ ಕಾರಣ ಕೇವಲ ಆರ್ಥಿಕ. ಬ್ರಿಟನ್ನಿನಲ್ಲಿ ದೊರೆಯುವುದು ಕಬ್ಬಿಣ, ಕಲ್ಲಿದ್ದಲು ಮಾತ್ರ. ಬ್ರಿಟನ್ನಿನ ಉಳಿವಿಗೆ ಅವು

ಮಾತ್ರ ಸಾಲವು. ಇವುಗಳಿಗೆ ಬೇರೆ ಪದಾರ್ಥಗಳು ಬರುವಂತೆ ಬ್ರಿಟನ್ ಮಾಡಿಕೊಳ್ಳಬೇಕಾಗಿದೆ ಕಬ್ಬಿಣ ಕಲ್ಲಿದ್ದಲುಗಳಿಂದ ಬೇರೆ ಪದಾರ್ಥಗಳನ್ನು ಸೃಷ್ಟಿಸಿ ಬ್ರಿಟನ್ನು ತನಗೆ ಬೇಕಾದ ಆಹಾರ ವಸ್ತುಗಳನ್ನೂ ತನ್ನ ಕಾರ್ಖಾನೆಗಳಿಗೆ ಬೇಕಾದ ಕಚ್ಚಾಮಾಲುಗಳನ್ನೂ ತರಿಸಬೇಕಾಗಿದೆ. ಭಾರತವನ್ನು ಗುಲಾಮಗಿರಿಯಲ್ಲಿ ಇಟ್ಟುಕೊಳ್ಳುವದರಿಂದ, ಭಾರತ ಬ್ರಿಟನ್ನು ಹೇಳಿದಂತೆ ಕೇಳುವುದು. ಅದು ಹಾಕಿದ ಬೆಲೆಗೆ ಅದರ ಪದಾರ್ಥಗಳನ್ನು ಕೊಂಡು, ಕಚ್ಚಾ ಮಾಲುಗಳನ್ನು ಒದಗಿಸುವುದು. ಭಾರತದ ಗುಲಾಮಗಿರಿಯ ರಹಸ್ಯ ಇದೆಯೆ. ಅತ್ಯಂತ ದುರ್ಬಲರಾದ ಭಾರತೀಯರೂ ಇದಕ್ಕೆ ಪ್ರತೀಕಾರ ಮಾಡಲು ಶಕ್ತರಾಗಿದ್ದಾರೆ. ಬ್ರಿಟಿಶರು ತಯಾರಿಸಿದ ಪದಾರ್ಥಗಳನ್ನು ನಾವು ಕೊಳ್ಳುವುದರಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬೆಳವಣಿಗೆಗೆ ನಾವು ಪೂರ್ಣವಾಗಿ ಸಹಾಯ ಮಾಡಿದಂತೆ ಆಗುತ್ತದೆ. ನಮ್ಮ ದೇಶದಿಂದ ಹೊರಗಡೆಗೆ ಕಚ್ಚಾಮಾಲುಗಳನ್ನು ಕಳುಹಿಸುವುದರಿಂದ, ನಾವು ಬ್ರಿಟಿಷ್ ಸಾಮ್ರಾಜ್ಯವನ್ನು ಬಲಪಡಿಸುವುದು ಮಾತ್ರವೇ ಅಲ್ಲ. ನಮ್ಮ ದೇಶದವರ ಉದ್ಯೋಗವನ್ನು ಅಪಹರಿಸಿ ನಮ್ಮ ದೇಶವನ್ನು ದರಿದ್ರವಾಗಿ ಮಾಡುತ್ತೇವೆ. ಹೀಗೆ ಎರಡು ಮಾರ್ಗದಿಂದಲೂ ನಾವು ಬ್ರಿಟಿಷರು ಭಾರತದಲ್ಲಿ ಮಾಡುವ ಲೂಟಿಗೆ ಸಹಾಯಕರಾಗುತ್ತೇವೆ. ಹೀಗೆ ನಮ್ಮ ಗುಲಾಮಗಿರಿಗೆ ನಾವೇ ಕಾರಣರಾಗುತ್ತೇವೆ.

“ಅತಿ ಮುಖ್ಯವಾದ ಕಚ್ಚಾಮಾಲುಗಳನ್ನು ರಫ್ತು ಮಾಡುವುದು; ಅತ್ಯವಶ್ಯಕವಾದ ಪದಾರ್ಥಗಳನ್ನು ತರಿಸುವುದು, ಈ ಆಸೆ ಬ್ರಿಟಿಷರನ್ನು ಮಾತ್ರವೇ ಅಲ್ಲ. ಇತರ ರಾಜ್ಯಗಳವರ ದುರಾಸೆಯನ್ನೂ ಕೆರಳಿಸುವುದು. ಆ ರಾಜ್ಯಗಳು ಅಸೂಯಾಪರರಾಗಿ ಯುದ್ಧ ಹೂಡುವರು. ಆದುದರಿಂದ ಪರದೇಶದ ಮಾಲುಗಳನ್ನು ಕೊಂಡು ಇಂತಹ ವ್ಯಾಪಾರದಲ್ಲಿ ನಾವು ಭಾಗಿಗಳಾದಾಗ, ಈ ದುರಾಶಾಭೂತ ಪೀಡಿತರು ಯುದ್ಧದಲ್ಲಿ ಹರಿಸುವ ರಕ್ತಪಾತಕ್ಕೂ ನಾವು ಜವಾಬ್ದಾರರಾಗುತ್ತೇವೆ.

“ಹೆಣವನ್ನು ತಿನ್ನಲು ರಣ ಹದ್ದುಗಳು ಮುತ್ತಿವರೆ, ಹದ್ದುಗಳು ಬಾರದಂತೆ ಮಾಡುವ ಸುಲಭೋಪಾಯ ಆ ಹೆಣವನ್ನು ಹೂಳುವುದೇ

ಆಗಿದೆ. ಅದನ್ನು ಬಿಟ್ಟು ದೊಣ್ಣೆಗಳಿಂದ ಹದ್ದುಗಳನ್ನು ಓಡಿಸಲು ಪ್ರಯತ್ನಿಸುವುದು ಪ್ರಯೋಜನವಿಲ್ಲ. ಪರದೇಶದವರು ಇಲ್ಲಿ ಮಾಡುವ ಈ ವ್ಯಾಪಾರವೇ ಆ ಹೆಣ. ನಮಗೆ ಸ್ವಾತಂತ್ರ್ಯ ಬೇಕಾದರೆ, ಅಂತರ ರಾಷ್ಟ್ರಗಳ ಯುದ್ಧ ಕಾರಣ ಇಲ್ಲವಾಗಬೇಕಾದರೆ, ಈ ಹೆಣವನ್ನು ಹೂಳಬೇಕು. ಪರದೇಶದ ಪದಾರ್ಥಗಳನ್ನು ಉಪಯೋಗಿಸುವವರು, ಆಮದು ಮಾಡುವವರು ಈ ಉಪಯೋಗ, ವ್ಯಾಪಾರಗಳನ್ನು ಬಿಟ್ಟರೆ ನಮಗೆ ಸ್ವರಾಜ್ಯ ಬರುವುದು. ರಾಷ್ಟ್ರಗಳಲ್ಲಿ ಮೈತ್ರಿಯುಂಟಾಗುವುದು. ಗ್ರಾಮೋದ್ಯೋಗಗಳು ಬರಿಯ ರಾಜಕೀಯ ಚಳುವಳಿಯಲ್ಲ. ಪ್ರತಿಯೊಬ್ಬ ಭಾರತೀಯನೂ ಭಾರತ ಸ್ವಾತಂತ್ರ್ಯಕ್ಕೆ ತನ್ನ ವ್ಯಕ್ತಿ ಕಾಣಿಕೆಯಾಗಿ, ಪರದೇಶದ ಪದಾರ್ಥಗಳನ್ನು ಉಪಯೋಗಿಸುವುದನ್ನು ನಿಲ್ಲಿಸಬೇಕು ಇದರಿಂದ ದುರ್ಬಲ ರಾಷ್ಟ್ರಗಳನ್ನು ಪ್ರಬಲ ರಾಷ್ಟ್ರಗಳು ಸುಲಿಯುವುದು ನಿಲ್ಲುವುದು. "ಭಾರತದಿಂದ ಬ್ರಿಟಿಶರೇ ತೊಲಗಿ ಎಂಬುದನ್ನು ಕಾರ್ಯಕಾರಿ ಮಾಡುವುದು ಈ ಮಾರ್ಗದಿಂದಲೇ."

ಕುಮಾರಪ್ಪನವರ ಭಾಷಣದ ನಂತರ ರಾಜಾಜಿ ಮಾತನಾಡಿದರು. "ಈ ಪ್ರದರ್ಶನ ಸುಮ್ಮನೆ ಕಣ್ಣಿಗೆ ಆನಂದವನ್ನುಂಟುಮಾಡುವುದಲ್ಲ. ಇಲ್ಲಿ ಕೆಲಸಗಾರರು ಕೈ ಚುರುಕಿನಿಂದ ಮಾಡಿರುವ ಕುಶಲತೆಯನ್ನು ನೋಡಬೇಕು. ಈ ಕೈಗಾರಿಕೆಗಳು ಹಳ್ಳಿಗಳಲ್ಲಿ ಪ್ರಚಾರವಾಗಬೇಕು. ರೈತನಿಗೆ ಹೆಚ್ಚು ಉದ್ಯೋಗ ದೊರೆಯಬೇಕು."

೪ ಮೂಲ ಶಿಕ್ಷಣ

ರಚನಾತ್ಮಕ ಕಾರ್ಯಕ್ರಮ ಕೆಲಸಗಾರರ ಸಮ್ಮೇಳನದ ಎರಡನೆಯ ದಿನ ಕಾಕಾ ಕಾಲೇಲ್ಕರ್ ಅಧ್ಯಕ್ಷರಾದರು "ಈ ದಿನ ವಿದ್ಯಾಭ್ಯಾಸ ಕ್ರಮ ನಿಸರ್ಗಕ್ಕೆ ತೀರ ವಿರೋಧವಾಗಿದೆ. ಕಿವಿಯಲ್ಲಿ ಕೇಳಿ ಕಣ್ಣಲ್ಲಿ ನೋಡಬೇಕು. ಈಗ ಕಣ್ಣಲ್ಲಿ ಕೇಳುತ್ತಾರೆ. ಇಂದಿನ ವಿದ್ಯಾಭ್ಯಾಸದ ಬೆಲೆ ಬಹಳ ಅಧಿಕ. ಈ ದರಿದ್ರರ ದೇಶದಲ್ಲಿ ವಿದ್ಯೆಗೆ ಇಷ್ಟು ಬೆಲೆಯಾದರೆ ನಮ್ಮ ಬಡವರೆಲ್ಲಾ ವಿದ್ಯಾವಂತರಾಗುವುದೆಲ್ಲಿ? ಅಕ್ಷರ ಪ್ರಚಾರ ಬೇರೆ. ಜ್ಞಾನ ಪ್ರಚಾರ ಬೇರೆ. ವಯಸ್ಕರ ವಿದ್ಯಾಭ್ಯಾಸದಲ್ಲಿ ಓದುವುದಕ್ಕೆ ಹೆಚ್ಚು

ಪ್ರಾಮುಖ್ಯತೆ ಕೊಡಬೇಡಿ. ನೋಡುವುದು ಕೇಳುವುದು ಕೈ ಕೆಲಸ ಇವು ಮುಖ್ಯವಾದುವು ಎಂದು ಹೇಳಿದರು. ನಯಿತಾಲಿಂ ಅಥವಾ ನೂತನ ಶಿಕ್ಷಣ ಗಾಂಧಿಯವರು ಭಾರತ ಶಿಕ್ಷಣದಲ್ಲಿ ತಂದಿರುವ ಕ್ರಾಂತಿ.

ಗಾಂಧಿಯವರು:— "ಇದು ಹೊಸ ವಿಷಯ. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರಿಗೆ ಇದರಲ್ಲಿ ಬಹಳ ಶ್ರದ್ಧೆ ಬಂದಿತು. ಆದುದರಿಂದ ಅವರು ಹಿಂದುಸ್ಥಾನಿ ತಾಲಿಮಿ ಸಂಘಕ್ಕೆ ಅನುಮತಿ ಕೊಟ್ಟರು. ಈ ವಿದ್ಯದಿಂದ ಹಳ್ಳಿಯ ಮಕ್ಕಳು ಆದರ್ಶ ಪ್ರಜೆಗಳಾಗುತ್ತಾರೆ. ಇದು ಮುಖ್ಯವಾಗಿ ಹಳ್ಳಿಯವರಿಗಾಗಿಯೇ. ಇದಕ್ಕೆ ಬೇಕಾದ ಸ್ಫೂರ್ತಿ ಹಳ್ಳಿಯಿಂದಲೇ ಉಂಟಾಗಿದೆ. ಸ್ವರಾಜ್ಯದ ತಳಹದಿಯನ್ನು ಪ್ರಾರಂಭದಿಂದ ಕಟ್ಟುವವರು ನಮ್ಮ ದೇಶದ ಮಕ್ಕಳನ್ನು ಉದಾಸೀನ ಮಾಡುವುದು ಸಾಧ್ಯವಿಲ್ಲ. ನಮ್ಮ ದೇಶದ ಪ್ರಾಥಮಿಕ ವಿದ್ಯಾಭ್ಯಾಸ ಒಂದು ನಕಲಿ. ಈ ವಿದ್ಯದಲ್ಲಿ ಹಳ್ಳಿಯವರ ಆವಶ್ಯಕತೆಗಳೂ ಇಲ್ಲ ಪಟ್ಟಣಿಗರ ಆವಶ್ಯಕತೆಗಳೂ ಇಲ್ಲ. ಹಳ್ಳಿಯ ಮಕ್ಕಳೇ ಆಗಲಿ ಪಟ್ಟಣದ ಮಕ್ಕಳೇ ಆಗಲಿ ಅವರಿಗೆ ಈ ನೂತನ ಶಿಕ್ಷಣವನ್ನು ಕೊಡುವುದರಿಂದ ಭಾರತದ ಅತ್ಯುತ್ಕೃಷ್ಟ ಸಂಸ್ಕೃತಿಯೊಂದಿಗೆ ಅವರಿಗೆ ಸಂಪರ್ಕ ಏರ್ಪಡುತ್ತದೆ. ಈ ನೂತನ ವಿದ್ಯೆ (ನಯಿತಾಲಿಮ್) ದೇಹವನ್ನೂ ಮನಸ್ಸನ್ನೂ ಬೆಳೆಸುತ್ತದೆ. ಮಕ್ಕಳು ನೆಲದಲ್ಲಿ ಬೇರು ಬಿಟ್ಟವರಾಗುತ್ತಾರೆ ಭೂಮಿಯ ಮಕ್ಕಳಾಗುತ್ತಾರೆ. ಶಿಕ್ಷಣದ ಪ್ರಾರಂಭದಿಂದಲೂ ತಾನು ಈ ದೇಶದ ಪ್ರಜೆ, ಈ ದೇಶದ ಭವಿಷ್ಯದಲ್ಲಿ ತನ್ನ ಭಾಗ ಮಂಗಳಕರವಾದುದು, ಎಂಬ ದಿವ್ಯದರ್ಶನ ಮಗುವಿಗೆ ಬಾಲ್ಯದಲ್ಲಿಯೇ ಉಂಟಾಗುತ್ತದೆ. ಕಾಂಗ್ರೆಸ್‌ನವರಿಗೆ ಈ ಕೆಲಸ ಒಳ್ಳೆಯ ಮನೋರಂಜಕವಾಗುತ್ತದೆ ಅವರಿಂದ ಪಾಠ ಕಲಿಯುವ ಮಕ್ಕಳಿಗೂ ಒಳ್ಳೆ ಲಾಭವಾಗುತ್ತದೆ. ಈ ಕೆಲಸದಲ್ಲಿ ಉತ್ಸಾಹವುಳ್ಳವರು ಕಾರ್ಯದರ್ಶಿ ನಯಿತಾಲಿಮ್ ಸೇವಾಗ್ರಾಮದೊಂದಿಗೆ ಸಂಪರ್ಕ ಇಟ್ಟುಕೊಳ್ಳಲಿ."

ರಾಜೇಂದ್ರ ಬಾಬು:—"ಗಾಂಧಿಯವರು ಈ ನೂತನ ಶಿಕ್ಷಣ ಪದ್ಧತಿಯನ್ನು ನಮಗೆ ಕೊಟ್ಟಿದ್ದಾರೆ. ಇದು ಭಾರತದ ಹಳ್ಳಿಗಳ ಸ್ಥಿತಿಗಳಿಗೆ ಅನುಗುಣವಾಗಿದೆ. ಸಂಕ್ಷೇಪವಾಗಿ ಇದು ಹೀಗೆ. ಈ ಹೊಸ ಶಿಕ್ಷಣ ನಮ್ಮ

ಹುಡುಗ ಹುಡುಗಿಯರಿಗೆ ಕಸಬಿನ ಮೂಲಕ ಶಿಕ್ಷಣ ಕೊಡುವುದಾಗಿದೆ. ಈ ಶಿಕ್ಷಣ ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಸೃಷ್ಟಿಶಕ್ತಿಯನ್ನು ಬೆಳೆಸುತ್ತದೆ. ವಿದ್ಯಾರ್ಥಿ ತನ್ನ ಕೈಕಾಲು ಕಣ್ಣುಗಳನ್ನು ಉಪಯೋಗಿಸಲು ಈ ವಿದ್ಯೆ ಕಲಿಸುತ್ತದೆ ಅದರ ಜತೆಗೆ ವಿದ್ಯಾರ್ಥಿಯ ಬುದ್ಧಿಯನ್ನೂ ಬೆಳೆಸುತ್ತದೆ. ನಿಪುಣರಾದವರು ಮಕ್ಕಳಿಗೆ ಪ್ರೇಮದಿಂದ ಶಿಕ್ಷಣಕೊಟ್ಟರೆ ಇದರಿಂದ ಮಗುವಿನ ಬುದ್ಧಿಯೂ ನೀತಿಯೂ ದೇಹವೂ ಈಗಿನ ಶಿಕ್ಷಣದಲ್ಲಿ ಆಗುವುದಕ್ಕಿಂತ ಹೆಚ್ಚು ಪೂರ್ಣವಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ಈ ಶಿಕ್ಷಣದಿಂದ ತಯಾರಾಗುವ ಪದಾರ್ಥಗಳನ್ನು ಅಲ್ಲಿಯೇ ಮಾರುವಂತೆ ಏರ್ಪಡಿಸುವುದು ಸರ್ಕಾರದ ಕರ್ತವ್ಯವಾದುದರಿಂದ ಇಂತಹ ಪಾಠಶಾಲೆಗಳು ಆತ್ಮಾವಲಂಬಿಗಳಾಗುವುವೆಂದು ಗಾಂಧಿಯವರು ಹೇಳುತ್ತಾರೆ. ಸಾರ್ವತ್ರಿಕ ಶಿಕ್ಷಣವು ಹಣವಿಲ್ಲದ್ದರಿಂದ ಸಾಧ್ಯವೇ ಇಲ್ಲ, ಆದರೆ ಈ ನಯಿತಾಲಿಮ್ ಈ ಎದುರಿಸಲಸಾಧ್ಯವಾದ ಕಷ್ಟವನ್ನೂ ಪರಿಹಾರಮಾಡುತ್ತದೆ. ಪ್ರಾರಂಭದಲ್ಲಿ ನೂಲುವುದನ್ನು ಶಿಕ್ಷಣದ ಕೈಗಾರಿಕೆಯಾಗಿ ತೆಗೆದುಕೊಳ್ಳಲಾಗಿದೆ. ಕಾರಣ ಈ ಕೈಗಾರಿಕೆ ಹಳ್ಳಿಗಳಿಗೆ ಅನುಗುಣವಾಗಿದೆ. ಇದರ ಜ್ಞಾನ ನಮ್ಮವರಿಗೆ ಚೆನ್ನಾಗಿದೆ. ಆದರೆ ಇದೊಂದೇ ಕೈಗಾರಿಕೆಯನ್ನು ತೆಗೆದುಕೊಳ್ಳಬೇಕೆಂಬ ನಿಯಮವಿಲ್ಲ. ಈ ಶಿಕ್ಷಣದಲ್ಲಿ ಕುತೂಹಲವುಳ್ಳವರು ಹಿಂದುಸ್ಥಾನಿ ತಾಲಿಮಿ ಸಂಘದವರು ಪ್ರಕಟಿಸಿರುವ ವರದಿಗಳನ್ನು ಓದಬೇಕು. ಸಂಘದ ಈಗಿನ ವರದಿಯಿಂದ ಕಷ್ಟಗಳು ಹೆಚ್ಚಾಗಿದ್ದರೂ ಫಲವು ಆಶಾದಾಯಕವಾಗಿರುವುದು ಕಾಣುತ್ತಿದೆ. ಶಿಕ್ಷಣವನ್ನು ಕೈ ಕೆಲಸದ ಮೂಲಕ ಕಲಿಸಬೇಕು. ಕೆಲಸ ಮಾಡುತ್ತಾ ಕಲಿಯಬೇಕು ಎಂಬ ತತ್ವವನ್ನು ಜಗತ್ತಿನ ವಿದ್ಯಾನಿಪುಣರೆಲ್ಲಾ ಒಪ್ಪಿದ್ದಾರೆ. ಭಾರತದಲ್ಲಿಯಂತೂ ಈ ಬಗೆಯ ಶಿಕ್ಷಣ ಇನ್ನೂ ಹೆಚ್ಚು ಅವಶ್ಯಕ. ಈ ಸಂವಿಧಾನವನ್ನು ಜಯಕಾರಿ ಮಾಡಲು ಚೆನ್ನಾಗಿ ತಯಾರಾದ ಶಿಕ್ಷಕ ಶಿಕ್ಷಕಿಯರು ಬೇಕಾಗಿದ್ದಾರೆ."

ಶ್ರೀ. ಜಿ. ರಾಮಚಂದ್ರನ್‌ರವರು ನಯಿತಾಲಿಮ್, ಗಾಂಧಿಯವರ ಕಾರ್ಯಕ್ರಮಗಳಲ್ಲೆಲ್ಲಾ ಅತ್ಯಂತ ಕ್ರಾಂತಿಕಾರಕವಾದುದೆಂದು ಹೇಳಿದರು. "ಸೇವಾಗ್ರಾಮದಲ್ಲಿ ಇದು ಜಯಶಾಲಿಯಾಗಿದೆ. ಹಿಂದಲ ಕಾಂಗ್ರೆಸ್ ಮಂತ್ರಿಮಂಡಲಗಳ ಕಾಲದಲ್ಲಿ ಎಲ್ಲೆಲ್ಲಿಯೂ ಮೂಲ ಶಿಕ್ಷಣ ಪ್ರಾರಂಭ

ವಾಯಿತು. ಈಗ ಅದು ಬೀಹಾರ್‌ನಲ್ಲಿ ಮಾತ್ರ ನಡೆಯುತ್ತಿದೆ. ಬೊಂಬಾಯಿನಲ್ಲಿಯೂ ಕೆಲವೆಡೆ ನಡೆಯುತ್ತಿದೆ. ಕಾಶ್ಮಿರ್‌ನಲ್ಲಿ ಅಲ್ಲಿನ ಹಿಂದಲ ದಿವಾನರು ಇನ್ನೂರು ಮೂಲ ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಿದ್ದುದು ನಡೆಯುತ್ತಿವೆ. ಓರಿಸ್ಸಾದಲ್ಲಿಯೂ ಕೆಲವು ಖಾಸಗೀ ಸಂಸ್ಥೆಗಳು ನಡಿಸುತ್ತಿವೆ.

೫ ವಯಸ್ಕರ ಶಿಕ್ಷಣ

ರಚನಾತ್ಮಕ ಕಾರ್ಯಕ್ರಮದ ಮುಂದಲ ಕಾರ್ಯ ವಯಸ್ಕರ ವಿದ್ಯಾಭ್ಯಾಸವನ್ನು ಕುರಿತು ಚರ್ಚೆಯಾಯಿತು. ಇದರಲ್ಲಿ ಮುಖ್ಯವಾಗಿ ಭಾಷಣ ಮಾಡಿದವರು ಶ್ರೀಮತಿ ಶಾಂತಾ ನೆರೂಳ್ಕರ್. ಇವರು ಒಳ್ಳೆ ವಿದ್ಯಾವಂತ ಮಹಿಳೆಯರು. ಪರರಾಷ್ಟ್ರಗಳಲ್ಲಿ ಸಂಚರಿಸಿ ಅನೇಕ ಅಂತರ ರಾಷ್ಟ್ರೀಯ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಪಡೆದು ಬಂದವರು. ಇವರು ತಮ್ಮ ಅನೇಕ ಅನುಭವಗಳೊಂದಿಗೆ ವಯಸ್ಕರ ವಿದ್ಯಾಭ್ಯಾಸ ಫಲಕಾರಿಯಾಗುವ ಕ್ರಮಗಳನ್ನು ಬೋಧಿಸಿದರು. ಮುಖ್ಯವಾಗಿ ಸ್ವಚ್ಛತೆಗೆ ಗಮನ ಕೊಡಬೇಕೆಂದರು. ದೇಹ, ವಾತಾವರಣ, ಹಳ್ಳಿ ಸಮಾಜ ಪದ್ಧತಿಗಳು ಇವುಗಳೆಲ್ಲಾ ಸ್ವಚ್ಛವಾಗಿರಬೇಕೆಂದರು. ವಯಸ್ಕರ ವಿದ್ಯಾಭ್ಯಾಸವನ್ನು ಕುರಿತು ಗಾಂಧಿಯವರು ಹೀಗೆ ಹೇಳಿದರು " ಕಾಂಗ್ರೆಸ್‌ನವರು ವಯಸ್ಕರ ವಿದ್ಯಾಭ್ಯಾಸವನ್ನು ಉದಾಸೀನ ಮಾಡಿದ್ದಾರೆ. ಉದಾಸೀನ ಮಾಡದ ಕಡೆ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದರಲ್ಲಿ ಮಾತ್ರ ತೃಪ್ತರಾಗಿದ್ದಾರೆ ವಯಸ್ಕರ ವಿದ್ಯಾಭ್ಯಾಸ, ನನ್ನ ಕೈಗೆ ಬಂದರೆ ವಿದ್ಯಾರ್ಥಿಗಳ ದೃಷ್ಟಿ ಈ ದೇಶದ ಘನತೆ ಮತ್ತು ಮಹತ್ವ ವೈಶಾಲ್ಯಗಳ ಕಡೆ ಹೋಗುವಂತೆ ಮಾಡುತ್ತೇನೆ. ಅವರ ಕಣ್ಣನ್ನು ದೇಶದ ವೈಭವದ ಕಡೆಗೆ ತಿರುಗಿಸುತ್ತೇನೆ. ಹಳ್ಳಿಯವನಿಗೆ ಭಾರತದೇಶವಿರುವದು ಹಳ್ಳಿಯಲ್ಲಿಯೇ. ಹಳ್ಳಿಯವರಿಗೆ ಇಲ್ಲಿರುವ ಪರದೇಶದ ಸರ್ಕಾರವೂ ಅವರ ದುಷ್ಫಲಗಳೂ ತಿಳಿದಿಲ್ಲ. ಅವರಿಗೆ ತಿಳಿದಿರುವ ಅಲ್ಪ ವಿಷಯಗಳಿಂದ ಪರದೇಶದವರನ್ನು ಕಂಡರೆ ದ್ವೇಷವುಂಟಾಗುತ್ತದೆ. ಈ ಭಯ ದ್ವೇಷಗಳಿಂದ ಹೇಗೆ ಬಿಡುಗಡೆ ಹೊಂದಬೇಕೆಂಬುದು ಅವನಿಗೆ ತಿಳಿಸುವುದು. ತಮ್ಮ ದೌರ್ಬಲ್ಯದಿಂದಲೇ ಅವರು ಇಲ್ಲಿರುವರೆಂಬುದು ಅವನಿಗೆ ತಿಳಿಯದು.

ಆದ:ದರಿಂದ ನನ್ನ ಅಭಿಪ್ರಾಯದಲ್ಲಿ ವಯಸ್ಕರ ವಿದ್ಯಾಭ್ಯಾಸವೆಂದರೆ ಬಾಯಿಂದ ಬೋಧಿಸುವ ನಿಜವಾದ ರಾಜಕಿಯ ವಿದ್ಯಾಭ್ಯಾಸ. ಇದನ್ನು ಸರಿಯಾಗಿ ವ್ಯವಸ್ಥೆಮಾಡಿ ನಿರ್ಭಯವಾಗಿ ಬೋಧಿಸಬೇಕು. ಇಂತಹ ಶಿಕ್ಷಣವನ್ನು ಅಧಿಕಾರಿಗಳು ವಿರೋಧಿಸುವ ಕಾಲ ಹೋಯಿತು. ಸರ್ಕಾರ ಇದನ್ನು ವಿರೋಧಿಸಿದರೆ ಈ ಮೂಲ ಭೂತ ಹಕ್ಕಿಗಾಗಿ ನಾವು ಹೋರಾಡ ಬೇಕು ಇದಿಲ್ಲದೆ ಸ್ವರಾಜ್ಯವಿಲ್ಲ ನಾವು ಮಾಡುವುದೆಲ್ಲಾ ಬಹಿರಂಗವಾಗಿ, ಗುಟ್ಟಿಲ್ಲ ಅಹಿಂಸೆಯ ಮಾರ್ಗದಲ್ಲಿ ಭಯವೂ ರಹಸ್ಯವೂ ಇಲ್ಲ ಇದರ ಜತೆಯಲ್ಲಿಯೇ ಅಕ್ಷರ ಜ್ಞಾನವನ್ನೂ ಬಾಯಲ್ಲಿ ಹೇಳಿ ಉಂಟುಮಾಡಬೇಕು. ಇದೇ ಒಂದು ನಿಪುಣತೆಯ ಕೆಲಸ. ವಿದ್ಯಾಭ್ಯಾಸ ಮಾಡಬೇಕಾದ ಕಾಲ ವನ್ನು ಕಡಿಮೆ ಮಾಡುವುದಕ್ಕಾಗಿ, ನನ್ನ ಮಾರ್ಗಗಳಲ್ಲಿ ಪ್ರಯೋಗ ನಡೆ ಯುತ್ತಿದೆ. ಇಲ್ಲಿ ವಿವರಿಸಿರುವ ಅಭಿಪ್ರಾಯಗಳನ್ನು ಕಾರ್ಯಕಾರಿಯಾಗಿ ಮಾಡಲು ವರ್ಕಿಂಗ್ ಕಮಿಟಿಯವರು ಹಂಗಾಮಿಯಾದ ಅಥವ ಖಾಯಂ ಆದ ಒಂದು ಸಂಸ್ಥೆಯನ್ನು ಏರ್ಪಡಿಸಬಹದು. ನಾನು ಇಲ್ಲಿ ಹೇಳಿರುವುದು ಬರಿಯ ಮಾರ್ಗದರ್ಶನ. ಈ ದಾರಿಯಲ್ಲಿ ಕಾಂಗ್ರೆಸ್ಸಿಗರು ಹೇಗೆ ಕೆಲಸ, ಮಾಡಬೇಕೆಂಬುದನ್ನು ನಾನು ಹೇಳಿಲ್ಲ. ಈ ಪರಿಶ್ರಮ ಸಾಧ್ಯವಾದ ಕೆಲಸ ಎಲ್ಲಾ ಕಾಂಗ್ರೆಂಸ್ಸಿನವರಿಗೂ ಸಾಧ್ಯವೂ ಅಲ್ಲ. ಆದರೆ ಶಿಕ್ಷಕರಾಗಿರುವ ಉಪಾಧ್ಯಾಯರಿಗೆ, ಈ ಸೂಚನೆಗೆ ಅನುಸಾರವಾಗಿ ಪಾಠಕ್ರಮವನ್ನು ಏರ್ಪಡಿಸಿಕೊಳ್ಳುವುದರಲ್ಲಿ ಕಷ್ಟವಾಗುವುದಿಲ್ಲ.

ರಾಜೇಂದ್ರ ಬಾಬು: – ಭಾರತದಲ್ಲಿ ನೂರಕ್ಕೆ ೭–೮ ಜನ ಅಕ್ಷರಸ್ಥ ರಾಗಿರುವುದು ನಮ್ಮ ದೌರ್ಭಾಗ್ಯ. ಬರಿಯ ಅಕ್ಷರ ಜ್ಞಾನವನ್ನು ವಿದ್ಯೆ ಎಂದು ಹೇಳಲು ಸಾಧ್ಯವಿಲ್ಲ. ಅನಕ್ಷರಸ್ಥರೂ ಸುಸಂಸ್ಕೃತರಾಗಿರಬಹುದು. ಆದರೆ ಅಕ್ಷರ ಜ್ಞಾನದಿಂದ ಇತರರ ಭಾವನೆಗಳು ನಮಗೆ ತಿಳಿಯುವು ವೆಂಬುದು ನಿರ್ವಿವಾದ. ವಯಸ್ಕರ ವಿದ್ಯಾಭ್ಯಾಸವೆಂದರೆ ಬರಿಯ ಓದುವುದು ಬರಿಯುವುದು ಮಾತ್ರವಲ್ಲ. ಆವಶ್ಯಕವಾದ ಸಾಮಾನ್ಯ ಜ್ಞಾನವೂ ವಿದ್ಯೆಯೂ ಅದರಲ್ಲಿ ಅಡಕವಾಗಿರಬೇಕು

ಪ್ರತಿಯೊಬ್ಬ ಕೆಲಸಗಾರನೂ ತನ್ನ ನೆರೆಹೊರೆಯಲ್ಲಿರುವ ಅನಕ್ಷ ರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ವಯಸ್ಕರ ತರಗತಿಗಳನ್ನು

ನಡೆಸಲು ಸಂಧ್ಯಾಕಾಲ ಉತ್ತಮವಾದ ವೇಳೆ. ಪುಸ್ತಕಗಳ ಆವಶ್ಯಕತೆ ಇಲ್ಲ. ಹಿಂದಲ ಕಾಲದಲ್ಲಿ ಮಾಡುತ್ತಿದ್ದಂತೆ ಹಲಗೆಗೆ ಮಸಿ ಬಳಿದು ಇಟ್ಟು ಕೊಂಡರೆ ಸಾಕು. ಸುಣ್ಣ ಮತ್ತು ಬಿಳಿಯ ಮಣ್ಣು ಸಾಕು. ಈ ವಿದ್ಯಾ ದಾನಕ್ಕೆ ಬೇಕಾದುದು ಇದೇಯೆ. ಅಕ್ಷರ ಜ್ಞಾನವನ್ನು ಬೇಗ ಸಂಪಾದಿಸ ಬಹುದು. ಕೆಲಸಗಾರರಿಗೆ ಶ್ರದ್ಧೆಯೂ ಉತ್ಸಾಹವೂ ಹೆಚ್ಚು ಮುಖ್ಯ ಒಗ್ಗಟ್ಟನಿಂದ ಕೆಲಸಮಾಡುವುದರಿಂದ ಬಹಳ ಫಲವಾಗುತ್ತದೆ. ಕೆಲವು ವಯಸ್ಕರಿಗೆ ಓದುವುದು ಬರೆಯುವುದು ಬಂದ ಕೂಡಲೇ ಒಂದು ಸಣ್ಣ ಪುಸ್ತಕ ಭಂಡಾರವನ್ನು ಸ್ಥಾಪಿಸಿ, ವರ್ತಮಾನ ಪತ್ರಿಕೆಯನ್ನೂ ಒದಗಿಸ ಬೇಕು.

ಬಾಯಿಂದಲೇ ಬೇಕಾದಷ್ಟು ಜ್ಞಾನ ಬೋಧನೆ ಮಾಡಬಹುದು ಹಿಂದುಗಳು ಪುರಾಣ ಕತೆಗಳನ್ನೂ, ಮುಸಲ್ಮಾನರು ಮಿಲಾಡ್ ಶರೀಫ ಗ್ರಂಥವನ್ನೂ ಹೇಳುವುದು ಒಳ್ಳೆಯದು. ನಮ್ಮ ಜನ ಪುರಾಣ ಕೀರ್ತನೆ ಸಂಕೀರ್ತನೆ, ಮಿಲಾಡ್ ಇವುಗಳಿಂದ ತುಂಬ ಜ್ಞಾನವನ್ನು ಪಡೆಯುತ್ತಾರೆ ಚರಿತ್ರೆ ವಿಜ್ಞಾನ ದಿನದಿನದ ಸುದ್ದಿಗಳು ಇವುಗಳ ಜ್ಞಾನವನ್ನು ಬಾಯಲ್ಲಿ ಬೋಧಿಸಿಯೂ, ವ್ಯಾಸಂಗ ಗೋಷ್ಠಿಗಳ ಮೂಲಕವೂ ಉಂಟುಮಾಡಿಕೊಡ ಬಹುದು. ಆದರೆ ಕೆಲಸಗಾರರಿಗೆ ನಿಷ್ಕೃಷ್ಟವಾದ ಜ್ಞಾನವುಂಟಾಗಿರಬೇಕು. ವಯಸ್ಕರ ವಿದ್ಯಾಭ್ಯಾಸದಿಂದ ಪೌರಧರ್ಮ ಜ್ಞಾನವೂ ಸಹಕಾರ ಮನೋ ಭಾವವೂ ಜನರಲ್ಲಿ ವುಂಟಾಗುತ್ತದೆ ಗ್ರಾಮಪುನರುದ್ಧಾರಕ್ಕೆ ಇವು ಎರಡೂ ಆವಶ್ಯಕ. ”

೬ ಗ್ರಾಮ ನೈರ್ಮಲ್ಯ

ಅನಂತರ ಶ್ರೀ ರುದ್ರಪ್ಪಸ್ವಾಮಿಯವರು ಗ್ರಾಮ ನೈರ್ಮಲ್ಯವನ್ನು ಕುರಿತು ಭಾಷಣ ಮಾಡಿದರು ಗ್ರಾಮ ನೈರ್ಮಲ್ಯವನ್ನು ಕುರಿತು ಗಾಂಧಿ ಹೀಗೆ ಹೇಳಿದ್ದರು. “ಬುದ್ಧಿ ಬೇರೆ, ದೇಹ ಶ್ರಮ, ಬೇರೆ ಎಂದು ಬೇರೆ ಬೇರೆ ಮಾಡಿದುದರಿಂದ ಹಳ್ಳಿಗಳು ಹಾಳಾದವು. ಕಣ್ಣಿಗೆ ಅಂದವಾದ ಚಿಕ್ಕ ಚಿಕ್ಕ ಮನೆಗಳ ಬದಲು ಹಳ್ಳಿಗಳಲ್ಲಿ ಸಗಣಿ ಗುಂಡಿಗಳೇ ಆಗಿವೆ. ಹಳ್ಳಿಗಳ ದಾರಿ ಹೊಲಸು. ಕಣ್ಣುಮುಚ್ಚಿಕೊಳ್ಳಬೇಕು. ಮೂಗು ಮುಚ್ಚಿಕೊಳ್ಳ ಬೇಕು. ಕಾಂಗ್ರೆಸ್ಸಿನಲ್ಲಿ ಬಹುಮಂದಿ ಹಳ್ಳಿಯವರೇ ಆದರೆ, ಹಳ್ಳಿಗಳನ್ನು

ಅವರು ಪೂರ್ಣವಾಗಿ ಶುದ್ಧವಾಗಿ ಆದರ್ಶವಾಗಿಡಬೇಕು. ಹಳ್ಳಿಗರೊಂದಿಗೆ ಎಲ್ಲಾ ವಿಷಯಗಳಲ್ಲಿಯೂ ಒಂದಾಗುವುದು ತಮ್ಮ ಕರ್ತವ್ಯವೆಂಬುದನ್ನು ಅವರು ಮರೆತಿದ್ದಾರೆ. ರಾಷ್ಟ್ರೀಯ ಮತ್ತು ಸಾಮಾಜಿಕ ಪರಿಶುದ್ಧತೆ ನಮ್ಮಲ್ಲಿ ಸುಗುಣವಾಗಿಲ್ಲ. ನಾವು ಒಂದು ಬಗೆಯ ಸ್ನಾನವನ್ನೇನೋ ಮಾಡುತ್ತೇವೆ ಆದರೆ ಕೆರೆಗಳನ್ನೂ, ಭಾವಿಗಳನ್ನೂ ನದಿಯ ತೀರಗಳನ್ನೂ ಹೊಲಸುಮಾಡುತ್ತೇವೆ. ಇದು ದೊಡ್ಡ ಕುಂದು. ಅನಾರೋಗ್ಯದಿಂದಲೇ ಅನೇಕ ರೋಗಗಳು ಹುಟ್ಟುತ್ತವೆ.

ರಾಜೇಂದ್ರ ಬಾಬು:—“ಹಳ್ಳಿಗಳ ಆವಶ್ಯಕತೆಗಳಲ್ಲಿ ಗ್ರಾಮ ನೈರ್ಮಲ್ಯವು ಮುಖ್ಯವಾದುದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಜನರಿಗೆ ತಮ್ಮ ದೇಹ ತಮ್ಮ ಪದಾರ್ಥಗಳನ್ನೂ ಸುತ್ತು ಮುತ್ತನ್ನು, ಹೇಗೆ ಶುದ್ಧವಾಗಿ ಇಟ್ಟುಕೊಳ್ಳಬೇಕೆಂಬುದು ಗೊತ್ತಿಲ್ಲ ಅದರ ಫಲವೇ ರೋಗಗಳು. ಶುದ್ಧ ಹಾಗು ಆರೋಗ್ಯವಿರುವುದು ದೇವತ್ವದ ಸಮೀಪ, ಎಂಬುದು ಬರಿಯ ವ್ಯರ್ಥವಾದ ನುಡಿಯಲ್ಲ. ಈ ಮಾತು ದೇಹಕ್ಕೆ ಮಾತ್ರವೇ ಅಲ್ಲ. ನೀತಿಗೂ ಆತ್ಮಕ್ಕೂ ಅನ್ವಯಿಸುತ್ತದೆ.

ಪ್ರತಿಯೊಬ್ಬ ಕೆಲಸಗಾರನೂ ಶುದ್ಧವಾದ ಅಭ್ಯಾಸಗಳನ್ನು ಇಟ್ಟುಕೊಳ್ಳಬೇಕು. ಕೆಲಸಗಾರನ ಬಟ್ಟೆಗಳೂ ಪದಾರ್ಥಗಳೂ ಪರಿಶುದ್ಧವಾಗಿರಬೇಕು. ಕಟ್ಟು ಇರಬೇಕು ಪದಾರ್ಥಗಳನ್ನು ಸಿಕ್ಕಿದ ಕಡೆ ಎಸೆಯುವುದು, ಮನೆಯಲ್ಲಿ, ಅಂಗಳದಲ್ಲಿ, ಉಗಿಯುವುದು ಶಿಂಬಳ ತೆಗೆಯುವುದು, ಮನೆಗಳ ಹೊರಗೋಡೆಗಳ ಹತ್ತಿರವೂ ಚರಂಡಿಗಳಲ್ಲಿಯೂ ಬೀದಿಗಳಲ್ಲಿಯೂ ಕೆರೆ, ನದಿಗಳ ತೀರದಲ್ಲಿಯೂ ಪಾಯಖಾನೆ ಮಾಡುವುದು, ಈ ದುರಭ್ಯಾಸಗಳನ್ನೆಲ್ಲ ಬಿಡಬೇಕು. ಇವೆಲ್ಲಾ ರೋಗದ ಬೀಜಗಳು. ಈ ಕಸವನ್ನೆಲ್ಲಾ ಗೊಬ್ಬರವಾಗಿ ಸರಿಯಾಗಿ ಉಪಯೋಗಿಸದುದರಿಂದ ನಮಗೆ ಎಷ್ಟೋ ನಷ್ಟವಾಗುತ್ತಿದೆ.

ನಮ್ಮ ನಡತೆ ಪದ್ಧತಿಗಳೇ ರೋಗಗಳಿಗೆ ಕಾರಣವೆಂದು ಜನರಿಗೆ ಗೊತ್ತಾದರೆ, ಹಳ್ಳಿಗಳಲ್ಲಿ ಪರಿಶುದ್ಧತೆಯನ್ನು ಸುಲಭವಾಗಿ ಉಂಟುಮಾಡಬಹುದು ಶುದ್ಧರಾಗಬೇಕೆಂಬ ಸ್ಫೂರ್ತಿಯುಂಟಾಗಬೇಕು. ಮುಂದಲ ಮಾರ್ಗಗಳನ್ನು ಅನುಸರಿಸಬಹುದು.

(೧) ಹಳ್ಳಿಯ ಬೀದಿಗಳನ್ನು ನಿತ್ಯ ಚೆನ್ನಾಗಿ ಗುಡಿಸಬೇಕು. ಬೀದಿಗಳಲ್ಲಿ ಕಸವನ್ನು ಹಾಕಬಾರದು. ಎಲ್ಲ ಕಸವನ್ನೂ ಗೊಬ್ಬರದ ಪೆಟ್ಟಿಗಳಿಗೇ ಹಾಕಬೇಕು. ಅಲ್ಲಿಂದ ಅದನ್ನು ಗೊಬ್ಬರದ ಗುಂಡಿಗಳಿಗೆ ಸಾಗಿಸಬಹುದು. ಯಾರೂ ಬೀದಿಯಲ್ಲಿ ಪಾಯಖಾನೆ ಹೋಗಬಾರದ. ಚರಂಡಿಗಳ ನೀರು ಬೀದಿಗಳಿಗೆ ಹರಿಯಬಾರದು. ಅದನ್ನು ತರಕಾರಿ ತೋಟಗಳ ಕಡೆ ತಿರುಗಿಸಬೇಕು.

(೨) ಬಯಲಿನಲ್ಲಿ ಪಾಯಖಾನೆಗೆ ಹೋದರೆ, ಕೂಡಲೇ ಅದನ್ನು ಹೊಸ ಮಣ್ಣಿನಿಂದ ಮುಚ್ಚಬೇಕು. ಅದಕ್ಕಿಂತ ಉತ್ತಮವಾದ ಮಾರ್ಗ, ಬಿದಿರು ಅಥವ ಮರದ ಚೌಕಟ್ಟಿಗೆ ಚಾಪೆಗಳನ್ನು ಸೇರಿಸಿಮಾಡಿರುವ ಕುಕ್ಕಿಗಳು. ಈ ಕುಕ್ಕಿಗಳನ್ನು ನೆಲದಲ್ಲಿಟ್ಟು, ಬೇಕಾದಾಗ ಗೊಬ್ಬರದ ಗುಂಡಿಗಳಿಗೆ ಸಾಗಿಸಬಹುದು. ಇಲ್ಲಿಯೂ ಪಾಯಖಾನೆಯ ಮೇಲೆ ಮಣ್ಣನ್ನು ಮುಚ್ಚಬೇಕು. ಕೆಲವು ಕಾಲದೊಳಗೆ ಆ ಪಾಯಿಖಾನೆ ಬಡ ರೈತನಿಗೆ ಗೊಬ್ಬರವಾಗುತ್ತದೆ.

(೩) ದನಗಳ ಸಗಣಿ, ಕಸ, ತರಕಾರಿ ಸಿಪ್ಪೆ ಎಲ್ಲವನ್ನು ಹೀಗೆಯೇ ಗೊಬ್ಬರ ಮಾಡಬಹುದು.

(೪) ನೀರಿನ ಕೆರೆಗಳನ್ನೂ ನದಿಯ ತೀರವನ್ನು ಪೂರ್ಣವಾಗಿ ಶುದ್ಧವಾಗಿಡಬೇಕು. ಈಗ ಕೆರೆಗಳಲ್ಲಿ ದನಗಳನ್ನು ತೊಳೆಯುತ್ತಾರೆ. ಕೊಳಕು ಬಟ್ಟೆಗಳನ್ನು ಒಗೆಯುತ್ತಾರೆ. ಅದರ ನೀರನ್ನೇ ಕುಡಿಯುವುದಕ್ಕೂ ಅಡಿಗೆಗೂ ಉಪಯೋಗಿಸುತ್ತಾರೆ. ಭಾವಿಗಳ ನೀರನ್ನೂ ನದಿಯ ನೀರನ್ನೂ ಹೀಗೆಯೇ ಉಪಯೋಗಿಸುತ್ತಾರೆ. ಅಜ್ಞಾನದಿಂದುಂಟಾದ ಈ ದುರಭ್ಯಾಸಗಳಿಂದ ನೀರು ಕೆಡುತ್ತದೆ. ಈ ಭಾಗದಲ್ಲಿ ಹಳ್ಳಿಗಳವರಿಗೆ ಜ್ಞಾನಬೋಧೆ ಮಾಡಬೇಕು.

(೫) ಹಳ್ಳಿಯ ಆರೋಗ್ಯವು ಹಳ್ಳಿಯ ಜನರ ಆರೋಗ್ಯದ ಮೇಲೆ ಅವಲಂಬಿಸಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಕೊಳಕು ಅಭ್ಯಾಸಿ ಒಬ್ಬನೇ ಒಬ್ಬ ಇದ್ದರೂ ಅವನು ಊರಿಗೆ ಅಪಾಯ. ಸ್ವಯಂ ಸೇವಕರು ಹಳ್ಳಿಯವರಿಗೆ ಆರೋಗ್ಯ ಪರಿಶುದ್ಧತೆಯ ನಿಯಮಗಳನ್ನು

ಬೋಧಿಸಬೇಕು. ಹೇಳುವುದಕ್ಕಿಂತ ಮಾಡುವುದು ಉತ್ತಮ. ತಾನು ಮಾಡುವುದು ಉತ್ತಮವಾದ ಪ್ರಚಾರ ಕಾರ್ಯ.

೭ ಹರಿಜನೋದ್ಧಾರ

ರಚನಾತ್ಮಕ ಕೆಲಸಗಾರರ ಸಮ್ಮೇಳನದ ಮೂರನೆಯ ದಿನ ದಿವಾನ್ ಬಹದ್ದೂರ್ ವಿ. ಭಾಷ್ಯಂ ಐಯ್ಯಂಗಾರ್ಯರು ಅಧ್ಯಕ್ಷರಾದರು. ಅಯ್ಯಂಗಾರ್ಯರು ಪ್ರಾರಂಭದಲ್ಲಿ ಹೀಗೆ ಹೇಳಿದರು. “ಹರಿಜನರ ಉದ್ಧಾರವಿಲ್ಲದೆ ಭಾರತಕ್ಕೆ ಏಳಿಗೆ ಇಲ್ಲ, ಈ ಭಾಗದಲ್ಲಿ ಇನ್ನೂ ಹೆಚ್ಚು ಕೆಲಸ ಆಗಿಲ್ಲ. ನಾವು ಅನೇಕ ಕಷ್ಟಗಳಿಗೆ ಎದುರಾಗಿ ಹೋರಾಡಬೇಕಾಗಿದೆ. ನಾವು ವೈದೀಕರನ್ನೂ ಎದುರಿಸಬೇಕಾಗಿದೆ. ನಿಜವಾದ ವೈದೀಕರು ಅಸ್ಪೃಶ್ಯತೆಯನ್ನು ಒಪ್ಪುವುದಿಲ್ಲ ಈಗ ನಂದನಾರ್ ವಿಷಯ ಜ್ಞಾಪಿಸಿಕೊಳ್ಳಿ. ವೈದೀಕರೂ ನಂದನನ್ನು ಪೂಜಿಸುತ್ತಾರೆ. ಹರಿಜನ ಸೇವಕ ಸಂಘ ವೈದೀಕರು ಸ್ಥಾಪಿಸಿದ ಸಂಸ್ಥೆ. ಇದರಲ್ಲಿ ಪಂಡಿತ ಮಾಳವ್ಯಜಿ ಎಂತಹವರೂ ಇದ್ದಾರೆ ಗಾಂಧಿಯವರನ್ನು ನಾನು ಒಂದು ಅವತಾರವೆಂದೇ ಭಾವಿಸುತ್ತೇನೆ. ಇವರ ಅವತಾರದ ಗುರಿ ಅಸ್ಪೃಶ್ಯತೆಯನ್ನು ನಾಶಮಾಡುವುದು. ಅಸ್ಪೃಶ್ಯತೆ ನಿರ್ಮೂಲವಾಗದೆ ಸ್ವರಾಜ್ಯ ಸಾಧ್ಯವಿಲ್ಲ ಇದು ಬರಿಯ ರಾಜಕೀಯ ಚಳುವಳಿಯಲ್ಲ. ಹರಿಜನ ಸೇವೆಯನ್ನು ಹರಿಜನರ ವಿಷಯದಲ್ಲಿ ದಯೆಯಿಂದ ಮಾಡುವಂತೆ ಮಾಡಕೂಡದು.

ಅನಂತರ ತಮಿಳುನಾಡು, ಕರ್ನಾಟಕ ಆಂಧ್ರ ಕೇರಳದ ಹರಿಜನ ಸೇವಕ ಸಂಘಗಳ ಕಾರ್ಯದರ್ಶಿಗಳು ತಮ್ಮ ವರದಿಗಳನ್ನು ಓದಿದರು. ನಂತರ ಗಾಂಧಿಯವರು ಹೀಗೆ ಹೇಳಿದರು.

“ಇಷ್ಟು ದಿವಸದ ಮೇಲೆ ಈಗ ಹಿಂದೂ ಮತದ ಈ ಕಳಂಕವನ್ನು ತೊಡೆದುಹಾಕುವುದು ಆವಶ್ಯಕವೆಂದು ಹೇಳುವುದು ಹೇಳಿದುದನ್ನೇ ಹೇಳಿದಂತೆ ಈ ಬಾಬಿನಲ್ಲಿ ಕಾಂಗ್ರೆಸ್ಸು ಬಹಳ ಕೆಲಸಮಾಡಿದೆ ನಿಜ. ಆದರೆ ನನಗೆ ಒಂದು ಮಾತಿನಿಂದ ವಿಷಾದವಾಗಿದೆ. ಅನೇಕ ಕಾಂಗ್ರೆಸಿನವರು ಇದು ಒಂದು ರಾಜಕೀಯ ಆವಶ್ಯಕತೆಯೆಂದು ತಿಳಿದಿದ್ದಾರೆಯೇ ಹೊರತು ಹಿಂದು

ಧರ್ಮದ ಅಸ್ತಿತ್ವಕ್ಕೇ ಇದರಿಂದ ಅಪಾಯವೆಂಬುದನ್ನು ಅರಿತಿಲ್ಲ. ಕಾಂಗ್ರೆಸಿನ ಹಿಂದುಗಳು ಈ ಕಾರ್ಯ ಕೈಕೊಂಡರೆ ಸನಾತನಿಗಳ ಮನಸ್ಸು ಪರಿವರ್ತನೆ ಹೊಂದುವುದು. ಸುಧಾರಕರು ಸನಾತನಿಗಳೊಡನೆ ಹಟದ ಭಾವ ಬಿಟ್ಟು, ಸ್ನೇಹದ, ಅಹಿಂಸೆಯ ಮನೋಭಾವದಿಂದ ವರ್ತಿಸಬೇಕು. ಭಾರತದಲ್ಲಿ ಹರಿಜನರ ಹೀನ ಸ್ಥಿತಿಗೆ ಸಮನಾದುದು ಜಗತ್ತಿನಲ್ಲಿ ಮತ್ತಾವುದೂ ಇಲ್ಲ. ಈ ಅಸ್ಪೃಶ್ಯತಾ ನಿವಾರಣೆಯ ಕೆಲಸ ಬಹು ಕಠಿಣವೆಂಬುದು ನನಗೆ ಅನುಭವದಿಂದ ಗೊತ್ತು. ಆದರೆ ಸ್ವರಾಜ್ಯ ಸಾಧನೆಯ ಒಂದು ಸೋಪಾನ ಇದು. ಸ್ವರಾಜ್ಯದ ದಾರಿ ಕಡದು ಅಗಲವಿಲ್ಲದುದು — ತಪ್ಪು ಹೆಜ್ಜೆ ಇಡದೆ ಅವನ್ನೆಲ್ಲಾ ದಾಟಬೇಕು. ಅನಂತರವೇ ಸ್ವಾತಂತ್ರ್ಯದ ಹೊಸ ಘಾಳಿಯನ್ನು ಸೇವಿಸಬಹುದು. ”

ರಾಜೇಂದ್ರ ಪ್ರಸಾದ್:— ನಮ್ಮ ಸಾಮಾಜಿಕ ಜೀವನದಲ್ಲಿ ಅಸ್ಪೃಶ್ಯತೆಯು ದೊಡ್ಡ ಹಿಂಸೆ. ಇದು ಬಹು ಕಾಲದಿಂದ ಬಳಕೆಯಲ್ಲಿದೆ ಎಂದು ಇದರ ಕ್ರೌರ್ಯ ಕಡಿಮೆಯಾಗುವುದಿಲ್ಲ. ಇದು ಸ್ಪಷ್ಟವಾದ ಕ್ರೌರ್ಯ. ಈ ರೋಗ ಬಹಳ ಆಳವಾಗಿ ಹೋಗಿದೆ. ಹರಿಜನರಲ್ಲಿಯೇ ಅಸ್ಪೃಶ್ಯತೆ ಇದೆ. ಒಂದು ಪಂಗಡದವರು ಮತ್ತೊಂದು ಪಂಗಡದವರನ್ನು ಅಸ್ಪೃಶ್ಯರನ್ನಾಗಿ ಪರಿಗಣಿಸುತ್ತಾರೆ. ಇದರ ಮೂಲ ಹೇಗಾದರೂ ಇರಲಿ. ಗಾಂಧಿಯವರು ಹೇಳಿರುವಂತೆ ಹಿಂದುಧರ್ಮ ಉಳಿಯಬೇಕಾದರೆ ಈ ರೋಗವನ್ನು ಬೇರು ಸಹಿತ ನಿರ್ಮೂಲ ಮಾಡಬೇಕು.

ಅಸ್ಪೃಶ್ಯತೆ ಭಾರತದ ಒಂದೊಂದು ಭಾಗದಲ್ಲಿ ಒಂದೊಂದು ಬಗೆಯದಾಗಿದೆ. ಜನರ ದೃಷ್ಟಿಯಲ್ಲಿ ತುಚ್ಛವಾದ ಮತ್ತು ನೀಚವಾದ ಕೆಲಸಗಳನ್ನು ಮಾಡಬೇಕಾದವರು ಹರಿಜನರು. ಅವರ ಮನೆಗಳು- ಮುರಕಲು ಗುಡಿಸಲುಗಳು- ಊರಹೊರಗೆ. ಅವರಿಗೆ ದೇವಸ್ಥಾನ, ಪಾಠಶಾಲೆ ಭಾವಿ ಕೆರೆ ಹೋಟಲು ಸಾರ್ವಜನಿಕ ವಾಹನ ಇವುಗಳಲ್ಲಿ ಪ್ರವೇಶವಿಲ್ಲ. ವಿದ್ಯೆಯಿಲ್ಲ, ಮನೆಗಳಿಲ್ಲ, ಹೊಲಗಳಿಲ್ಲ, ಸದಾ ಬಡತನ.

ಅವರ ನಿಜವಾದ ಸ್ಥಿತಿ ತಿಳಿಯುವದು ಅವಶ್ಯಕ. ಹಿಂದು ಧರ್ಮವನ್ನು ತಿನ್ನುತ್ತಿರುವ ಈ ರೋಗವನ್ನು ಅಳಿಸುವುದು ಎಷ್ಟು ಅವಶ್ಯಕ ಎಂಬುದು ಕೆಲಸಗಾರರಿಗೆ ತಿಳಿಯಬೇಕು.

ಭಾರತದ ಕೆಲವು ಭಾಗದಲ್ಲಿ, ಸ್ನಾನವಾದ ಮೇಲೆ ಊಟವಾದ ಮೇಲೆ ದೇವಸ್ಥಾನಕ್ಕೆ ಹೋಗುತ್ತಿರುವಾಗ ಸನಾತನಿಗಳ ಕಣ್ಣಿಗೆ ಹರಿಜನರು ಬಿದ್ದರೆ ಅದು ಒಂದು ಮೈಲಿಗೆ

ಹರಿಜನ ಕೆಲವು ಬೀದಿಗಳಲ್ಲಿ ತಿರುಗಕೂಡದು. ಸನಾತನಿಗಳೂ ಅವನಿಗೂ ಇಷ್ಟೇ ಅಡಿ ಜಾಗ ಬಿಟ್ಟಿರಬೇಕು. ಅವನು ಮನೆಯೊಳಕ್ಕೆ ಪ್ರವೇಶಿಸಕೂಡದು. ಹೊರಗಿನ ಚಾವಡಿಗೂ ಬರಕೂಡದು. ಅವನು ಮುಟ್ಟಿದುದೆಲ್ಲಾ ಮೈಲಿಗೆ. ಸನಾತನಿಗಳು ಉಪಯೋಗಿಸುವ ಭಾವಿಯಿಂದ ಅವನು ನೀರನ್ನು ಎಳೆಯ ಕೂಡದು. ಒಂದೇ ಕೆರೆಯಿಂದ ನೀರು ತೆಗೆದು ಕೊಳ್ಳಕೂಡದು, ಅವನಿಗೆ ಹಜಾಮನು ಕ್ಷೌರ ಮಾಡುವುದಿಲ್ಲ. ಕೆಲವು ಕಡೆ ಹರಿಜನ ಇತರರಂತೆ ಉಡುಪು ಸಹ ಧರಿಸಕೂಡದು. ಮದುವೆ, ಜನನ ಸಾವು ಮುಂತಾದ ಸಂದರ್ಭಗಳಲ್ಲಿ ಹರಿಜನರು ಇತರರಂತೆ ಹಬ್ಬ ಮಾಡಕೂಡದು, ಉಳಿದವರಿಗೆ ಮದುವೆ ಮೊದಲಾದವುಗಳಲ್ಲಿ ಬರುವ ಪುರೋಹಿತರು ಇವರಲ್ಲಿಗೆ ಹೋಗಕೂಡದು

ಹರಿಜನರು ದೇವಸ್ಥಾನ ಪ್ರವೇಶಿಸಕೂಡದು. ಕೆಲವು ಕಡೆ ಆತ ದೇವ ಸ್ಥಾನವಿರುವ ಬೀದಿಯಲ್ಲಿ ತಿರುಗಲೇ ಕೂಡದು. ಇತ್ಯಾದಿ — ರೂಢಿಗಳಿವೆ.

ಕಾರ್ಯಕಾರಿಯಾಗುವ ಸೂಚನೆಗಳು

ಗ್ರಾಮಸೇವಕನು, ಮೊದಲು ಅಸ್ಪೃಶ್ಯತೆಯನ್ನು ತನ್ನಿಂದ ಕಿತ್ತು ಒಗೆಯಬೇಕು. ಜನನ, ಕಸಬು ಇವುಗಳಿಂದ ಒಬ್ಬನು ದೊಡ್ಡವನು ಒಬ್ಬನು ಚಿಕ್ಕವನು ಎಂಬುದನ್ನು ಅವನು ಪೂರ್ಣವಾಗಿ ತಿರಸ್ಕರಿಸಬೇಕು. ಅಸ್ಪೃಶ್ಯನೊಂದಿಗೆ ಜಮಖಾನದ ಮೇಲೆ ಅವನು ಕುಳಿತುಕೊಳ್ಳಲು ಹಿಂದೆಗೆಯಕೂಡದು. ಮನೆಯಲ್ಲಿ ಒಬ್ಬ ಹರಿಜನನನ್ನು, ತನ್ನ ಸಂಸಾರ ದವನನ್ನಾಗಿ ಇಟ್ಟುಕೊಳ್ಳಬೇಕು. ಅವನಿಂದ ಮನೆ ಕೆಲಸ ಮಾಡಿಸಿದರೂ ಚಿಂತೆಯಿಲ್ಲ. ಆಹಾರ ಪಾನೀಯ ಶುದ್ಧವಾಗಿದ್ದರೆ ಸಾಕು. ಅದರ ವಿಷಯ ದಲ್ಲಿ ಅಸ್ಪೃಶ್ಯತೆ ಕೂಡದು. ಅಂದರೆ ಒಂದೇ ತಟ್ಟೆಯಲ್ಲಿ ತಿನ್ನಬೇಕಾದು ದಿಲ್ಲ, ಹೀಗೆ ಮಾಡುವುದು ಅನಾರೋಗ್ಯ. ಅಣ್ಣತಮ್ಮಂದಿರಲ್ಲಿ ಸಹ

ಕೂಡದು ಈ ಸುಧಾರಣೆಗಳನ್ನು ನಡೆಸುವಾಗ ಗ್ರಾಮ ಸೇವಕನಿಗೆ ಸಂಸಾರದವರಿಂದಲೂ ಸ್ನೇಹಿತರಿಂದಲೂ ಬಹಳ ಪ್ರತಿಭಟನೆ ಒದಗುವುದ ನಿಜ. ಆದರೆ ಈ ಕೋಪವನ್ನೂ ಅಸಹನೆಯನ್ನೂ ಅವನು ಧೈರ್ಯದಿಂದ ಎದುರುಗೊಳ್ಳಬೇಕು ತಾನು ಬದಲಾಯಿಸಿದ್ದರೂ ತನ್ನ ಅಭಿಪ್ರಾಯವನ್ನು ಇತರರ ಮೇಲೆ ಅವರು ತನ್ನ ಸಂಸಾರದವರೇ ಆದರೂ— ಬಲಾತ್ಕಾರವಾಗಿ ಹೇರಬಾರದು. ತನ್ನೊಂದಿಗೆ ವ್ಯವಹರಿಸುವವರು ತನ್ನ ದಾರಿಗೆ ಬರುವಂತೆ ಅವನು ಒಳ್ಳೆಯ ಮಾತುಗಳಿಂದ ತಿಳಿಸಬೇಕು. ಅವನ ಸೇವಾ ದೀಕ್ಷೆಯಿಂದ ಜನರು ಅವನನ್ನು ಪ್ರೀತಿಸುವಂತೆ ಆಗಬೇಕು.

ತಾನು ತನ್ನಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸಿಕೊಂಡ ಮೇಲೆ ಅವನು ಇತರರಿಗೆ ಬೋಧಿಸುವುದು ನ್ಯಾಯವಾಗುವುದು ಕೆರೆ ಕೊಳ ಹೊಳೆಗಳಲ್ಲಿ ಸ್ನಾನಮಾಡಲು ನೀರು ಒಯ್ಯಲು ಅವಕಾಶಕೊಡಿ" ಎಂದೂ ಹರಿಜನ ವಿದ್ಯಾರ್ಥಿಗಳನ್ನು ಶಾಲೆಗಳಿಗೆ ಸೇರಿಸಿ ಎಂದೂ ಆತ ಶಾಲೆಯ ಅಧಿಕಾರಿಗಳನ್ನೂ ಸನಾತನಿಗಳನ್ನೂ ಕೇಳಿಕೊಳ್ಳಬೇಕು. ಒಟ್ಟಿನಲ್ಲಿ ಹರಿಜನರ ಎಲ್ಲಾ ತೊಂದರೆಗಳನ್ನೂ ನಿವಾರಿಸಲು ಪ್ರಯತ್ನಿಸಬೇಕು. ಅತ್ಯಂತ ಕಷ್ಟವಾದ ವೈದಿಕ ಕೋಟೆ, ದೇವಸ್ಥಾನ ಮತ್ತು ಪೂಜಾರಿಗಳು; ದೇವಸ್ಥಾನಕ್ಕೆ ಹೋಗುವವರು ಇದಕ್ಕಾಗಿಯೂ ಇತರ ಸುಧಾರಣೆಗಳಿಗಾಗಿಯೂ ಎಡಬಿಡದೆ ಕೆಲಸಮಾಡಬೇಕು ಆವಶ್ಯಕವಾದಾಗ ಕಾನೂನಿನ ಮತ್ತು ನ್ಯಾಯಸ್ಥಾನದ ಸಹಾಯವನ್ನು ಹೊಂದಬಹುದು ಹರಿಜನರ ಪರವಾಗಿ ಸತ್ಯಾಗ್ರಹವನ್ನೂ ಮಾಡಬೇಕಾಗಿ ಬರಬಹುದು.

ಇನ್ನು ಹರಿಜನರಿಗೆ ವಿದ್ಯೆಕಲಿಸಿ, ಅವರನ್ನು ಸುಧಾರಿಸುವುದೂ ಇಷ್ಟೇ ಮುಖ್ಯವಾದುದು. ಅವರನ್ನು ಅನೇಕ ಶತಮಾನಗಳಿಂದ ತುಳಿದಿರುವುದರಿಂದ ಅವರು ಕಂಗಾಲಾಗಿದ್ದಾರೆ. ತಾವು ನೀಚರು ತುಚ್ಛರು ಎಂಬ ಮನೋಭಾವದ ಜತೆಗೆ ಕೆಟ್ಟ ಅಭ್ಯಾಸಗಳನ್ನು ಮಾಡಿಕೊಂಡಿದ್ದಾರೆ. ಸತ್ತದನ ತಿನ್ನುತ್ತಾರೆ. ಇದನ್ನು ಬಿಡಿಸಬೇಕು. ಅವರವರಲ್ಲಿಯೇ ಇರುವ ಅಸ್ಪೃಶ್ಯತೆ ತಪ್ಪಿಸಬೇಕು. ಭಂಗಿ ಕೆಲಸ ಅವಮಾನವಲ್ಲ. ಗೌರವವಾದುದು ಎಂದು ಅವರಿಗೆ ತಿಳಿಯುವಂತೆ ಮಾಡಬೇಕು. ದೇಹವನ್ನು ಶುದ್ಧವಾಗಿಟ್ಟುಕೊಳ್ಳುವುದನ್ನೂ ಆರೋಗ್ಯವಾದ ಅಭ್ಯಾಸಗಳನ್ನೂ ಅವರಿಗೆ ಕಲಿಸಬೇಕು.

ಗ್ರಾಮ ಸೇವಕನೇ ಭಂಗಿ ಎತ್ತಲು ಹಿಂಜರಿಯಬಾರದು. ಇದರಿಂದ ಭಂಗಿ ಎತ್ತುವುದು ಅವಮಾನದ ಕೆಲಸವಲ್ಲವೆಂದು ಹರಿಜನರಿಗೆ ಗೊತ್ತಾಗುವುದು. ಈ ಕೆಲಸ ಮಾಡಿಯೂ ಶುದ್ಧವಾಗಿರಬಹುದೆಂಬುದೂ ಅವರಿಗೆ ಗೊತ್ತಾಗುವುದು. ತಮ್ಮ ಪಾಯಖಾನೆ ಎತ್ತುವ ಕೆಲಸವನ್ನು ಜನ ತಾವೇ ಮಾಡುವ ಆಶ್ರಮಗಳಿಂದ, ಅಸ್ಪೃಶ್ಯತಾ ನಿವಾರಣೆಗೆ ಅಪ್ರತ್ಯಕ್ಷವಾಗಿಯಾದರೂ ಸಹಾಯವಾಗುವುದು. ಸನಾತನಿಗಳು ಚರ್ಮ ಹದಮಾಡುವ ಕೆಲಸವನ್ನು ಪ್ರಾರಂಭಿಸಲು ಹಿಂದೆಗೆಯ ಕೂಡದು. ಇದರಿಂದ ಆ ಕಸಬಿನ ಘನತೆ ಏರುವುದು. ಆ ಕಸಬನ್ನು ಶುದ್ಧವಾಗಿ ಜನೋಪಕಾರಕ್ಕಾಗಿ ಹೇಗೆ ಮಾಡಬಹುದೆಂಬುದು ಹರಿಜನರಿಗೆ ಗೊತ್ತಾಗುವುದು. ಕುಡಿತ ಜೂಜು ಈ ಪಿಶಾಚಿಗಳು ಹರಿಜನರನ್ನು ಅಂಟಿವೆ. ಆ ಬಾಬುಗಳಲ್ಲಿಯೂ ಬಹಳ ಸುಧಾರಣೆ ನಡೆಸಬಹುದು.

ಗ್ರಾಮ ಸುಧಾರಕನು ಈ ಮೂರು ಕಾರ್ಯಗಳಲ್ಲಿಯೂ ಬಿಡುವಿಲ್ಲದೆ ದುಡಿಯಬೇಕು. (೧) ತನ್ನ ಬಾಳಿನಲ್ಲಿ ಅಸ್ಪೃಶ್ಯತೆಯ ನಾಶ (೨) ಸನಾತನಿಗಳಲ್ಲಿ ಪ್ರಚಾರ (೩) ಹರಿಜನರ ಸೇವೆ. ಈ ಮಾರ್ಗದಿಂದ ಈ ಸಮಸ್ಯೆ ಪರಿಹಾರವಾಗುವುದು.

ರಾಜಕೀಯವಾಗಿ ಹರಿಜನರ ಹಕ್ಕು ಏನು ಎಂದು ನಾನು ಇಲ್ಲಿ ಚರ್ಚಿಸಿಲ್ಲ. ಎಲ್ಲರಂತೆ ಅವರಿಗೂ ಹಕ್ಕುದೊರೆಯಬೇಕೆಂಬುದು ನಿರ್ವಿವಾದ.

ಹರಿಜನರಿಗೆಯೆ ಬೇರೆ ಭಾವಿ, ಬೇರೆ ಶಾಲೆ, ಬೇರೆ ಹೊಟಲು ಇದರ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿದೆ. ಇದರಿಂದ ಹರಿಜನರಿಗೆ ಸಹಾಯವಾಗುವುದರ ಬದಲು, ಅವರು ಬೇರೆ ಎಂಬುದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಆದುದರಿಂದ ಇವಕ್ಕೆ ಸಾಧಾರಣವಾಗಿ ಪ್ರೋತ್ಸಾಹ ಕೊಡಕೂಡದು. ಆದರೆ ಈ ಅನುಕೂಲಗಳಿಲ್ಲದೆ, ಹರಿಜನರು ಕಷ್ಟಪಡುತ್ತಿರುವ ಕಡೆ ತತ್ಕಾಲಿಕವಾಗಿ ಅಂತಹ ಏರ್ಪಾಡು ಮಾಡಬಹುದು.

ಇದೇ ಬಗೆಯ ಮತ್ತೊಂದು ಪ್ರಶ್ನೆ ಇದೆ ಈ ಪ್ರಶ್ನೆಯನ್ನು ಎದುರಿಸಲು ಸ್ವಯಂಸೇವಕರ ತಂಡ ಬೇಕಾಗಿದೆ ಭಾರತದ ಗುಡ್ಡಗಳಲ್ಲಿಯೂ ಕಾಡುಗಳಲ್ಲಿಯೂ ಕಾಡುಜನರೆನ್ನಿಸಿಕೊಳ್ಳುವ ಆದಿಜನರು ಇದ್ದಾರೆ.

ಅವರಿಗೆ ಹಣವಿಲ್ಲ, ವಿದ್ಯೆಇಲ್ಲ. ಕ್ರಿಸ್ತಪಾದ್ರಿಗಳು ಅವರಿಗಾಗಿ ವಿದ್ಯಾಸಂಸ್ಥೆಗಳನ್ನು ನಡೆಸಿ ಸಹಾಯ ಮಾಡಿದ್ದಾರೆ. ಆದರೆ ಮಾಡಬೇಕಾದ ಕೆಲಸ ಇನ್ನೂ ಅನೇಕ ಇವೆ. ನಾವು ಅವರನ್ನು ಉದಾಸೀನಮಾಡಿದ್ದೇವೆ ಅವರಿಗೆ ವಿದ್ಯೆಕಲಿಸಬೇಕು. ಇತರ ಬಗೆಯಿಂದಲೂ ಅವರನ್ನು ಸುಧಾರಿಸಬೇಕು. ಹರಿಜನರ ಸುಧಾರಣೆ ಮಾಡುವಂತೆಯೇ ಈ ಗುಡ್ಡಗಾಡಿನವರ ಸುಧಾರಣೆಯನ್ನೂ ಮಾಡಬೇಕು.

೮ ಆದಿವಾಸಿಗಳು

ಆನಂತರ ಶ್ರೀ ಥಕ್ಕರ್ ಬಾಪಾ ಆದಿವಾಸಿಗಳನ್ನು ಕುರಿತು ಹೇಳಿದರು. ಗಾಂಧಿಯವರು ಹೀಗೆ ಹೇಳಿದರು:— "ಭಿಲ್ಲರು ಗೊಂಡರು ಮುಂತಾದ ಗುಡ್ಡಗಾಡಿನ ಕಾಡು ಜನರ ಸೇವೆ, ನಿರ್ಮಾಣಕಾರ್ಯದ ಒಂದು ಭಾಗ ನಮ್ಮ ದೇಶ ಅತಿ ವಿಶಾಲವಾಗಿ ಇದರಲ್ಲಿರುವ ಜನ ಬಗೆ ಬಗೆಯವರಾದುದರಿಂದ ಆ ಜನರ ಸ್ಥಿತಿಗಳೆಲ್ಲಾ ನಮಗೆ ತಿಳಿಯುವುದು ಕಷ್ಟ. ಭಾರತದಲ್ಲಿ ಎರಡು ಕೋಟಿ ಜನ ಆದಿವಾಸಿಗಳಿದ್ದಾರೆ. ಬಾಳಸಾಹೇಬ ಖೇರರು ೧೯೪೦ರಲ್ಲಿ ಥಕ್ಕರ್ ಬಾಪಾರವರ ಜತೆ ಸೇರಿ ಇವರ ಸೇವೆ ಪ್ರಾರಂಭಿಸಿದರು. ಈ ಭಾಗದಲ್ಲಿ ಇನ್ನೂ ಅನೇಕರು ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲಸಗಾರರು ಸಾಲದು ಬೆಳೆ ಬೇಕಾದ ಹಾಗಿದೆ. ಕೊಯ್ಯುವವರು ಕಡಿಮೆ. ಮೂಲನಿವಾಸಿಗಳ ಸೇವೆ ರಾಷ್ಟ್ರೀಯಕಾರ್ಯ. ಇದರಿಂದ ಸ್ವರಾಜ್ಯ ಸಮೀಪವಾಗುವುದು "

ಆ ಮಧ್ಯಾಹ್ನ ಗಾಂಧಿಯವರು ಹಿಂದುಸ್ಥಾನಿಯಲ್ಲಿ ಯಾರು ಬೇಕಾದರೂ ಪ್ರಶ್ನೆಹಾಕಬಹುದೆಂದರು. ತಮಿಳುನಾಡಿನ ಸದಸ್ಯರೊಬ್ಬರು ಎದ್ದು ಸುಮ್ಮನೆ ನಿಂತರು ಗಾಂಧಿಯವರು " ತಮಿಳ್ ತೆರಿಯುಮಾ" ಎಂದರು. ಸದಸ್ಯರೆಲ್ಲಾ ನಕ್ಕರು. ಗಾಂಧಿಯವರು ತಮಗೆ ತಮಿಳು ಸ್ವಲ್ಪ ತಿಳಿಯುವುದೆಂಬುದನ್ನು ತೋರಿಸಲು " ಶೊಲ್ಲು ಅಯ್ಯ. ಶೊಲ್ಲು " ಎಂದರು ನಿಂತಿದ್ದ ಸದಸ್ಯರು ಸಮ್ಮನೆ ಕುಳಿತುಬಿಟ್ಟರು

ಗಾಂಧಿಯವರು ಮೊದಲು ತಮ್ಮ ಪ್ರತ್ಯುತ್ತರಕ್ಕೆ ಹರಿಜನರ ಪ್ರಶ್ನೆಯನ್ನೇ ತೆಗೆದುಕೊಂಡರು " ಹರಿಜನರ ಪ್ರಶ್ನೆ ನಿರ್ಮಾಣ ಕಾರ್ಯದಲ್ಲಿ

ಮುಖ್ಯ ಭಾಗ ಈಗ ಆಗಿರುವ ಕಾರ್ಯ, ಸಮುದ್ರದಲ್ಲಿ ಒಂದು ಹನಿಯಂತೆ ಹರಿಜನರ ಪೂರ್ಣ ಉದ್ಧಾರಕ್ಕೆ ಏನು ಮಾಡಬೇಕು ? ಎಂದು ಕೇಳುತ್ತೀರಿ. ಈ ಪ್ರಶ್ನೆಗೆ ನಾನು ಅನೇಕ ಸಲ ಉತ್ತರ ಕೊಟ್ಟಿದ್ದೇನೆ. ಹರಿಜನರೊಂದಿಗೆ ಊಟಮಾಡುವುದು, ಅವರನ್ನು ದೇವಸ್ಥಾನಗಳಿಗೆ ಸೇರಿಸುವುದು ರಸ್ತೆ ಭಾವಿ ಕೆರೆಗಳನ್ನು ಅವರಿಗೆ ತೆರೆಯುವುದು ಇವೆಲ್ಲವುಗಳಿಂದ ಹರಿಜನರು ಸನಾತನಿಗಳ ಸಮಾನರಾಗುತ್ತಾರೆ. ಸರ್ಕಾರಗಳು ದೇವಸ್ಥಾನಗಳನ್ನು ಹರಿಜನರಿಗಾಗಿ ತೆರೆಯುವವೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಜನರೇ ತಮ್ಮ ಹೃದಯವನ್ನು ಪರಿವರ್ತನೆ ಮಾಡಿಕೊಳ್ಳಬೇಕು. ಹರಿಜನರನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ ತಮ್ಮ ಹೃದಯ ಪರಿವರ್ತನೆಯಾಗಿರುವುದನ್ನು ತೋರಿಸಬೇಕು.

ಇನ್ನೊಂದು ಪ್ರಶ್ನೆಗೆ ಉತ್ತರಕೊಡುತ್ತಾ ಗಾಂಧಿಯವರು ಹೀಗೆ ಹೇಳಿದರು "ಅಹಿಂಸೆಯಿಂದಲೇ ಸ್ವರಾಜ್ಯ ಸಾಧ್ಯ. ಹಿಂಸಾಕೃತ್ಯಗಳಿಂದ ರಾಮರಾಜ್ಯ ನಮಗೆ ದೊರಕುವುದಿಲ್ಲ. ಅಹಿಂಸೆಯೇ ಸ್ವಾತಂತ್ರ್ಯ ಮಾರ್ಗ. ಇನ್ನೇನು ಸ್ವಾತಂತ್ರ್ಯ ನಮ್ಮ ಕರಗತವಾಗುತ್ತಿದೆ. ಆದರೆ ಹಿಂಸಾಕೃತ್ಯಗಳಿಂದ ಅದನ್ನು ನಾವು ಕಳೆದುಕೊಳ್ಳುತ್ತೇವೆ."

ಕೊನೆಯಲ್ಲಿ ಗಾಂಧಿಯವರು "ಹರಿಜನರೊಂದಿಗೆ ಎಲ್ಲಾ ರೀತಿಯಿಂದಲೂ ಸಹಕರಿಸಿ, ಅವರಿಗೆ ಪರಿಶುದ್ಧತೆಯನ್ನು ಹೇಳಿಕೊಡಿ." ಎಂದು ಮುಕ್ತಾಯಮಾಡಿದರು.

೯ ಪಾನನಿರೋಧ

ಅದೇ ದಿನ ಹಿಂದಲ ಕಾಂಗ್ರೆಸ್ ಮಂತ್ರಿ ಮುನಿಸ್ವಾಮಿ ಪಿಳ್ಳೆಯವರು ಪಾನನಿರೋಧವನ್ನು ಕುರಿತು ಮಾತನಾಡಿದ್ದರು. ಅವರು ತಮ್ಮ ಭಾಷಣದಲ್ಲಿ ಇಂಗ್ಲಿಷರ ಜತೆಯಲ್ಲಿ ಇಲ್ಲಿಗೆ ಮದ್ಯದ ಸೀಸೆ ಬಂದಿತು. ಅವರ ಜತೆಯಲ್ಲಿಯೇ ಅದು ಮಾಯವಾಗುವುದು ಎಂದರು.

ಗಾಂಧೀಜಿ: – ಜಾತೀಯ ಐಕ್ಯ ಮತ್ತು ಅಸ್ಪೃಶ್ಯತಾನಿವಾರಣೆಯಂತೆ ಇದೂ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ೧೯೨೦ ರಿಂದ ಇದೆ. ಆದರೆ ಈ ಮುಖ್ಯ ಪ್ರಕ್ರಿಯ ವಿಷಯದಲ್ಲಿ ಕಾಂಗ್ರೆಸ್ ಅಷ್ಟು ಶ್ರದ್ಧೆವಹಿಸಿಲ್ಲ. ನಮಗೆ

ಅಹಿಂಸಾ ಮಾರ್ಗದಿಂದ ಸ್ವರಾಜ್ಯ ದೊರಕಬೇಕಾದರೆ ಈ ಪ್ರಶ್ನೆಯನ್ನು ಮುಂದಲ ಸರ್ಕಾರದ ಕೈಗೆ ನಾವು ಬಿಡಲಾಗುವುದಿಲ್ಲ

ಈ ಕೆಡಕನ್ನು ತಪ್ಪಿಸಲು ವೈದ್ಯರು ಬಹಳ ಸಹಾಯ ಮಾಡಬಹುದು. ಮಾದಕ ಪದಾರ್ಥಗಳ ಅಭ್ಯಾಸವನ್ನು ಜನರಿಗೆ ತಪ್ಪಿಸುವ ಮಾರ್ಗಗಳನ್ನು ಅವರು ಕಂಡುಹಿಡಿಯಬಹುದು.

ಕಾಂಗ್ರೆಸ್ ಸಂಸ್ಥೆಗಳು ಅಗ್ಗವಾದ ಫಲಾಹಾರ ಮಂದಿರಗಳನ್ನು ತೆರೆಯಬಹುದು. ಅಲ್ಲಿ ದಿನವೆಲ್ಲಾ ಕೂಲಿಮಾಡಿ ಬಳಲಿರುವ ರೈತನಿಗೆ ವಿಶ್ರಾಂತಿಯೂ, ಸುಲಭವಾದ ದರದಲ್ಲಿ ಆರೋಗ್ಯವಾದ ಆಹಾರವೂ ವಿನೋದವೂ ದೊರೆಯಬೇಕು ಹಿಂಸೆಯಿಂದ ಈ ಸುಧಾರಣೆಯಾಗದೆ ಶಾಶ್ವತವಾದ ಆತ್ಮ ಶುದ್ಧತೆಯಿಂದ ಮಾತ್ರ ಶಕ್ಯ ಎಂಬುದನ್ನು ಅವರು ಮರೆತುಬಿಡುತ್ತಾರೆ.

ರಾಜೇಂದ್ರ ಪ್ರಸಾದ:—ಮದ್ಯಪಾನದಿಂದ ಸಂಭವಿಸುತ್ತಿರುವ ಕೆಡಕುಗಳನ್ನು ಹೇಳಬೇಕಾಗಿಲ್ಲ. ಈ ಚಟವುಳ್ಳವರ ದೇಹ ಹಾಳಾಗುವುದಲ್ಲದೆ ನೀತಿಯೂ ಹಾಳಾಗುವುದೆಂದು ಹೇಳಿದರೆ ಸಾಕು

ಕುಡಿತದ ಕೆಡಕುಗಳನ್ನು ಕೆಲಸ ಮಾಡುವರು ಅಭ್ಯಾಸಮಾಡಬೇಕು. ಪುಸ್ತಕದ ಜ್ಞಾನಕ್ಕಿಂತ ಕುಡುಕರ ಸಹವಾಸದಿಂದ ಒದಗುವ ಜ್ಞಾನ ಹೆಚ್ಚು ಬೆಲೆಯಾದುದು. ಕುಡುಕರನ್ನು ಮೇಲೆತ್ತುವುದು ಬಹಳ ಆವಶ್ಯಕ ಅವರ ದಾರಿದ್ರ್ಯ, ಹಸಿವುಗಳ ಕಡೆ ವ್ಯಕ್ತಿಗಳ ಮತ್ತು ಸಂಸ್ಥೆಗಳ ದೃಷ್ಟಿಯನ್ನು ಎಳೆಯಲೇಬೇಕು. ಪ್ರಚಾರ ಕಾರ್ಯದಲ್ಲಿ ಮಾಯಾದೀಪ ಚಿತ್ರಗಳನ್ನು ಉಪಯೋಗಿಸಬಹುದು. ಕುಡಿದವನ ಸಂಸಾರದ ಕಷ್ಟ ಕುಡಿಯದವನ ಸುಖ ಈ ಜೀವನ ಕಥೆಗಳನ್ನು ಕುಡುಕರಿಗೆ ಹೇಳಬೇಕು. ಚಿತ್ರಗಳಲ್ಲಿಯೂ ಸಿನಿಮಾಗಳಲ್ಲಿಯೂ ತೋರಿಸಬೇಕು.

ಈ ಅಭ್ಯಾಸ ಅವರಿಗೆ ತಪ್ಪಿಸಬೇಕಾದರೆ ವಿನೋದ ಮಂದಿರ ಊಟದ ಮನೆ ಏರ್ಪಡಿಸಬೇಕು. ಈ ಕೆಲಸಕ್ಕೆ ಹಣ ಬೇಕು ಇದು ಸಂಸ್ಥೆಗಳಿಂದ ಮಾತ್ರ ಸಾಧ್ಯ. ಆದರೆ ಗ್ರಾಮಸುಧಾರಕನು ಕುಡುಕರ ಮನೆಗಳಿಗೆ ಹೋಗಿ ಬೋಧಿಸಿ ಕುಡಿತವನ್ನು ತಪ್ಪಿಸಬೇಕು.

೧೦ ಮಹಿಳೆಯರ ಏಳಿಗೆ

ಸಮ್ಮೇಳನದ ನಾಲ್ಕನೆಯ ದಿವಸ ಶ್ರೀಮತಿ ಮುತ್ತುಲಕ್ಷ್ಮಿ ರೆಡ್ಡಿಯವರು ಅಧ್ಯಕ್ಷತೆ ವಹಿಸಿದರು. ಅಂದು ರಚನಾತ್ಮಕ ಕಾರ್ಯಕ್ರಮದ ಅಂಗಗಳಾದ ಸ್ತ್ರೀಯರ ಉದ್ಧಾರ, ಆರೋಗ್ಯ ಮತ್ತು ನೈರ್ಮಲ್ಯ ಶಿಕ್ಷಣ ಮತ್ತು ಜಾತೀಯ ಐಕ್ಯ ಇವುಗಳ ಚರ್ಚೆಯಾಯಿತು. ಡಾಕ್ಟರ್ ಮುತ್ತು ಲಕ್ಷ್ಮಿಯವರು ಭಾಷಣದಲ್ಲಿ ಹೀಗೆ ಹೇಳಿದರು "ಭಾರತದಲ್ಲಿ ಹಿಂದೆ ರಾಜಾ ರಾಮಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ್ ಮುಂತಾದವರು ಮಹಿಳೆಯರಿಗಾಗಿ ಬಹಳ ದುಡಿದಿದ್ದಾರೆ. ಗಾಂಧಿಯವರು ಹಿಂದೆ ಆಗಿಹೋದ ಎಲ್ಲಾ ಸಂಘ ಸಂಸ್ಕಾರಕರ ಆತ್ಮವನ್ನೂ ಒಳಗೊಂಡವರು. ಭಾರತದ ಮಹಿಳೆಯರು ಇತರ ದೇಶದ ಮಹಿಳೆಯರಿಗೆ ಕಡಿಮೆ ಇಲ್ಲ. ಗಾಂಧಿಯವರ ಎಲ್ಲಾ ಚಳವಳಿಗಳಲ್ಲಿಯೂ ಪ್ರಮುಖ ಪಾತ್ರವನ್ನು ನಮ್ಮ ಮಹಿಳೆಯರು ವಹಿಸಿದ್ದಾರೆ. ಸ್ತ್ರೀಯರಲ್ಲಿ ವಿದ್ಯಾವತಿಯರು ನೂರಕ್ಕೆ ನಾಲ್ವರು ಮಾತ್ರ. ಇದನ್ನು ನೋಡಿದರೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆಯರು ಮಾಡಿರುವ ಸಾಹಸಗಳಿಗಾಗಿ ಹೆಮ್ಮೆ ಪಡಬೇಕಾಗಿದೆ. ಅವಕಾಶ ಸಿಕ್ಕಿದರೆ ಸ್ತ್ರೀಯರು ದೇಶಸೇವೆಯಲ್ಲಿ ಹಿಂದೆ ಬೀಳುವುದಿಲ್ಲವೆಂಬುದೂ, ಸ್ತ್ರೀಯರ ಸೇವೆಯಿಂದ ರಾಷ್ಟ್ರಕಾರ್ಯ ಹೆಚ್ಚು ಫಲಕಾರಿಯಾಗುವುದೆಂಬುದೂ ಇದರಿಂದ ವ್ಯಕ್ತವಾಗುತ್ತದೆ.

ಸ್ತ್ರೀಯರಿಗಾಗಿ ಮಹಿಳಾಸದನ, ವನಿತಾ ಸದನಗಳೇನೋ ಇವೆ. ಆದರೆ ಸ್ತ್ರೀಯರ ಸಮಸ್ಯೆಗಳು ಅನೇಕವಾಗಿವೆ. ಸ್ತ್ರೀಯರ ಕಷ್ಟಗಳಲ್ಲಿ ಅನೇಕವನ್ನು ಕಾನೂನಿನಿಂದ ಹೋಗಲಾಡಿಸಬಹುದು. ಮಲಬಾರಿನ ಹೊರತು ಉಳಿದ ಕಡೆ ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕು ಇಲ್ಲ ಆಸ್ತಿ ಇಲ್ಲದುದರಿಂದ ಸ್ತ್ರೀಯ ಬಗ್ಗೆ ತಿರಸ್ಕಾರ.. ಇದರ ಜತೆಗೆ ಗಂಡಂದಿರಿಂದ ತಿರಸ್ಕೃತರಾದ ಸ್ತ್ರೀಯ ಗತಿ ದೇವರೇ ಬಲ್ಲ. ಸ್ತ್ರೀಗೂ ಆಸ್ತಿಯಲ್ಲಿ ಸಮಾನವಾದ ಹಕ್ಕು ಇದ್ದರೆ ಪರಿಸ್ಥಿತಿಯೇ ಪಲ್ಲಟವಾಗುವದು. ಈ ಸುಧಾರಣೆ ಬರುವಂತೆ ಸ್ತ್ರೀ ಕೆಲಸಗಾರರೆಲ್ಲಾ ಸಾಹಸಪಡಬೇಕು.

ಇನ್ನು ದೇವದಾಸಿ ವಿಚಾರ. ಧರ್ಮದ ಹೆಸರಿನಲ್ಲಿ ಸಣ್ಣ ಸಣ್ಣ

ಹುಡುಗಿಯರನ್ನು ಅನೀತಿ ಜೀವನಕ್ಕೆ ಎಳೆಯುತ್ತಿದ್ದಾರೆ. ಇದನ್ನು ತಪ್ಪಿಸಬೇಕು.”

ಗಾಂಧಿಜಿ:—“ಸತ್ಯಾಗ್ರಹ ಚಳುವಳಿಗಳು ಸ್ತ್ರೀಯರನ್ನು ಪೂರ್ಣವಾಗಿ ಎಚ್ಚರಿಸಿವೆ. ಈ ಚಳುವಳಿಯಿಂದ ಸ್ತ್ರೀಯರು ಅತ್ಯಲ್ಪಕಾಲದಲ್ಲಿ ಕತ್ತಲೆಯಿಂದ ಬೆಳಕಿಗೆ ಬಂದಿದ್ದಾರೆ. ಸ್ವರಾಜ್ಯದ ಹೋರಾಟದಲ್ಲಿ ಪುರುಷರೊಂದಿಗೆ ಸಮಾನವಾಗಿ ಕಾದಾಡುತ್ತಿದ್ದಾರೆ ಆದರೆ ಇದನ್ನೂ ಕಾಂಗ್ರೆಸ್ನವರು ಇನ್ನೂ ಪೂರ್ತಿ ಅರಿತಿಲ್ಲ. ಕಾನೂನು ಮತ್ತೂ ಪದ್ಧತಿ ಸ್ತ್ರೀಯರನ್ನು ತುಳಿದಿದೆ. ಈ ಕಾನೂನಿನಲ್ಲಿ ಸ್ತ್ರೀಯರ ಕೈವಾಡವಿಲ್ಲ ಅಹಿಂಸೆಯ ತಳಹದಿಯ ಮೇಲೆ ಬೆಳೆವ ಸಮಾಜದಲ್ಲಿ ಪುರುಷರು ಹೇಗೋ, ಹಾಗೆ ಸ್ತ್ರೀಯರೂ ತಮ್ಮ ಇಷ್ಟಬಂದಂತೆ ಇರಬಹುದು. ಆದರೆ ಅಹಿಂಸೆಯ ಸಮಾಜದಲ್ಲಿ ಪ್ರತಿಯೊಂದು ಹಕ್ಕು, ಒಂದು ಕರ್ತವ್ಯದ ಫಲ. ಆದುದರಿಂದ ಪರಸ್ಪರ ಅನುಕೂಲಗಳಾದ ಸಾಮಾಜಿಕ ನಿಯಮಗಳನ್ನು ಸ್ತ್ರೀ ಪುರುಷರು ಹಾಕಿಕೊಳ್ಳಬೇಕು. ಈ ನಿಯಮಗಳು ಹೊರಗಿನ ಬಲಾತ್ಕಾರಗಳಲ್ಲ. ಪುರುಷರು, ಸ್ತ್ರೀಯರನ್ನು ಕುರಿತು ತಮ್ಮ ನಡವಳಿಕೆಗಳಲ್ಲಿ ಈ ಸತ್ಯವನ್ನು ಪೂರ್ಣವಾಗಿ ಅರಿತಿಲ್ಲ ಪುರುಷರು ತಾವು ಸ್ತ್ರೀಯರ ಒಡೆಯರು ಎಂದು ತಿಳಿದಿದ್ದಾರೆ. ಇದು ತಪ್ಪು. ಸ್ತ್ರೀಯರನ್ನು ತಮ್ಮ ಸ್ನೇಹಿತರೆಂದೂ ಸಹೋದ್ಯೋಗಿಗಳೆಂದೂ ತಿಳಿಯಬೇಕು. ಸ್ತ್ರೀಯರು ಗುಲಾಮರಂತೆ ಇದ್ದಾರೆ. ತಾವು ಸ್ವತಂತ್ರರಾಗಬಹುದೆಂಬುದೇ ಅವರಿಗೆ ತಿಳಿಯದು. ಸ್ತ್ರೀಯರಿಗೆ ನಿಜವಾದ ಜ್ಞಾನೋದಯವಾಗಬೇಕು. ಅವರು ಪುರುಷರ ಸಮಾನರಾಗಬೇಕು. ಹೀಗೆ ಮಾಡುವುದು ಕಾಂಗ್ರೆಸ್ಸಿನವರ ಕರ್ತವ್ಯ.

ಮನಸ್ಸು ಮಾಡಿದರೆ ಈ ಕ್ರಾಂತಿ ಸುಲಭ. ಕಾಂಗ್ರೆಸ್ಸಿನವರು ಮೊದಲು ತಮ್ಮ ಮನೆಗಳಲ್ಲಿ ಪ್ರಾರಂಭಿಸಲಿ. ಹೆಂಡತಿಯರು ಬರಿಯ ಆಟದ ಗೊಂಬೆಗಳಲ್ಲ. ಗೌರವಾನ್ವಿತರಾದ ಸಹೋದ್ಯೋಗಿಗಳು, ಹೀಗಾಗಬೇಕಾದರೆ ಹೆಂಡತಿಯರಿಗೆ ಗಂಡಂದಿರೇ ವಿದ್ಯೆ ಕಲಿಸಬೇಕು. ಆವಶ್ಯಕವಾದ ಬದಲಾವಣೆಗಳೊಂದಿಗೆ ಇದೇ ತಾಯಿಯರಿಗೂ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ.

ರಾಜೇಂದ್ರ ಬಾಬು ಹೀಗೆ ಹೇಳಿದ್ದರು:— ಹಿಂದೂಗಳಲ್ಲಿ ಸ್ತ್ರೀಗೆ ಶಕ್ತಿ ಎಂದು ಹೆಸರು. ಆಕೆ ಎಲ್ಲಾ ಶಕ್ತಿಗೂ ಮೂಲ. ಆಕೆಗೆ ಪುರುಷನ ಉತ್ತಮಾರ್ಧವೆಂದೂ ಹೆಸರು. ಆದರೆ ನಮ್ಮ ಇಂದಿನ ಸಮಾಜದಲ್ಲಿ ಆಕೆ ತಾನು ವಹಿಸಬಹುದಾದ ಮತ್ತು ವಹಿಸಬೇಕಾದ ಭಾಗವನ್ನು ವಹಿಸದಿರುವುದು ದುರದೃಷ್ಟ. ಇದಕ್ಕೆ ಮುಖ್ಯ ಕಾರಣ ಕೆಲವು ಸಾಮಾಜಿಕ ನಿಯಮಗಳೂ ಪದ್ಧತಿಗಳೂ ಆಗಿವೆ. ಅರ್ಧಜನ ಅಜ್ಞಾನದಲ್ಲಿದ್ದರೆ ಯಾವ ಸಮಾಜವೂ ಉದ್ಧಾರವಾಗುವುದಿಲ್ಲ. ಮಗುವಿಗೆ ಮೊದಲನೆಯ ಪಾಠ ತಾಯಿಯ ತೊಡೆಯ ಮೇಲೆ. ಅಜ್ಞಾನಿಗಳೂ ದಳಿತರೂ ಆದ ಸ್ತ್ರೀಯರಿರುವ ಸಮಾಜದಲ್ಲಿ ಉತ್ತಮರಾದ ಗಂಡುಮಕ್ಕಳೂ ಹೆಣ್ಣುಮಕ್ಕಳೂ ಜನಿಸುವುದು ಸಾಧ್ಯವಿಲ್ಲ. ಆದುದರಿಂದ ಸ್ತ್ರೀಯರು ಕೀಳು ಎಂಬ ಭಾವನೆಯನ್ನು ಬಿಡಬೇಕು. ಅವರಿಗೆ ಸಮಾನತೆಯನ್ನು ಕೊಡಬೇಕು ಹೀಗಂದ ಮಾತ್ರಕ್ಕೆ ಸ್ತ್ರೀಯರು ಪುರುಷನ ಕೆಲಸ ಮಾಡಬೇಕಂದಲ್ಲ. ಪುರುಷರು ಸ್ತ್ರೀಯರ ಕೆಲಸ ಮಾಡಬೇಕೆಂದಲ್ಲ. ಸ್ವಾಭಾವಿಕವಾದ ಶಕ್ತಿಗಳನ್ನೂ ಅಸೌಕರ್ಯಗಳನ್ನೂ ಗಮನಿಸಬೇಕು. ಇವುಗಳ ಹೊರತು ಮತ್ತಾವ ಕಡೆಯೂ ಪ್ರತಿಬಂಧಕವೂ ಇರಕೂಡದು.

ಕೆಲಸಗಾರರು ಅಸ್ವಾಭಾವಿಕವಾದ ಮತ್ತು ಅನ್ಯಾಯವಾದ ಬಂಧನಗಳನ್ನು ತೊಡೆದುಹಾಕಲು ಪ್ರಯತ್ನಿಸಬೇಕು.

(೧) ಘೋಷ ಪದ್ಧತಿ ಪೂರ್ಣವಾಗಿ ಹೋಗಬೇಕು.

(೨) ಸಾರ್ವಜನಿಕ ಕಾರ್ಯಗಳಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನವನ್ನು ಕೊಡಬೇಕು.

(೩) ಬಾಲ್ಯ ವಿವಾಹ ನಾಶವಾಗಬೇಕು

(೪) ವಿಧವಾ ವಿವಾಹ ಪೂರ್ಣವಾಗಿ ನಾಶವಾಗಬೇಕು.

(೫) ಬಹು ಪತ್ನೀತ್ವವನ್ನು ಕಡಿಮೆ ಮಾಡಬೇಕು. ಪೂರ್ತಾ ನಿಲ್ಲಿಸುವುದೇ ಗುರಿಯಾಗಿರಬೇಕು.

(೬) ಕಾನೂನಿನಿಂದಲೂ ಪದ್ಧತಿಯಿಂದಲೂ ಸ್ತ್ರೀಯರಿಗಿರುವ ಎಲ್ಲಾ ಅನ್ಯಾಯಗಳನ್ನು ತಪ್ಪಿಸಬೇಕು.

(೭) ಹುಡುಗಿಯರಿಗೆ ಹುಡುಗರಂತೆ ವಿದ್ಯೆ ಕಲಿಸಬೇಕು. ಅವರಿಗೂ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳಲು ಅವಕಾಶವಿರಬೇಕು.

(೮) ಸ್ತ್ರೀಯರ ಸೇವೆಗೇ ಸ್ತ್ರೀ ಕೆಲಸಗಾರರೇ ಉತ್ತಮ. ವಯಸ್ಕರಾದ ಸ್ತ್ರೀಯರಿಗೆ ವಿದ್ಯೆ ಕಲಿಸಬೇಕು. ರಾಟನೂಲುವದನ್ನು ಕಲಿಸಬೇಕು. ನೂಲುವುದು ಸ್ತ್ರೀಯ ರಾಜ್ಯ. ಆದರಿಂದ ಅವಳಿಗೆ ಸಂಸಾರದಲ್ಲಿ ಬೆಲೆಯಾದ ಸ್ಥಾನ ದೊರೆಯುಹತ್ತಿದೆ.

(೯) ವೈದ್ಯ ಶಿಕ್ಷಣ, ರೋಗಿಯ ಉಪಚಾರ ಈ ಕಾರ್ಯಗಳು ಸ್ತ್ರೀಯರಿಗೆ ಹೆಚ್ಚು ಒಗ್ಗುತ್ತವೆ. ಇವನ್ನು ಕಲಿಯಲು ಹುಡುಗಿಯರನ್ನು ಪ್ರೋತ್ಸಾಹಿಸಬೇಕು.

ಅನಂತರ ದುರ್ಗಾಬಾಯಿಯವರು ಒಳ್ಳೆಯ ಜೋರಾಗಿ ಮಾತನಾಡಿದರು. "ಸ್ತ್ರೀಯರ "ಉದ್ಧಾರ" ಎಂಬ ಮಾತು ಬೇಡ. ಇದರಿಂದ ಹೆಂಗಸರಿಗೆ ಅವಮಾನ ಪುರುಷರು ಸ್ತ್ರೀಯರನ್ನು ತುಳಿಯುತ್ತಿದ್ದಾರೆ. ಇದು ನಿಲ್ಲಬೇಕು" ಎಂದರು.

೧೧ ಆರೋಗ್ಯ ನೈರ್ಮಲ್ಯಶಿಕ್ಷಣ

ಅನಂತರ ಆರೋಗ್ಯ ನೈರ್ಮಲ್ಯವನ್ನು ಕುರಿತು ಶ್ರೀಮತಿ ಸುಂದರ ರಾಮಚಂದ್ರನ್ ಮಾತನಾಡಿದರು. ಗಾಂಧಿಯವರು ಹೀಗೆ ಹೇಳಿದರು. "ಆರೋಗ್ಯವಾಗಿರುವುದು; ಆರೋಗ್ಯ ನಿಯಮಗಳನ್ನು ತಿಳಿದಿರುವುದು ಇದೇ ಒಂದು ಕಲೆ. ವ್ಯವಸ್ಥಿತವಾದ ಎಲ್ಲಾ ಸಮಾಜಗಳಲ್ಲಿಯೂ ಜನರು ಆರೋಗ್ಯ ನಿಯಮಗಳನ್ನು ಅರಿತು ಅದರಂತೆ ನಡೆಯುತ್ತಾರೆ. ಮನುಷ್ಯರಿಗೆ ಬರುವ ಅನೇಕ ರೋಗಗಳು ಆರೋಗ್ಯ ನಿಯಮಗಳನ್ನು ಪಾಲಿಸದುದರಿಂದ. ನಮ್ಮಲ್ಲಿ ಮರಣ ಸಂಖೆ ಇಷ್ಟು ಹೆಚ್ಚಾಗಿರುವುದಕ್ಕೆ ಮುಖ್ಯ ಕಾರಣವೇನೋ ದಾರಿದ್ರ್ಯ. ಆದರೆ ಜನರಿಗೆ ಆರೋಗ್ಯ ನೈರ್ಮಲ್ಯದ ನಿಜವಾದ ಜ್ಞಾನವುಂಟಾದರೆ ಈ ಮರಣ ಸಂಖೆಯನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು. ಆರೋಗ್ಯವಾದ ದೇಹದಲ್ಲಿ ಆರೋಗ್ಯವಾದ ಮನಸ್ಸು ಇರುವುದೆಂಬುದು ಸತ್ಯ. ಮನಸ್ಸಿಗೂ ದೇಹಕ್ಕೂ ನಿಕಟವಾದ ಸಂಬಂಧವಿದೆ. ನಮ್ಮ ಮನಸ್ಸು ಆರೋಗ್ಯವಾಗಿದ್ದರೆ ನಮಗೆ ಭಯವೆಂಬುದೇ ಇಲ್ಲ.

ಹಿಂಸೆ ನಮ್ಮನ್ನು ಬಿಟ್ಟು ಹೋಗುತ್ತದೆ. ಆದುದರಿಂದ ಕಾಂಗ್ರೆಸ್‌ನವರು ಈ ರಚನಾತ್ಮಕ ಕಾರ್ಯವನ್ನು ಉದಾಸೀನ ಮಾಡಕೂಡದು. ಆರೋಗ್ಯದ ಮುಖ್ಯ ನಿಯಮಗಳನ್ನು ತಿಳಿಯುವುದು ಕಷ್ಟವಿಲ್ಲ. ಇರುವ ಕಷ್ಟ ಅವುಗಳ ಅನುಷ್ಠಾನ.

ಈ ಕೆಳಗಿನ ಕೆಲವು ನಿಯಮಗಳನ್ನು ಅನುಸರಿಸಬಹುದು.

(೧) ನಿಮ್ಮ ಆಲೋಚನೆಗಳು ಯಾವಾಗಲೂ ಶುದ್ಧವಾಗಿರಲಿ. ಅಶುದ್ಧ ಮತ್ತು ಅನವಶ್ಯಕವಾದ (idle) ಯೋಚನೆಗಳನ್ನು ಮನಸ್ಸಿನಿಂದ ಹೊರದೂಡಿ.

(೨) ಯಾವಾಗಲೂ ಪರಿಶುದ್ಧವಾದ ಗಾಳಿಯನ್ನೇ ಸೇವಿಸಿ.

(೩) ದೈಹಿಕ ಶ್ರಮಕ್ಕೂ ಮಾನಸಿಕ ಮತ್ತು ಬುದ್ಧಿಯ ಕೆಲಸಕ್ಕೂ ಸಮರಸವನ್ನು ಸ್ಥಾಪಿಸಿಕೊಳ್ಳಿ.

(೪) ದೇಹ ಯಾವಾಗಲೂ ನೆಟ್ಟಗಿರಲಿ. ನೆಟ್ಟಗೆ ಕುಳಿತು ನೆಟ್ಟಗೆ ನಿಂತುಕೊಳ್ಳಿ. ನಿಮ್ಮ ಎಲ್ಲಾ ಕಾರ್ಯಗಳೂ ಶುದ್ಧವಾಗಿ ಚೊಕ್ಕಟವಾಗಿರಲಿ. ನಿಮ್ಮ ಅಂತರಂಗ ಶುದ್ಧವಾಗಿರುವುದೆಂಬುದು ಇದರಿಂದ ವ್ಯಕ್ತವಾಗಲಿ.

(೫) ಜನಸೇವೆಗಾಗಿ ಜೀವಿಸಬೇಕೆಂಬ ಗುರಿಯಿಂದಲೇ ಆಹಾರ ವನ್ನು ತೆಗೆದುಕೊಳ್ಳಿ. ನಿಮ್ಮ ಸುಖಕ್ಕಾಗಿ ಜೀವಿಸಬೇಡಿ. ಆದ್ದರಿಂದ ದೇಹದ ಆರೋಗ್ಯಕ್ಕೆ ಬೇಕಾದಷ್ಟು ಆಹಾರವನ್ನು ಮಾತ್ರ ತೆಗೆದುಕೊಳ್ಳಿ. ಮನುಷ್ಯ ತನ್ನ ಆಹಾರಕ್ಕೆ ಅನುಗುಣವಾಗಿ ಬೆಳೆಯುತ್ತಾನೆ.

(೬) ನೀವು ಸೇವಿಸುವ ಆಹಾರ ನೀರು ಗಾಳಿ ಎಲ್ಲಾ ಶುದ್ಧವಾಗಿರ ಬೇಕು. ನೀವು ಒಬ್ಬರು ಮಾತ್ರ ಶುದ್ಧರಾಗಿದ್ದರೆ ಸಾಲದು. ನಿಮ್ಮ ಸುತ್ತ ಮುತ್ತ ನಿಮ್ಮ ವಾತಾವರಣವೆಲ್ಲಾ ಶುದ್ಧವಾಗಿರುವಂತೆ ನೀವು ಸ್ಫೂರ್ತಿ ಗೊಳಿಸಬೇಕು "

ಬಾಬು ರಾಜೇಂದ್ರ ಪ್ರಸಾದರು:— " ಮನಸ್ಸನ್ನೂ ದೇಹವನ್ನೂ ಆರೋಗ್ಯವಾಗಿಡುವುದು ಅತ್ಯವಶ್ಯಕ. ಕ್ಲಿಪ್ತವಾದ ಅಭ್ಯಾಸಗಳು ನಿಯತ ಆಹಾರ, ವ್ಯಾಯಾಮ, ಉದ್ಯೋಗ ಇವುಗಳನ್ನು ಅನುಸರಿಸಬೇಕು. ಎಲ್ಲವು ಗಳಿಗಿಂತ ಹೆಚ್ಚಾಗಿ ಜೀವನದಲ್ಲಿ ಸಂಯಮಬೇಕು.

ನಮ್ಮಲ್ಲಿ ಅನೇಕರಿಗೆ ಕ್ಲಿಪ್ತವಾದ ಅಭ್ಯಾಸಗಳಿಲ್ಲ ಆಹಾರ ನಿದ್ರೆ ಕೆಲಸ ಇವುಗಳಲ್ಲಿ ಸರಿಯಾದ ನಿಯಮಗಳಿಲ್ಲ ದೇಹಕ್ಕೆ ಒಳ್ಳೆಯದೇ ಅಲ್ಲವೇ ಎಂಬುದನ್ನು ಯೋಚಿಸದೆ ರುಚಿ ಎಂದು ತಿನ್ನುತ್ತೇವೆ. ಆಹಾರ ಬದಕುವುದಕ್ಕಾಗಿ ಎಂಬುದನ್ನು ಮರೆಯುತ್ತೇವೆ. ಮಧ್ಯಮ ತರಗತಿಯವರು ಈ ಮುಖ್ಯ ವಿಷಯವನ್ನು ಗಮನಿಸಬೇಕು ಬಡವರು ಆಹಾರವಿಲ್ಲದೆ, ಧನಿಕರು ಅಜೀರ್ಣದಿಂದ ನರಳುತ್ತಾರೆ. ನಮ್ಮ ಅವಶ್ಯಕತೆಗಳಿಗನುಸಾರ ವಾಗಿ ಆಹಾರವನ್ನು ಸೇವಿಸಬೇಕು. ಅಡಿಗೆ ಎಷ್ಟು ಸುಲಭವೊ ಜೀರ್ಣ ಶಕ್ತಿಗೆ ಅಷ್ಟು ಸುಲಭ. ಕುಟ್ಟಿದ ಅಕ್ಕಿ ಗೋದಿ ದ್ವಿದಳ ಧಾನ್ಯ ತರ್ಕಾರಿ, ಈರುಳ್ಳಿ ಮಾವಿನಹಣ್ಣು ಬಾಳೆಯಹಣ್ಣು ಹಾಲು ಬೆಣ್ಣೆ ಮೊಸರು ಇವು ಒಳ್ಳೆಯ ಪುಷ್ಟವಾದ ಆಹಾರಗಳು. ಇವುಗಳನ್ನೆಲ್ಲಾ ಹಳ್ಳಿಯಲ್ಲಿ ಬೆಳೆಯ ಬಹುದು.

ಕಷ್ಟವಾದ ಕೆಲಸಗಳನ್ನು ಮಾಡುವವರಿಗೆ ಬೇರೆ ವ್ಯಾಯಾಮ ಬೇಕಿಲ್ಲ. ಆದರೆ ಕುಳಿತಲ್ಲಿಯೇ ಕುಳಿತು ಕೆಲಸ ಮಾಡುವವರಿಗೆ ನಿಯತವಾದ ವ್ಯಾಯಾಮಬೇಕು. ಪಾಠಶಾಲೆಗಳಲ್ಲಿಯೂ ಯುವಕರು ನಿಯತವಾದ ವ್ಯಾಯಾಮವನ್ನು ಮಾಡುವುದಿಲ್ಲ. ಇದರಿಂದ ಅವರ ದೇಹಕ್ಕೂ ಮನಸ್ಸಿಗೂ ಬಹಳ ಅಪಾಯ. ನಡಿಗೆ ಆಟ ಯೋಗಾಸನ ಇವುಗಳನ್ನು ಅವರವರ ಸೌಕರ್ಯಕ್ಕೆ ಅನುಸಾರವಾಗಿ ಮಾಡಬಹುದು.

ಶುದ್ಧವಾದ ಸರಳವಾದ ಆಹಾರ, ಶುದ್ಧ ಜೀವನ, ನಿಯತ ವ್ಯಾಯಾಮ ಇವು ದೇಹವನ್ನೂ ಬೆಳೆಸುತ್ತವೆ, ನೀತಿಯನ್ನೂ ಬೆಳೆಸುತ್ತವೆ. ಶುದ್ಧವಾದ ಜೀವನಕ್ಕೆ ಸಂಯಮವು ಆವಶ್ಯಕ. ಸಂಯಮವಿಲ್ಲದವನು ಆಹಾರ ವ್ಯಾಯಾಮಗಳಲ್ಲಿ ನಿಯತನಾಗಿದ್ದರೂ ಅವನನ್ನು ಆರೋಗ್ಯ ದೃಢಕಾಯನೆಂದು ಹೇಳಲು ಸಾಧ್ಯವಿಲ್ಲ. ಇಂದ್ರಿಯ ಚಾಪಲ್ಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವವನೇ ಆರೋಗ್ಯವಂತ. ಮನಸ್ಸನ್ನು ಸ್ವಾಧೀನ ದಲ್ಲಿಟ್ಟುಕೊಳ್ಳದೆ ಇದು ಸಾಧ್ಯವಿಲ್ಲ. ಮನುಷ್ಯನು ತೆಗೆದುಕೊಳ್ಳುವ ಆಹಾರ ವ್ಯಾಯಾಮ ಓದುವ ಪುಸ್ತಕಗಳು ಸ್ನೇಹಿತರು ಇವುಗಳ ಮೇಲೆಲ್ಲಾ ಮನಸ್ಸಿನ ಶುದ್ಧತೆ ಅವಲಂಬಿಸುತ್ತದೆ. ಆಹಾರ ವ್ಯಾಯಾಮಗಳನ್ನು ಎಷ್ಟು ಎಚ್ಚರಿಕೆಯಿಂದ ಆರಿಸಿಕೊಳ್ಳುತ್ತೇವೆಯೋ ಅಷ್ಟೇ ಎಚ್ಚರಿಕೆಯಿಂದ

ಸ್ನೇಹಿತರನ್ನೂ ಪುಸ್ತಕಗಳನ್ನೂ ಆರಿಸಿಕೊಳ್ಳಬೇಕು. ಮನಸ್ಸೂ ದೇಹವೂ ಆರೋಗ್ಯವಾಗಿರುವವರು ತಮ್ಮ ನೆರೆಹೊರೆಯವರಲ್ಲಿ ಒಳ್ಳೆಯ ಪ್ರಭಾವ ವನ್ನುಂಟುಮಾಡುತ್ತಾರೆ. ಸಂಯಮವಿಲ್ಲದವರಿಂದ ನೆರೆಹೊರೆಯವರಿಗೆ ಕೆಟ್ಟ ಅಭ್ಯಾಸಗಳುಂಟಾಗುತ್ತವೆ. ಆದುದರಿಂದ ಕೆಲಸಗಾರರ ಜೀವನ ಆರೋಗ್ಯಕರವೂ ಶುದ್ಧವೂ ಆಗಿರಬೇಕು ಆಗ ಅವರ ಸಂಪರ್ಕಕ್ಕೆ ಬರುವ ವರಿಗೆಲ್ಲಾ ಆರೋಗ್ಯವೂ ಸುಖ ಸಂತೋಷ ಐಶ್ವರ್ಯಗಳೂ ಹೆಚ್ಚುವುವು. ”

ಗಾಂಧಿಯವರು:—ಆಹಾರ ವ್ಯಾಯಾಮ ನಿಯಮಗಳಲ್ಲಿ ಸಂಯಮದ ಸ್ಥಾನ ಹೆಚ್ಚು. ಮನಸ್ಸು ಶುದ್ಧವಾಗಿಲ್ಲದಿದ್ದರೆ ದೇಹ ಆರೋಗ್ಯವಾಗುವು ದಿಲ್ಲ. ಆರೋಗ್ಯಕ್ಕೆ ಇಂದ್ರಿಯಗಳ ಹತೋಟಿ ಆವಶ್ಯಕ. ದೇಹವು ಪಂಚ ಭೂತಗಳಿಂದ ಆಗಿದೆ. ಪೃಥ್ವಿ ಆಪ್ ತೇಜಸ್ಸು ವಾಯು ಆಕಾಶ. ಇವು ಗಳಲ್ಲಿ ಅತ್ಯಂತ ಮುಖ್ಯವಾದುದು ಗಾಳಿ. ಆಹಾರವಿಲ್ಲದೆ ಕೆಲವು ವಾರ ಇರಬಹುದು ನೀರಿಲ್ಲದೆ ಕೆಲವು ಕಾಲ ಇರಬಹುದು. ಗಾಳಿಯಿಲ್ಲದೆ ಕೆಲವು ನಿಮಿಷಗಳಿಗಿಂತ ಹೆಚ್ಚಾಗಿ ಜೀವಿಸಲು ಸಾಧ್ಯವಿಲ್ಲ. ಆದುದರಿಂದ ದೇವರು ಗಾಳಿ ಎಲ್ಲೆಲ್ಲಿಯೂ ಸಿಕ್ಕುವಂತೆ ಮಾಡಿದ್ದಾನೆ. ಆಹಾರ ನೀರು ಆಗಾಗ್ಗೆ ಸಾಲದೆ ಬರಬಹುದು. ಆದರೆ ಗಾಳಿ ಯಾವಾಗಲೂ ಸಮೃದ್ಧ ವಾಗಿದೆ. ಹೀಗಿದ್ದರೂ ನಾವು ದೇವರು ಕೊಟ್ಟ ಈ ವರವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ ಕಿಟಕಿಗಳನ್ನೂ ಬಾಗಿಲುಗಳನ್ನೂ ಹಾಕಿಕೊಂಡು ಮಲಗುತ್ತೇವೆ.

ಶುದ್ಧವಾದ ಗಾಳಿ ದೊರೆಯಬೇಕಾದರೆ ಬಯಲಿನಲ್ಲಿ ಮಲಗಬೇಕು. ಮಲಗುವ ಸ್ಥಳ ಧೂಳು ಕಸ ಇಲ್ಲದೆ ಶುದ್ಧವಾಗಿರಬೇಕು. ಕೆಲವರು ಧೂಳೂ ಛಳಿಯೂ ಆಗದಂತೆ ಮುಖಕ್ಕೆ ಮುಸಕು ಹಾಕಿಕೊಂಡು ಮಲಗುತ್ತಾರೆ. ಇದು ಕಾಹಿಲೆಗಿಂತ ಅದರ ಔಷಧಿಯಿಂದಲೇ ಹೆಚ್ಚು ಕೆಡಕಾದಂತೆ. ಅನೇಕರಿಗೆ ಬಾಯಿಂದ ಉಸಿರಾಡುವ ಕೆಟ್ಟ ಅಭ್ಯಾಸವಿದೆ. ಅದು ಉಸಿ ರಾಡುವ ಅವಯವವಲ್ಲ. ಮೂಗಿನ ಮೂಲಕ ಹೋಗುವ ಗಾಳಿ ಹೋಗುವಾಗ ಶೋಧಿಸಲ್ಪಟ್ಟು ಶುದ್ಧವಾಗಿ ಶ್ವಾಸಕೋಶವನ್ನು ಬೆಚ್ಚಗೆ ಪ್ರವೇಶಿಸುತ್ತದೆ.

ಸಿಕ್ಕಿದ ಕಡೆ ಉಗುಳುವವರು, ಕಸವನ್ನು ಎಲ್ಲೆಲ್ಲಿಯೂ ಎಸೆಯುವವರು ದೇವರಿಗೂ ಮನುಷ್ಯರಿಗೂ ದ್ರೋಹ ಮಾಡಿದಂತೆ. ಮನುಷ್ಯನ ದೇಹ ದೇವರ ಗುಡಿ. ಹವವನ್ನು ಕೆಡಿಸುವವರು ಗುಡಿಯನ್ನು ಹಾಳುಮಾಡಿದಂತೆ ಅವರ ಬಾಯಲ್ಲಿ ರಾಮನಾಮ ಸಹ ವ್ಯರ್ಥ.

ಪ್ರಕೃತಿಯ ನಿಯಮಕ್ಕೆ ಅನುಸಾರ ನಡೆಯುವುದರಿಂದ ದೇಹದ ಆರೋಗ್ಯ ನಿಲ್ಲುವುದು. ಸ್ವೇಚ್ಛಾ ಪ್ರವರ್ತನೆಯಿಂದ ರೋಗ ಬರುವುದು ದೇಹಕ್ಕೆ ಔಷಧಿಯನ್ನು ತುಂಬುವುದು ತಿಪ್ಪೆಯೊಳಕ್ಕೆ ಕಸವನ್ನು ತುಂಬಿದಂತೆಯೇ. ರೋಗಗಳೆಲ್ಲಾ ಒಂದು ಕಾರಣದಿಂದ ಬರುತ್ತವೆ. ಆದುದರಿಂದ ಎಲ್ಲಾ ರೋಗಗಳಿಗೂ ಸಮಾನವಾದ ಒಂದು ಔಷಧಿ ಇರಬೇಕು. ರಾಮನಾಮ, ಸೂರ್ಯಸ್ನಾನ ಸೊಂಟದಿಂದ ಕೆಳಗಿನ ವರೆಗಿನ ಸ್ನಾನ, ಸರಳವಾದ ಪುಷ್ಟವಾದ ಆಹಾರ, ಹಣ್ಣು, ಹಣ್ಣುಗಳ ರಸ ಮಜ್ಜಿಗೆ ಇವು ಎಲ್ಲರಿಗೂ ಆಹಾರ ಔಷಧಿ. ರೋಗಗಳಲ್ಲಿ ಒಗ್ಗಟ್ಟು ಇರುವಂತೆ ಔಷಧಿಯಲ್ಲಿಯೂ ಇದೆ. ನಾನು ನನ್ನಲ್ಲಿಗೆ ಬಂದವರಿಗೆಲ್ಲಾ ರಾಮನಾಮವನ್ನೇ ಔಷಧಿಯನ್ನಾಗಿ ಹೇಳಿದೆ. ಶಾಸ್ತ್ರಗಳನ್ನು ನಮಗೆ ಇಷ್ಟ ಬಂದಂತೆ ನಾವು ವಿವರಿಸುತ್ತೇವೆ. ಧರ್ಮದ ಗುಣ ಸತ್ತನಂತರ ಆತ್ಮಕ್ಕೆ ಮೋಕ್ಷ ಎನ್ನುತ್ತೇವೆ. ನಾನು ಅದನ್ನು ಒಪ್ಪುವುದಿಲ್ಲ. ಈ ಲೋಕದಲ್ಲಿ ಪ್ರಯೋಜನಕ್ಕೆ ಬರದ ಧರ್ಮ ನನಗೆ ಮುಂದಲ ಲೋಕದಲ್ಲಿಯೂ ಪ್ರಯೋಜನವಿಲ್ಲ.

ಪ್ರಕೃತಿ ವೈದ್ಯವನ್ನು ಮಾಡಬೇಕಾದರೆ ಹೆಚ್ಚಾದ ಪ್ರೌಢಿಮೆ ಬೇಕಾಗಿಲ್ಲ. ಸರ್ವಸಾಮಾನ್ಯವಾದುದು ಸರಳವಾಗಿಯೇ ಇರುತ್ತದೆ. ಪ್ರೌಢ ಜ್ಞಾನವನ್ನು ಕೆಲವರು ಸಂಪಾದಿಸಬಲ್ಲರು. ಅದರಿಂದ ಧನಿಕರಿಗೆ ಮಾತ್ರ ಲಾಭ. ಆದರೆ ಭಾರತೀಯರು ವಾಸಿಸುವುದು ಕುಗ್ರಾಮಗಳಾದ ಹತ್ತಾರು ಜನರಿರುವ ಹಳ್ಳಿಗಳಲ್ಲಿ. ನೂರು ಜನರಿರುವ ಹಳ್ಳಿಗಳು ಸಹ ಅಪೂರ್ವ. ಇದೇ ನಿಜವಾದ ಭಾರತ, ನಾನು ಜೀವಿಸುತ್ತಿರುವುದು ಈ ಭಾರತಕ್ಕಾಗಿ. ಈ ಬಡವರಿಗೆ, ಪಟ್ಟಣಗಳ ವೈದ್ಯರನ್ನೂ ವೈದ್ಯ ಸಲಕರಣೆಗಳನ್ನೂ ಕೊಂಡು ಹೋಗಿ ಕೊಡುವುದು ಸಾಧ್ಯವಿಲ್ಲ. ಇಂತಹವರಿಗೆ ರಾಮನಾಮವೇ ಗತಿ. ಸ್ವಲ್ಪವೂ ರೋಗವಿಲ್ಲದವರು ಈ ಲೋಕದಲ್ಲಿ ಯಾರೂ ಇಲ್ಲ.

ಕೆಲವು ರೋಗಗಳಿಗೆ ಇಲ್ಲಿ ಔಷಧಿಯೇ ಇಲ್ಲ. ಕೈ ಇಲ್ಲದವನಿಗೆ ರಾಮ ನಾಮ ಕೈಯ್ಯನ್ನು ಕೊಡಲಾರದು. ಆದರೆ ರಾಮನಾಮ ಅದಕ್ಕಿಂತ ಹೆಚ್ಚಾದ ಅದ್ಭುತವನ್ನು ಮಾಡಬಲ್ಲದು. ಅದು ಕೈಯಿಲ್ಲದಿದ್ದರೂ ಅದ್ಭುತ ಶಾಂತಿಯನ್ನು ಕೊಡಬಲ್ಲದು. ಮರಣದ ಭಯವನ್ನೇ ತಪ್ಪಿಸಬಹುದು. ಪ್ರತಿಯೊಬ್ಬನಿಗೂ ಮರಣ ಬರಲೇಬೇಕು. ಹೀಗಿರುವಲ್ಲಿ ಮರಣಕ್ಕೆ ಯಾಕೆ ಚಿಂತಿಸಬೇಕು.

ಪ್ರಕೃತಿ ವೈದ್ಯ ಎರಡು ಭಾಗ. ಮೊದಲನೆಯದು ರಾಮನಾಮೋಚ್ಚಾರಣೆ ಯಿಂದ ರೋಗವನ್ನು ವಾಸಿಮಾಡಿಕೊಳ್ಳುವುದು. ಎರಡನೆಯದು, ಆರೋಗ್ಯ ನಿಯಮವನ್ನು ಪಾಲಿಸುತ್ತಾ ರೋಗ ಬರದಂತೆ ಮಾಡಿಕೊಳ್ಳುವುದು. ಎಲ್ಲಿ ಬಾಹ್ಯ ಅಂತರ ಎರಡೂ ಶುದ್ಧವೋ ಅಲ್ಲಿ ರೋಗ ಬರುವುದೇ ಇಲ್ಲ. ಇದು ಜನರಿಗೆ ತಿಳಿದರೆ ಅವರಿಗೆ ವೈದ್ಯರ ಆವಶ್ಯಕತೆಯುಂಟಾಗುವುದಿಲ್ಲ. ಪ್ರಕೃತಿ ವೈದ್ಯಕ್ಕೆ ದೇವರೇ ಕೇಂದ್ರ. ವೈದ್ಯರು ರಾಮನಾಮ ಸರ್ವರೋಗಹರ ವೆಂದು ಅರಿತಿಲ್ಲ. ಆಯುರ್ವೇದದವರೂ ತಿಳಿದಿಲ್ಲ. ಆಯುರ್ವೇದದವರು ರಾಮನಾಮವನ್ನು ಮಂತ್ರತಂತ್ರವೆಂದು ಉಪಯೋಗಿಸುತ್ತಾರೆ. ಇದರಿಂದ ಮೂಢನಂಬಿಕೆ ಹೆಚ್ಚುತ್ತದೆ. ರಾಮ ನಾಮವು ಪ್ರಕೃತಿಯ ಅದ್ವಿತೀಯ ಧರ್ಮ. ರಾಮನಾಮವನ್ನು ಅನುಸರಿಸುವವರಿಗೆ ರೋಗವಿಲ್ಲ. ರೋಗ ಬರದಂತೆ ತಡೆಯುವುದು ಯಾವುದೋ ಅದೇ ರೋಗಕ್ಕೆ ಔಷಧಿ ಸಹ. ಹಾಗಾದ ಮೇಲೆ ರಾಮ ನಾಮವನ್ನು ನಿಯಮಿತವಾಗಿ ಉಚ್ಚರಿಸುತ್ತಾ ಪರಿಶುದ್ಧ ಜೀವನವನ್ನು ನಡೆಸುವವನು ಯಾಕೆ ಕಾಹಿಲೆ ಬೀಳುತ್ತಾನೆ? ಎಂದು ಕೇಳಬಹುದು. ಮನುಷ್ಯ ಸ್ವಭಾವದಿಂದ ಅಪೂರ್ಣ. ವಿವೇಕಿ ಯಾದವನು ಪೂರ್ಣತೆಗಾಗಿ ಪರಿಶ್ರಮಿಸುತ್ತಾನೆ. ಆದರೆ ಜಯಶಾಲಿ ಯಾಗುವುದಿಲ್ಲ. ಅವರು ಅಜ್ಞಾನದಿಂದ ದಾರಿಯಲ್ಲಿ ಎಡವುತ್ತಾರೆ. ದೇವರ ನಿಯಮಗಳೆಲ್ಲಾ ಪರಿಶುದ್ಧವಾದ ಜೀವನವನ್ನು ನಡೆಸುವುದರಲ್ಲಿ ಅಡಕ ವಾಗಿವೆ. ತನ್ನ ಶಕ್ತಿಯ ಪರಿಮಿತಿ ಎಷ್ಟು ಎಂಬುದನ್ನು ಅರಿಯಬೇಕು. ತನ್ನ ಶಕ್ತಿಯ ಪರಿಮಿತಿಯನ್ನು ಮೀರಿದಾಗ ಮನುಷ್ಯನು ರೋಗಿಯಾಗುತ್ತಾನೆ; ಆದುದರಿಂದ ತನ್ನ ಆವಶ್ಯಕತೆಗೆ ಅನುಸಾರವಾಗಿ ಆಹಾರವನ್ನು ಸೇವಿಸುವುದ ರಿಂದ ಕಾಹಿಲೆಯನ್ನು ದೂರದಲ್ಲಿಡಬಹುದು. ಹಾಗಾದರೆ ಸರಿಯಾದ

ಆಹಾರ ಯಾವುದು ? ಇಂತಹ ಸಮಸ್ಯೆಗಳು ಇನ್ನೂ ಅನೇಕ ಏಳಬಹುದು. ಪ್ರತಿಯೊಬ್ಬ ತಾನೇ ತನ್ನ ವೈದ್ಯ. ಹೀಗೆ ಮಾಡುವವನು ಖಂಡಿತ ನೂರ ಇಪ್ಪತ್ತೈದು ವರುಷ ಬದುಕುತ್ತಾನೆ. ಹಿಂದೆ ದೇವರಿಗೆ ವಿಷ್ಣು ಎಂದು ಹೇಳಿದ್ದಿರಬಹುದು. ನಾನು ಬಾಲ್ಯದಿಂದ ತುಳಸೀದಾಸ ಭಕ್ತ. ಆದುದರಿಂದ ರಾಮನೇ ನನ್ನ ದೇವರು. ಓಂಕಾರದಿಂದ ಹಿಡಿದು ದೇವರಿಗೆ ಬಂದಿರುವ ಅಸಂಖ್ಯಾತವಾದ ಹೆಸರುಗಳನ್ನೆಲ್ಲ ಕೇಳಿದರೂ ಒಂದೇ ತೀರ್ಮಾನಕ್ಕೆ ಬರುತ್ತೇವೆ. ದೇವರು ಒಂದೇ. ಧರ್ಮವು ಒಂದೇ ಧರ್ಮವನ್ನು ಆಚರಿಸುವುದೇ ದೇವರ ಪೂಜೆ, ಧರ್ಮವನ್ನು ಅರಿತು ಅದರೊಡನೆ ಒಂದಾಗುವವನು ದೇವರ ಹೆಸರನ್ನು ಸುಮ್ಮನೆ ಉಚ್ಚರಿಸಬೇಕಾದುದಿಲ್ಲ ಅಂತಹ ಭಕ್ತನು ಉಸಿರಾಡುವಷ್ಟೇ ಸಹಜವಾಗಿ ದೇವರ ಧ್ಯಾನವನ್ನೂ ಮಾಡುತ್ತಾನೆ. ಧರ್ಮಗಳೂ ನಿಯಮಗಳೂ ಸ್ವಾಭಾವಿಕವಾಗಿ ಅವನ ಮೈಗೂಡುವುವು. ಅಂತವನಿಗೆ ಬೇರೆ ಔಷಧಿ ಯಾಕೆ ? ಹಾಗಾದ ಮೇಲೆ ಈ ಔಷಧಿ ನಮಗೆ ಯಾಕೆ ತಿಳಿದಿಲ್ಲ ತಿಳಿದಿದ್ದರೂ ಯಾಕೆ ಜ್ಞಾಪಕ ಬರುವುದಿಲ್ಲ. ವೈದ್ಯರು ಯಾಕೆ ಹೇಳಿಕೊಡುವುದಿಲ್ಲ ಎಂದು ಕೇಳಬಹುದು. ಈ ಅಮೃತ ಸಂಜೀವಿನಿಯನ್ನು ವೈದ್ಯರು ಸೂಚಿಸುವುದಿಲ್ಲ. ಅವರಿಗೆ ಅದರಲ್ಲಿ ನಂಬಿಕೆ ಇಲ್ಲ. ಪವಿತ್ರವಾದ ಗಂಗಾನದಿ ಪ್ರತಿ ಮನೆಯಲ್ಲಿಯೂ ಇದೆ ಎಂದು ವೈದ್ಯರು ಒಂದು ಸಲ ಒಪ್ಪಿಬಿಟ್ಟರೆ ಅವರ ಕಸಬು ಹೋಗುತ್ತದೆ ಆದುದರಿಂದ ಅವರು ಔಷಧಿ ತೈಲಗಳೇ ಅದ್ವಿತೀಯಗಳೆಂದು ಅವುಗಳ ಮೇಲೆ ಅವಲಂಬಿಸುತ್ತಾರೆ ರೋಗಿಗೂ ಕೂಡಲೇ ಏನೋ ಒಂದು ಸಮಾಧಾನವಾಗುತ್ತದೆ ಒಬ್ಬ ವೈದ್ಯನ ವಿಷಯದಲ್ಲಿ ಕೆಲವರು " ಆತ ನನಗೆ ಒಂದು ಪುಡಿ ಕೊಟ್ಟ ಗುಣವಾಯಿತು " ಎಂದು ಹೇಳಿದರೆ ಅವನ ಕಸಬು ಶಾಶ್ವತವಾದಂತೆ. ಇನ್ನೊಂದು ವಿಷಯವನ್ನೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ರಾಮನಾಮದ ಮಹಿಮೆ ವೈದ್ಯರಿಗೆ ಚೆನ್ನಾಗಿ ಗೊತ್ತಿದ್ದರೆ ಮಾತ್ರ ಅವರು ಅದನ್ನು ಔಷಧಿಯಾಗಿ ಸೂಚಿಸಬಹುದು. ಇಲ್ಲದಿದ್ದರೆ ಫಲವಿಲ್ಲ. ರಾಮನಾಮ ಬರಿಯ ಪುಸ್ತಕ ಪಾಠವಲ್ಲ. ಅದರ ಮಹಿಮೆ ಅನುಭವದಿಂದ ಮಾತ್ರ ಸಾಧ್ಯ. ಅದನು ಅನುಭವಿಸಿರುವವರು ಅದನ್ನೇ ಔಷಧಿಯಾಗಿ ಸೂಚಿಸುತ್ತಾರೆ ಬೇರೆ ಏನನ್ನೂ ಅಲ್ಲ.

ವಿಷ್ಣುಂ ಸಹಸ್ರ ಮೂರ್ಧಾನಂ ಚರಾಚರಪತಿಂ ವಿಭುಂ
ಸ್ತುವನ್ನಾಮ ಸಹಸ್ರೇಣ ಜ್ವರಾನ್ ಸರ್ವಾನ್ ವ್ಯಪೋಹತಿ (ಚರಕ)

"ವಿಷ್ಣುವಿನ ಒಂದು ನಾಮದಿಂದ ಎಲ್ಲಾ ಜ್ವರಗಳೂ ನಾಶ ವಾಗುತ್ತವೆ"

ಹೀಗೆ ಪ್ರಕೃತಿ ನಿಯಮವನ್ನು ಪಾಲಿಸಿದ ಮೇಲೆ ಮನುಷ್ಯ ನೂರ ಇಪ್ಪತ್ತೈದು ವರುಷ ಬದುಕಿಯೇ ಬದುಕುತ್ತಾನೆ. ಇದಕ್ಕೆ ಮುಖ್ಯ ವಾದುದು ಅನಾಸಕ್ತವಾದ ಸೇವೆ. ಅನಾಸಕ್ತವಾದ ಸೇವೆಯನ್ನು ಮಾಡದ ಯಾರೂ ನೂರ ಇಪ್ಪತ್ತೈದು ವರುಷ ಬದುಕಲು ಆಶಿಸಬಾರದು. ಮನುಷ್ಯ ನಿಗೆ ದೇಹವಿರುವುದು ಸೇವೆಗಾಗಿ. ಬರಿಯ ಸುಖಾಭಿಲಾಷೆಗೇ ಅಲ್ಲ. ವೈರಾಗ್ಯ ತ್ಯಾಗಗಳೇ ಆನಂದ ಜೀವನದ ರಹಸ್ಯಗಳು. ತ್ಯಾಗವೇ ಜೀವ. ಸುಖಾಭಿ ಲಾಷೆಯೇ ಮರಣ. ಅನಾಸಕ್ತರಾಗಿ ನೂರ ಇಪತ್ತೈದು ವರುಷ ಸೇವೆ ಮಾಡಲು ಎಲ್ಲರಿಗೂ ಅಧಿಕಾರವಿದೆ. ಅಂತಹ ಬಾಳು ಸೇವೆಗೇ ಮೀಸಲು. ತ್ಯಾಗದ ಆನಂದವನ್ನು ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ ಯಾಕೆಂದರೆ ಅದು ನಮ್ಮಲ್ಲಿಯೇ ಇರುವ ಅಮೃತ, ನಮ್ಮ ಜೀವನವನ್ನು ರಕ್ಷಿಸುವ ಬೆಳಸುವ ಅಮೃತ ಇಂತಹ ಬಾಳ್ವಿಗೆ ತಾಪತ್ರಯವೂ ಅಶಾಂತಿಯೂ ಇಲ್ಲ. ತ್ಯಾಗದ ಆನಂದವಿಲ್ಲದವರಿಗೆ ದೀರ್ಘಾಯುಸ್ಸು (ಸಾಧ್ಯವೂ ಇಲ್ಲ.) ಆವಶ್ಯ ಕವೂ ಇಲ್ಲ"

೧೨ ಕುಷ್ಠರ ಸೇವೆ

ರಚನಾತ್ಮಕ ಕಾರ್ಯಕ್ರಮದ ಮುಂದಲ ಅಂಗವಾದ ಕುಷ್ಟರೋಗಿಗಳ ಕುರಿತು ಮುಂದೆ ಚರ್ಚೆ ನಡೆಯಿತು. ಗಾಂಧಿಯವರು ರಚನಾತ್ಮಕ ಕಾರ್ಯ ಗಳಲ್ಲಿ ಕುಷ್ಠರೋಗಿಗಳ ರಕ್ಷಣೆಯನ್ನು ಸೇರಿಸಿದ ಈಚೆಗೆ ಈ ಪ್ರಶ್ನೆಯ ಸ್ವರೂಪವೇ ಬದಲಾಯಿಸಿದೆ. ಈ ರೋಗದ ವಿಷಯದಲ್ಲಿ ಉಂಟಾಗಿರುವ ಹೊಸ ಅಭಿಪ್ರಾಯವನ್ನು ಸಮಾಜದ ಮುಂದಾಳುಗಳೂ ಆರೋಗ್ಯ ಇಲಾಖೆ ಯವರೂ ಕೆಲವು ಕಡೆ ವೈದ್ಯರೂ ಸಹ ತಿಳಿಯಬೇಕಾಗಿದೆ. ಕುಷ್ಠ ರೋಗವು ಸಾಧಾರಣವಾದ ಕಾಯಿಲೆ. ಇದು ಕೆಲವು ವೇಳೆಗಳಲ್ಲಿಸಾಂಕ್ರಾಮಿಕ. ಇದು ಅಷ್ಟು ಭಯಂಕರವಾದ ರೋಗವಲ್ಲ. ಖಂಡನೀಯವಾದುದೂ ಅಲ್ಲ.

ಎಲ್ಲಾ ಕುಷ್ಠರೋಗಿಗಳ ರೋಗವೂ ಸಾಂಕ್ರಾಮಿಕವಲ್ಲ. ಸಾಂಕ್ರಾಮಿಕ ವಾದಾಗಲೂ ಕೂಡ ರೋಗಿಯ ಹತ್ತಿರದಲ್ಲಿ ಬಹಳ ಕಾಲವಿದ್ದರೆ— ಅದ ರಲ್ಲಿಯೂ ಮುಖ್ಯವಾಗಿ ಮಕ್ಕಳಿಗೆ ಈ ರೋಗ ಬರುವ ಸಂಭವವುಂಟು, ಕುಷ್ಠರೋಗ ಅನುವಂಶೀಯ (Hereditary) ವಾದುದಲ್ಲ. ಕುಷ್ಠ ರೋಗದ ಮೂಲವು ಮೇಹ ಜಾಡ್ಯವಲ್ಲ. ರೋಗಿಗಳು ಪ್ರಾರಂಭದ ದೆಸೆ ಯಲ್ಲಿಯೇ ಸರಿಯಾದ ವೈದ್ಯ ಸಹಾಯವನ್ನು ಹೊಂದಿದರೆ ಕುಷ್ಠರೋಗ ಗುಣವಾಗುವುದು. ಆದರೆ ರೋಗವು ಅವಮಾನವಲ್ಲ ಎಂಬುದು ಜನರಿಗೆ ತಿಳಿದಿದೆ ಎಂದು ನಂಬಿಕೆಯಾದರೆ ಮಾತ್ರ ರೋಗಿ ಪ್ರಾರಂಭ ದೆಸೆಯಲ್ಲಿ ವೈದ್ಯರಲ್ಲಿ ಹೋಗುತ್ತಾನೆ. ಆದುದರಿಂದ ಜನರಲ್ಲಿ ಜ್ಞಾನ ಪ್ರಸಾರವೇ ಇದರ ನಿವಾರಣೋಪಾಯ.

ಕುಷ್ಠ ರೋಗವನ್ನು ಗುಣಪಡಿಸುವುದಕ್ಕಿಂತ ಬರದಂತೆ ತಡೆಯು ವುದು ಸುಲಭ. ಕುಷ್ಠ ರೋಗವನ್ನು ತಡೆಯುವುದೆಂದರೆ ರೋಗಿಗಳಿಗೂ ಮಕ್ಕಳಿಗೂ ಸಂಪರ್ಕವಿಲ್ಲದಂತೆ ಮಾಡುವುದು. ಸಾರ್ವೆಯಲ್ಲಿ ಮುಖ್ಯವಾಗಿ ಮಕ್ಕಳು ಕುಷ್ಠರೋಗಿಗಳೊಂದಿಗೆ ವಾಸಿಸದಂತೆ ಮಾಡಿ ಈ ರೋಗವನ್ನು ಹತೋಟಿಗೆ ತಂದರು. ಪ್ರತಿಯೊಬ್ಬ ರೋಗಿಗೂ ಅನುಸಾರವಾದ ವೈದ್ಯ ಸಹಾಯ ದೊರೆಯಬೇಕು. ಕೆಲವು ರೋಗಿಗಳನ್ನು ಕುಷ್ಠರೋಗ ವೈದ್ಯ ಶಾಲೆಗಳಿಗೇ ಕಳುಹಿಸಬೇಕಾಗಬಹುದು.

ನಮ್ಮ ದೇಶದಲ್ಲಿ ಕುಷ್ಠರೋಗ ಮುಖ್ಯವಾಗಿ ಹಳ್ಳಿ ಸಮಸ್ಯೆ. ಎಲ್ಲಾ ಹಳ್ಳಿಗಳಲ್ಲಿಯೂ ಕುಷ್ಠರೋಗಿಗಳು ಇಲ್ಲ. ಆದರೆ ಕೆಲವು ಹಳ್ಳಿಗಳಲ್ಲಿ ಬಹಳ ಜನ ರೋಗಿಗಳಿದ್ದಾರೆ. ದಕ್ಷಿಣ ಭಾರತದಲ್ಲಿ ಮಧುರಂತಾಕಮ್ ಎಂಬ ಊರಿನ ಹತ್ತಿರ ಒಂದು ಕುಷ್ಠರೋಗಿಗಳ ಗ್ರಾಮವಿದೆ. ರಾತ್ರಿ ಕಾಲದಲ್ಲಿ ಮಾತ್ರ ರೋಗಿಗಳನ್ನು ಊರ ಹೊರಗಿನ ಗುಡಿಸಲುಗಳಲ್ಲಿ ಬಿಡುತ್ತಾರೆ. ರೋಗಿಗಳು ದಿವಸವೆಲ್ಲಾ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಇದರಿಂದ ಸಾಂಕ್ರಾಮಿಕ ಮಕ್ಕಳಿಗೆ ತಗಲುವುದಿಲ್ಲ. ಕುಷ್ಠ ರೋಗಿ ಸಹ ತನ್ನ ಸಂಪಾದನೆ ತಾನು ಮಾಡುತ್ತಾನೆ. ನಾವು ಸಹಾನು ಭೂತಿಯಿಂದ ವರ್ತಿಸಿ ಮಕ್ಕಳ ಸಂಪರ್ಕ ಅವರಿಗೆ ಬರದಂತೆ ಮಾಡಿದರೆ ಸಾಕು.

ಕುಷ್ಠರೋಗಿಗಳ ಸೇವೆ ಒಂದು ಧರ್ಮ ಕಾರ್ಯ. ಅವರಲ್ಲಿ ಭ್ರಾತೃತ್ವ ವನ್ನು ತೋರಿಸುವ ಧೀರರ ಗುಂಪು ಹೊರಡಬೇಕು. ಫಾದರ್ ಡೇಮಿಯನ್ ಎಂಬುವವರು ತಮ್ಮ ಕಾಲದಲ್ಲಿ ಅಂತಹ ಧೀರವಾದ ಕಾರ್ಯವನ್ನು ಮಾಡಿದರು. ಆ ಮನಸ್ಸ್ಥೈರ್ಯದ ಫಲವಾಗಿ ಫಾದರ್ ಡೇಮಿಯನ್ ಬಹಳ ಅಪಾಯಕ್ಕೆ ಒಳಗಾದರು. ನಾವು ಅಂತಹ ಅಪಾಯಕ್ಕೆ ಒಳಗಾಗದೆ ಕುಷ್ಠ ರೋಗಿಗಳ ಸೇವೆಯನ್ನು ಮಾಡಬಹುದು.

ಕುಷ್ಠ ರೋಗಿಗಳಿಗಾಗಿ ಕೆಲಸ ಮಾಡುವವರು ಹಳ್ಳಿಯ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಬಹು ಬೇಗ ಎದುರಿಸಬೇಕಾಗುತ್ತದೆ. ಈ ಸ್ತ್ರೀ ಪುರುಷರಿಗೆ ಒಂದು ಬೆಲೆಯನ್ನು ಉಂಟುಮಾಡಿಕೊಡುವುದೇ ಅವರಿಗೆ ಮಾಡಬಹುದಾದ ಆರ್ಥಿಕ ಸೇವೆ. ಕುಷ್ಠರೋಗಿಗಳಿಂದಲೂ ಸಮಾಜಕ್ಕೆ ಪ್ರಯೋಜನವುಂಟೆಂಬುದು ಜನರಿಗೆ ಗೊತ್ತಾಗಬೇಕು.

ಕುಷ್ಠರೋಗಿಗಳ ಸಮಸ್ಯೆಯನ್ನು ಕುರಿತು ಗಾಂಧಿಜಿ ಹೀಗೆ ಹೇಳಿದರು. "ಮಧ್ಯ ಆಫ್ರಿಕಾವನ್ನು ಬಿಟ್ಟರೆ, ಭಾರತದಲ್ಲಿರುವಷ್ಟು ಕುಷ್ಠ ರೋಗಿಗಳು ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲ. ನಮ್ಮಲ್ಲಿ ಅತ್ಯುತ್ಕೃಷ್ಟರಾದವರು ಹೇಗೆ ಸಮಾಜದ ಭಾಗವೋ ಕುಷ್ಠ ರೋಗಿಗಳೂ ಹಾಗೆಯೇ ಸಮಾಜದ ಭಾಗ. ಪ್ರಮುಖರಿಗೆ ಸಮಾಜದ ಸಹಾನುಭೂತಿ ಬೇಡವಾದರೂ ಸಮಾಜ ಅವರ ಸೇವೆಯನ್ನೇ ಮಾಡುತ್ತದೆ. ಸಮಾಜದ ಸೇವೆಯ ಆವಶ್ಯಕತೆ ಇರುವ ಕುಷ್ಠರೋಗಿಗಳನ್ನು ಸಮಾಜ ತಿರಸ್ಕರಿಸಿದೆ. ಅಹಿಂಸೆಯ ದೃಷ್ಟಿಯಿಂದ ಈ ನಡತೆ ಹೃದಯ ಹೀನ. ಮಿಶನರಿಗಳು ಹೆಚ್ಚಾಗಿ ಕುಷ್ಠರೋಗಿಗಳ ಸೇವೆ ಮಾಡುತ್ತಿದ್ದಾರೆ. ಭಾರತದಲ್ಲಿ ಕುಷ್ಠರೋಗಿಗಳಿಗಿರುವುದು ಒಂದೇ ಆಲಯ. ಇದನ್ನು ಶ್ರೀ ಮನೋಹರ್ ದಿವಾನ್‌ರವರು ವಾರ್ಧಾದ ಹತ್ತಿರದಲ್ಲಿ ನಡೆಸುತ್ತಿದ್ದಾರೆ. ಅದು ವಿನೋಬಾ ಭಾವೆಯವರ ಸ್ಫೂರ್ತಿ ನೇತೃತ್ವದಲ್ಲಿ ನಡೆಯುತ್ತಿದೆ. ಅಹಿಂಸಾ ಮಾರ್ಗದಿಂದ ಆದಷ್ಟು ಜಾಗ್ರತೆ ಸ್ವಾತಂತ್ರ್ಯ ವನ್ನು ಗಳಿಸುವುದು ನಮ್ಮ ಧ್ಯೇಯವಾದರೆ, ನಮ್ಮ ದೇಶದಲ್ಲಿ ತಿರಸ್ಕೃತನಾದ ಒಬ್ಬ ಕುಷ್ಠರೋಗಿಯೂ ಇರಕೂಡದು. ನಾನು ಕುಷ್ಠರೋಗಿಗಳ ಕಾರ್ಯ ವನ್ನು ರಚನಾತ್ಮಕ ಕಾರ್ಯದಲ್ಲಿ ಸೇರಿಸಿದ್ದೇನೆ. ನಾವು ಕುಷ್ಠರೋಗಿಗಳನ್ನು ಕಾಣುತ್ತಿರುವಂತೆಯೇ "ಜಗತ್ತು ನಮ್ಮನ್ನು ಕಾಣುತ್ತಿದೆ."

ನಂತರ ಶ್ರೀ ಜಗದೀಶನ್‌ರವರು ಕುಷ್ಠರೋಗಿಗಳ ಸಮಸ್ಯೆಯನ್ನು ಕುರಿತು ಮಾತನಾಡಿದರು. "ಕುಷ್ಠ ರೋಗಿಗಳು ರಾತ್ರಿ ಹೊತ್ತು ಬೇರೆ ಇದ್ದರೆ ಸಾಕು. ಮಕ್ಕಳು ಅವರ ಹತ್ತಿರ ಹೋಗಬಾರದು. ಅವರು ಮುಟ್ಟುವ ಬಟ್ಟೆ ಪಾತ್ರೆಗಳು ಬೇರೆ ಇರಬೇಕು; ಎಂದು ಹೇಳಿದರು.

೧೩ ಜಾತೀಯ ಐಕ್ಯತೆ

ರಚನಾತ್ಮಕ ಕಾರ್ಯಕ್ರಮದ ಮುಂದಲ ಅಂಶವಾದ ಜಾತೀಯ ಐಕ್ಯತೆಯನ್ನು ಕುರಿತು ಡಾ॥ ರುಕ್ಮಿಣಿ ಲಕ್ಷ್ಮೀಪತಿಯವರ ಅಧ್ಯಕ್ಷತೆಯಲ್ಲಿ ಚರ್ಚೆ ನಡೆಯಿತು. ·ಜಾತೀಯ ಐಕ್ಯತೆಗೆ ಮಹಾತ್ಮಾ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ಮೊದಲನೆಯ ಪ್ರಮುಖ ಸ್ಥಾನ. ಗಾಂಧಿ ಯವರು ಹೀಗೆ ಹೇಳಿದ್ದಾರೆ.

ಗಾಂಧಿಜಿ :— ಜಾತೀಯ ಐಕ್ಯಬೇಕೆಂದು ಎಲ್ಲರೂ ಒಪ್ಪಿದ್ದಾರೆ. ಆದರೆ ರಾಜಕೀಯ ಒಗ್ಗಟ್ಟು ಮಾತ್ರವೇ ಒಗ್ಗಟ್ಟಲ್ಲವೆಂಬುದು ಎಲ್ಲರಿಗೂ ತಿಳಿಯದು. ಈ ಒಗ್ಗಟ್ಟು ಎಂದರೆ ಹೃದಯದೊಂದಿಗೆ ಹೃದಯ ಬೆರೆಯುವುದು. ಈ ಒಗ್ಗಟ್ಟನ್ನು ಸಂಪಾದಿಸಲು ಮೊದಲನೆಯ ಮೆಟ್ಟಲಾಗಿ ಪ್ರತಿ ಕಾಂಗ್ರೆಸ್‌ನವರೂ ಭಾರತದ ಎಲ್ಲರೊಂದಿಗೆ ತಾನು ಒಂದು ಎಂದು ಭಾವಿಸಬೇಕು. ಇದರ ಅನುಭವಕ್ಕಾಗಿ ಪ್ರತಿ ಕಾಂಗ್ರೆಸ್‌ನವರೂ ತಮ್ಮ ಜಾತಿಯವನಲ್ಲದ ಮತ್ತೊಬ್ಬನೊಂದಿಗೆ ಸ್ನೇಹವನ್ನು ಬೆಳೆಸ ಬೇಕು. ತನ್ನ ಧರ್ಮಕ್ಕೆ ಕೊಡುವ ಗೌರವವನ್ನೇ ಇತರ ಧರ್ಮಕ್ಕೂ ಕೊಡಬೇಕು. ರಾಜಕೀಯ ಒಗ್ಗಟ್ಟು ಇದರ ಸ್ವಾಭಾವಿಕವಾದ ಫಲ ವಾಗುವುದು

ಇಂತಹ ಹೃದಯದ ಐಕ್ಯ, ಸ್ವಾಭಾವಿಕವಾಗಿದ್ದರೂ ಕ್ರಾಂತಿಕಾರಕ ವಾಗಿ ತೋರಬಹುದು. ಕಾಂಗ್ರೆಸ್‌ನವರು ಇತರ ಜಾತಿಗಳವರಿಗೆ ವಿರೋಧ ವಾಗಿ ರಾಜಕೀಯ ಅಧಿಕಾರಗಳಿಗೆ ಗುರಿಯಿಡಕೂಡದು. ಈ ಜಾತಿ ವ್ಯತ್ಯಾಸಗಳು ಇರುವ ವರೆಗೆ ಕಾಂಗ್ರೆಸ್‌ನವರು ರಾಜಕೀಯ ಅಧಿಕಾರ ಕ್ಷೇತ್ರಗಳಿಂದ ನಿವೃತ್ತರಾಗಿರಬೇಕು.

ಅಧಿಕಾರ, ಲೆಜಿಸ್ಲೆಟಿವ್ ಅಸೆಂಬ್ಲಿ ಮೂಲಕ ಮಾತ್ರ ದೊರೆಯುವುದೆಂದು ನಮ್ಮ ಬಹುಕಾಲದ ನಂಬಿಕೆ. ಇದು ತಪ್ಪು. ಇಂಗ್ಲಿಷರ ಚರಿತ್ರೆಯನ್ನು ಮೇಲೆ ಮೇಲೆ ನಾವು ಓದಿ ಅಧಿಕಾರವೆಲ್ಲ ಪಾರ್ಲಿಮೆಂಟಿನಿಂದ ಪ್ರಜೆಗಳಿಗೆ ಬರುವುದೆಂದು ತಿಳಿದಿದ್ದೇವೆ ನಿಜವಾದ ವಿಚಾರವೇನೆಂದರೆ ಅಧಿಕಾರವಿರುವುದು ಜನರ ಕೈಯ್ಯಲ್ಲಿಯೇ. ಆದರೆ ತಾತ್ಕಾಲಿಕವಾಗಿ ಅದು ಜನರ ಪ್ರತಿನಿಧಿಗಳ ವಶವಾಗಿರುತ್ತದೆ. ಜನರನ್ನು ಬಿಟ್ಟು ಪಾರ್ಲಿಮೆಂಟಿಗೆ ಶಕ್ತಿಯೂ ಇಲ್ಲ. ಅಸ್ತಿತ್ವವೂ ಇಲ್ಲ. ಕಳೆದ ೨೧ ವರುಷಗಳಿಂದ ಈ ಸರಳವಾದ ಸತ್ಯವನ್ನು ಜನರಿಗೆ ತಿಳಿಯಪಡಿಸುವುದು ನನ್ನ ಪ್ರಯತ್ನವಾಗಿದೆ ಕಾನೂನು ಭಂಗ, ಶಕ್ತಿಯ ಆಗರ ಒಂದು ದೊಡ್ಡ ಜನಾಂಗ ಸರ್ಕಾರದ ಕಾನೂನನ್ನು ತಿರಸ್ಕರಿಸುತ್ತದೆ. ಬಂದುದನ್ನು ಅನುಭವಿಸುತ್ತದೆ. ಸ್ವಲ್ಪ ಊಹಿಸಿನೋಡಿ! ಲೆಜಿಸ್ಲೇಚರ್ ಮತ್ತು ಎಗ್ಜಿಕ್ಯೂಟೀವ್ ಯಂತ್ರ ಇದ್ದಕ್ಕಿದ್ದಂತೆ ನಿಂತು ಹೋಗುತ್ತದೆ ಅಲ್ಪ ಸಂಖ್ಯಾಕರು ಎಷ್ಟೇ ಬಲಿಷ್ಠರಾದರೂ ಪೋಲೀಸಿನವರೂ ಮಿಲಿಟರಿಯವರೂ ಅವರನ್ನು ಬಗ್ಗಿಸುತ್ತಾರೆ. ಆದರೆ ಒಂದು ಜನಾಂಗವೇ ಬಂದುದನ್ನು ಅನುಭವಿಸಲು ಸಿದ್ಧರಾಗಿ ನಿಂತರೆ ಅವರ ದೃಢನಿಶ್ಚಯವನ್ನು ಬದಲಾಯಿಸಲು ಸಾಧ್ಯವಿಲ್ಲ.

ಪಾರ್ಲಿಮೆಂಟರಿ ಕಾರ್ಯಕ್ರಮ ಬೇಕು. ಯಾವಾಗ ಅದರ ಸದಸ್ಯರು ಪ್ರಜೆಗಳ ಇಷ್ಟದಂತೆ ನಡೆಯುತ್ತಾರೆಯೋ ಆಗ ಬೇಕು

ಭಾರತದಲ್ಲಿ ಪ್ರತ್ಯೇಕ ಚುನಾವಣೆ ಪದ್ಧತಿಯಿಟ್ಟುಕೊಂಡು ಪಾರ್ಲಿಮೆಂಟರಿ ಕಾರ್ಯಕ್ರಮ ನಡೆಸುತ್ತಿದ್ದೇವೆಂದು ನಟಿಸುತ್ತಿದ್ದೇವೆ. ಈ ಕೃತಕವಾದ ಭೇದಗಳು ಒಂದೆಡೆ ಕೆಲಸಮಾಡಿದರೂ, ಒಗ್ಗಟ್ಟು ಉಂಟಾಗುವುದಿಲ್ಲ. ಕಾನೂನು ಕೆಲಸ ಮಾಡಬಹುದು. ಆದರೆ ಅಧಿಕಾರಕ್ಕಾಗಿ ಕಚ್ಚಾಡಲು ಅದೊಂದು ರಂಗವಾಗುವುದು. ಆಳುವವರು ಒಂದೊಂದು ಚೂರನ್ನು ಎಸೆಯಬಹುದು. ಆಳುವವರು ನಿರ್ದಾಕ್ಷಿಣ್ಯವಾಗಿ ಆಳುತ್ತಾರೆ. ಪರಸ್ಪರ ವಿರೋಧಿಗಳು ಒಬ್ಬರ ಮೇಲೆ ಒಬ್ಬರು ಬೀಳದಂತೆ ಕಾಯುತ್ತಾರೆ. ಈ ಅವಮಾನ ಸ್ಥಿತಿಯಲ್ಲಿ ಪೂರ್ಣ ಸ್ವಾತಂತ್ರ್ಯ ಸಾಧ್ಯವೇ ಅಲ್ಲವೆಂದು ನನ್ನ ಅಭಿಪ್ರಾಯ

ರಾಜೇಂದ್ರ ಬಾಬು:— ಈಗಿನ ಜಾತಿಗಳ ಅನೈಕ್ಯಕ್ಕೆ ಮುಖ್ಯ ಕಾರಣ ಪರಸ್ಪರವಾಗಿರುವ ಅಪನಂಬಿಕೆ ಇದರಿಂದ ಒಬ್ಬರು ಮಾಡ.ವ ಎಲ್ಲಾ ಕೆಲಸಗಳಲ್ಲಿಯೂ ಮತ್ತೊಬ್ಬರಿಗೆ ಅಪನಂಬಿಕೆ. ಮತವಿಚಾರಗಳು ಭಾಷೆ ಸಂಸ್ಕೃತಿ ಜೀವನಕ್ರಮ ಪ್ರತಿಯೊಂದು ಅಪನಂಬಿಕೆಗೆ ಪಾತ್ರವಾಗಿದೆ.

ನಮಗೆ ಬೇಕಾದುದನ್ನು ಸಾಧಿಸಲು ನಾವು ಹಿಂಸೆಯನ್ನು ಉಪಯೋಗಿಸಬಾರದು. ಎದುರಾಳಿ ತನ್ನ ಹಕ್ಕೆಂದು ತಿಳಿದು, ನಮ್ಮ ಹಕ್ಕನ್ನು ಆಕ್ರಮಿಸಿದರೆ ಅದನ್ನು ಪ್ರತಿಭಟಿಸುವುದಕ್ಕೂ ಹಿಂಸೆ ಉಪಯೋಗಿಸಬಾರದು. ಸಾಮಾನ್ಯವಾಗಿ ಕಷ್ಟ ಒದಗುವ ಮುಂದಲ ಉದಾಹರಣೆ ಕೊಡುತ್ತೇನೆ. ಅಹಿಂಸೆಯನ್ನು ಅಂಥಲ್ಲಿ ಫಲಕಾರಿಯಾಗಿ ಉಪಯೋಗಿಸಬಹುದು.

(ಅ) ಒಬ್ಬ ಮುಸಲ್ಮಾನ ಒಂದು ಹಸುವನ್ನು ದೇವರಿಗೆ ಬಲಿ ಕೊಡಲು ಅಥವ ಆಹಾರಕ್ಕಾಗಿ ಕೊಲ್ಲಲು ಬಯಸುತ್ತಾನೆ. ಹಿಂದುವು ಒಳ್ಳೆಯ ಮಾತಿನಿಂದ, ಪ್ರಾರ್ಥನೆಯಿಂದ ಹಿಂದುಗಳ ಮನಸ್ಸನ್ನು ನೋಯಿಸಬೇಡ ಎಂದು ಹೇಳುತ್ತಾನೆ. ಮುಸಲ್ಮಾನ ಹಸು ಕೊಲ್ಲುವುದನ್ನು ತಪ್ಪಿಸಲು ಹಿಂದುಗಳು ಹಿಂಸಾಮಾರ್ಗವನ್ನು ಎಂದಿಗೂ ಅವಲಂಬಿಸಕೂಡದು.

(ಆ) ಹಾಗೆಯೇ ಒಬ್ಬ ಹಿಂದು, ಮಸೀದೆಯ ಮುಂದೆ ದುರ್ಗಾ ಮೆರವಣಿಗೆ ಹೊರಟರೆ, ಆಗ ಮುಸಲ್ಮಾನರ ಪ್ರಾರ್ಥನೆಗೆ ವಾದ್ಯದಿಂದ ತೊಂದರೆಯಾದರೂ ಮುಸಲ್ಮಾನರು ಹಿಂಸಾ ಮಾರ್ಗಿಗಳಾಗಕೂಡದು. ಹಿಂದುವನ್ನು ಬೇಡಿಕೆಯಿಂದ ಒಪ್ಪಿಸಬೇಕು

(ಇ) ಮುಸಲ್ಮಾನರ ಅಜಾನ್, ಹಿಂದುಗಳ ಆರತಿ ಇವುಗಳಿಂದ ಪರಸ್ಪರ ತೊಂದರೆಯಾದರೆ, ಸಹಾನುಭೂತಿಯಿಂದ ಎರಡು ಪಂಗಡಗಳೂ ಸಹಿಸಿಕೊಳ್ಳಬೇಕು.

(ಈ) ತನ್ನ ಮತವನ್ನು ಬೋಧಿಸುವುದೂ ಪ್ರಚಾರಿಸುವುದೂ ಪ್ರತಿಯೊಬ್ಬರ ಹಕ್ಕು. ಆದರೆ ತನ್ನ ಮತ ಪ್ರಚಾರದಲ್ಲಿ ಇತರ ಮತಗಳನ್ನು ಆ ಗುರುಗಳನ್ನು ಆ ಸತ್ಯಗಳನ್ನು ಸ್ವಲ್ಪವೂ ತಿರಸ್ಕರಿಸಬಾರದು.

(ಉ) ಒಂದು ಮತದಿಂದ ಮತ್ತೊಂದು ಮತಕ್ಕೆ ಬದಲಾಯಿಸುವುದರಿಂದ ಸಾಧಾರಣವಾಗಿ ಅಸಮಾಧಾನ ಕೋಪಗಳು ಜನರಿಗೆ ಉಂಟಾಗುತ್ತವೆ. ಇದು ಕೂಡದು.

(ಊ) ಒಂದು ಪಂಗಡವನ್ನು ಮತ್ತೊಂದು ಪಂಗಡದವರು ಎತ್ತಿಕೊಂಡು ಹೋದಾಗ, ತಪ್ಪಿತಸ್ತನ ಪಂಗಡದವರು ಅಪರಾಧಿಯನ್ನು ಶಿಕ್ಷಿಸುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕು.

(ಎ) ಎರಡು ಪಂಗಡಗಳವರಿಗೂ ಹೊಡೆದಾಟವಾಗುವ ಎಲ್ಲಾ ಸಂದರ್ಭಗಳಲ್ಲಿಯೂ ಹಿಂಸೆಯನ್ನು ತ್ಯಜಿಸಬೇಕು. ಸ್ನೇಹದ ಮಾತುಗಳಿಂದ ಪ್ರಯೋಜನವಾಗದಿದ್ದಲ್ಲಿ, ಎರಡು ಪಕ್ಷದವರೂ ಪಂಚಾಯಿತಿ ತೀರ್ಮಾನಕ್ಕೆ ಒಪ್ಪಬೇಕು. ಒಂದು ಪಂಗಡದವರು, ಪಂಚಾಯ್ತಿಯ ಮೂಲಕ ನ್ಯಾಯವನ್ನು ಒಪ್ಪದಿದ್ದಲ್ಲಿ, ಮತ್ತೊಂದು ಪಂಗಡದವರು ತಾವೇ ದುಃಖವನ್ನು ಅನುಭವಿಸಿ ಅಹಿಂಸಾ ಮಾರ್ಗದಿಂದ ಎದುರಾಳಿಯ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಬೇಕು. ಹೀಗೆ ಕೆಡಕನ್ನು ಎದುರಿಸುವ ಶಕ್ತಿ ಅಹಿಂಸಾ ಅಸ್ತ್ರವನ್ನು ಉಪಯೋಗಿಸುವವನಲ್ಲಿ ಇರಬೇಕು. ಅಹಿಂಸೆಯಿಂದ ಪ್ರತಿಘಟಿಸುವುದು ಸಾಧ್ಯವಾಗದಿದ್ದಲ್ಲಿ ಕಾನೂನಿಗೆ ಅನುಸಾರವಾಗಿ ನ್ಯಾಯಸ್ಥಾನದಲ್ಲಿ ಬೇಕಾದರೂ ಹೋರಾಡಬಹುದು. ಇದು ಹಿಂದು ಮುಸಲ್ಮಾನ ಮತ್ತು ಉಳಿದ ಎಲ್ಲಾ ಪಂಗಡಗಳಿಗೂ ಒಂದೇಸಮನಾಗಿ ಅನ್ವಯಿಸುತ್ತದೆ.

(ಏ) ಈಚೆಗೆ ಒಂದು ಪಂಗಡದವರು ಮತ್ತೊಂದು ಪಂಗಡದವರ ಸಂಸ್ಕೃತಿಯ ಮೇಲೆ ಕತ್ತಿ ಎತ್ತಿದ್ದಾರೆ ಎಂದು ಒಂದು ಪ್ರಚಾರ ಹೊರಟಿದೆ. ಇದರಿಂದ ದಂಗೆಗಳಾಗದಿರಬಹುದು. ಆದರೆ ಇದು ದಂಗೆಗಳಿಗಿಂತ ಕೆಡಕು. ಇದರ ವಿಷ ನಿಧಾನವಾಗಿ ಒಳಗೊಳಗೇಯೆ ಇಂತಹ ನಿಧಾನವಾದ ವಿಷ ಶಕ್ತಿಯನ್ನು ಬಹುಸಂಖ್ಯಾಕರು ಅಲ್ಪಸಂಖ್ಯಾಕರಿಗೆ ಎದುರಾಗಿಯೂ ಉಪಯೋಗಿಸಬಹುದು. ಹಾಗೆಯೇ ಅಲ್ಪ ಸಂಖ್ಯಾಕರು ತಮ್ಮ ಐಶ್ವರ್ಯ ದೇಹಶಕ್ತಿ ಅಥವಾ ಎದುರಾಳಿಗಳ ಹೇಡಿತನ ಈ ಕಾರಣಗಳಿಂದ ತಮಗೆ ನ್ಯಾಯವಾಗಿ ದೊರಕಬೇಕಾದುದಕ್ಕಿಂತ ಹೆಚ್ಚು ಅಧಿಕಾರ ಅನುಭವಿಸ

ಬಹುದು. ಈ ಎಲ್ಲಾ ಸಂದರ್ಭಗಳಲ್ಲಿಯೂ ಜನರು ಬಹು ಎಚ್ಚರಿಕೆಯಿಂದ ವರ್ತಿಸಬೇಕು ತಮ್ಮ ನಿತ್ಯಜೀವನದ ಲ್ಲಿ ಯಾರಿಗೂ ತೊಂದರೆ ಇಲ್ಲದಂತೆ, ಇಷ್ಟಬಂದಂತೆ ಇರಲು ಯೋಚಿಸಲು ಎಲ್ಲರೂ ಸ್ವತಂತ್ರರು ಎಂಬಂತೆ ವರ್ತಿಸಬೇಕು.

(ಐ) ಯಾವ ವ್ಯಾಪಾರವೂ ಯಾರೊಬ್ಬರ ಹಕ್ಕೂ ಅಲ್ಲ. ಯಾರು ಯಾವ ವ್ಯಾಪಾರ ಬೇಕಾದರೂ ಮಾಡಬಹುದು. ಒಂದು ಕೈಗಾರಿಕಾ ಸಂಸ್ಥೆಯಲ್ಲಿಯಾಗಲಿ ವ್ಯಾಪಾರ ಸಂಸ್ಥೆಯಲ್ಲಿಯಾಗಲಿ ಯಜಮಾನ ತನ್ನ ಜಾತಿಯವರನ್ನೇ ನಿಯಮಿಸಿದರೆ ಅದನ್ನೇ ಆಕ್ಷೇಪಿಸಬಾರದು.

(ಒ) ರಾಜಕೀಯ ಅಧಿಕಾರ ಎಲ್ಲಾ ಅಸಮಾಧಾನ ಸಂಶಯಗಳಿಗೂ ಮೂಲಸ್ಥಾನ. ಮತ್ತೊಂದು ಪಂಗಡದವರನ್ನು ಆಳುವ ಆಸೆಯನ್ನು ಎಲ್ಲಾ ಪಂಗಡಗಳವರೂ ಬಿಡಬೇಕು. ಭಾರತದಲ್ಲಿ ಅನೇಕ ಜಾತಿಗಳಿವೆ. ಒಂದು ಜಾತಿ, ಮತ್ತೊಂದು ಜಾತಿಯ ಮೇಲೆ ಆಳಲು ಪ್ರಯತ್ನಿಸಿದರೆ, ಇಲ್ಲಿ ಶಾಂತಿ ಅಭಿವೃದ್ಧಿಗಳು ಕಣ್ಮರೆಯಾಗುವುವು. ನ್ಯಾಯವೂ ಔದಾರ್ಯವೂ ಒಂದ ಕ್ಕೊಂದು ವಿರೋಧವಾಗಬೇಕಾದುದಿಲ್ಲ. ಸಂಶಯವನ್ನು ದ್ವೇಷವನ್ನೂ ಹೋಗಲಾಡಿಸಲು ಔದಾರ್ಯ ಮುಖ್ಯ ಅಸ್ತ್ರ, ನಮ್ಮ ವ್ಯವಹಾರದಲ್ಲಿ ಹೇಡಿತನಕ್ಕೂ ಭಯಕ್ಕೂ ಸ್ಥಾನವಿಲ್ಲ. ರಾಜಕೀಯ ಪಕ್ಷಗಳು ತಮ್ಮ ನಡುವೆ ಎದ್ದಿರುವ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳುವ ಮಾರ್ಗವನ್ನು ಕಂಡುಹಿಡಿಯಬೇಕು ಆದರೆ ವ್ಯಕ್ತಿಗಳು, ಎಂತಹ ಸಂದರ್ಭದಲ್ಲಿಯೂ ಶಾಂತಿಯುಳ್ಳವರಾಗಿದ್ದು ಮಾರ್ಗದರ್ಶಕರಾಗಬಹುದು. ಪ್ರತಿಯೊಬ್ಬರೂ ಇತರ ಪಂಗಡದ ಒಬ್ಬರೊಂದಿಗಾದರೂ ತುಂಬ ಮಿತ್ರತ್ವದಿಂದ ನಡೆದು ಕೊಳ್ಳಬೇಕು. ಇಂತಹ ಸಣ್ಣ ಮೊಳಕೆಯಿಂದ ಬಹುದೊಡ್ಡ ಫಲವುಂಟಾ ಗುವುದು ಮುಖ್ಯವಾಗಿ ಅನುಸರಿಸಬೇಕಾದ ಒಂದು ನಿಯಮ, ಇತರರ ತಪ್ಪನ್ನು ಕಂಡು ಹಿಡಿಯದಿರುವುದು. ಅಂತರ್ಮುಖಿಯಾಗಿ ನಮ್ಮ ದೋಷ ಗಳನ್ನು ಕಂಡುಹಿಡಿದುಕೊಳ್ಳುವದು ಒಳ್ಳೆಯದು ಆದುದರಿಂದ ಜಾತೀಯ ಕಲಹವುಂಟಾದಾಗ ಜನರು ತಮ್ಮ ಜಾತಿಯವರ ಕುಂದುಗಳನ್ನು ನೋಡಿ ಕೊಳ್ಳಬೇಕು. ಇತರ ಜಾತಿಯವರ ಕುಂದುಗಳನ್ನು ಕಂಡು ಹಿಡಿದು ಕೊಳ್ಳಲು ಅವರಿಗೇ ಬಿಡಬೇಕು. ಪತ್ರಿಕೆಗಳಲ್ಲಿ ಅವಸರ ಅವಸರವಾಗಿ

ಕೊಡುವ ಹೇಳಿಕೆಗಳಿಂದ, ನಿರಾಧಾರವಾದ ಸುದ್ದಿಗಳು ಪ್ರಕಟವಾಗುತ್ತವೆ. ಜನರಿಗೆ ದುರುದ್ದೇಶವನ್ನು ಆರೋಪಿಸಿದಂತೆ ಆಗುತ್ತದೆ. ದ್ವೇಷ ಭಾವಗಳು ಬೆಳೆಯುತ್ತವೆ. ಇದರಿಂದ ಮುಂದೆ ಸ್ನೇಹವಾಗುವುದು ಸಹ ಕಷ್ಟವಾಗುತ್ತದೆ. ಸತ್ಯವನ್ನು ಬಹಿರಂಗ ಪಡಿಸಬೇಕು.

(೭) ಅಹಿಂಸಾ ಮನೋಭಾವದಿಂದ ಪ್ರೇರಿತರಾಗಿ, ಆವಶ್ಯಕವಾದರೆ ಜಾತೀಯ ಕಲಹಗಳನ್ನು ತಪ್ಪಿಸಲು ಪ್ರಾಣವನ್ನು ಸಹ ನೀಡಲು ಸಿದ್ಧರಾದ ಸ್ತ್ರೀ ಪುರುಷರ ಶಾಂತಿಸೇನೆ ಆವಶ್ಯಕ ಇಂತಹ ಶಾಂತಿದಳದ ಸ್ವಯಂ ಸೇವಕರು ಶಿಕ್ಷಣ ಪಡೆಯಬೇಕು. ಈ ಕಾರ್ಯ ಬಹು ಕಠಿಣ. ಅತ್ಯಂತ ಧೀರರಿಗೂ ತಮ್ಮ ಧ್ಯೇಯವನ್ನು ನಂಬಿಕೆಯುಳ್ಳವರಿಗೂ ಮಾತ್ರ ಇದು ಸಾಧ್ಯ. ಈ ಕೆಲಸಕ್ಕೆ ಅರ್ಹರಾಗಬೇಕಾದರೆ ಬಹುಕಾಲ ಎಲ್ಲಾ ಜಾತಿಗಳನ್ನೂ ಸೇವೆ ಮಾಡಿರಬೇಕು ಸಾಧ್ಯವಾದೆಡೆಗಳಲ್ಲೆಲ್ಲಾ ಒಂದು ಜಾತಿಯವರು ಮತ್ತೊಂದು ಜಾತಿಯವರೊಡನೆ ಇದ್ದು ಅವರ ಸೇವೆ ಮಾಡಬೇಕು. ಇದರಿಂದ ಪರಸ್ಪರ ನಂಬಿಕೆ ಬಾಂಧವ್ಯಗಳು ಬೆಳೆಯುತ್ತವೆ. ಇಂತಹ ಕೆಲಸಗಾರರಿಂದ ಜಾತೀಯ ಕಲಹಗಳು ನಿವಾರಣೆಯಾಗುತ್ತವೆ. ಕಲಹ ಪ್ರಾರಂಭವಾದರೂ ಮುಂದೆ ಬೆಳೆಯುವುದಿಲ್ಲ ಈ ಕೆಲಸಗಾರರು ಜನರ ಪ್ರೀತಿಗೆ ಪಾತ್ರರಾಗುವರು.

(೮) ಪ್ರತಿಯೊಂದು ಪಟ್ಟಣದಲ್ಲಿಯೂ ಹಳ್ಳಿಯಲ್ಲಿಯೂ, ಎಲ್ಲಾ ಪಂಗಡಗಳ ಪ್ರತಿನಿಧಿಗಳ ಒಂದು ಸಮಿತಿಯನ್ನು ಏರ್ಪಡಿಸಬೇಕು. ಆ ಸಮಿತಿಯ ಸದಸ್ಯರು ಜನರ ವಿಶ್ವಾಸಕ್ಕೆ ಪಾತ್ರರಾದವರಾಗಿರಬೇಕು. ಸಂದರ್ಭಾನುಸಾರ ಸಮಿತಿಯು, ವ್ಯಾಜ್ಯಗಳಲ್ಲಿ ಊರಿನ ಪಂಚಾಯಿತ್ತಿದಾರರು ಆಗಬಹುದು.

ಶ್ರೀಮತಿ ರುಕ್ಮಿಣಿ ಲಕ್ಷ್ಮಿಪತಿಯವರ ಪ್ರಾರಂಭ ಭಾಷಣವಾದ ಮೇಲೆ ಶ್ರೀಮತಿ ಸಾವಿತ್ರಿ ರಾಜನ್ ಮತ್ತು ಶ್ರೀಮತಿ ಯಶೋಧರಮ್ಮಾ ದಾಸಪ್ಪನವರು ಭಾಷಣಮಾಡಿದರು. ಕೇರಳದ ಮುಸಲ್ಮಾನ ಮಹಿಳೆ ಓರ್ವಳು ಹಿಂದುಗಳು ಹೆಚ್ಚು ಹೆಚ್ಚಾಗಿ ಮುಸಲ್ಮಾನರಲ್ಲಿ ಪ್ರವೇಶಿಸಿ ಮುಸಲ್ಮಾನರನ್ನು ತಮ್ಮಲ್ಲಿಗೆ ಆಕರ್ಷಿಸಬೇಕೆಂದು ಹೇಳಿದರು.

೧೪ ಮಾತೃಭಾಷೆ ೧೫ ರಾಷ್ಟ್ರಭಾಷೆ

ರಚನಾತ್ಮಕ ಕಾರ್ಯಕ್ರಮ ಸಮ್ಮೇಳನದ ಕೊನೆಯ ದಿನ ಕರ್ನಾಟಕದ ಮುಖಂಡರೂ ದೇಶಭಕ್ತರೂ ಆದ ಶ್ರೀ ಆರ್. ಆರ್. ದಿವಾಕರರವರು ಅಧ್ಯಕ್ಷತೆ ವಹಿಸಿದರು. ರಾಷ್ಟ್ರಭಾಷೆ ಮತ್ತು ಮಾತೃಭಾಷೆ ಹಾಗು ಪ್ರಾಂತ ಭಾಷೆಗಳ ಸ್ಥಾನವನ್ನು ಕುರಿತು ತಮಗೆ ಸ್ವಾಭಾವಿಕವಾದ ಸ್ಪಷ್ಟವಾದ ರೀತಿಯಲ್ಲಿ ವಿವರಣೆಯನ್ನು ಕೊಟ್ಟರು. ಕನ್ನಡ ಹಿಂದಿಯಲ್ಲಿ ಸಹ ಮಾತ ನಾಡಿದರು. ಕಿಸಾನ್ ಕೂಲಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು ಗಾಂಧಿಯವರು:— "ನಾವು ನಮ್ಮ ಪ್ರಾಂತಭಾಷೆ ಮಾತೃಭಾಷೆಗಳನ್ನು ಉದಾಸೀನಮಾಡಿ ಇಂಗ್ಲಿಷಿಗೆ ಪ್ರಾಮುಖ್ಯತೆ ಕೊಟ್ಟರುವುದರಿಂದ ನಮ್ಮ ವಿದ್ಯಾವಂತರಿಗೂ ಅವಿದ್ಯಾವಂತರಿಗೂ ನಡುವೆ ದೊಡ್ಡ ಅಂತರವುಂಟಾಗಿದೆ. ಭಾರತದ ಭಾಷೆಗಳೆಲ್ಲಾ ಬಡಕಲಾಗಿವೆ. ಸೂಕ್ಷ್ಮವಾದ ಭಾವನೆಗಳನ್ನು ನಮ್ಮ ಮಾತೃ ಭಾಷೆಗಳಲ್ಲಿ ಹೇಳಲು ನಮ್ಮಿಂದ ಸಾಧ್ಯವಿಲ್ಲ. ಸರಿಯಾದ ವೈಜ್ಞಾನಿಕ, ಪಾರಿಭಾಷಿಕ ಶಬ್ದಗಳಿಲ್ಲ ಇದರ ಫಲ ವಿಪರೀತವಾಗಿದೆ. ನಮ್ಮ ದೇಶದ ಸಾಮಾನ್ಯ ಜನ ಆಧುನಿಕ ಜ್ಞಾನದಿಂದ ದೂರವಾಗಿದೆ. ಇದರಿಂದ ನಮ್ಮ ದೇಶಕ್ಕೆ ಆಗಿರುವ ನಷ್ಟವನ್ನು ನಾವು ತಿಳಿಯಲಾರದವ ರಾಗಿದ್ದೇವೆ. ಈ ಅನ್ಯಾಯವನ್ನು ಸರಿಪಡಿಸದೆ ಜನರ ಮನಸ್ಸು ಬೆಳೆಯುವು ದಿಲ್ಲವೆಂಬುದನ್ನು ಅರಿಯುವುದು ಸುಲಭ ದೇಶ ಪರಭಾಷೆಯ ಸಂಕೋಲೆ ಯಲ್ಲಿ ಸಿಕ್ಕಿರುವವರೆಗೆ ಸಾಮಾನ್ಯ ಜನರಿಂದ ಸ್ವರಾಜ್ಯಸಾಧನೆ ಸಾಧ್ಯವೇ ಇಲ್ಲ. ಅಹಿಂಸಾಯುತವಾದ ಸ್ವರಾಜ್ಯ ಸಾಧನೆಗೆ ಪ್ರತಿವ್ಯಕ್ತಿಯೂ ತನ್ನ ಭಾಗದ ಸೇವೆ ಸಲ್ಲಿಸಲೇ ಬೇಕು. ಸ್ವಾತಂತ್ರ್ಯದ ಹೋರಾಟದ ಪ್ರತಿ ಹೆಜ್ಜೆಯೂ ತಮಗೆ ತಿಳಿದ ಹೊರತು ಜನರು ಅದರಲ್ಲಿ ಭಾಗವಹಿಸುವುದಿಲ್ಲ. ಹಾಗೆ ಅದು ಅವರಿಗೆ ತಿಳಿಯಬೇಕಾದರೆ ಜನರ ಭಾಷೆಯಲ್ಲಿ ಅದನ್ನು ಅವರಿಗೆ ಹೇಳಬೇಕು.

ರಾಜೇಂದ್ರ ಬಾಬು:—ರಾಷ್ಟ್ರಕಾರ್ಯಕ್ಕಾಗಿ ರಾಷ್ಟ್ರ ಭಾಷೆಯನ್ನು ಕಲಿ ಯುವುದು ಆವಶ್ಯಕವೆಂದು ಹಿಂದೆ ಹೇಳಿದೆ ಆದರೆ ನಮ್ಮ ಪೂರ್ಣ ವಿಕಾಸಕ್ಕೆ ನಮ್ಮ ಮಾತೃಭಾಷೆಯ ಬೆಳವಣಿಗೆ ಆವಶ್ಯಕ ನಮ್ಮ ಸಂಸ್ಕೃತಿ

ಬೆಳೆಯ ಬೇಕಾದರೆ, ನಮ್ಮ ಹೃದಯದ ಅಂತರಂಗಿಕವಾದ ಆಲೋಚನೆಗಳನ್ನು ಪ್ರಕಟಿಸಬೇಕಾದರೆ, ನಮಗೆ ನಮ್ಮ ಮಾತೃಭಾಷೆಯೇ ಬೇಕು. ಇದು ಪ್ರಾಂತ ಭಾಷೆಯಿಂದ ಮಾತ್ರ ಸಾಧ್ಯ. ದೇಶಭಾಷೆಗಳಲ್ಲಿ ಬೇಕಾದಂತೆ ಸಾಹಿತ್ಯವಿದೆ ಅವು ಕಾಲಚಕ್ರದ ತುಳಿತಕ್ಕೆ ಸಿಕ್ಕಿಯೂ ಉಳಿದುಕೊಂಡಿವೆ. ಈ ಸಾಹಿತ್ಯವನ್ನು ಉಳಿಸಿಕೊಳ್ಳುವುದು ಮಾತ್ರವೇ ಅಲ್ಲ ಮುಂದೆ ಬೆಳೆಸುವುದೂ ನಮ್ಮ ಕರ್ತವ್ಯ. ರಾಷ್ಟ್ರಭಾಷೆಗೂ ಪ್ರಾಂತಭಾಷೆಗಳಿಗೂ ವಿರೋಧವಿರಬೇಕಾದುದಿಲ್ಲ ರಾಷ್ಟ್ರಭಾಷೆ ದೇಶಭಾಷೆಗಳು ಒಟ್ಟಾಗಿ ಒಂದರ ಕೈಯ್ಯನ್ನೊಂದು ಹಿಡಿದುಕೊಂಡು ಬೆಳೆಯಬೇಕು. ಒಂದಕ್ಕೆ ಮತ್ತೊಂದು ಸಹಾಯಕವಾಗಬೇಕು. ಪ್ರತಿಯೊಬ್ಬನೂ ತನ್ನ ದೇಶಭಾಷೆಯನ್ನು ಚೆನ್ನಾಗಿ ಅರಿತವನಾಗಿರಬೇಕು ಇದರ ಜತೆಗೆ ಉತ್ತರದವರು ಯಾವುದಾದರೂ ಒಂದು ದಕ್ಷಿಣದ ಭಾಷೆಯನ್ನೂ, ದಕ್ಷಿಣದವರು ರಾಷ್ಟ್ರ ಭಾಷೆಯನ್ನೂ ಕಲಿಯುವುದು ಒಳ್ಳೆಯದು.

ಇದರನಂತರ ಶ್ರೀ ಸಿದ್ಧನಾಥಪಂಥರು ಸ್ವಾರಸ್ಯವಾಗಿ ರಾಷ್ಟ್ರಭಾಷೆಗೂ ದೇಶಭಾಷೆಗಳಿಗೂ ಇರುವ ಸಂಬಂಧವನ್ನು ವರ್ಣಿಸಿದರು.

೧೬ ರೈತ

ಅನಂತರ ರಚನಾತ್ಮಕ ಕಾರ್ಯಕ್ರಮದ ಅಂಗವಾದ ಕಿಸಾನ್ ಅಥವಾ ರೈತರ ಪ್ರಶ್ನೆ ತೆಗೆದುಕೊಳ್ಳಲ್ಪಟ್ಟಿತು. ಗಾಂಧಿಯವರು ಹೀಗೆ ಹೇಳಿದರು. “ಎಂಭತ್ತು ಕೋಟಿ ಕೈಗಳುಳ್ಳ ರೈತರೇ ಕಾಂಗ್ರೆಸ್ ಆಗಿರಬೇಕು. ಆದರೆ ಇಂದು ಹಾಗೆ ಇಲ್ಲ. ರೈತರು ಆ ಶಕ್ತಿಯನ್ನು ಅರಿತದ್ದೇ ಆದರೆ ಜಗತ್ತಿನಲ್ಲಿ ಯಾರೂ ಅವರನ್ನು ತಡೆಯಲಾರರು.

ರೈತರನ್ನು ರಾಜಕೀಯ ಪಕ್ಷಗಳು ತಮ್ಮ ಪಕ್ಷ ಬೆಳವಣಿಗೆಗಾಗಿ ಉಪಯೋಗಿಸಕೂಡದು. ಅದು ಅಹಿಂಸೆಗೆ ವಿರೋಧ. ರೈತರನ್ನು ಸಂಘಟಿಸುವ ನನ್ನ ಮಾರ್ಗವನ್ನು ಅರಿಯಬೇಕಾದರೆ ಚಂಪಾರಣ್ಯ ಸತ್ಯಾಗ್ರಹವನ್ನು ತಿಳಿಯಿರಿ. ಅದು ಇಪ್ಪತ್ತುಲಕ್ಷ ರೈತರಿಗೆ ಸಂಬಂಧಪಟ್ಟ ಪ್ರಶ್ನೆ. ಬಹು ದಿನಗಳ ಒಂದು ಅನ್ಯಾಯಕ್ಕೆ ಎದುರಾಗಿ ನಡೆದುದು ಆ ಹೋರಾಟ. ರೈತರನ್ನು ತುಳಿದಿದ್ದರು. ಅಹಿಂಸಾ ಮಾರ್ಗದಿಂದ ಆರು ತಿಂಗಳಿನಲ್ಲಿ

ಜಯವಾಯಿತು ಚಂಪಾರಣ್ಯದ ರೈತರಲ್ಲಿ ನೇರವಾದ ಯಾವ ಪ್ರಯತ್ನವೂ ಇಲ್ಲದಲೆ ರಾಜಕೀಯ ಜಾಗ್ರತಿಯುಂಟಾಯಿತು. ಅವರು ಕಾಂಗ್ರೆಸ್ಸಿನ ಕಡೆ ಒಲಿದರು. ಬಾಬು ಬ್ರಜಕಿಶೊರ್ ಪ್ರಸಾದ್ ಮತ್ತು ರಾಜೇಂದ್ರ ಬಾಬುಗಳ ನೇತೃತ್ವದಲ್ಲಿ ಕಳೆದ ಸತ್ಯಾಗ್ರಹಗಳಲ್ಲಿ ಅವರು ಪೂರ್ಣವಾಗಿ ಭಾಗಿಗಳಾದರು.

ಖೇಡ, ಬರಡೋಲಿ, ಬೋರಸದ ಇಲ್ಲಿಯ ರೈತರ ಚಳುವಳಿಗಳನ್ನೂ ಗಮನಿಸಬಹುದು. ರೈತರ ಕಷ್ಟ ನಿವಾರಣೆಗಳಿಗೆ ಹೊರತು, ಉಳಿದುವು ಗಳಿಗಾಗಿ ಅವರನ್ನು ಉಪಯೋಗಿಸಬಾರದು. ತಮ್ಮ ಕಷ್ಟಗಳ ಹೊರತ್ತು ಉಳಿದವು ಅವರಿಗೆ ಅರ್ಥವಾಗುವುದಿಲ್ಲ. ಅವರಿಗೆ ಅಹಿಂಸೆಯನ್ನು ಕುರಿತು ಹೆಚ್ಚಾಗಿ ಬೋಧಿಸಬೇಕಾದುದಿಲ್ಲ.

ಈ ಉದಾಹರಣೆಗಳಿಂದ ರೈತರಲ್ಲಿ ಹೇಗೆ ಕೆಲಸಮಾಡಬೇಕೆಂಬುದು ಕಾಂಗ್ರೆಸ್‌ನವರಿಗೆ ಗೊತ್ತಾಗುವುದು. ಕೆಲವು ಕಾಂಗ್ರೆಸ್ಸಿಗರು ರೈತರಿಗಾಗಿ ಮಾಡಿರುವ ಕಾರ್ಯದಿಂದ ರೈತರಿಗೆ ಕೆಡಕೇ ಆಗಿದೆ. ಹೇಗಾದರೂ ಆಗಲಿ. ಅವರು ಅಹಿಂಸಾಮಾರ್ಗವನ್ನಂತೂ ಅನುಸರಿಸಿಲ್ಲ. ಈ ಕೆಲಸ ಗಾರರು ತಮಗೆ ಅಹಿಂಸೆಯಲ್ಲಿ ನಂಬಿಕೆ ಇಲ್ಲವೆಂದು ಹೇಳಿರುವುದೂ ಸ್ತುತ್ಯ ವಾಗಿದೆ, ಅಂತಹವರು ಕಾಂಗ್ರೆಸ್ಸಿನ ಹೆಸರನ್ನು ಹೇಳಿಕೊಂಡು ಕೆಲಸ ಮಾಡಕೂಡದೆಂಬುದೇ ನನ್ನ ಸಲಹೆ.

ಆದುದರಿಂದ ನಾನು ಅಖಿಲ ಭಾರತದ ರೈತರನ್ನೂ ಕೂಲಿಗಳನ್ನೂ ಒಂದೇ ಸಮನಾಗಿ ವ್ಯವಸ್ಥೆಗೊಳಿಸಲು ಹಿಂದೆಗೆದೆ. ಎಲ್ಲರೂ ಒಮ್ಮುಖವಾಗಿ ಕೆಲಸಮಾಡಿದರೆ ಎಷ್ಟು ಒಳ್ಳೆಯದಾದೀತು. ಇಂತಹ ದೊಡ್ಡ ದೇಶದಲ್ಲಿ ಅದು ಪ್ರಾಯಶಃ ಸಾಧ್ಯವಿಲ್ಲ. ಹೇಗಾದರೂ ಆಗಲಿ. ಅಹಿಂಸೆಯಲ್ಲಿ ಬಲಾತ್ಕಾರವಿಲ್ಲ. ರೈತರು ಕಾಂಗ್ರೆಸ್ಸಿನ ನೇತೃತ್ವದಲ್ಲಿ ಕೂಲಿಗಾರರಿಗೆ ಹೇಗೆಯೋ ಹಾಗೆ ಒಂದು ಶಾಖೆಯನ್ನು ಏರ್ಪಡಿಸಿಕೊಂಡು ಅದರ ಅಧೀನ ದಲ್ಲಿ ಕೆಲಸಮಾಡಬೇಕು.

ರಾಜೇಂದ್ರ ಬಾಬು:— ಭಾರತದಲ್ಲಿ ನೂರಕ್ಕೆ ಲಕ್ಷಕ್ಕಿಂತ ಹೆಚ್ಚಾಗಿ ರೈತರೇ ಇದ್ದಾರೆ. ಅವರಿಗೆ ಉಪಯೋಗವಾಗದಿದ್ದರೆ ರಚನಾತ್ಮಕ

ಕಾರ್ಯಕ್ರಮದಿಂದ ಪ್ರಯೋಜನವಿಲ್ಲ. ಹಳ್ಳಿಯ ಎಲ್ಲಾ ಕಾರ್ಯಗಳೂ ಅವರ ಒಳ್ಳೆಯದಕ್ಕೇ ಆಗಬೇಕು. ಅವರ ಹಿತಕ್ಕೆ ವಿರೋಧವಾದುದು ಯಾವುದೂ ರಚನಾತ್ಮಕ ಕಾರ್ಯಕ್ರಮವಲ್ಲ. ರಚನಾತ್ಮಕ ಕಾರ್ಯಕ್ರಮಗಳನ್ನು ಸರಿಯಾಗಿ ನೆರವೇರಿಸುವುದರಿಂದಲೇ ರೈತರ ಏಳಿಗೆಯಾಗುವುದು. ಈ ದೃಷ್ಟಿಯಿಂದ ರೈತರಿಗಾಗಿ ಬೇರೆ ಒಂದು ಸಂಸ್ಥೆ ಅನವಶ್ಯಕ ಅವರು ಕಾಂಗ್ರೆಸ್ಸನ್ನು ಸೇರಿ ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು. ಅವರಿಗೆ ಸಹಾಯ ಮಾಡಲಾರದಿದ್ದರೆ ಕಾಂಗ್ರೆಸ್ಸು ಶಕ್ತಿಹೀನವಾಗುವುದು. ರೈತರಿಗೆ ಸಹಾಯ ಮಾಡುವ ಕೆಲವು ಮಾರ್ಗಗಳು ಹೀಗೆ.

ರೈತರಿಗೆ ಜಮೀನ್‌ದಾರರಿಂದ ಸಾಧಾರಣವಾಗಿ ತೊಂದರೆಗಳೇ ಆಗುತ್ತಿರುವುದು. ಅವುಗಳು ಆತುರ ಸ್ವಭಾವದವು. ಅವುಗಳ ನಿವಾರಣೆಗೆ ಸ್ವರಾಜ್ಯ ಬರುವವರೆಗೆ ಕಾಯಲು ಸಾಧ್ಯವಿಲ್ಲ. ಅಹಿಂಸಾ ಮಾರ್ಗದ ವ್ಯವಹಾರದಿಂದ ಸಾಧಾರಣವಾಗಿ ಜಯವಾಗುತ್ತದೆ. ಹೀಗೆ ಮಾತುಕತೆಗಳಿಂದ ಜಯವಾಗದಿದ್ದರೆ ಸತ್ಯಾಗ್ರಹ ಹೂಡಲು ಅಥವಾ ಕರ ನಿರಾಕರಣೆ ಹೂಡಲು ರೈತರಿಗೆ ಅಧಿಕಾರವುಂಟು ರೈತರ ಕಷ್ಟ ಸರ್ವಸಾಮಾನ್ಯವಾಗಿದ್ದಷ್ಟೂ ಚಳುವಳಿಗೆ ಜಯ ಬೇಗ ದೊರೆಯುತ್ತದೆ. ಚಳುವಳಿ ಅಹಿಂಸಾ ಮಾರ್ಗದಲ್ಲಿ ನಡೆದರೆ ಜಯವು ಸುಲಭವೂ ಬೇಗವೂ ಆಗುತ್ತದೆ.

ರೈತರು ಎದುರಿಸಬೇಕಾದ ಇತರ ಕಷ್ಟಗಳೂ ಇವೆ. ರೈತರು ತಮ್ಮಲ್ಲಿಯೇ ಅನೇಕವಾಗಿ ಹೋರಾಡುತ್ತಾ ನ್ಯಾಯಸ್ಥಾನಗಳಿಗೆ ಹೋಗಿ ಹಾಳಾಗುತ್ತಾರೆ ರೈತರ ನಂಬಿಕೆಗೆ ಪಾತ್ರನಾದ ಕೆಲಸಗಾರ ಅವರ ವ್ಯಾಜ್ಯಗಳನ್ನು ಅಲ್ಲಲ್ಲಿಯೇ ಪರಿಹರಿಸಬೇಕು. ರೈತರಿಗೂ ಜಮೀನ್ದಾರರಿಗೂ ನಡೆಯುವ ಸಣ್ಣಸಣ್ಣ ವ್ಯಾಜ್ಯಗಳಿಗೂ ಇದೇ ಅನ್ವಯಿಸುತ್ತದೆ.

ಯಾವ ಸಂಸ್ಥೆಯೂ ರೈತರನ್ನು ರಾಜಕೀಯಕ್ಕಾಗಿ ಉಪಯೋಗಿಸಬಾರದು. ಕಾಂಗ್ರೆಸ್‌ನವರು ರೈತರ ಸೇವೆಯನ್ನು ಪೂರ್ಣವಾಗಿ ಮಾಡಿದ್ದೇ ಆದರೆ, ಕಾಂಗ್ರೆಸ್ಸಿನ ಶಕ್ತಿ ಯೋಗ್ಯತೆ ಅರಿತು ರೈತರೇ ಕಾಂಗ್ರೆಸ್ಸನ್ನು

ಸೇರುತ್ತಾರೆ. ಹೀಗೆ ಅವರು ಕಾಂಗ್ರೆಸ್‌ಗೆ ಸೇರುವುದು ಸ್ವಾರ್ಥರಹಿತ ವಾಗಿರುವುದರಿಂದ ಶಾಶ್ವತವಾಗಿರುತ್ತದೆ. ಅವರ ಕಷ್ಟಪರಿಹಾರಕ್ಕಾಗಿ ಎಂದು ಬೇರೆ ರಾಜಕೀಯ ಪಕ್ಷವನ್ನು ಸ್ಥಾಪಿಸಬಾರದು.

ಪರಸ್ಪರ ಸಹಾಯಕವಾದ ವ್ಯವಸಾಯ ಕ್ರಮವನ್ನು ಅನುಸರಿಸುವುದರಿಂದ ರೈತರಿಗೆ ಬಹಳ ಲಾಭವುಂಟು. ಜಮೀನು ಅತಿ ಸ್ವಲ್ಪವಾದರೆ ವ್ಯವಸಾಯಗಾರನಿಗೆ ಅದರಿಂದ ಲಾಭವಿಲ್ಲ. ನಮ್ಮ ದೇಶದ ಪದ್ಧತಿಯಂತೆ ವಿಭಾಗದಿಂದ ಭೂಮಿ ಬರಬರುತ್ತಾ ಅತಿ ಚಿಕ್ಕದಾಗುತ್ತಾ ಹೋಗುತ್ತದೆ ಆದುದರಿಂದ ಅನೇಕರು ಒಟ್ಟಾಗಿ ಕೆಲಸಮಾಡಿ ಉತ್ಪತ್ತಿಯನ್ನು ಹಂಚಿಕೊಳ್ಳುವುದು ಲಾಭಕರ. ಸಹಕಾರ ತತ್ವಾನುಸಾರವಾಗಿ ರೈತರಿಗೆ ಹಳಬ ಸಹಾಯ ಮಾಡಬಹುದು

ಇದಕ್ಕಾಗಿ ಕಾಂಗ್ರೆಸ್ ಒಂದು ಶಾಖೆಯನ್ನು ಏರ್ಪಡಿಸಿಕೊಳ್ಳಬೇಕು.

ಶ್ರೀ. ಕೆ. ಜಿ. ಶಿವಸ್ವಾಮಿಯವರು ರೈತರನ್ನು ಕುರಿತು ಭಾಷಣ ಮಾಡಿದರು.

೧೭ ಕೂಲಿಕಾರರು

ಸಮ್ಮೇಳನದಲ್ಲಿ ಚರ್ಚೆಗೆ ಬಂದ ಮುಂದಲ ಭಾಗ ಕೂಲಿಗಾರರ ಪ್ರಶ್ನೆ ಗಾಂಧಿಜಿ ಹೀಗೆ ಹೇಳಿದರು:—“ಅಹಮ್ಮದಾಬಾದ್ ಕೂಲಿಗಾರರ ಸಂಘ ಭಾರತಕ್ಕೆ ಮಾದರಿ. ಇದು ಅಹಿಂಸೆಯನ್ನು ಅನುಸರಿಸುತ್ತದೆ. ಅದು ಯಾವಾಗಲೂ ಹೆಜ್ಜೆ ಹಿಂದಿಟ್ಟಿಲ್ಲ. ಗಿರಣಿಗಳಲ್ಲಿ ಕೆಲಸಮಾಡುವ ಕೂಲಿಗಳಿಗೆ ವೈದ್ಯಶಾಲೆ, ಅವರ ಮಕ್ಕಳಿಗೆ ಪಾಠಶಾಲೆ, ಪ್ರಿಂಟಿಂಗ ಪ್ರೆಸ್, ಖಾದಿ ಅಂಗಡಿ ಎಲ್ಲವನ್ನೂ ಸಂಘ ಏರ್ಪಡಿಸಿದೆ. ಎಲ್ಲಾ ಕೂಲಿಗಳಿಗೂ ಮತ (ವೋಟ್) ಕೊಡುವ ಅಧಿಕಾರವುಂಟು ಚುನಾವಣೆಗಳನ್ನು ನಿರ್ಣಯಿಸುವುದು ಕೂಲಿಗಳ ಮತಗಳೇ. ಪ್ರಾಂತ ಕಾಂಗ್ರೆಸ್ ಸಮಿತಿ ಅವರಿಗೆ ಮತಾಧಿಕಾರವನ್ನು ಒದಗಿಸಿತು. ಆ ಸಂಘ, ಮುಷ್ಕರಗಳನ್ನೂ ಜಯಶಾಲಿಯಾಗಿ ಹೂಡಿದೆ ಖಾಸಗಿ ಪಂಚಾಯ್ತಿಯಿಂದಲೇ ಎಲ್ಲಾ ವ್ಯತ್ಯಾಸಗಳೂ ತೀರ್ಮಾನವಾಗಿವೆ. ನನಗೆ ಅಧಿಕಾರವಿದ್ದರೆ ಎಲ್ಲಾ ಕೂಲಿಕಾರರ ಸಂಘಗಳನ್ನು ಅಹಮ್ಮದಾಬಾದ್ ಸಂಘದಂತೆ ಏರ್ಪಡಿಸುತ್ತಿದ್ದೆ. ಅದಕ್ಕೂ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಗೂ ಸಂಬಂಧವೇ ಇಲ್ಲ. ಕಾಂಗ್ರೆಸ್ಸು ಆ ಸಂಘದಲ್ಲಿ ತನ್ನ ಕೈವಾಡವನ್ನಿಟ್ಟಿಲ್ಲ."

ರಾಜೇಂದ್ರ ಬಾಬು:— ಕಾರ್ಖಾನೆಗಳಲ್ಲಿರುವ ಕೂಲಿಗಳು ಟ್ರೇಡ್ ಯೂನಿಯನ್ ಸಂಘಗಳಲ್ಲಿ ವ್ಯವಸ್ಥಿತರಾಗಿದ್ದಾರೆ. ರೈತರಿಗೆ ಹೋಲಿಸಿ ಕೊಂಡರೆ ಇವರ ಸಂಖ್ಯೆ ಕಡಿಮೆ ಆದರೆ ಇವರು ಕೈಗಾರಿಕೆ ಕೇಂದ್ರಗಳಲ್ಲಿ ಒಂದೇ ಕಡೆ ಸೇರಿರುವುದರಿಂದ ಇವರನ್ನು ವ್ಯವಸ್ಥೆಗೊಳಿಸುವುದು ಸುಲಭ. ಯಂತ್ರಗಳ, ಬುದ್ಧಿವಂತಿಕೆಯ ಉದ್ಯೋಗಗಳಲ್ಲಿ ಇವರು ತೊಡಗಿರುವುದ ರಿಂದ ಇವರು ರೈತರಿಗಿಂತ ಹೆಚ್ಚು ಜಾಣರು ಅವರನ್ನು ವ್ಯವಸ್ಥೆಮಾಡು ವುದು ತಪ್ಪಲ್ಲ. ಆದರೆ ಕೂಲಿಕಾರರನ್ನು ರಾಜಕೀಯ ಪಕ್ಷಗಳ ಗೊಂಬೆ ಗಳಾಗಿ ಮಾಡಿಕೊಳ್ಳಕೂಡದು. ಕೆಲವು ಕೂಲಿಗಾರರ ಸಂಘಗಳು ಮುಷ್ಕರ ಹೂಡುವುದಕ್ಕೂ ಇಲ್ಲದ ವ್ಯಾಜ್ಯಗಳನ್ನು ಹುಟ್ಟಿಸಲಿಕ್ಕೂ ಹುಟ್ಟಿಕೊಂಡಿವೆ. ಯಜಮಾನನು ಕ್ರೂರಿಯಾಗಿ ಯಾವುದಕ್ಕೂ ಬಗ್ಗದಿದ್ದರೆ, ಕೊನೆಯ ಆಯುಧವಾಗಿ ಮುಷ್ಕರ ಹೂಡಬೇಕು. ಕೂಲಿಗಳಿಗೆ ಒಳ್ಳೆಯ ನಾಯಕರ ಮುಂದಾಳುತನ ಬೇಕು ಅಹಮದಾಬಾದ್ ಕೂಲಿಗಾರರ ಸಂಘ ಮೇಲು ಪಂಗ್ತಿ ಎಂದು ಗಾಂಧಿಜಿ ಹೇಳುತ್ತಾರೆ. ಕೆಲಸಗಾರರು ಆ ಸಂಘದ ಕಾರ್ಯ ಕ್ರಮವನ್ನು ತಿಳಿದು ಅಂತಹ ಸಂಘಗಳನ್ನು ಸ್ಥಾಪಿಸಬೇಕು.

ಶ್ರೀಮಾನ್ ಪಿ ಆರ್ ಕೆ. ಶರ್ಮಾ ಕೂಲಿಗಾರರ ಪ್ರಶ್ನೆಯನ್ನು ಕುರಿತು ಭಾಷಣಮಾಡಿದರು.

೧೮ ವಿದ್ಯಾರ್ಥಿಗಳು

ರಚನಾತ್ಮಕ ಕಾರ್ಯಕ್ರಮದಲ್ಲಿ ಕೊನೆಯದಾಗಿ ಚರ್ಚೆಗೆ ಬಂದುದು ವಿದ್ಯಾರ್ಥಿಗಳ ಪ್ರಶ್ನೆ. ಗಾಂಧಿಯವರಷ್ಟು ವಿದ್ಯಾರ್ಥಿಗಳ ಮೇಲೆ ಪರಿಣಾಮ ವನ್ನುಂಟುಮಾಡಿರುವವರು ಮತ್ತಾರೂ ಇಲ್ಲ. ಅವರ ಕುರಿತು ಗಾಂಧಿ ಯವರು ಹೀಗೆ ಹೇಳಿದರು.

"ನಾನು ವಿದ್ಯಾರ್ಥಿಗಳೊಂದಿಗೆ ತುಂಬ ಸಂಬಂಧವಿಟ್ಟುಕೊಂಡಿದ್ದೇನೆ. ಅವರನ್ನೂ ನಾನು ಬಲ್ಲೆ. ನನ್ನನ್ನೂ ಅವರು ಬಲ್ಲರು. ಹಿಂದೆ ಕಾಲೇಜಿನವ ರಾಗಿದ್ದ ಅನೇಕರು ನನ್ನ ಸಹೋದ್ಯೋಗಿಗಳಾಗಿದ್ದಾರೆ. ವಿದ್ಯಾರ್ಥಿಗಳೇ

ಈ ಜನಾಂಗದ ಮುಂದಲ ಜೀವನವೆಂಬುದು ನನಗೆ ಗೊತ್ತು. ಅಸಹಕಾರದ ಬಿರುಗಾಳಿಯಲ್ಲಿ ಸ್ಕೂಲು ಕಾಲೇಜುಗಳನ್ನು ತ್ಯಜಿಸುವಂತೆ ನಾನು ಅವರಿಗೆ ಹೇಳಿದೆ. ಅಲ್ಲಿಂದ ಹಾಗೆಯೇ ಒಂದೇ ಸಮನಾಗಿ ಗಟ್ಟಿಯಾಗಿ ನಿಂತ ಅನೇಕರಿಂದ ದೇಶಕ್ಕೆ ಒಳ್ಳೆ ಸೇವೆಯಾಗಿದೆ. ಈಚೆಗೆ ಹಾಗೆ ಕರೆಯಲಿಲ್ಲ. ದೇಶದಲ್ಲಿ ಅಂತಹ ವಾತಾವರಣವಿಲ್ಲ ಆಧುನಿಕ ವಿದ್ಯೆ, ಥಳಕು, ಅಸ್ವಾಭಾವಿಕ. ಆದರೂ ವಿದ್ಯಾರ್ಥಿಗಳು ಇದರಿಂದ ಬಹಳ ಆಕರ್ಷಿತರಾಗಿದ್ದಾರೆ ಕಾಲೇಜು ವಿದ್ಯೆಯಿಂದ ಉದ್ಯೋಗ ದೊರೆಯುತ್ತೆ. ಜ್ಞಾನಾರ್ಜನೆಗಾಗಿ ಮಾಡಬೇಕಾದುದನ್ನು ಮಾಡಲೇಬೇಕು ಮಾತೃಭಾಷೆಯನ್ನು ಬಿಟ್ಟು ಪರಭಾಷೆಯನ್ನು ಬಹುಕಾಲ ಕಲಿಯುವ ವ್ಯರ್ಥ ಜೀವನ ಪಾಪ ಎಂಬುದು ಅವರಿಗೆ ತಿಳಿಯುವುದೇ ಇಲ್ಲ ಈ ವಿದ್ಯಾರ್ಥಿಗಳೂ ಅವರ ಉಪಾಧ್ಯಾಯರೂ ಆಧುನಿಕ ವಿಜ್ಞಾನ ಸಾಧನೆಗೆ ದೇಶಭಾಷೆಗಳ ಉಪಯೋಗವಿಲ್ಲವೆಂದು ತೀರ್ಮಾನಿಸಿದ್ದಾರೆ. ಜಪಾನಿಗಳು ಹೇಗೆ ಮುಂದುವರಿಯುತ್ತಿದ್ದಾರೆಂದು ನನಗೆ ಆಶ್ಚರ್ಯ ಅವರಿಗೆ ಅವರ ಭಾಷೆಯಲ್ಲಿಯೇ ಹೇಳಿಕೊಡುತ್ತಾರೆಂದು ಕೇಳಿದ್ದೇನೆ ಚೀಣಾದ ಜನರಾಲಿಸ್ಮೊಗೆ ಇಂಗ್ಲಿಷ್ ಗೊತ್ತೇ ಇಲ್ಲ.

ವಿದ್ಯಾರ್ಥಿಗಳು ಹೀಗಿದ್ದರೂ ಭಾರತದ ಮುಂದಲ ಮುಂದಾಳುಗಳು ಈ ಸ್ತ್ರೀ ಪುರುಷರಿಂದಲೇ ಜನಿಸಬೇಕು ಅಹಿಂಸೆ ಅವರನ್ನೂ ಆಕರ್ಷಿಸುತ್ತಿಲ್ಲ. ಏಟಿಗೆ ಏಟು ಇದು ಚೆನ್ನಾಗಿ ಅರ್ಥವಾಗುತ್ತದೆ. ಇದರಿಂದ ಕ್ಷಣಿಕವಾದ ಫಲವಾಗುತ್ತದೆ. ಆದರೆ ಅದು ಎಂದಿಗೂ ಕೊನೆಯಾಗದು. ಪಶು ಶಕ್ತಿಗಳ ಹೋರಾಟ. ಅಹಿಂಸಾಮಾರ್ಗ ನಿಧಾನವಾದ ಪ್ರಯೋಗ ಮತ್ತು ಕಷ್ಟವಾದ ಶಾಂತವಾದ ಆಚರಣೆ. ವಿದ್ಯಾರ್ಥಿಗಳ ಮುಖಂಡನಾಗಲು ನಾನು ಹೊರಟಿಲ್ಲ. ವಿಶಾಲವಾದ ಅರ್ಥದಲ್ಲಿ ನಾನೂ ಒಬ್ಬ, ಸಹವಿದ್ಯಾರ್ಥಿ. ನನ್ನ ವಿಶ್ವವಿದ್ಯಾಲಯ ಅವರದರಿಂದ ಬೇರೆ. ಈ ವಿಶ್ವವಿದ್ಯಾಲಯಕ್ಕೆ ಅವರೆಲ್ಲಾ ಬಂದು ನನ್ನ ಜತೆಯಲ್ಲಿ ಪ್ರಯೋಗದಲ್ಲಿ ಸೇರಬಹುದು. ಇವು ಅವರ ನಿಯಮಗಳು.

(೧) ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಕೂಡದು. ಅವರು ಜ್ಞಾನದ ಅನ್ವೇಷಕರು. ರಾಜಕಾರಣ ಪಟುಗಳಲ್ಲ.

(೨) ಅವರು ರಾಜಕೀಯ ಮುಷ್ಕರಗಳನ್ನೂ ಹೂಡಕೂಡದು. ಅವರಿಗೆ ನಾಯಕರಿರಬೇಕು. ಆ ನಾಯಕರ ಒಳ್ಳೆಯ ಗುಣಗಳನ್ನು ಅನುಕರಿಸಬೇಕು ನಾಯಕನಿಗೆ ಸೆರೆವಾಸ, ಮರಣದಂಡನೆ ದೊರೆತರೂ ವಿದ್ಯಾರ್ಥಿಗಳು ಶಾಂತರಾಗಿರಬೇಕು. ವಿದ್ಯಾರ್ಥಿಗಳಿಗೆ ದುಃಖವಾದರೆ, ಈ ದುಃಖ ಎಲ್ಲರಿಗೂ ಸಮಾನವಾದರೆ ಶಾಲೆ ಕಾಲೇಜುಗಳನ್ನೂ ಪ್ರಿನ್ಸಿ-ಪಾಲರೇ ಮುಚ್ಚಬಹುದು ಪ್ರಿನ್ಸಿಪಾಲರು ಒಪ್ಪದಿದ್ದರೆ ವಿದ್ಯಾರ್ಥಿಗಳು ಗಂಭೀರವಾಗಿ ಶಾಲೆಯನ್ನು ಬಿಟ್ಟು ಪ್ರಿನ್ಸಿಪಾಲರು ಪಶ್ಚಾತ್ತಾಪದಿಂದ ಹಿಂದಕ್ಕೆ ಕರೆಯುವವರೆಗೆ ತಮ್ಮ ಪಾಡಿಗೆ ತಾವು ಇರಬೇಕು. ಯಾವ ಕಾರಣದಿಂದಲೂ ವಿದ್ಯಾರ್ಥಿಗಳು ಅಧಿಕಾರಿಗಳ ಮೇಲೂ ತಮ್ಮ ಜತೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮೇಲೂ ಬಲಾತ್ಕಾರ ಮಾಡಕೂಡದು. ಒಮ್ಮುಖವಾಗಿ ಗಂಭೀರವಾಗಿ ನಡೆದರೆ ತಮಗೆ ಜಯವಾಗುವುದೆಂಬ ನಂಬಿಕೆ ಅವರಿಗೆ ಇರಬೇಕು.

(೩) ವಿದ್ಯಾರ್ಥಿಗಳು ಶಾಸ್ತ್ರೀಯವಾಗಿ ಸೂತ್ರಯಜ್ಞ ನಡೆಸಬೇಕು. ನೂಲುವ ಸಾಮಗ್ರಿಗಳ ಜ್ಞಾನಪಡೆಯಬೇಕು. ನೂಲುವುದನ್ನು ಅವರು ರಾಜಕೀಯ ಸಾಮಾಜಿಕ ಆರ್ಥಿಕ ಮುಂತಾದ ಎಲ್ಲಾ ದೃಷ್ಟಿಗಳಿಂದಲೂ ವ್ಯಾಸಂಗ ಮಾಡಬೇಕು.

(೪) ಅವರು ಖಾದಿಯನ್ನೇ ಉಪಯೋಗಿಸಬೇಕು. ಹಳ್ಳಿಯ ಪದಾರ್ಥಗಳನ್ನೇ ಉಪಯೋಗಿಸಬೇಕು.

(೫) ವಂದೇ ಮಾತರಂ ಅಥವಾ ರಾಷ್ಟ್ರೀಯ ಬಾವುಟವನ್ನು ಇತರರ ಮೇಲೆ ಬಲಾತ್ಕರಿಸಬಾರದು.

೬) ಅವರು ರಾಷ್ಟ್ರಧ್ವಜದ ಸಂದೇಶವನ್ನು ಆಚರಿಸಬಹುದು. ಅಸ್ಪೃಶ್ಯತೆಯನ್ನೂ ಜಾತಿ ಪಕ್ಷಪಾತವನ್ನೂ ಅವರು ತ್ಯಜಿಸಬೇಕು. ಇತರ ಮತದವರೊಂದಿಗೆ ಸ್ನೇಹ ಮಾಡಬೇಕು.

(೭) ವಿದ್ಯಾರ್ಥಿಗಳು ಪ್ರಥಮ ಚಿಕಿತ್ಸೆ ನಡೆಸಬೇಕು. ಸುತ್ತ ಮುತ್ತಲ ಹಳ್ಳಿಗಳನ್ನು ಶುದ್ಧವಾಗಿಡಬೇಕು. ಮಕ್ಕಳಿಗೂ ದೊಡ್ಡವರಿಗೂ ಪರಿಶುದ್ಧತೆಯನ್ನು ಹೇಳಿಕೊಡಬೇಕು.

(೮) ಅವರು ಹಿಂದುಸ್ಥಾನಿಯನ್ನು ಕಲಿಯಬೇಕು. ಎರಡು ಲಿಪಿಗಳನ್ನೂ ಕಲಿಯಬೇಕು.

(೯) ವಿದ್ಯಾರ್ಥಿಗಳ ಜೀವನದಲ್ಲಿ ಎಲ್ಲವೂ ಬೆಳಕಾಗಿರಬೇಕು. ಅವರು ನಿರ್ಭಯರಾಗಿರಬೇಕು; ಸಂಯಮವುಳ್ಳವರಾಗಿರಬೇಕು ನಿಶ್ಶಕ್ತರಾದ ವಿದ್ಯಾರ್ಥಿಗಳಿಗೆ ರಕ್ಷಕರಾಗಿರಬೇಕು. ಜಾತೀಯ ದಂಗೆಯುಂಟಾದಡೆ ತಮ್ಮ ಪ್ರಾಣವನ್ನೇ ಕೊಟ್ಟು ಅಹಿಂಸಾ ಮಾರ್ಗದಿಂದ ಶಾಂತಿ ಸ್ಥಾಪಿಸಬೇಕು. ಕೊನೆಯ ಹೋರಾಟದಲ್ಲಿ ವಿದ್ಯೆಗೂ ನಮಸ್ಕಾರ ಹಾಕಿ ಶಾಲೆ ಕಾಲೇಜುಗಳನ್ನು ತೊರೆದು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನು ಬೇಕಾದರೂ ತೆರಬೇಕು.

(೧೦) ವಿದ್ಯಾರ್ಥಿನಿಯರ ವಿಷಯದಲ್ಲಿ ಗಂಭೀರರಾಗಿ ಉದಾರರಾಗಿ ಧೀರರಾಗಿರಬೇಕು.

ಈ ಕಾರ್ಯಕ್ರಮಕ್ಕೆ ಬೇಕಾದ ಕಾಲವನ್ನು ವಿದ್ಯಾರ್ಥಿಗಳು ಉಳಿಸಿಕೊಳ್ಳಬೇಕು. ಕಾಲವನ್ನು ಮಿತವಾಗಿ ಉಪಯೋಗಿಸಿದರೆ ಬಹಳ ಸಮಯ ಉಳಿಯುತ್ತದೆ. ಆದರೆ ವಿದ್ಯಾರ್ಥಿಗಳು ಮಿತಿಮೀರಿ ಕೆಲಸ ಮಾಡಬೇಕೆಂದು ನಾನು ಹೇಳುವದಿಲ್ಲ. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಒಂದು ವರುಷವನ್ನು ಈ ಕಾರ್ಯಕ್ರಮಕ್ಕೆ ಕೊಡಬೇಕು. ಆ ಒಂದು ವರುಷವನ್ನು ಒಟ್ಟಿಗೇ ಕೊಡಬೇಕಾದುದಿಲ್ಲ. ಈ ಒಂದು ವರುಷ ವ್ಯರ್ಥವಲ್ಲವೆಂಬುದು ಅವರಿಗೆ ಗೊತ್ತಾಗುವುದು. ಈ ಸೇವೆಯಿಂದ ಅವರ ಬುದ್ಧಿಯೂ ಆತ್ಮವೂ ದೇಹವೂ ಬೆಳೆಯುವುದು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರು ಸ್ವಾತಂತ್ರ್ಯ ಚಳವಳಿಗೆ ತಮ್ಮ ಕಾಣಿಕೆ ಅರ್ಪಿಸಿದಂತಾಗುವುದು.

ರಾಜೇಂದ್ರಬಾಬು—ವಿದ್ಯಾರ್ಥಿಗಳಲ್ಲಿಯೂ ಕೆಲಸ ಮಾಡಬೇಕಾಗಿದೆ. ಆದರೆ ಈ ಕೆಲಸದ ಸ್ವಭಾವವೇ ಬೇರೆ. ವಿದ್ಯಾರ್ಥಿಗಳ ಹಿತಕ್ಕೂ ಉಳಿದ ಯಾರ ಹಿತಕ್ಕೂ ಧಕ್ಕೆ ಬರುವುದಿಲ್ಲ. ಆದುದರಿಂದ ಅವರಿಗಾಗಿಯೇ ಬೇರೆ ಸಂಸ್ಥೆ ಆವಶ್ಯಕವಿಲ್ಲ. ವಿದ್ಯಾಧಿಕಾರಿಗಳು ದೇಶದ ಹಿತೈಷಿಗಳು ತಮ್ಮ ಸ್ವಾಧೀನದಲ್ಲಿರುವ ಯುವಕರ ಬುದ್ಧಿಯನ್ನೂ ದೇಹವನ್ನೂ ನೀತಿಯನ್ನೂ ಸರಿಯಾಗಿ ರೂಪುಗೊಳಿಸಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವುದು

ಅವರ ಕರ್ತವ್ಯ. ಆದರೆ ನಮ್ಮ ದೇಶದ ಇಂದಿನ ಸ್ಥಿತಿಯಲ್ಲಿ ವಿದ್ಯಾಧಿಕಾರಿಗಳು ದೇಶದ ಸೇವಕರಲ್ಲ. ದೇಶದ ಹಿತವೂ ಅಧಿಕಾರಿಗಳ ಹಿತವೂ ಅನೇಕ ವೇಳೆ ಒಂದಾಗಿರುವುದಿಲ್ಲ. ಬ್ರಿಟಿಷ್ ಸರಕಾರದವರು ಕೊಡುವ ವಿದ್ಯೆ ಒಂದು ಉದ್ದೇಶಕ್ಕಾಗಿ. ಆದುದರಿಂದ ದೇಶಾಭಿಮಾನಿಗಳಾದ ವಿದ್ಯಾರ್ಥಿಗಳಿಗೂ ಪ್ರತಿಗಾಮಿಗಳಾದ ವಿದ್ಯಾ ಅಧಿಕಾರಿಗಳಿಗೂ ಅನೇಕ ವೇಳೆ ವ್ಯತ್ಯಾಸವುಂಟಾಗುತ್ತದೆ ಸರ್ಕಾರದ ಸಹಾಯ ಅವಲಂಬಿಸುವ ವಿದ್ಯಾರ್ಥಿಗಳಿಗೆ ಸರ್ಕಾರವನ್ನು ಎದುರಿಸುವುದು ಸಾಧ್ಯವಿಲ್ಲ ಸರ್ಕಾರಿ ವಿದ್ಯಾ ಸಂಸ್ಥೆಗಳಲ್ಲಿರುವಾಗ ಸರ್ಕಾರವನ್ನು ಎದುರಿಸುವುದರಿಂದ ಅವರ ವಿದ್ಯಾರ್ಜನೆ ಇನ್ನೂ ಕೆಡುತ್ತದೆ. ಆದುದರಿಂದ ವಿದ್ಯಾರ್ಥಿಗಳ ಸಂಸ್ಥೆ ದೇಶದ ಕುಂದಕಗಳನ್ನು ಸರಿ ಮಾಡಲು ಪ್ರಯತ್ನಿಸುವುದಕ್ಕಿಂತ ತಮ್ಮ ವಿದ್ಯದಲ್ಲಿರುವ ಕುಂದನ್ನು ಸರಿಮಾಡಿಕೊಳ್ಳಲು ಕೆಲಸಮಾಡಬೇಕು. ವಿದ್ಯಾರ್ಥಿ ಸಂಘ ವಿದ್ಯಾರ್ಥಿಗಳನ್ನು ರಾಜಕೀಯ ಹೋರಾಟಕ್ಕೆ ತಯಾರಿಸುವುದಕ್ಕಿಂತ ಹೆಚ್ಚಾಗಿ ಸತ್ಪ್ರಜೆಗಳನ್ನಾಗಿ ತಯಾರಿಸುವುದಾಗಿರಬೇಕು. ಹಾಗೆಂದ ಮಾತ್ರಕ್ಕೆ ಸ್ವಾತಂತ್ರ್ಯ ಸಮರದಲ್ಲಿ ವಿದ್ಯಾರ್ಥಿಗಳಿಗೆ ಭಾಗವಿಲ್ಲವೆಂದಲ್ಲ. ಅವರು ವಿದ್ಯಾರ್ಥಿ ಜೀವನದಲ್ಲಿಯೇ ಅದಕ್ಕೆ ತಯಾರಾಗಬೇಕು ದೇಶದ ಹೋರಾಟದಲ್ಲಿ ಭಾಗವಹಿಸಲು ಇಷ್ಟವಿದ್ದವರು ವಿದ್ಯಾಸಂಸ್ಥೆಯನ್ನು ಬಿಟ್ಟು ದೇಶಕಾರ್ಯದಲ್ಲಿ ತೊಡಗಬೇಕು. ಆದರೆ ಆಗ ಅವರು ವಿದ್ಯಾರ್ಥಿಸಂಘದ ಸಂಬಂಧವನ್ನು ತೊರೆಯಬೇಕು. ಎಲ್ಲಾ ವಿದ್ಯಾರ್ಥಿಗಳೂ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಬಹುದು. ಅವರು ಯಶಸ್ವಿಯಾಗಿ ಕೆಲಸಮಾಡಬಹುದು. ಕೋಮುವಾರು ಅಪನಂಬಿಕೆ ಕಳೆಯಬಹುದು ತಮ್ಮಲ್ಲಿ ಅಸ್ಪೃಶ್ಯತೆ ಇಲ್ಲದಂತೆ ಮಾಡಬಹುದು. ಅವರು ನಿತ್ಯಾ ನೂಲಬಹುದು. ವಿರಾಮಕಾಲಗಳಲ್ಲಿ ಹಳ್ಳಿಗಳ ಸೇವೆಮಾಡಬಹುದು. ಈ ಬಗೆಯ ರಚನಾತ್ಮಕ ಕಾರ್ಯಗಳಿಗೆ ತಮ್ಮ ಕಾಲವನ್ನು ಅವರು ವಿನಿಯೋಗಿಸುವಾಗ, ವಿದ್ಯಾರ್ಥಿಗಳಿಗೆ ಪೋಷಕರೊಂದಿಗೂ ಅಧಿಕಾರಿಗಳೊಂದಿಗೂ ವಿರೋಧದ ಆವಶ್ಯಕತೆ ಇಲ್ಲ ಈ ತಯಾರಿಯಿಂದ ಅವರಿಗೆ ಒಳ್ಳೆಯ ಅನುಭವವೂ ಜ್ಞಾನವೂ ಉಂಟಾಗುವುದು. ಸ್ವತಂತ್ರ ದೇಶದ ಪ್ರಜೆಗಳಾಗಿ ಕೆಲಸ ಮಾಡುವಾಗ ಈ ಅನುಭವದಿಂದ ಅವರಿಗೆ ಬಹಳ ಸಹಾಯವಾಗುತ್ತದೆ.

ಈ ಕೆಲಸಗಳಲ್ಲಿ ತೊಡಗಿರುವ ವಿದ್ಯಾರ್ಥಿ ಸಂಸ್ಥೆಗಳು ದೇಶಕ್ಕೆ ಆವಶ್ಯಕ. ವಿದ್ಯಾರ್ಥಿಗಳಲ್ಲಿ ಸೇವಾ ದೀಕ್ಷೆಯಿಂದ ಒಗ್ಗಟ್ಟಾಗಲು ಇದರಿಂದ ಸಹಾಯ ವಾಗುತ್ತದೆ. ವಿದ್ಯಾರ್ಥಿಗಳ ಪ್ರೇಮವನ್ನು ಸಂಪಾದಿಸಿ ಅವರಲ್ಲಿ ಶಿಸ್ತನ್ನೂ ಒಗ್ಗಟ್ಟನ್ನೂ ಉಂಟುಮಾಡುವ ಮುಖಂಡರು ಇಂದು ಬೇಕಾಗಿದ್ದಾರೆ. ಕೆಲಸಗಾರರು ಕೋಪ ಅಸೂಯೆ ರಹಿತರಾಗಿರಬೇಕು ನಿಸ್ವಾರ್ಥಿಗಳಾಗಿರ ಬೇಕು. ಅವರಿಗೆ ಯಾವುದರಿಂದಲೂ ಅತ್ಯುತ್ಸಾಹವೂ ನಿರುತ್ಸಾಹವೂ ಉಂಟಾಗಬಾರದು. ಅವರು ಯುವಕರ ಸ್ವಭಾವವನ್ನು ತಿಳಿದು ಅವರಲ್ಲಿ ನಂಬಿಕೆಯಿಂದ ಕೆಲಸಮಾಡಬೇಕು.

ಗಾಂಧಿಯವರಿಗೆ ಪ್ರಿಯವಾದ ಜಾತೀಯ ಐಕ್ಯತೆಯನ್ನು ಕುರಿತು ಒಬ್ಬ ಮುಸ್ಲಿಂ ವಿದ್ಯಾರ್ಥಿ ಹೀಗೆ ಪ್ರಶ್ನೆ ಹಾಕಿದನು.

ಹಿಂದು ಮುಸ್ಲಿಂ ಐಕ್ಯತೆಗೆ ವಿದ್ಯಾರ್ಥಿಗಳು ಏನು ಮಾಡಬೇಕು?
“ ಮಾರ್ಗ ಸುಲಭ ಎಲ್ಲಾ ಹಿಂದುಗಳು ಪುಂಡರಾಗಿ ನಿಮ್ಮನ್ನು ಬೈದರೂ ನೀವು ಅವರನ್ನು ಸಹೋದರರಂತೆಯೇ ಭಾವಿಸಬೇಕು. ಹಿಂದುಗಳಿಗೂ ಇದೇ ಮಾತು, ಇದು ಅಸಾಧ್ಯವಿಲ್ಲ, ಸಾಧ್ಯ. ವ್ಯಕ್ತಿಗೆ ಯಾವುದು ಸಾಧ್ಯವೋ ಅದು ಜನತೆಗೂ ಸಾಧ್ಯ.

“ ಇಂದು ವಾತಾವರಣ ವಿಷಪೂರಿತವಾಗಿದೆ. ಪತ್ರಿಕೆಗಳ ಸುಳ್ಳು ಸುದ್ದಿಗಳನ್ನು ಜನರು ನಂಬಿ, ಭಯದಿಂದ ಹಿಂದು ಮುಸಲ್ಮಾನರು ಒಬ್ಬ ರನ್ನೊಬ್ಬರು ಕಾಡು ಮೃಗಗಳಂತೆ ಕಾಣುತ್ತಿದ್ದಾರೆ. ಎದುರಾಳಿ ಹೇಗೆ ಇರಲಿ, ತಾನು ಗಂಭೀರವಾಗಿ ನಡೆದುಕೊಳ್ಳುವುದು ಮನುಷ್ಯನಾದವನ ಕರ್ತವ್ಯ. ಒಳ್ಳೆಯವನೊಂದಿಗೆ ಒಳ್ಳೆಯವನಾಗಿರುವುದು ವ್ಯಾಪಾರ ವಾಯಿತು. ಕಳ್ಳರೂ ದರೋಡೆಗಾರರೂ ಸಹ ಹಾಗೆ ಇರುತ್ತಾರೆ. ಅದರಲ್ಲಿ ಹೆಚ್ಚುಗೆ ಏನೂ ಇಲ್ಲ, ಮನುಷ್ಯತ್ವದಲ್ಲಿ ಲಾಭನಷ್ಟಗಳ ಲೆಕ್ಕಾಚಾರ ಹೇಯವಾದುದು. ಹಿಂದು ಮುಸಲ್ಮಾನರು ನನ್ನ ಬೋಧನೆಯಂತೆ ನಡೆದರೆ ಭಾರತದಲ್ಲಿ ಪೂರ್ಣ ಶಾಂತಿ ನೆಲೆಸುವುದು ಈ ಶಾಂತಿಯನ್ನು ಲಾಠಿಗಳೂ ಈಟಿಗಳೂ ಭಂಗಪಡಿಸಲಾರವು. ಎದುರಿಸುವವರೂ ಉದ್ರೇಕಗೊಳಿಸು ವವರೂ ಇಲ್ಲದಿದ್ದರೆ ಪುಂಡರು ತಾವೆ ಇರಿಯುವ ಹೀನವೃತ್ತಿಯನ್ನು

ಬಿಡುತ್ತಾರೆ. ಅದೃಶ್ಯವಾದ ಶಕ್ತಿಯೊಂದು ಅವನ ಎತ್ತಿದ ಕೈಯ್ಯನ್ನು ತಡೆಯುವುದು ನೀವು ಸೂರ್ಯನಿಗೆ ಧೂಳನ್ನು ಎರಚಬಹುದು. ಆದರೆ ಸೂರ್ಯನ ಕಾಂತಿ ಮಂಕಾಗುವುದಿಲ್ಲ. ಶ್ರದ್ಧೆಯಿಂದಲೂ ಶಾಂತಿಯಿಂದಲೂ ಮನಸ್ಸನ್ನು ಬಿಗಿಹಿಡಿದಿದ್ದರೆ ಸಾಕು. ದೇವರ ಒಳ್ಳೆಯವನು ಒಂದು ಮಟ್ಟದ ಆಚೆಗೆ, ಕೇಡು ಜಯಿಸಲು ಆವನು ಅವಕಾಶ ಕೊಡುವುದಿಲ್ಲ.

೫೫

ಹಿಂದುಸ್ಥಾನಿ ಪ್ರಚಾರ ಸಭೆಯ ರಜತೋತ್ಸವ

" ಹಿಂದುಸ್ಥಾನಿಯನ್ನು ಕಲಿಯುವುದು, ಭಾರತದ ಸೇವೆ "

✻

ಗಾಂಧಿಯವರು ಮದರಾಸಿಗೆ ಬಂದುದು ಮುಖ್ಯವಾಗಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತಮಹೋತ್ಸವದ ಘಟಿಕೋತ್ಸವಕ್ಕಾಗಿ. (೨೫-೧-೪೬) ತಮಿಳು ಆಂಧ್ರ ಕರ್ನಾಟಕ ಕೇರಳಗಳಿಂದ ಸಾವಿರಾರು ಪ್ರಚಾರಕರು ನೆರೆದಿದ್ದರು. ಜನ ಸಭಾಮಂದಿರದಲ್ಲಿ ಕಿಕ್ಕಿರಿದಿದ್ದರು. ಪ್ರಚಾರಕರು ಗಂಭೀರವಾಗಿ ಒಬ್ಬರ ಹಿಂದೆ ಒಬ್ಬರು ಸಾವಿರ ಸಂಖ್ಯೆಯಲ್ಲಿ ಬಂದು ನೆರೆದರು. ಅವರೆಲ್ಲಾ ಒಂದೇ ಬಣ್ಣದ ಖಾದಿ ಶಾಲನ್ನು ಹೊದೆದಿದ್ದರು. ಮುಂದಲಗಳಿಗೆಯಲ್ಲಿ ಗಾಂಧಿಯವರು ಸುಶೀಲ ನಾಯರ್ ಮತ್ತು ಪ್ಯಾರೆಲಾಲರೊಡನೆ ಸಭಾಮಂಟಪಕ್ಕೆ ಬಂದರು. ವೇದಿಕೆ ಸ್ವಲ್ಪ ತಗ್ಗಾಗಿದ್ದುದರಿಂದ, ಗಾಂಧಿಯವರು ಒಂದು ಕುರ್ಚಿಯ ಮೇಲೆ ಕುಳಿತರು. ಗದ್ದಲ ಮಾಡುತ್ತಿದ್ದ ಕಡೆ ತಿರುಗಿ ಗಾಂಧಿಯವರು ಬಾಯಿನ ಮೇಲೆ ಬೆರಳನ್ನಿಟ್ಟುಕೊಂಡರು. ಕೂಡಲೇ ಜನ ಶಾಂತರಾದರು. ಪ್ರಚಾರಕರು ಧರಿಸಿದ್ದಂತೆ ಗಾಂಧಿಯವರೂ ಗುಲಾಬಿ ಶಾಲನ್ನು ಧರಿಸಿದ್ದರು.

ಹುಡುಗಿಯರು ರಾಮು ಕಹೊ ಎಂಬ ಪ್ರಾರ್ಥನೆಯನ್ನು ಹಾಡಿದರು. ಅನಂತರ ಗಾಂಧಿಯವರನ್ನು ಕುರಿತು ಬರೆದಿದ್ದ ಸ್ವಾಗತ ಗೀತೆ ಪ್ರಾರಂಭವಾಯಿತು. ಗೀತೆಯ ಮೊದಲನೆಯ ಚರಣವನ್ನು ಹಾಡಿದ ಕೂಡಲೇ ಗಾಂಧಿಯವರು " ಆಯಿತು ನನಗೆ ಸ್ವಾಗತವಾಯಿತು. ಒಪ್ಪಿದೆ " ಎಂದರು. ಆದರೆ ಹುಡಿಗಿಯರು ಪೂರ್ಣವಾಗಿ ಹಾಡಿಯೇ ಬಿಟ್ಟರು.

ಕಾರ್ಯದರ್ಶಿ ಸತ್ಯನಾರಾಯಣ ಅನಂತರ ಸಭೆಯ ವರದಿಯನ್ನು ಒಪ್ಪಿಸಿದರು. ತಮಿಳುನಾಡು ಕರ್ನಾಟಕ ಕೇರಳ ಆಂಧ್ರ ಪ್ರಾಂತಗಳ ಪ್ರತಿ

ನಿಧಿಗಳು ತಮ್ಮ ತಮ್ಮ ವರದಿಗಳನ್ನು ಒಪ್ಪಿಸಿದರು. ಗಾಂಧಿಯವರು ಪ್ರಚಾರಕರಿಗೆಲ್ಲಾ ಶಾಲುಗಳನ್ನು ಹೊದಿಸಿದರು. ಪ್ರಚಾರಕಳಾದ ಒಬ್ಬಾಕೆಯ ಹೆಸರು "ಬೇಬಿ" ಎಂದು. ಆಕೆಗೆ ಶಾಲುಕೊಟ್ಟ ನಂತರ ಗಾಂಧಿಯವರು "ಬೇಬಿ ಬಡಾ ಹೈ" ಎಂದರು. ಸಭಾಭವನ ನಗುವಿನಲ್ಲಿ ಲೀನವಾಯಿತು. ಆನಂತರ ಕಾರ್ಯದರ್ಶಿಗಳು ರಜತೋತ್ಸವ ಸಂಪುಟವನ್ನು ಗಾಂಧಿಯವರಿಗೆ ಅರ್ಪಿಸಿದರು. ಅದರಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಇಂದಿನ ವರೆಗಿನ ಇತಿಹಾಸ ಇದ್ದಿತು.

ಗಾಂಧಿಯವರು ಪ್ರಚಾರಕರನ್ನೆಲ್ಲಾ ಎದ್ದು ನಿಲ್ಲುವಂತೆ ಹೇಳಿದರು. ಪ್ರಚಾರಕರು ತಮ್ಮ ಕಣ್ಣಿಗೆ ಬೀಳಬೇಕೆಂಬುದು ಗಾಂಧಿಯವರ ಉದ್ದೇಶ.

ಪ್ರಚಾರಕರೆಲ್ಲಾ ನಿಂತುಕೊಂಡ ಮೇಲೆ ಗಾಂಧಿಯವರು "ನಮ್ಮ ಜ್ಞಾನವನ್ನು ದೇಶದ ಸೇವೆಗಾಗಿಯೂ ದೇಶದ ಒಗ್ಗಟ್ಟಿಗಾಗಿಯೂ ಉಪಯೋಗಿಸುತ್ತೇವೆ" ಎಂಬ ಪ್ರತಿಜ್ಞೆಯನ್ನು ಗಟ್ಟಿಯಾಗಿ ಹೇಳಿಕೊಟ್ಟರು. ಪ್ರಚಾರಕರು ಅದನ್ನು ಉಚ್ಚರಿಸಿದರು. "ನೀವು ಇದನ್ನು ಸ್ಪಷ್ಟವಾಗಿ ಉಚ್ಚರಿಸಬೇಕು. ಇದನ್ನು ನಿಮ್ಮ ಹೃದಯದಲ್ಲಿ ಬರೆದುಕೊಳ್ಳಬೇಕು" ಎಂದರು. ಗಾಂಧಿಯವರು ಮತ್ತೆ ಅವರ ಬಾಯಿನಲ್ಲಿ ಪ್ರತಿಜ್ಞೆಯನ್ನು ಹೇಳಿಸಿದರು. ಅನಂತರ ಗಾಂಧಿಯವರು "ದೇಶಸೇವೆಯ ಪ್ರತಿಜ್ಞೆ ಈ ದಿನ ನೀವು ಮಾಡಿದ್ದೀರಿ. ಈ ಪ್ರತಿಜ್ಞೆ ನಿಮ್ಮ ನಿತ್ಯ ಜೀವನದಲ್ಲಿ ಕಾರ್ಯಕಾರಿಯಾಗುವಂತೆ ನೀವು ಬಾಳಬೇಕು ಆಗ ಈ ಘಟಕೋತ್ಸವದಿಂದ ಫಲವುಂಟಾಗುವುದು" ಎಂದರು.

ಪ್ರಚಾರಕರಿಗೆ ಸನ್ನದುಗಳನ್ನು ಗಾಂಧಿಯವರೇ ಕೊಡಬೇಕೆಂದು ಪ್ರಚಾರಕರು ಕೋರಿದರು. ಗಾಂಧಿಯವರು ಕಾಲವ್ಯಯವಾಗುತ್ತದೆ ಎಂದರು ಗಾಂಧಿಯವರ ಕೈಯಿಂದ ಸನ್ನದನ್ನು ಪಡೆಯುವ ಸುಯೋಗವನ್ನು ಪ್ರಚಾರಕರು ಕಳೆದುಕೊಳ್ಳುತ್ತಾರೆಯೆ? ಪ್ರಚಾರಕರು ಗಾಂಧಿಯವರೇ ಸನ್ನದನ್ನು ಕೊಡಬೇಕೆಂದರು. ಗಾಂಧಿಯವರು ನಗುತ್ತಾ ಆಗಲಿ ಎಂದರು. ಸನ್ನದುಗಳನ್ನು ಹಂಚುವುದಕ್ಕೆ ಅರ್ಧ ಗಂಟೆ ಕಾಲ ಹಿಡಿಯಿತು. ಅನೇಕರು ಹಾರ ಹಾಕಲು ಬಂದಾಗ ಗಾಂಧಿಯವರು ತಮ್ಮ ಕೈ ನೀಡಿ

ಹಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಗಾಂಧಿಯವರು ಬೇರೆ ಕಡೆ ನೋಡುತ್ತಿರುವಾಗ ಒಬ್ಬರು ಒಂದು ಖಾದಿ ಹಾರವನ್ನು ಅವರ ಕತ್ತಿಗೆ ಹಾಕಿದರು. ನೀನೆ ಗೆದ್ದೆ ಎಂಬಂತೆ ಗಾಂಧಿಯವರು ನಕ್ಕರು. ಉಳಿದವರೂ ನಕ್ಕರು.

ಸುಮಾರು ಇಪ್ಪತ್ತು ವರುಷದ ಒಬ್ಬ ಯುವಕ ಕುಂಟ ಪ್ರಚಾರಕ ಮರಗಾಲುಗಳ ಮೇಲೆ ಗಾಂಧಿ ಎಡೆಗೆ ಬಂದನು. ಅವನನ್ನು ಕಂಡು ಗಾಂಧಿಯವರ ಅಂತಃಕರಣ ಕರುಣಾಪೂರಿತವಾಯಿತು. ಯುವಕನು ವೇದಿಕೆಯ ಹತ್ತಿರ ಬಂದ ಕೂಡಲೇ ಗಾಂಧಿಯವರು ಬಾಗಿ ಸನ್ನದನ್ನು ಆತನಿಗೆ ಕೊಟ್ಟರು. ಆಗ ಗಾಂಧಿಯವರ ಮುಖವನ್ನು ನೋಡಿ ಧನ್ಯ ಭಾವದಿಂದ ಮಹಾತ್ಮರ ಕಾಲನ್ನು ಮುಟ್ಟಿ ನಮಸ್ಕರಿಸಿದನು ಅವನು ನಿಧಾನವಾಗಿ ತನ್ನ ಸ್ಥಳಕ್ಕೆ ಹೋಗುವುದನ್ನೇ ಗಾಂಧಿಯವರು ತಲ್ಲೀನರಾಗಿ ನೋಡುತ್ತಿದ್ದರು ಆತ ಹೋಗಿ ಕುಳಿತನಂತರ ನಿರಾಳವಾದ ನಿಟ್ಟುಸಿರನ್ನು ಬಿಟ್ಟು "ಅಚ್ಛ" ಎಂದರು ಕರ್ನಾಟಕದ ಶ್ರೀ. ಕೆ. ಎಸ್. ನರಸಿಂಹ ಮೂರ್ತಿಯವರಿಗೆ ಭಾಷಣ ಸ್ಪರ್ಧೆಯಲ್ಲಿ ಗೆದ್ದುದಕ್ಕೆ ಬಹುಮಾನ ದೊರೆಯಿತು.

ಅನಂತರ ಗಾಂಧಿಯವರು ಹೀಗೆ ಭಾಷಣ ಮಾಡಿದರು:

"ನೀವು ಈ ೨೭ ವರುಷಗಳಲ್ಲಿ ಮಾಡಿರುವ ಕೆಲಸ ಚೆನ್ನಾಗಿದೆ. ಮಾತನಾಡಿದವರೊಬ್ಬರು ಹಿಂದುಸ್ಥಾನಿ ಮಧ್ಯೆ ಇಂಗ್ಲಿಷನ್ನು ಸೇರಿಸಿದರು. ಅವರಿಗೆ ಹಿಂದುಸ್ಥಾನಿ ಚೆನ್ನಾಗಿ ಬರುತ್ತೆ. ಆದರೂ ಇಂಗ್ಲಿಷು ಹೇಗೆ ನಿಮ್ಮ ಜೀವನದಲ್ಲಿ ಸೇರಿಕೊಂಡುಬಿಟ್ಟಿದೆ ಎಂಬುದನ್ನು ತೋರಿಸಲು ಅವರು ಹಾಗೆ ಹೇಳಿದರು. ಭಾರತೀಯರ ಹೆಸರುಗಳು ಸಹ ಇಂಗ್ಲಿಷ್ ಆಕಾರಕ್ಕೆ ಬರುತ್ತಿವೆ ಇದು ನಿಜವಾದ ಗುಲಾಮಗಿರಿ.

ಈ ಸಂಕೋಲೆಯಿಂದ ತಪ್ಪಿಸಿಕೊಂಡು ಸ್ವತಂತ್ರರಾಗಬೇಡವೆ? ಅದೇನೂ ಕಷ್ಟವಲ್ಲ ಇಂಗ್ಲಿಷಿನ ಸ್ಥಳಕ್ಕೆ ಹಿಂದುಸ್ಥಾನಿ ತರೋಣ. ಹಿಂದುಸ್ಥಾನಿ ಪ್ರಚಾರದಿಂದ ದೇಶ ಒಂದಾಗಬೇಕು ಪ್ರಾಂತಭಾಷೆಗಳು ಹೋಗಬಾರದು. ಇಲ್ಲಿ ಅನೇಕರಿಗೆ ನನ್ನ ಮಾತು ತಿಳಿಯದುದರಿಂದ ನನಗೆ

ದುಃಖವಾಗಿದೆ. ಬಂಧನದಲ್ಲಿರುವ ನಿಮ್ಮ ಸೇವೆ ನನ್ನ ಕಾರ್ಯ. ನಾನು ಈ ಕಾರ್ಯ ಪ್ರಾರಂಭಿಸಿದುದು ಮೊದಲು ಮದರಾಸಿನಲ್ಲಿ. ಹಿಂದೀ ಪ್ರಚಾರ ನಿಮ್ಮವರೇ ಒಪ್ಪಿದುದರಿಂದ ಇಲ್ಲಿ ಪ್ರಚಾರ ಕಾರ್ಯ ಪ್ರಾರಂಭವಾಗಿದೆ.

ಇಂಗ್ಲಿಷಿನ ವ್ಯಾಮೋಹಬೇಡ

ಪ್ರತಿಯೊಂದು ಭಾಷೆಗೂ ಅದರದರ ಯೋಗ್ಯತೆ ಗುಣ ಗಾಂಭೀರ್ಯ ಇದೆ. ಆದರೆ ಭಾರತಕ್ಕೆ ಒಂದು ಸಾಮಾನ್ಯ ಭಾಷೆ ಬೇಕಾಗಿದೆ. ೨೩ ಕೋಟಿ ಜನರು ಮಾತನಾಡುವ ಹಿಂದುಸ್ಥಾನಿಯಲ್ಲದೆ ಮತ್ತಾವುದೂ ರಾಷ್ಟ್ರ ಭಾಷೆಯಾಗಲು ಸಾಧ್ಯವಿಲ್ಲ. ದಕ್ಷಿಣ ದೇಶದವರು ಎಲ್ಲಕ್ಕೂ ಶಕ್ತರು ಸ್ವಾಭಾವಿಕವಾಗಿ ಬುದ್ಧಿವಂತರು. ಇಂತಹವರಿಗೆ ಹಿಂದುಸ್ಥಾನಿ ಕಲಿಯುವುದು ಕಷ್ಟವಿಲ್ಲ. ಇಂಗ್ಲಿಷಿನ ವ್ಯಾಮೋಹದಲ್ಲಿ ಸಿಕ್ಕಿರುವ ನಾಲಗೆಯನ್ನು ಬಿಡಿಸಿಕೊಳ್ಳುವುದು ಕೆಲವರಿಗೆ ಕಷ್ಟವಾಗಬಹುದು. ಆದರೆ ಇಂಗ್ಲಿಷನ್ನು ನಿಮ್ಮ ಭಾಷೆಯನ್ನಾಗಿ ಮಾಡಿಕೊಂಡುದರಿಂದ ಅದು ನಿಮ್ಮ ಪರಾಧೀನತೆಯನ್ನು ಬಲಪಡಿಸುತ್ತಿರುವುದೆಂಬುದನ್ನು ಮರೆಯಬೇಡಿ.

ನನಗೆ ಮೆಟ್ರಿಕುಲೇಶನ್ ಆಗಲು ಏಳು ವರುಷ ಹಿಡಿಯಿತು. ನನ್ನ ಭಾಷೆಯಲ್ಲಿ ಕಲಿಸಿದ್ದರೆ ಆ ಜ್ಞಾನವನ್ನೆಲ್ಲ ಒಂದೇ ವರುಷದಲ್ಲಿ ಸಂಪಾದಿಸುತ್ತಿದೆ. ಇಂಗ್ಲಿಷ್‌ಗೆ ಉಪಯೋಗಿಸುವ ಕಾಲದಲ್ಲಿ ೧/೮ ಭಾಗವನ್ನು ಕೊಟ್ಟರೆ ಹಿಂದುಸ್ಥಾನಿ ಬರುವುದು. ಹಿಂದುಸ್ಥಾನಿಯನ್ನು ಕಲಿಯುವುದು ಭಾರತೀಯರ ಧರ್ಮ. ಹಿಂದೀ ಪ್ರಚಾರಕರು ದೇಶಭಾಷೆಯನ್ನು ಕಲಿಯಬೇಕು. ದೇಶಭಾಷೆಗೆ ಹಿಂದುಸ್ಥಾನಿಯಿಂದ ಹಾನಿಯಾಗದಂತೆ ನೋಡಿಕೊಳ್ಳಬೇಕು.

ಅನಂತರ ರಾಜಕುಮಾರಿ ಅಮೃತಕುವರಿಯವರು ಭಾಷಣ ಮಾಡಿದರು " ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ಶಿಕ್ಷಣ ಕೆಟ್ಟಿದೆ. ನಮ್ಮ ಪ್ರಾಂತ ಭಾಷೆಗಳು ಮೂಲೆಗೆ ಬಿದ್ದಿವೆ. ಇಂಗ್ಲಿಷನ್ನು ಶಿಕ್ಷಣ ಮಾಧ್ಯಮವಾಗಿ ಮಾಡಿರುವುದರಿಂದ ಪರಸ್ಪರ ಪ್ರಾಂತ ಸಂಬಂಧ ಬರಿಯ ಇಂಗ್ಲಿಷಿನಲ್ಲಿಯೇ ನಡೆಯುತ್ತಿದೆ. ಇವುಗಳು ಪರದೇಶದ ಸರ್ಕಾರದ ಫಲಗಳು. ಸೋತ ಈ ರಾಜ್ಯದ ಮೇಲೆ ತಮ್ಮ ಸಂಸ್ಕೃತಿಯನ್ನೂ ಪ್ರಭಾವವನ್ನೂ ಬೀರುವುದು ಗೆದ್ದ ರಾಷ್ಟ್ರಗಳ ಸ್ವಭಾವ. ಆದರೆ ಈಚೆಗೆ ಕೆಲವು ವರುಷಗಳಿಂದ, ನಮಗೆ

ಒಂದು ಭಾಷೆಯಿಲ್ಲವೆಂಬ ರೋಗವನ್ನು ಕಂಡು ಹಿಡಿದು ಅದನ್ನು ಪರಿಹರಿಸಲು ಪ್ರಯತ್ನಗಳು ನಡೆಯುತ್ತಿವೆ. ಇಂಗ್ಲಿಷ ನಮ್ಮ ದೇಶದ ಸಾಮಾನ್ಯ ಭಾಷೆಯಾಗುವುದು ಎಂದಿಗೂ ಸಾಧ್ಯವಿಲ್ಲ. ದೇಶದಲ್ಲಿ ಬಹುಮಂದಿ ಯಾವ ಭಾಷೆಯನ್ನಾಡುತ್ತಾರೆಯೋ ಅದು ಮಾತ್ರ ವ್ಯವಹಾರಭಾಷೆಯಾಗಬಲ್ಲದು ಹಿಂದುಸ್ಥಾನಿಯನ್ನು ಉತ್ತರ ಭಾರತದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಹಿಂದುಗಳೂ ಮುಸಲ್ಮಾನರೂ ಮಾತನಾಡುತ್ತಾರೆ. ಎಲ್ಲಾ ಪ್ರಾಂತ್ಯಗಳವರು ಈ ಭಾಷೆಯನ್ನೇ ಕಲಿಯಬೇಕು. ಪ್ರಾಂತಭಾಷೆಯ ಜೊತೆಗೆ ರಾಷ್ಟ್ರಭಾಷೆಯನ್ನೂ ಕಲಿಯಬೇಕು. ರಾಷ್ಟ್ರಗೌರವ ನಿಜವಾದ ಸಂಸ್ಕೃತಿ ಒಗ್ಗಟ್ಟು ಸ್ವಾತಂತ್ರ್ಯ ಉಂಟಾಗಲು ಇದು ಅವಶ್ಯ. ದುರದೃಷ್ಟದಿಂದ ಈ ಪ್ರಯತ್ನಕ್ಕೂ ಜಾತೀಯತೆಯನ್ನು ಆರೋಪಿಸಿದ್ದಾರೆ ಆದರೆ ಶುದ್ಧವಾದ ಹೃದಯದಿಂದ ಪ್ರಾರಂಭಿಸಿದ ಎಲ್ಲಾ ಕಾರ್ಯಗಳಿಗೂ ಜಯವುಂಟು. ಈ ಕಾರ್ಯಕ್ಕೂ ಜಯವಾಗುತ್ತದೆ.

ಈಚೆಗೆ ಹಿಂದಿ ಮತ್ತು ಉರ್ದು ಇವುಗಳ ವ್ಯತ್ಯಾಸವೂ ಹೆಚ್ಚಾಗಿದೆ ಇವೆರಡರ ಮಿಳನದಿಂದ ನಮಗೆ ಬೇಕಾದ ರಾಷ್ಟ್ರಭಾಷೆ ಹಿಂದುಸ್ಥಾನಿಯನ್ನು ನಾವು ಸೃಷ್ಟಿಸಿಕೊಳ್ಳಬೇಕಾಗಿದೆ. ಅಕ್ಷರ ತಿಳಿಯದೆ ಭಾಷಾಭ್ಯಾಸ ಸಾಧ್ಯವಿಲ್ಲ. ಆದುದರಿಂದ ದೇವನಾಗರಿ ಮತ್ತು ಉರ್ದು ಎರಡೂ ಲಿಪಿಗಳನ್ನು ಕಲಿಯಬೇಕು. ಮಕ್ಕಳಿಗೆ ಭಾಷೆ ಬೇಗ ಬರುತ್ತೆ ಇದು ಅವರಿಗೆ ಕಷ್ಟವಾಗುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿಯೂ ಹಿಂದುಸ್ಥಾನಿಯನ್ನು ಡಿಗ್ರಿ ವಿಷಯವನ್ನಾಗಿ ಮಾಡಬೇಕು. ಇಷ್ಟು ಕಾಲವೂ ನಾವು ಮಾತನಾಡದೆ ಇಂಗ್ಲಿಷನ್ನು ಬಲಾತ್ಕಾರವಾಗಿಯೇ ಕಲಿತಿದ್ದೇವೆ ಈಗ ಹಿಂದುಸ್ಥಾನಿಯನ್ನು ಬಲಾತ್ಕರಿಸಿದರೆ ಆಕ್ಷೇಪಣೆಯಾತಕ್ಕೆ ? ಆದರಲ್ಲಿಯೂ ಹಿಂದುಸ್ಥಾನಿ ನಮ್ಮ ರಾಷ್ಟ್ರದ ಹಿತಕ್ಕೆಂದು ತಿಳಿದ ಮೇಲೆಯೂ ಆಕ್ಷೇಪಣೆಯೇ.

ನಾನು ಇಂಗ್ಲಿಷ್ ಕಲಿತಿರುವುದರಿಂದ ನನಗೆ ದುಃಖವಿಲ್ಲ. ಆದರೆ ನನ್ನ ಸ್ವಭಾಷೆ ನನಗೆ ಬರದುದರಿಂದ ನನಗೆ ದುಃಖವಾಗಿದೆ. ನಮ್ಮ ಜನರಿಗಾಗಿ ನಾನು ಕೆಲಸಮಾಡಲು ಪ್ರಾರಂಭಿಸಿದ ಕೂಡಲೇ, ಹಿಂದಿ ಅಥವ ಉರ್ದು ಇಲ್ಲದಿದ್ದರೆ ನಮ್ಮವರ ಹೃದಯವನ್ನು ಮುಟ್ಟುವುದು ಸಾಧ್ಯವಿಲ್ಲವೆಂದು ನನಗೆ ಗೊತ್ತಾಯಿತು. ಚಿಕ್ಕವಯಸ್ಸಿನವರು ತಮ್ಮ ಅಮೌಲ್ಯವಾದ

ಕಾಲವನ್ನು ಈ ಭಾಷೆಗೆ ಉಪಯೋಗಿಸಲಿ ತಮ್ಮ ಭಾಷೆಗಾಗಿ ಹೆಮ್ಮೆಪಡದ ದೇಶ ಜಗತ್ತಿನಲ್ಲಿ ಇಲ್ಲ ಪ್ರಪಂಚ ಸಮ್ಮೇಳನಗಳಲ್ಲಿ ಪ್ರತಿನಿಧಿಗಳು ತಮಗೆ ಇಂಗ್ಲಿಷ್ ಅಥವ ಫ್ರೆಂಚ್ ತಿಳಿದಿದ್ದರೂ ತಮ್ಮ ಭಾಷೆಗಳಲ್ಲಿಯೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು.

ದಕ್ಷಿಣ ದೇಶವೆಲ್ಲಾ ಹಿಂದುಸ್ಥಾನಿಮಯವಾಗುವವರೆಗೆ ನೀವು ವಿಶ್ರಾಂತಿ ಹೊಂದಕೂಡದು. ಈ ಮಹಾಪ್ರಾಂತ್ಯದ ಸ್ತ್ರೀಯರಿಗೆ ನನ್ನ ಪ್ರಾರ್ಥನೆ ಇದು ರಾಷ್ಟ್ರಜಾಗ್ರತಿಯನ್ನು ಸ್ಥಾಪಿಸಿ ಒಗ್ಗಟ್ಟನ್ನು ಬೆಳೆಸಿ ಸಂಸ್ಕೃತಿಯ ಪ್ರಚಾರ ಮಾಡುವುದು ಮಹಿಳೆಯರ ಕೆಲಸ. ಈ ಭಾರವನ್ನು ಈ ಪ್ರಾಂತ್ಯದ ಸ್ತ್ರೀಯರು ಪೂರ್ಣವಾಗಿ ಹೊರುವರೆಂದು ನನ್ನ ನಂಬಿಕೆ. ”

ಅವರ ಭಾಷಣದ ನಂತರ ಶ್ರೀ ಸಂಜೀವ ಕಾಮತ್‌ರು ದೊಡ್ಡ ಗುಲಾಬಿ ಹೂವಿನಹಾರ ಗಾಂಧಿಯವರಿಗೆ ಅರ್ಪಿಸಲು ತಂದರು. ಗಾಂಧಿಯವರು ‘ಈ ಹಾರ ನನಗಿಂತ ದೊಡ್ಡದಾಗಿದೆ’ ಎಂದು ಅದನ್ನು ಆಚೆಗೆ ತಳ್ಳಿದರು ಅನಂತರ ಕಾಮತರು ಮೂರು ಅಡಿ ಅಗಲವಾದ ಒಂದು ತುರಾಯಿಯನ್ನು ತಂದರು. ಅದನ್ನು ಕಂಡು ಗಾಂಧಿಯವರು ಗಟ್ಟಿಯಾಗಿ ನಕ್ಕುಬಿಟ್ಟರು. ನಗುವಿನ ಅಲೆಗಳು ಸಭಾಭವನದಲ್ಲಿ ತುಂಬಿ ಹೋದವು.

೬

ಹರಿಜನ ಸಮ್ಮೇಳನ

ಸ್ವಾತಂತ್ರ್ಯಬಂದ ಮೇಲೆ ಅಸ್ಪೃಶ್ಯತೆ ಮಾಯವಾಗುವುದು.

ಗಾಂಧಿಯವರ ದರ್ಶನ ಹರಿಜನರಿಗೆ ಆಗಬೇಕೆಂಬ ಉದ್ದೇಶದಿಂದ ಹರಿಜನ ಸೇವಕ ಸಂಘದವರು ಇದೇ ಮಂಟಪದಲ್ಲಿಯೇ ಹರಿಜನ ಸಮ್ಮೇಳನವನ್ನು ಏರ್ಪಡಿಸಿದ್ದರು. ಎಂಟು ಸಾವಿರ ಹರಿಜನರಿಗೆ ಟಿಕೆಟ್‌ಗಳನ್ನು ಹಂಚಿದ್ದರು. ಹರಿಜನ ಸ್ತ್ರೀ ಪುರುಷರು ಅನೇಕ ಗಂಟೆಗಳ ಹಿಂದಲಿಂದ ಮಂಟಪದ ಹೊರಗಡೆ ಸೇರತೊಡಗಿದ್ದರು. ಅವರು ಗುಂಪು ಗುಂಪಾಗಿ ಭಜನೆಗಳನ್ನು ಮಾಡುತ್ತಾ, ರಾಷ್ಟ್ರಧ್ವಜ ಮೆರವಣಿಗೆಗಳೊಂದಿಗೆ ಪಂಢರಿಗೆ ಹೋಗುವ ಭಕ್ತರಂತೆ ಕೃತಕೃತ್ಯ ಮನೋಭಾವವುಳ್ಳವರಾಗಿ ತೋರುತ್ತಿದ್ದರು. ಒಂದು ಮಗು ಅಳಲು ತಾಯಿಯು ಈಗ ಗಾಂಧಿ ಬರುತ್ತಾರೆ ತಾಳು ಎಂದಳು; ಮಗುವು ಗಾಂಧಿ ಯಾರು ಎಂದಿತು. ತಾಯಿ ಗಾಂಧಿ ದೇವರು ಎಂದಳು. ಮಗು ಸುಮ್ಮನಾಯಿತು.

ಗಾಂಧಿಯವರು ಬಂದ ಕೂಡಲೇ ಜನ, ಸಮುದ್ರದ ಅಲೆಯ ಭೋರ್ಗರೆಯಂತೆ ಸಂಭ್ರಮಗೊಂಡಿತು. ಆದರೆ ಯಾರೂ ಗದ್ದಲಮಾಡಲಿಲ್ಲ. ಮಿ. ಮುನಿಸ್ವಾಮಿ ಪಿಳ್ಳೆ ಗಾಂಧಿಯವರಿಗೆ ತಾಳೆ ಗರಿಯ ಒಂದು ತ್ರಿವರ್ಣ ಧ್ವಜವನ್ನು ಕೊಟ್ಟರು. ಗಾಂಧಿಯವರು ಹೀಗೆ ಹೇಳಿದರು.

“ ಹರಿಜನರಲ್ಲಿ ಉಂಟಾಗಿರುವ ಈ ಜಾಗ್ರತಿ ನೋಡಿ ನನಗೆ ಬಹಳ ಸಂತೋಷವಾಗಿದೆ.

ಸ್ವಾತಂತ್ರ್ಯ ಬಂದ ಮೇಲೆ ಹರಿಜನರನ್ನು ಏನು ಮಾಡುತ್ತೀರಿ ಎಂದು ಇಂಗ್ಲಿಷರು ಕೇಳುತ್ತಾರೆ. ಅಸ್ಪೃಶ್ಯತೆ, ಆಂಗ್ಲೇಯರು ಹೇಳುವಷ್ಟು ಕ್ರೂರವಾದ ರೂಪದಲ್ಲಿ ನಮ್ಮಲ್ಲಿ ಇಲ್ಲ.

ದಕ್ಷಿಣ ಆಫ್ರಿಕದಲ್ಲಿ ಭಾರತೀಯರನ್ನೆಲ್ಲಾ ಆಂಗ್ಲೇಯರು ಅಸ್ಪೃಶ್ಯ ರಾಗಿಯೇ ಪರಿಗಣಿಸುತ್ತಿದ್ದರು. ಭಾರತೀಯ, ವ್ಯಾಪಾರಿಯಾಗಿರಬಹುದು, ಬ್ಯಾರಿಸ್ಟರ್ ಆಗಿರಬಹುದು. ಆದರೆ ಯುರೋಪಿನವರ ದೃಷ್ಟಿಯಲ್ಲಿ ಅವನು "ಕೂಲಿ". ಭಾರತೀಯರ ವಾಸಕ್ಕೆ ಬೇರೆ ಪ್ರದೇಶಗಳನ್ನು ನಿರ್ಮಿಸಿದ್ದರು. ತಮ್ಮಲ್ಲಿ ಅಸ್ಪೃಶ್ಯತೆ ಇಲ್ಲ ಎನ್ನುವ ಅವರು ಭಾರತೀಯರನ್ನಂತೂ ಅಸ್ಪೃಶ್ಯರಾಗಿ ಪರಿಗಣಿಸಿದ್ದರು. ನಾನು ದಕ್ಷಿಣ ಆಫ್ರಿಕದಲ್ಲಿದ್ದಾಗ ಇದನ್ನು ತಪ್ಪಿಸಲು ಸಾಧ್ಯವಾದುದನ್ನೆಲ್ಲಾ ಮಾಡಿದೆ. ಭಾರತಕ್ಕೆ ಹಿಂದಿರುಗಿದ ಮೇಲೆ ಇಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಪ್ರಯತ್ನಿಸುತ್ತಿದ್ದೇನೆ."

ಇರಲಿ ಸ್ವಾತಂತ್ರ್ಯ ಬಂದ ಮೇಲೆ ಭಾರತದಲ್ಲಿ ಅಸ್ಪೃಶ್ಯತೆಯೇ ಇರುವುದಿಲ್ಲ. ಅಸ್ಪೃಶ್ಯತೆ ಮಾಯವಾಗುವುದು; ಎಲ್ಲರೂ ಸಮಾನ ರಾಗುವರು. ಅಸ್ಪೃಶ್ಯತೆ ನಿವಾರಣೆಗಾಗಿ ಜನ ಕೆಲಸ ಮಾಡುವರು;"

"ಕೆಲವು ಹರಿಜನರು ಬ್ಯಾರಿಸ್ಟರುಗಳಾಗಿಯೂ ಹೈಕೋರ್ಟು ನ್ಯಾಯಾಧೀಶರಾಗಿಯೂ ಉನ್ನತಿಗೇರಿಬಿಟ್ಟರೆ ಸಾಲದು. ಹರಿಜನರೆಲ್ಲರ ಉನ್ನತಿಗಾಗಿ ಎಲ್ಲರೂ ದುಡಿಯಬೇಕು. ಹರಿಜನರು ಅಹಿಂಸಾ ಮಾರ್ಗದಿಂದ ಹೋರಾಡಿ ತಮ್ಮ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಬೇಕು. ಸನಾತನಿಗಳ ಹೃದಯವನ್ನು ಪರಿವರ್ತಿಸಬೇಕು.

"ನಿಜವಾದ ಸ್ವಾತಂತ್ರ್ಯವೆಂದರೇನು ? ತನಗೆ ಇಷ್ಟ ಬಂದದನ್ನು ಮಾಡುವದು ಸ್ವಾತಂತ್ರ್ಯವಲ್ಲ; ತನ್ನ ಕರ್ತವ್ಯ ಮಾಡುವ ಸ್ವಾತಂತ್ರ್ಯ, ಕುಡಿಯದಿರುವ ಸ್ವಾತಂತ್ರ್ಯ, ತನ್ನ ಏಳಿಗೆಗಾಗಿ ತಾನು ದುಡಿಯುವ ಸ್ವಾತಂತ್ರ್ಯ. ಹರಿಜನ ಎಂದರೆ ದೇವರ ಮನುಷ್ಯನೆಂದು ಅರ್ಥ. ಅನ್ವರ್ಥ ವಾಗಿ ಹರಿಜನರು ದೇವರನ್ನು ನಂಬಬೇಕು. ದೇವರ ಹೆಸರನ್ನು ಉಚ್ಚರಿಸ ಬೇಕು. ನಂದನಾರ್‌ರಂತಹ ಭಕ್ತರು ಅವರ ಮೇಲುಪಂಗ್ತಿಯಾಗಬೇಕು.

ಈ ಸಂದರ್ಭದಲ್ಲಿ ನಾನು ನಿಮ್ಮ ಹಕ್ಕುಗಳನ್ನು ಕುರಿತು ಹೇಳುವುದಿಲ್ಲ. ನಿಮ್ಮ ಕರ್ತವ್ಯ ಧರ್ಮವನ್ನು ಕುರಿತು ನಾಲ್ಕು ಮಾತು ಹೇಳುತ್ತೇನೆ. ಉತ್ತಮ ವರ್ಣದವರೆನ್ನಿಸಿಕೊಳ್ಳುವವರಿಗೂ ಕರ್ತವ್ಯಗಳಿವೆ. ಹರಿಜನರಿಗೂ ಇವೆ. ಅಂತರಜಾತೀಯ ಭೋಜನ, ವಿವಾಹ ಇವು ಸ್ವಾತಂತ್ರ್ಯವೆಂದು

ನೀವು ಭಾವಿಸುವುದಾದರೆ ತಪ್ಪು. ಇವೆಲ್ಲವುಗಳಿಂದ ನಿಜವಾದ ಸುಖ ಉಂಟಾಗುವುದಿಲ್ಲ. ನಿಮ್ಮಲ್ಲಿ ಒಳ್ಳೆಯ ಅಭ್ಯಾಸಗಳುಂಟಾಗಬೇಕು. ನೀವು ಸತ್ಯ ಅಹಿಂಸೆಯಲ್ಲಿ ನಂಬಿಕೆಯಿಡಬೇಕು, ನಿಮ್ಮ ನಿತ್ಯ ಕರ್ತವ್ಯಗಳನ್ನು ದೇವರಲ್ಲಿ ಭಕ್ತಿಯಿಟ್ಟು ಶ್ರದ್ಧೆಯಿಂದ ಮಾಡಬೇಕು. ಆಗ ಪ್ರತಿಯೊಬ್ಬ ವ್ಯಕ್ತಿಯೂ ತಾನು ಸುಖಿಯಾಗುವುದಲ್ಲದೆ ಹರಿಜನರೆಲ್ಲಾ ಉನ್ನತಿ ಪಡೆಯುವರು. ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ಮಾತ್ರ ರಾಮರಾಜ್ಯ ಸ್ವರಾಜ್ಯ ಸಾಧ್ಯ."

ನಯೀತಾಲಿಮ್

ಕೈಕಸಬಿನ ಮೂಲಕ ವಿದ್ಯೆ ಕಲಿಯಿರಿ

✲

ತಮಿಳು ನಾಡು ನಯಿತಾಲಿಮ್ ತರಬೇತು ಹೊಂದಿದ್ದ ಇಪ್ಪತ್ತಾರು ವಿದ್ಯಾರ್ಥಿಗಳಿಗೆ ಗಾಂಧಿಯವರು ಪ್ರಶಸ್ತಿ ಪತ್ರಗಳನ್ನು ಕೊಟ್ಟರು (೨೯-೧-೪೬) ಈ ವಿದ್ಯಾರ್ಥಿಗಳಲ್ಲಿ ಕರ್ನಾಟಕದವರೂ ಕೆಲವರು ಇದ್ದರು. ಅವರಲ್ಲಿ ೯ ಜನ ಮಹಿಳೆಯರಿದ್ದರು. ಗಾಂಧಿಯವರು ಪ್ರಶಸ್ತಿಪತ್ರಿಕೆಗಳನ್ನು ನೋಡಿ ತಮಿಳಿನಲ್ಲಿ ಯಾಕೆ ಎಂದು ಕೇಳಿದರು. ಗಾಂಧಿಯವರು ಇದು ಕನ್ನಡದವರಿಗೆ ತಿಳಿಯುವುದಿಲ್ಲ ಎಂದರು. ಅಧ್ಯಕ್ಷ ರುದ್ರಪ್ಪಸ್ವಾಮಿ ಒಪ್ಪಿದರು. ಗಾಂಧಿಯವರು "ಹಿಂದುಸ್ಥಾನಿಯಲ್ಲಿ ಪ್ರಶಸ್ತಿಪತ್ರ ಮಾಡಿಸಬೇಕಾಗಿತ್ತು. ನಿಮ್ಮ ನಾಲ್ಕು ಪ್ರಾಂತಗಳ (ತಮಿಳು, ಕನ್ನಡ, ಕೇರಳ ತೆಲುಗು) ಅಂತರ್ ವ್ಯವಹಾರಕ್ಕೆ ಹಿಂದುಸ್ಥಾನಿ ಅನುಸರಿಸುವುದು ಒಳ್ಳೆಯದು ಎಂದರು

ಗಾಂಧಿಯವರ ಅಮೃತ ಹಸ್ತದಿಂದ ಪ್ರಶಸ್ತಿ ಪತ್ರಗಳನ್ನು ಪಡೆದ ಆ ಇಪ್ಪತ್ತಾರು ವಿದ್ಯಾರ್ಥಿಗಳೇ ಧನ್ಯರೆಂದು ತಮಿಳ ನಾಡು ಮೂಲ ಶಿಕ್ಷಣ ಕಾರ್ಯದರ್ಶಿಗಳು ಹೇಳಿದರು. ಅಧ್ಯಕ್ಷರಾಗಿದ್ದ ಶ್ರೀ ನರಹರಿ ಪರೀಕ್‌ರು ನಯಿತಾಲಿಮ್ ಭಾರತದಲ್ಲಿ ವಿದ್ಯಾಕ್ರಾಂತಿ ಎಂದರು. ಗಾಂಧಿಯವರು ವಿದ್ಯಾರ್ಥಿಗಳನ್ನು ಸಂಬೋಧಿಸಿ ಹೀಗೆ ಹೇಳಿದರು.

"ನಿಮಗೆ ಪ್ರಶಸ್ತಿ ಪತ್ರಗಳನ್ನು ಕೊಡುವುದಕ್ಕೆ ಮುಂಚೆ, ನೀವು ಯಾವ ಯಾವ ವಿಷಯಗಳಲ್ಲಿ ವ್ಯಾಸಂಗ ಮಾಡಿದ್ದೀರೆಂಬುದು ನನಗೆ ತಿಳಿಯಬೇಕು. ಈ ಪ್ರಶಸ್ತಿ ಪತ್ರಿಕೆಗಳನ್ನು ತಮಿಳಿನಲ್ಲಿ ಬರೆದಿರುವುದರಿಂದ ನನಗೆ ತಿಳಿಯಲಿಲ್ಲ. ಪ್ರಶಸ್ತಿ ಪತ್ರಗಳನ್ನು ಕೊಡುವುದು ಬರಿಯ ಹುಡು

ಗಾಟಿಕೆಯಲ್ಲ. ಕೊಡುವವರಿಗೂ ತೆಗೆದುಕೊಳ್ಳುವವರಿಗೂ ಅದು ಏನು ಎಂಬುದು ತಿಳಿದಿರಬೇಕು. ಪ್ರಶಸ್ತಿ ಪತ್ರದಲ್ಲಿ ಕೊನೆಯಲ್ಲಿ ವ್ಯವಸಾಯ ಎಂದು ಬರೆದಿದೆ. ವ್ಯವಸಾಯವನ್ನು ಇಷ್ಟು ಸ್ವಲ್ಪಕಾಲದಲ್ಲಿ ಇವರು ಕಲಿತು ಇತರರಿಗೂ ಕಲಿಸುತ್ತಾರೆಯೇ ಎಂಬುದು ನನಗೆ ನಂಬಿಕೆಯಿಲ್ಲ.

"ಮೂಲ ಶಿಕ್ಷಣದಲ್ಲಿ, ಉದ್ಯೋಗದ ಮೂಲಕ ಜನರಿಗೆ ವಿದ್ಯೆಯನ್ನು ಕಲಿಸಬೇಕು. ಇದು ಉದ್ಯೋಗಕ್ಕೂ ವಿದ್ಯೆಗೂ ನೇರವಾದ ಸಂಬಂಧ. ಚರಕವನ್ನು ಕುರಿತು ಅದನ್ನು ನಿಮ್ಮ ಕಣ್ಣು ಮುಂದೆ ಇಡದೆ ಪುಸ್ತಕ ಪಾಠ ಮಾಡುವುದು ಸಾಧ್ಯವಿಲ್ಲ. ಒಬ್ಬರು ನನ್ನೊಂದಿಗೆ ಕೈನೂಲಿಗಿಂತ ಗಿರಣಿ ನೂಲು ಹೆಚ್ಚು ಶಕ್ತವಾದುದು ಎಂದರು. ನಾನು ಕೂಡಲೇ "ನಿಮಗೆ ನೂಲುವ ಅಭ್ಯಾಸವಿದೆಯೇ" ಎಂದೆ. ಅವರು ಇಲ್ಲವೆಂದರು. ಅನುಭವ ವಿಲ್ಲದ ಅವರ ಮಾತನ್ನು ನಾನು ಹೇಗೆ ಒಪ್ಪಲಿ?

"ಪುಸ್ತಕಗಳಿಂದ ಮಾತ್ರವೇ ವಿದ್ಯೆ ಕಲಿಸುವುದು ಪ್ರಯೋಜನವಿಲ್ಲ. ಅಭ್ಯಾಸದಿಂದ ಕಲಿಯಬೇಕು ಹುಡುಗನಾಗಿದ್ದಾಗ ಲಂಡನ್, ಥೇಮ್ಸ್ ಮುಂತಾದ ಹೆಸರುಗಳನ್ನು ನಾನು ಸುಮ್ಮನೆ ಉರುಹಾಕಿದೆ. ಅದರಿಂದ ಏನು ಪ್ರಯೋಜನವಾಯಿತು? ಮೂಲ ಶಿಕ್ಷಣದ ಉಪಾಧ್ಯಾಯನಿಗೆ, ತನ್ನ ಹಳ್ಳಿಯಲ್ಲಿ ವ್ಯವಸಾಯದ ಭೂಮಿ ಎಷ್ಟಿದೆ ತಿಳಿಯಬೇಕು. ಭೂಮಿಯ ಸ್ವಭಾವ, ಲಕ್ಷಣ ಯೋಗ್ಯತೆ ಇವು ತಿಳಿದಿರಬೇಕು. ತನ್ನ ಗ್ರಾಮದ ಮತ್ತು ಅದರ ಸುತ್ತಲ ಭೂಗೋಲಿಕ ವಿಚಾರಗಳೆಲ್ಲ ಅವನಿಗೆ ತಿಳಿದಿರಬೇಕು. ಮೂಲ ಶಿಕ್ಷಣ ಉಪಾಧ್ಯಾಯರು ಇವನ್ನೆಲ್ಲಾ ಅರಿಯಬೇಕು. ಬೋಧಿಸ ಬೇಕು."

೮

ಕಾಂಗ್ರೆಸ್ಸಿಗರಿಗೆ ಸಲಹೆ

ದೇವರ ಪ್ರೇರಣೆಯಂತೆ ನಡೆಯಿರಿ

●

ಈ ಯಾತ್ರೆಯ ಸಂದರ್ಭದಲ್ಲಿ ಅದೇ ಮೊದಲನೆಯ ಸಲುವಾಗಿ ಗಾಂಧಿಯವರು ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಷಣಮಾಡಿದರು. ದಕ್ಷಿಣದ ಸುಮಾರು ಎರಡು ಸಾವಿರ ಕಾಂಗ್ರೆಸ್ ಕೆಲಸಗಾರರು ನೆರೆದಿದ್ದರು. ಗಾಂಧಿಯವರು ರಾಜಕುಮಾರಿ ಅಮೃತ ಕುವರಿಯವರೊಡನೆ ಮಂಟಪಕ್ಕೆ ಬಂದರು. ಒಬ್ಬ ಉತ್ಸಾಹಿ ಒಂದು ಚರಕವನ್ನು ವಿದ್ಯುತ್ ಶಕ್ತಿಗೆ ಜೋಡಿಸಿ ಅದೇ ಸ್ವಾಭಾವಿಕವಾಗಿ ತಿರುಗುವಂತೆ ಮಾಡಿದ್ದ. ಅದರ ಮುಂದೆ ಗಾಂಧಿಯವರ ಒಂದು ಪ್ರತಿಮೆ ನಿಲ್ಲಿಸಿದ್ದ. ಗಾಂಧಿಯವರು ಕುತೂಹಲ ದಿಂದ ಒಂದು ಗಳಿಗೆ ಅದನ್ನು ನೋಡಿದರು. ಒಬ್ಬರು ಒಂದು ಸಣ್ಣ ಪೆಟ್ಟಿಗೆಯಲ್ಲಿ ಹಾಕಿದ್ದ ಬೆಳ್ಳಿಯ ಧನುಷ್ ತಕಲಿ ಒಂದನ್ನು ಗಾಂಧಿಯವರಿಗೆ ಕೊಟ್ಟರು. ಪೆಟ್ಟಿಗೆ ತೆಗೆದು ಆ ಬೆಳ್ಳಿಯ ತಕಲಿಯನ್ನು ನೋಡಿದರು. "ಧನುಷ್ ತಕ್ಲಿ, ಧನುಷ್ ತಕ್ಲಿ" ಎಂದು ಎರಡು ಸಲ ಹೇಳಿ ಅದನ್ನು ಸೊಂಟಕ್ಕೆ ಹಿಡಿದುಕೊಂಡರು. "ರಾಮಚಂದ್ರ ಹಿಡಿದುಕೊಳ್ಳುತ್ತಿದ್ದುದು ಇಂತಹ ಧನುಸ್ಸೆ" ಎಂದು ನಕ್ಕು "ರಾಮಚಂದ್ರಜಿ ರಾಮಚಂದ್ರಜಿ" ಎಂದರು. ಪ್ರೇಕ್ಷಕರೊಬ್ಬರು "ನೀವು ಪ್ರಾರ್ಥನೆಯಲ್ಲಿ ಯಾವಾಗಲೂ ರಾಮಕೃಷ್ಣ ಎಂದು ಹೇಳುತ್ತಿರುವುದರಿಂದ ನೀವು ಹಿಂದು ಮತವನ್ನು ಪ್ರಚಾರ ಮಾಡುತ್ತೀದ್ದೀರೆಂದು ಜನ ಹೇಳುತ್ತಾರೆ. ಇದು ನಿಜವೆ" ಎಂದರು, ಗಾಂಧಿಯವರು. "ನಾನು ಯಾವ ಮತವನ್ನೂ ಬೋಧಿಸುತ್ತಿಲ್ಲ. ನನ್ನ ಮಟ್ಟಿಗೆ ಎಲ್ಲಾ ಮತಗಳೂ ಒಂದು ದೊಡ್ಡ ಮರದ ಕೊಂಬೆಗಳು. ಒಂದು ಕೊಂಬೆಗೂ ಮತ್ತೊಂದು ಕೊಂಬೆಗೂ ವ್ಯತ್ಯಾಸವಿಲ್ಲ"ವೆಂದರು.

ಸಭೆಗೆ ಯಾರೂ ಅಧ್ಯಕ್ಷರು ಇಲ್ಲದುದನ್ನು ನೋಡಿ ಗಾಂಧಿಯವರು ಕುಳಿತಿದ್ದ ಶ್ರೀ ಕಾಮರಾಜ ನಾಡರ್‌ನ್ನು ಅಧ್ಯಕ್ಷರಾಗುವಂತೆ ಹೇಳಿದರು. ನಾಡರ್‌ರು ಅಧ್ಯಕ್ಷರಾಗಿ ಸಭೆಯ ಕಾರ್ಯಗಳನ್ನು ಪ್ರಾರಂಭಿಸಿದರು. ಗಾಂಧಿಯವರನ್ನು ಮಾತನಾಡುವಂತೆ ಕೇಳಿಕೊಂಡರು.

ಪ್ರೇಕ್ಷಕರನೇಕರು ಎದ್ದು ಬಂದು ಗಾಂಧಿಯವರಿಗೆ ಕಾಣಿಕೆಗಳನ್ನು ಅರ್ಪಿಸಿದರು. ಉತ್ತಮವಾದ ಖಾದಿ ಅರಿವೆ, ಚಿನ್ನದ ಮುಲಾಮಿನ ಚರಕ ಎಲ್ಲಾ ಬಂದವು. ಗಾಂಧಿಯವರು, ಇನ್ನೂ ಬರುತ್ತಿದ್ದವರನ್ನು ಅಲ್ಲಲ್ಲಿಯೇ ತಡೆದು ನಿಲ್ಲಿಸಿ ನನಗೆ ಹಣ, ಚಿನ್ನ, ಬೆಳ್ಳಿ, ವಜ್ರಗಳು ಬೇಡ " ಎಂದರು. ಅನಂತರ " ನಿಮ್ಮಲ್ಲಿ ಎಷ್ಟು ಜನಕ್ಕೆ ಹಿಂದುಸ್ಥಾನಿ ತಿಳಿಯುತ್ತದೆ " ಎಂದು ಕೇಳಿದರು. ಸುಮಾರು ೫೦ ಜನ ಕೈ ಎತ್ತಿದರು. ಅವರ ಪೈಕಿ ಕಾಮರಾಜ ನಾಡರ್ ಇಲ್ಲದುದನ್ನು ಕಂಡು ಗಾಂಧಿಯವರು ನೀವೂ ಸಹ? ಎಂದು ನಕ್ಕರು. " ಕಾಂಗ್ರೆಸ್ ಕೆಲಸಗಾರರು ಹಿಂದುಸ್ಥಾನಿ ಕಲಿಯಬೇಕು. ನಮ್ಮ ಎಲ್ಲಾ ಕೆಲಸಗಳನ್ನೂ ಹಿಂದುಸ್ಥಾನಿಯಲ್ಲಿಯೇ ನಡೆಸಬೇಕೆಂದು ಕಾಂಗ್ರೆಸ್ ಠರಾವಾಗಿದೆ. ಅದನ್ನು ನೀವು ಪಾಲಿಸಲೇ ಬೇಕು. ಇಷ್ಟುವರುಷ ಹಿಂದೀ ಪ್ರಚಾರ ನಡೆದರೂ ನಿಮಗೆ ಆ ಭಾಷೆ ಇನ್ನೂ ತಿಳಿಯದೇ ತಿಳಿಯದು. ಇಂಗ್ಲಿಷಿನ ಪ್ರಾಬಲ್ಯ ನನಗೆ ಗೊತ್ತು. ಪರಭಾಷೆಯ ವ್ಯಾಮೋಹ ನಮ್ಮವರಿಗೆ ಎಷ್ಟೆಂಬುದು ಇದರಿಂದ ಗೊತ್ತಾಗುತ್ತದೆ. "

ಗಾಂಧಿಯವರು ದಿವಂಗತರಾದ ಸತ್ಯಮೂರ್ತಿಯವರನ್ನು ನೆನೆದುಕೊಂಡರು. "ಆತ ಒಳ್ಳೆ ಮೇಧಾವಿ " ಎಂದರು. " ಪರಭಾಷೆಯ ಈ ಪರಾಧೀನತೆಯನ್ನು ಬಿಡಬೇಕು. ದೇಶದಲ್ಲಿ ಪರಸ್ಪರ ಸಂಬಂಧ ಕಲ್ಪನೆಯಾಗಬೇಕಾದರೆ ಎಲ್ಲರೂ ಮಾತನಾಡುವ ಒಂದೇ ಭಾಷೆ ಇರಬೇಕು. ಅಂತಹ ಭಾಷೆಯೇ ಹಿಂದುಸ್ಥಾನಿ. ಪ್ರಾಂತ್ಯ ವ್ಯವಹಾರಗಳನ್ನು ಪ್ರಾಂತ್ಯ ಭಾಷೆಯಲ್ಲಿ ಮಾಡಿಕೊಳ್ಳಬಹುದು. ಆದರೆ ಅಖಿಲ ಭಾರತ ಮತ್ತು ಅಂತರ ಪ್ರಾಂತೀಯ ವ್ಯವಹಾರಗಳಿಗೆ ಹಿಂದುಸ್ಥಾನಿ ಇರಬೇಕು. "

ಇಷ್ಟು ಹೇಳಿ ಗಾಂಧಿಯವರು " ನನ್ನನ್ನು ಪ್ರಶ್ನೆ ಕೇಳಿ. ನಿಮ್ಮಲ್ಲಿ ಪ್ರಶ್ನೆ ಇಲ್ಲದಿದ್ದಲ್ಲಿ ನಾನು ಚರಕವನ್ನು ಕುರಿತು ಮಾತನಾಡುತ್ತೇನೆ. "

ಗಳೆಲ್ಲಾ ಭೋರ್ಗರೆದವು. ಭಟ್ಟರು ರಥೋತ್ಸವಗಳಲ್ಲಿ ಧರಿಸುವ ಅಲಂಕಾರದ ಉಡುಪುಗಳನ್ನು ಧರಿಸಿದ್ದರು. ಗಾಂಧಿಯವರು ಬಾಗಿಲಿನ ವಿಘ್ನೇಶ್ವರನಿಗೂ ಪೂಜೆ ಮಾಡಿದರು. ಅನಂತರ ಗಾಂಧಿಯವರು ಕಲ್ಯಾಣ ಮಂಟಪಕ್ಕೆ ಹೋಗಿ ದೇವರ ಅತ್ಯಂತ ಬೆಲೆಯುಳ್ಳ ಬಹಳ ಹಿಂದಲ ಕಾಲದ ಒಡವೆಗಳನ್ನೂ ರತ್ನಗಳನ್ನೂ ನೋಡಿದರು. ವಾಹನಮಂಟಪಕ್ಕೆ ಹೋಗಿ ವಾಹನಗಳನ್ನೂ ನೋಡಿದರು. ಬಹಳ ಆಯಾಸವಾದರೂ ಗಾಂಧಿಯವರು ದೇವರ ದರುಶನದಿಂದ ನಗುಮುಖರಾಗಿ ಗೆಲುವಾಗಿದ್ದರು. ಮೀನಾಕ್ಷಿ ಸನ್ನಿಧಿಯಲ್ಲಿಯೂ ಸುಂದರೇಶ್ವರರ ಸನ್ನಿಧಿಯಲ್ಲಿಯೂ ಅರ್ಚಕರು 'ಮೋಹನದಾಸ್ ಕರ್ಮಚಂದ ಗಾಂಧಿ'ಯವರ ಹೆಸರಿನಲ್ಲಿ ಅರ್ಚನೆ ಮಾಡಿದರು. "ಹರಿಜನರೊಂದಿಗೆ ಮೀನಾಕ್ಷಿದೇವಿಯನ್ನು ಪೂಜಿಸಿದುದರಿಂದ ನನ್ನ ಬಹುಕಾಲದ ಆಸೆ ಈಡೇರಿದಂತಾಗಿದೆ" ಎಂದು ಗಾಂಧಿಜಿ ಹೇಳಿದರು. ದೇವಾಲಯದ ಪುಸ್ತಕದಲ್ಲಿ ಗಾಂಧಿಯವರು ಹಿಂದಿಯಲ್ಲಿ ಹೀಗೆ ಬರೆದರು. "ನನ್ನ ಬಹುದಿನಗಳ ಆಸೆ ಇಂದು ಪೂರೈಸಿದುದರಿಂದ ನನಗೆ ಆನಂದವಾಗಿದೆ."

ಗಾಂಧಿಯವರು ದೇವಸ್ಥಾನದಿಂದ ಹೊರಕ್ಕೆ ಬಂದ ಕೂಡಲೇ ದೇವಾಲಯದ ಮೂರು ಆನೆಗಳೂ ಸೊಂಡಲೆತ್ತಿ ಅವರಿಗೆ ನಮಸ್ಕರಿಸಿದುವು. ಆನೆಗಳು ಈ ಗೌರವವನ್ನು ಶಂಕರಾಚಾರ್ಯರೇ ಮುಂತಾದ ಮಹಾತ್ಮರಿಗೆ ಹೊರತು ಮತ್ತಾರಿಗೂ ಕೊಡುವುದಿಲ್ಲ.

ಅದೇ ದಿನ ಸಾಯಂಕಾಲ ಗಾಂಧಿಯವರು ಪಳನಿಗೆ ಹೋದರು. ಸ್ಪೆಶಲ್ ರೈಲು ಪಳನಿಯನ್ನು ಒತ್ತಿ ಗಂಟೆಗೆ ತಲಪಿತು. ದಾರಿಯಲ್ಲಿ ಒಟ್ಟಂಚಕ್ರಂ ಎಂಬಲ್ಲಿ ನಡೆದ ನಾಲ್ಕು ಸಾವಿರ ಜನರಿಗೆ ಹೀಗೆ ಹೇಳಿದರು 'ಅಸ್ಪೃಶ್ಯತೆಯನ್ನು ತತ್‍ಕ್ಷಣ ತೊಡೆದುಹಾಕಿ ಸ್ವಾತಂತ್ರ್ಯ ಬಂದ ಮೇಲೆಯೇ ತೊಡೆದು ಹಾಕುವದರಿಂದ ಹೆಚ್ಚು ಪ್ರಯೋಜನವಿಲ್ಲ.'

ಫೆಬ್ರುವರಿ ೩ ರ ಸಾಯಂಕಾಲ ಸುಮಾರು ಒಂದು ಲಕ್ಷ ಜನರು ಪಳನಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ಸೇರಿದ್ದರು. ಗಾಂಧಿಯವರು ಹೀಗೆ ಹೇಳಿದರು.

ಸಮಿತಿ ಅಧ್ಯಕ್ಷರಾದ ಕಾಮರಾಜ ನಾಡರ್ ಮತ್ತು ಮದ್ರಾಸ ಹರಿಜನ ಮುನಿಸ್ವಾಮಿ ಪಿಳ್ಳೆಯವರೂ ದೇವಾಲಯಕ್ಕೆ ಹೋಗಿದ್ದರು. ಹಿಂದೆ ಅವರಿಗೂ ದೇವಾಲಯ ಪ್ರವೇಶವಿರಲಿಲ್ಲ. ಮಂಗಳವಾದ್ಯಗಳು ಶುಭಕರ ವಾಗಿ ಮೊಳಗುತ್ತಿದ್ದವು. ವಾತಾವರಣಕ್ಕೆ ಒಂದು ಹೊಸ ಚೈತನ್ಯವುಂಟಾ ಗಿತ್ತು. ಜನರಿಗೆ ಯಾವ ರಥೋತ್ಸವದ ದಿನವೂ ಇರದಿದ್ದ ಸಂಭ್ರಮ ವುಂಟಾಗಿತ್ತು. ಅರ್ಚಕರು ಮೀನಾಕ್ಷಿದೇವಿಯನ್ನು ಅತ್ಯುತ್ತಮವಾದ ವಜ್ರದ ಹಾರಗಳಿಂದ ಅಲಂಕರಿಸಿದ್ದರು. ಅಂದು ಅವಳ ಮುಗ್ಧವಾದ ಚಾರುಲೋಚನಗಳೂ ಭ್ರೂಲತೆಗಳೂ ಉಜ್ವಲಾಧರಗಳೂ ಜಗತ್ತಿಗೆ ಅಮೃತಸೇಚನೆ ಮಾಡುತ್ತಿರುವಂತೆ ತೋರಿದುವು. ಮೀನಾಕ್ಷಿದೇವಿಯನ್ನು ನೋಡಿ ಗಾಂಧಿಯವರಿಗೆ ಎಷ್ಟು ಆನಂದವಾಯಿತೋ ಗಾಂಧಿಯವರನ್ನು ನೋಡಿ ಮೀನಾಕ್ಷಿದೇವಿಗೂ ಅಷ್ಟೇ ಆನಂದವಾಯಿತು. ಗಾಂಧಿಯವರು ದೇವರು ಪ್ರತ್ಯಕ್ಷನಾದ ವಿದುರನಂತೆ ತೋರಿದರು.

ಭಟ್ಟರು ಅಷ್ಟೋತ್ತರವನ್ನು ಪ್ರಾರಂಭಿಸಿದರು. ಜೂಜಿನ ಕುದುರೆಯ ವೇಗದಲ್ಲಿ ಅರ್ಚನ ಮಂತ್ರವನ್ನು ಓಡಿಸುತ್ತಿದ್ದ ಭಟ್ಟರನ್ನು ನೋಡಿ ಗಾಂಧಿಯವರು ಧೀರೆ ಧೀರೆ ಎಂದು ಕೂಗಿದರು. "ನಿಧಾನವಾಗಿ ಹೇಳಿ ಎಲ್ಲರೂ ಅನುಸರಿಸಲಿ" ಎಂದರು. ಅರ್ಚಕರು, ಗಾಂಧಿಯವರ ಬೋಳು ತಲೆಗೆ ಕೆಂಪು ಹಳದಿ ಬಣ್ಣದ ಖಾದಿ ಶಾಲು ಪರಿಪಟ್ಟವನ್ನು ಸುತ್ತಿದರು. ಗಾಂಧಿಯವರು ಮುಗುಳುನಗೆ ನಕ್ಕರು. ಅವರ ನೆತ್ತಿಗೆ ಭಟ್ಟರೊಬ್ಬರು ಕುಂಕುಮವನ್ನು ಹಚ್ಚಿದರು. ಅನಂತರ ಗಾಂಧಿಯವರು ದೇವಾಲಯದ ಪ್ರಾಕಾರದಲ್ಲಿದ್ದ ಉಳಿದ ವಿಗ್ರಹಗಳನ್ನೆಲ್ಲಾ ನೋಡಿದರು. ಪ್ರಾಕಾರದಲ್ಲಿದ್ದ ತಿರುಮಲನಾಯಕನ ದೊಡ್ಡ ವಿಗ್ರಹ ಗಾಂಧಿಯವರ ದೃಷ್ಟಿಯನ್ನು ಎಳೆಯಿತು.

ಮಧುರಾ ಪಟ್ಟಣವೂ ದೇವಾಲಯವೂ ಅರ್ಚಕರೂ ಅಧಿಕಾರಿಗಳೂ ಅತ್ಯಂತ ವೈಭವದ ಉಡುಪನ್ನು ಧರಿಸಿದ್ದರು. ದೇವಸ್ಥಾನದ ಮರ್ಯಾದೆ ಗಳೆಲ್ಲಾ ಯಥಾಸಾಂಗವಾಗಿ ನಡೆದವು. ಗಾಂಧಿಯವರು ದೇವಾಲಯ ವನ್ನು ಪ್ರವೇಶಿಸುವಾಗ ದೇವಸ್ಥಾನದ ಅಲಂಕೃತವಾದ ಆನೆಗಳು ಕಿರಚಿ ದವು; ಬಣ್ಣದ ಅರಿವೆಗಳನ್ನು ಧರಿಸಿದ್ದ ಒಂಟೆಗಳು ಕೂಗಿದವು. ವಾದ್ಯ

ಗಾಂಧಿಯವರು "ಹಳ್ಳಿಯ ಬಡತನ ನನಗೆ ಗೊತ್ತು. ಈ ಸಣ್ಣ ನಿಧಿಯ ಹಿಂದಿರುವ ವಿಶಾಲ ಹೃದಯ ನಾನು ಕಂಡಿದ್ದೇನೆ" ಎಂದರು.

ಅರಿಯಲೂರ್ ಸ್ಟೇಶನ್ನಿನಲ್ಲಿ ಏಳು ಸಾವಿರ ಸ್ತ್ರೀ-ಪುರುಷರು ನೆರೆದಿದ್ದರು. ಜನರ ಶಾಂತಿ ಮೌನವನ್ನು ಗಾಂಧಿಯವರು ಬಹಳ ಮೆಚ್ಚಿದರು. ರಾಮಧುನ್ ಪ್ರಾರಂಭಿಸಿದರು ಗಾಂಧಿಯವರು ನೆರದಿದ್ದವರಿಗೆ ಹೀಗೆ ಹೇಳಿದರು. "ನಿಮ್ಮ ಹೃದಯಗಳಿಂದ ನೀವೂ ನನ್ನನ್ನು ಮಧುರೆಗೆ ಅನುಸರಿಸಿ. ಹರಿಜನ ನಿಧಿಗೆ ಹಣ ಕೊಡಿ. ಆದರೆ ಬರಿಯ ಹಣದಿಂದ ಏನೂ ಆಗುವುದಿಲ್ಲ. ಹೃದಯಪರಿವರ್ತನೆಯಾದ ಹೊರತು ಸ್ವಾತಂತ್ರ್ಯ ಸಾಧ್ಯವಿಲ್ಲ. ಅಸ್ಪೃಶ್ಯತೆ ನಿವಾರಣೆಯಾಗದಿದ್ದರೆ ಹಿಂದು ಧರ್ಮ ನಾಶವಾಗುವುದು. ಹಿಂದು ಧರ್ಮ ನಾಶವಾಗುವುದು ನಿಮ್ಮ ಇಷ್ಟವಲ್ಲ. ಆದುದರಿಂದ ಅಸ್ಪೃಶ್ಯತೆಯನ್ನು ತೊಡೆದುಹಾಕಿ."

ಮಧುರೆಗೆ ಹೋಗುವ ದಾರಿಯಲ್ಲಿ ಎರಡು ಮೈಲು ದೂರ ನದಿಯಲ್ಲಿ ಜನ ಮಂಡಿಯುದ್ದ ನೀರಿನಲ್ಲಿ ನಿಂತುಕೊಂಡು ಗಾಂಧಿಯವರ ದರ್ಶನ ಪಡೆದರು. ಆ ಸಾಯಂಕಾಲ ಐದೂವರೆ ಗಂಟೆಗೆ ಗಾಂಧಿಯವರ ರೈಲು ಮಧುರೆಯಿಂದ ೯ ಮೈಲು ದೂರದಲ್ಲಿ ಬಂದು ನಿಂತಿತು. ಗಾಂಧಿಯವರು ನೆಟ್ಟಗೆ ಪ್ರಾರ್ಥನಾ ಸಭೆಗೆ ಆರೂಕಾಲು ಗಂಟೆಗೆ ಹೋದರು. ಗಾಂಧಿಯವರೇ ತಮ್ಮ ಜೀವಮಾನದಲ್ಲಿ ಅಷ್ಟು ದೊಡ್ಡ ಸಭೆಯನ್ನು ನೋಡಿರಲಿಲ್ಲ. ಸಭೆಯಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಜನ ನೆರೆದಿದ್ದರು. ಕೊಯಮತ್ತೂರು, ಪುದುಕೋಟೆ, ಸಿಲೋನ್‌ನಿಂದ ಸಹ ಗಾಂಧಿಭಕ್ತರು ಬಂದು ನೆರೆದಿದ್ದರು. ಗಾಂಧಿಯವರು ಸುಮಾರು ಎರಡು ಗಂಟೆ ಕಾಲ ವೇದಿಕೆಯ ಮೇಲೆಯೇ (ಜನರು ಕದಲಲು) ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು.

ಫೆಬ್ರುವರಿ ೩ನೆಯ ತಾರೀಖು ಮಧುರೆಯ ಇತಿಹಾಸದಲ್ಲಿ ಸ್ವರ್ಣದಿನ. ಅಂದು ಪ್ರಾತಃಕಾಲ ೭-೪೦ ಗಂಟೆಗೆ ಗಾಂಧಿಯವರು ಮೀನಾಕ್ಷಿ ದೇವಾಲಯವನ್ನು ಪ್ರವೇಶಿಸಿದರು. ಗಾಂಧಿಯವರು ಮೀನಾಕ್ಷಿದೇವಿಯನ್ನೂ ಸುಂದರೇಶ್ವರರನ್ನೂ ಒಂದು ಗಂಟೆ ಕಾಲ ಪೂಜಿಸಿದರು ಗಾಂಧಿಯವರ ಜತೆಯಲ್ಲಿ ಇಪ್ಪತ್ತು ಜನ ಹರಿಜನರೂ ಇದ್ದರು. ಕೆಲವರು ಸ್ತ್ರೀಯರೂ ಮಕ್ಕಳೂ ದೇವಾಲಯಕ್ಕೆ ಹೋಗಿದ್ದರು. ತಮಿಳು ನಾಡಿನ ಕಾಂಗ್ರೆಸ್

ಜನರನ್ನು ಕುರಿತು ಹೀಗೆ ಹೇಳಿದರು "ನಾನು ಯಾತ್ರಿಕ, ಮೀನಾಕ್ಷಿ ದೇವಿಯನ್ನೂ ಸುಬ್ರಹ್ಮಣ್ಯ ಮೂರ್ತಿಯನ್ನೂ ಪೂಜಿಸಲು ಹೋಗುತ್ತಿದ್ದೇನೆ. ನಿಮ್ಮ ಶಾಂತಿಯಿಂದ ನನಗೆ ಬಹಳ ಸಂತೋಷವಾಗಿದೆ. ಇನ್ನೂ ಬೆಳಗಿನ ಜಾವವಾದರೂ ಬಹಳ ಜನ ನೆರೆದಿದ್ದೀರಿ. ಈ ಯಾತ್ರೆಯ ಪೂರ್ತ ಇಂತಹ ಶಾಂತಿಯೇ ನನಗೆ ದೊರೆಯುವುದೆಂದು ಭಾವಿಸುತ್ತೇನೆ."

"ಯಾವಾಗಲೂ ಮೂರನೆಯ ತರಗತಿಯಲ್ಲಿಯೇ ಪ್ರಯಾಣ ಮಾಡಬೇಕೆಂಬುದು ನನ್ನ ಗುರಿ. ಆದರೆ ನನ್ನ ಈ ಗಾಡಿಯ ಸುಖ ಮೊದಲನೆಯ ತರಗತಿಯ ಗಾಡಿಗಳಿಗೂ ಇಲ್ಲ. ಇದು ವಾಸ್ತವವಾಗಿ ಡಬಲ್ ಫಸ್ಟಕ್ಲಾಸ್. ನನಗೆ ಅಸುಖವಾಗುವುದೆಂಬ ಭಯದಿಂದ ನನ್ನ ಮಿತ್ರರು ಈ ಗಾಡಿಯಲ್ಲಿ ಸೇರಿಲ್ಲ. ಇಂತಹ ಸುಖದಲ್ಲಿ ನಾನು ಪ್ರಯಾಣ ಮಾಡಿ ಅನೇಕ ವರುಷಗಳಾಗಿ ಹೋದವು. ನನ್ನಲ್ಲಿ ಜನರ ಪ್ರೀತಿಯ ಕುರುಹು ಇದೆಂದು ನಾನು ಭಾವಿಸುತ್ತೇನೆ. ಇಷ್ಟು ಸುಖದಲ್ಲಿ ಪ್ರಯಾಣ ಮಾಡುವುದು ನನ್ನಂತಹ ಬಡವನಿಗೆ ಒಳ್ಳೆಯದಲ್ಲ.

"ನಾನು ಮೀನಾಕ್ಷಿ ದೇವಾಲಯಕ್ಕೆ ಹೋಗುತ್ತಿರುವುದು ಒಂದು ಮಹತ್ವದ ವಿಷಯ. ನನ್ನ ಪ್ರೀತಿಯ ಹರಿಜನರಿಗೆ ಈಚೆಗೆ ಆ ದೇವಾಲಯದಲ್ಲಿ ಪ್ರವೇಶವುಂಟು. ಅಸ್ಪೃಶ್ಯತೆ ನನ್ನ ಶತ್ರು. ರಾಜಾಜಿ ತಾವು ಮುಖ್ಯ ಮಂತ್ರಿಯಾಗಿದ್ದಾಗ ಮೀನಾಕ್ಷಿ ದೇವಾಲಯಕ್ಕೆ ಹರಿಜನ ಪ್ರವೇಶ ಮಾಡಿಸಿದರು. ನಾನು ವಿಗ್ರಹಾರಾಧಕನಲ್ಲ ಆದರೆ ಮೂರ್ತಿಯ ಮುಂದೆ ಪೂಜೆ ಮಾಡುವುದು ಹಿಂದು ಧರ್ಮದಲ್ಲಿ ಒಂದು ಮುಖ್ಯ ಭಾಗ ಇಂತಹ ಪೂಜೆಗೆ ಪ್ರತಿಯೊಬ್ಬರ ಹೃದಯದಲ್ಲಿಯೂ ಸ್ಥಳವುಂಟು ನೀವೆಲ್ಲಾ ಯಾತ್ರಿಕರಂತೆ ಇಲ್ಲಿ ಕುಳಿತಿದ್ದೀ. ನಿಮ್ಮ ಭಕ್ತಿಯನ್ನೂ ನಾನೇ ತೆಗೆದುಕೊಂಡು ಹೋಗಿ ಮೀನಾಕ್ಷಿ ದೇವಿಗೆ ಅರ್ಪಿಸುತ್ತೇನೆ"

ಗಾಂಧಿಯವರ ಈ ಪ್ರಯಾಣದಲ್ಲಿ ರೈಲ್ವೆ ಮಾರ್ಗದ ಉದ್ದಕ್ಕೂ ಜನ ನೆರೆದೇ ಇದ್ದರು. ವೃದ್ಧಾಚಲಂ ಹತ್ತಿರ ಒಂದು ಹಳ್ಳಿಯಲ್ಲಿ ಜನ ಗಾಂಧಿಯವರಿಗೆ ಹದಿನೈದು ರುಪಾಯಿ ನಿಧಿ ಅರ್ಪಿಸಿದರು. ಹಳ್ಳಿಯ ಮುಖಂಡನು ಸಂಕೋಚದಿಂದ ಈ ಹಣ ಅತ್ಯಲ್ಪವೆಂದು ಹೇಳಿದಾಗ

ಹೀಗೆ ಹನ್ನೆರಡು ದಿನಗಳು ಮದರಾಸನ್ನು ಬೆಳಗಿ ಗಾಂಧಿಯವರು ಫೆಬ್ರುವರಿ ಒಂದನೆಯ ತಾರೀಖು ರಾತ್ರಿ ಸ್ಪೆಶಲ್ ರೈಲಿನಲ್ಲಿ ಮಧುರೆ ಪಳನಿ ಯಾತ್ರೆ ಹೊರಟರು. ಗಾಂಧಿಯವರ ಪ್ರಯಾಣ ಕಾಲವನ್ನು ಗುಟ್ಟಾಗಿ ಇಡಲಾಗಿತ್ತು. ಅನಂತರ ಒಂದು ಗಂಟೆ ಅವರು ಹಿಂದುಸ್ಥಾನಿ ಪ್ರಚಾರ ಸಭೆಯ ಆವರಣಕ್ಕೆ ಬಂದರು. ಸಭೆಯ ಕೆಲಸಗಾರರೂ ವಿಧವಿಧದ ಸಮಿತಿಗಳ ಸದಸ್ಯರೂ ಗಾಂಧಿಯವರನ್ನು ಬೀಳ್ಕೊಳ್ಳಲು ಅಲ್ಲಿ ನೆರೆದಿದ್ದರು. ಗಾಂಧಿಯವರು ತಮ್ಮಿಂದ ಬೀಳ್ಕೊಳ್ಳುವರೆಂದು ಜನ ಖಿನ್ನರಾಗಿದ್ದರು ಗಾಂಧಿಯವರಿಗೆ ಒಬ್ಬ ಮಹಿಳೆ ಗಾಂಧಿಯವರ ಒಂದು ವಿಗ್ರಹವನು ಕೊಟ್ಟಳು. ಅದನ್ನು ನೋಡಿ ಗಾಂಧಿಯವರು ಯಹ್ ಕೌನ ಹೈ, ಎಂದು ನಕ್ಕರು. ಗಾಂಧಿಯವರು ವಿಗ್ರಹವನ್ನು ಸಮೀಪದಲ್ಲಿದ್ದ ಚಿಕ್ಕ ಹುಡುಗಿಗೆ ತೋರಿಸಿ "ಇದು ನಿನಗೆ ಚೆನ್ನಾಗಿ ಕಾಣುತ್ತಿದೆಯೇ?" ಎಂದು ಕೇಳಿದರು. ವಿಗ್ರಹವು ಸುಶೀಲ ನಾಯರ್‌ರ ಕೈಸೇರಿತು. ತಾವು ಇಳಿದಿದ್ದ ಮಂಗಳ ಭವನದ ನಿವಾಸಿ ಸುಬ್ಬಯ್ಯರ್ ಅಲ್ಲಿ ಇದ್ದುದನ್ನು ನೋಡಿ ಗಾಂಧಿಯವರು "ನಿಮ್ಮ ಮನೆ ಬಹಳ ಹಿತವಾಗಿದೆ. ನಾನು ಅಲ್ಲಿ ಬಹಳ ಸುಖವಾಗಿದ್ದೆ" ಎಂದರು. ಸುಬ್ಬ ಅಯ್ಯರು "ತಾವು ನನ್ನ ಅತಿಥಿಯಾದುದು ನನ್ನ ಪುಣ್ಯ. ಹಿಂದಿರುಗುವಾಗ ಮತ್ತೆ ಇಲ್ಲಿಯೇ ಉಳಿಯಬೇಕು" ಎಂದರು. ಗಾಂಧಿಯವರು ನಗುತ್ತಾ "ಆಮೇಲೆ ನೀವು ನನ್ನನ್ನು ಇಲ್ಲಿಂದ ಓಡಿಸಬೇಕಾಗಬಹುದು" ಎಂದರು. ರಾತ್ರಿ ಹತ್ತೂವರೆ ಗಂಟೆಗೆ ಗಾಂಧಿಯವರು ಡಾ. ಸುಶೀಲ ನಾಯರ್ ಮತ್ತು ಸಿ. ಆರ್. ರೊಂದಿಗೆ ಸ್ಪೆಶಲ್ ರೈಲನ್ನು ಹತ್ತಿದರು. ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟರಾದ ಸಿಂಗ್ ಗಾಂಧಿಯವರ ರೈಲನ್ನು ಅಲ್ಲಿ ಏರಿದರು. ಗಾಂಧಿಯವರ ರೈಲಿನಲ್ಲಿ ಪ್ಯಾರೆಲಾಲ್, ಶ್ರೀಮತಿ ಆಬಾ ಗಾಂಧಿ, ರಾಜಕುಮಾರಿ ಅಮೃತ ಕುವರ, ಶ್ರೀಮತಿ ಪ್ರಭಾವತಿ, ಜಯಪ್ರಕಾಶ ನಾರಾಯಣ, ಕಮಲನಯನ ಬಜಾಜ್, ಕನು ಗಾಂಧಿ ಇವರೆಲ್ಲ ಇದ್ದರು. ಗಾಂಧಿಯವರೂ ಅವರ ಅನುಯಾಯಿಗಳೂ ರೈಲಿನಲ್ಲಿಯೇ ರಾತ್ರಿಯನ್ನು ಕಳೆದರು. ಅಚರಪ್ಪಾಕ್ಕಮ್ ಎಂಬ ಸ್ಟೇಶನ್ನಿನಲ್ಲಿ ಸಾವಿರಾರು ಮಂದಿ ಶಾಂತರಾಗಿ ನೆರೆದಿದ್ದರು. ಜನರ ಶಾಂತಿಯನ್ನು ನೋಡಿ ಗಾಂಧಿಯವರಿಗೆ ಬಹಳ ಸಂತೋಷವಾಯಿತು. ಅವರು

ಅನಂತರ ಗಾಂಧಿಯವರು ಮದರಾಸಿನಲ್ಲಿದ್ದ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. "ನಾನು ದಕ್ಷಿಣಕ್ಕೆ ಬಂದಾಗಲೆಲ್ಲ ಜನರು ನನ್ನಲ್ಲಿ ವಿಶ್ವಾಸ ತೋರಿಸಿದ್ದಾರೆ. ಆ ಪ್ರೀತಿಯಿಲ್ಲದಿದ್ದರೆ, ನಾನು ವಿಶ್ರಾಂತಿಯಿಲ್ಲದೆ ಹೀಗೆ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ನನಗೆ ವಯಸ್ಸಾಗುತ್ತಿದೆ. ಬೇಗ ಆಯಾಸವಾಗುತ್ತದೆ. ಮನಸ್ಸಿಗೂ ಆಯಾಸವಾಗುತ್ತಿದೆ. ಆದರೆ ಈಶ್ವರ ಕೃಪೆಯಿಂದ (ನಿಮ್ಮ ಪ್ರೀತಿಯ ಆದರ ಬಾಹ್ಯರೂಪ) ನನ್ನ ಕೆಲಸ ವನ್ನು ನಾನು ಮಾಡಿಕೊಂಡು ಹೋಗುತ್ತಿದ್ದೇನೆ. ನನ್ನ ಕೆಲಸ ತಾನೇ ಏನು? ನನ್ನ ಸೇವೆಯ ಹೊರತು ನಿಮಗೆ ನಾನು ಮತ್ತೇನನ್ನೂ ಕೊಡ ಲಾರೆ. ನೀವು ಇದೇ ಪ್ರೀತಿಯನ್ನು ತೋರಿಸುತ್ತಿದ್ದರೆ, ನಿಮ್ಮ ಸೇವೆಯನ್ನು ಇನ್ನೂ ಚೆನ್ನಾಗಿ ಮಾಡಲು ದೇವರು ನನಗೆ ಶಕ್ತಿ ಕೊಡುವನು. ನಿಮ್ಮ ಶಾಂತಿ ಶಿಸ್ತು ಮೌನದಿಂದ ನನ್ನ ಶಕ್ತಿಯೂ ಹೆಚ್ಚಾಗುತ್ತದೆ.

"ದಕ್ಷಿಣ ದೇಶದಲ್ಲಿ ನಾಲ್ಕು ಭಾಷೆಗಳನ್ನಾಡುತ್ತಿದ್ದೀರಿ. ಎಲ್ಲರಲ್ಲಿಯೂ ಸೌಹಾರ್ದವಿದೆಯೆಂದು ಹೇಳಲಾಗುವುದಿಲ್ಲ. ದಕ್ಷಿಣದ ನಾಲ್ಕು ಭಾಷೆ ಗಳನ್ನು ಆಡುವವರಲ್ಲಿ ಸ್ನೇಹವಿರಬೇಕು. ಉತ್ತರದವರಿಗೂ ದಕ್ಷಿಣದವರಿಗೂ ಸ್ನೇಹವಿರಬೇಕು. ಅಸ್ಪೃಶ್ಯತೆ ನಾಶವಾಗಬೇಕು. ಜನರೆಲ್ಲಾ ದೇವರ ಮಕ್ಕಳು. ಒಬ್ಬರೊಂದಿಗೊಬ್ಬರಿಗೆ ವ್ಯತ್ಯಾಸ ಎಲ್ಲಿಂದ ಬಂತು? ವಿದ್ಯಾ ವಂತರಾದವರು ಈ ಒಗ್ಗಟ್ಟನ್ನು ಸ್ಥಾಪಿಸಬೇಕು. ಬುದ್ಧಿಯ ಕೆಲಸಗಾರರು, ಬುದ್ಧಿಯ ಕೆಲಸ ಕೂಲಿಯ ಕೆಲಸಕ್ಕಿಂತ ಹೆಚ್ಚಲ್ಲವೆಂಬುದನ್ನು ಸ್ಥಾಪಿಸಿ ಸಮತೆಯನ್ನು ತೋರಬೇಕು. ಇದರಿಂದ ಹರಿಜನರಿಗೆ ತಾವು ಉತ್ತಮರ ಅಣ್ಣತಮ್ಮಂದಿರೆಂಬ ಭಾವನೆಯುಂಟಾಗುವುದು. ಭಾರತದ ಒಗ್ಗಟ್ಟು ಸ್ಥಾಪನೆಯಾಗುವುದು.

ಇಂದಿನ ಭಜನೆಯ ಹಾಡಿನಲ್ಲಿ, ದೇವರನ್ನು ನೋಡಬೇಕಾದರೆ ವಿರಕ್ತ ನಾಗಿರಬೇಕೆಂದು ಹೇಳಿದೆ. ರಾಮನು ನಿಮ್ಮ ಹೃದಯದಲ್ಲಿ ಬಂದು ನೆಲಸ ಬೇಕಾದರೆ ನಿಮ್ಮ ಹೃದಯ ಶುದ್ಧವಾಗಿರಬೇಕು. ಶುದ್ಧವಾದ ಹೃದಯ ವುಳ್ಳವರ ಮನಸ್ಸಿನಲ್ಲಿ ಮಾತ್ರ ದೇವರು ನಿಲ್ಲುತ್ತಾನೆ."

ಕೊನೆಯಲ್ಲಿ ಗಾಂಧಿಯವರು ದೇವರು ನಿಮಗೆಲ್ಲಾ ಸುಖವುಂಟು ಮಾಡಲಿ ಎಂದು ಮುಗಿಸಿದರು.

ನೋಡಿಲ್ಲ. ನಾನು ಯುರೋಪಿನಲ್ಲಿ ಅಲ್ಲಿಯ ಪೂಜಾ ಸ್ಥಳಗಳನ್ನು ನೋಡಿದ್ದೇನೆ. ಅನೇಕ ಮಸೀದಿಗಳಿಗೂ ಹೋಗಿದ್ದೇನೆ. ಅನೇಕ ದೇವಾಲಯುಗಳಿಗೂ ಹೋಗಿದ್ದೇನೆ. ನಾನು ಹರಿಜನರಿಗಾಗಿ ಕೆಲಸ ಮಾಡಲು ಪ್ರಾರಂಭಿಸುವುದಕ್ಕೆ ಮುಂಚೆ ಜನ ನನ್ನನ್ನು ದೇವಾಲಯಗಳ ಒಳಕ್ಕೆ ಕರೆದುಕೊಂಡು ಹೋಗುತ್ತಿದ್ದರು. ದೇವಾಲಯದಲ್ಲಿ ಪೂಜೆ ಮಾಡುವುದರಿಂದ ತಮ್ಮ ಪಾಪ ನಾಶವಾಗುವುದೆಂಬ ನಂಬಿಕೆ ಜನರಿಗೆ ಇದೆ. ಆ ನಂಬಿಕೆಗೆ ಅದಕ್ಕೆ ತಕ್ಕ ಬೆಲೆಯೇನೋ ಉಂಟು. ಆದರೆ ಬರಿಯ ಪೂಜೆ ಕಾಣಿಕೆ ಇವುಗಳಿಂದಲೇ ಮನುಷ್ಯ ಶುದ್ಧನಾಗುವುದಿಲ್ಲ. ಶುದ್ಧತೆ ಹೃದಯದ ಪ್ರಶ್ನೆ. ಅವಿನಾಶಿಯಾದ ಆ ಗುಣವನ್ನು ಸಂಪಾದಿಸಲು ಜನ ಪ್ರಯತ್ನಿಸಬೇಕು. ಶುದ್ಧವಾಗಿಲ್ಲದ ಹೃದಯಕ್ಕೆ ದೇವಸ್ಥಾನದಲ್ಲಿ ಶುದ್ಧತೆ ಬರುವುದಿಲ್ಲ.

"ಶಿವಾಲಯಕ್ಕೆ ಹೋಗುವ ಭಕ್ತ, ಶಿವನಿಂದಲೇ ಮುಕ್ತಿ ಬರುತ್ತದೆ ಎಂದು ತಿಳಿದು ವಿಷ್ಣುದೇವಾಲಯಕ್ಕೆ ಹೋಗುವುದಿಲ್ಲ. ವಿಷ್ಣುಭಕ್ತನೂ ಹಾಗೆಯೇ. ಈ ವಿಧವಾದ ಮತಾಂಧತೆ ತಪ್ಪು. ಇದೊಂದು ಮಾಯೆ. ತುಲಸೀದಾಸನ ಕತೆ ನೀವು ಕೇಳಿದ್ದೀರಿ. ತುಳಸೀದಾಸ ಕೃಷ್ಣದೇವಾಲಯಕ್ಕೆ ಹೋಗಿ ಅಲ್ಲಿ ರಾಮನನ್ನು ಕಾಣಬೇಕೆಂದು ಬಯಸಿದನು. ಅವನಿಗೆ ರಾಮನು ಕೋದಂಡಧಾರಿಯಾಗಿ ಕಂಡನು. ಆ ರಾಮನಲ್ಲಿ ತುಳಸೀದಾಸ ತನ್ನ ಮನಸ್ಸಿನ ರಾಮನನ್ನೇ ನೋಡಿದನು. ಆದುದರಿಂದ ನಂಬಿಕೆ ಹೃದಯದ ಭಕ್ತಿಗೆ ಅನುಸಾರವಾಗಿರುತ್ತೆ. ದೇವರು "ಯದ್ಭಾವಂ ತದ್ಭವತಿ."

ನಾವು ಕೆಲವು ದಿನಗಳಿಂದ ಈ ಬಯಲಿನಲ್ಲಿ ಪ್ರಾರ್ಥನೆಗಾಗಿ ಸೇರುತ್ತಿದ್ದೇವೆ. ಶಿಸ್ತಿನ ಆವಶ್ಯಕತೆ ಈಗ ನಿಮಗೆ ಗೊತ್ತಾಗಿರುವುದು ಸಂತೋಷ. ಆದರೆ ಈ ಶಿಸ್ತು ಸಂಯಮ ಬರಿಯ ಬಾಹ್ಯ ನಟನೆಯಾಗಿರಬಾರದು. ಹೊರಗಡೆ ಗಂಭೀರವಾಗಿ ಕಾಣುತಾ ಒಳಗೆ ಕುಡಿತ, ಜೂಜು, ಮೋಸ, ಅತೃಪ್ತಿಯುಳ್ಳವರಾಗಿರಬಾರದು. ಈ ಸಭೆಗಳಲ್ಲಿ ಕಲಿತ ಪಾಠವನ್ನು ಇನ್ನು ಮರೆಯಬಾರದು. ಸಭೆಗಳಲ್ಲಿ ಶಾಂತಿ ಶಿಸ್ತು ಮೌನ ನನಗೆ ಬಹಳ ಪ್ರಿಯ. ಈ ಸಲಕ್ಕೆ ಇದೇ, ಮದರಾಸಿನಲ್ಲಿ ನನ್ನ ಕಡೆಯ ಭಾಷಣ. ಆದರೆ ಮಧುರೆಯಿಂದ ಹಿಂದಿರುಗುವಾಗ ಅವಕಾಶವಾದರೆ ಇದೇ ಮೈದಾನದಲ್ಲಿ ಮತ್ತೆ ನಿಮ್ಮನ್ನು ಸಂಧಿಸುವೆ."

೧೫

ಪಳನಿ ಮತ್ತು ಮಧುರಾ

ಗಾಂಧಿಯವರು ೧-೨-೪೬ನೆಯ ದಿನ ಪಳನಿ ಮತ್ತು ಮಧುರೆಗಳಿಗೆ ಹೋಗುವುದಕ್ಕೆ ಮುಂಚೆ ಮದರಾಸಿನಲ್ಲಿ ಕೊನೆಯ ಸಲ ಪ್ರಾರ್ಥನೆ ಭಾಷಣ ಮಾಡಿದರು. ಗಾಂಧಿಯವರು ಮದರಾಸಿನಿಂದ ಹೊರಡುವವರಾಗಿದ್ದುದರಿಂದ ಜನ, ಉಳಿದ ದಿನಗಳಿಗಿಂತ ಹೆಚ್ಚಾಗಿ ನೆರೆದಿದ್ದರು. ಜನರು ಶಿಸ್ತಿನಿಂದಲೂ ಶಾಂತರಾಗಿಯೂ ನಡೆದುಕೊಂಡರು ಉಪನಿಷತ್ತು, ಕೊರಾನ್, ರಾಮಧುನ್ ಎಲ್ಲಾ ಕ್ರಮವಾಗಿ ನಡೆಯುವು ಸ್ವಲ್ಪ ಹೊತ್ತಿನೊಳಗೆ ಗುಂಪಿನಲ್ಲಿ ಒಬ್ಬರು ಗೋವಿಂದ ಗೋವಿಂದ ಎಂದು ಹೇಳಿ ಸಭೆಯ ಶಾಂತಿಯನ್ನು ಭಂಗಮಾಡಿದರು. ಪ್ರಾರ್ಥನೆಯಾದ ನಂತರ ಗಾಂಧಿಯವರು ಭಾಷಣ ಮಾಡಿದರು.

"ನಿತ್ಯ ಎಡಗಡೆಯಿಂದ ಬರುತ್ತಿದ್ದ ಗದ್ದಲ ಇವತ್ತು ಇಲ್ಲ. ಆದುದರಿಂದ ನಿಮ್ಮನ್ನು ಅಭಿವಂದಿಸಬೇಕೆಂದು ಮಾಡಿದ್ದೆ. ಆದರೆ ಎದುರು ಕಡೆ ಸ್ವಲ್ಪ ಗದ್ದಲವಾಯಿತು. ಆದರೂ ಚಿಂತೆಯಿಲ್ಲ. ಪ್ರಾರ್ಥನಾ ಸಭೆಗಳಿಂದ ಜನರ ಮೇಲೆ ಪರಿಣಾಮವಾದಂತೆ ಕಾಣುತ್ತಿದೆ. ಮೌನವಾಗಿರುವುದನ್ನು ಜನರು ಕಲಿಯುತ್ತಿದ್ದಾರೆ."

ಜಗತ್ತೇ ದೇವರ ಗುಡಿ

ಮುಂದೆ ಗಾಂಧಿ ಹೀಗೆ ಹೇಳಿದರು. "ಈ ವಿಶಾಲವಾದ ಮೈದಾನ ನಿಜವಾಗಿಯೂ ದೇವರ ಉತ್ತಮವಾದ ಗುಡಿ. ಸೊಗಸಾದ ನೀಲಿಯ ಆಕಾಶವೇ ಸೂರು. ಈ ದೇವಾಲಯದಲ್ಲಿ ಎಲ್ಲರೂ ಒಂದೇ. ಧನಿಕ ಬಡವ ಯಜಮಾನ ಸೇವಕ ಎಂಬ ವ್ಯತ್ಯಾಸವಿಲ್ಲ. ಹಿಂದು ಮುಸಲ್ಮಾನ್ ಎಂಬ ಭೇದವೂ ಇಲ್ಲ. ಆಕಾಶವೇ ಮೇಲುಛಾವಣಿ. ಭೂಮಿಯೇ ಹಾಸಿಗೆ. ಈ ದೇವಾಲಯದಲ್ಲಿ ಎಷ್ಟು ಜನ ಬೇಕಾದರೂ ಸುಖವಾಗಿರಬಹುದು. ಇಂತಹ ಮನೋಹರವಾದ ದೇವಾಲಯವನ್ನು ನಾನು ಜಗತ್ತಿನಲ್ಲಿ ಎಲ್ಲಿಯೂ

ಎಂದರು. ಕೆಲಸಗಾರರಲ್ಲಿ ಒಬ್ಬರು ಇಂಗ್ಲಿಷಿನಲ್ಲಿ "ಫ್ಯೂಚರ್ (ಭವಿಷ್ಯ) ಕುರಿತು ಏನಾದರೂ ಹೇಳಿ" ಎಂದರು. ಗಾಂಧಿಯವರು "ಫ್ಯೂಚರ್ ಎಂಬುದು ಯಾವ ಬಗೆಯ ಪದಾರ್ಥ. ತೆಲುಗು ತಮಿಳು ಮಲೆಯಾಳಿ ಕನ್ನಡ ಯಾವ ಭಾಷೆಯಲ್ಲಾದರೂ ಹೇಳಿ" ಎಂದರು. ಅನಂತರ ಭವಿಷ್ಯವನ್ನು ದೇವರು ಮಾತ್ರ ಹೇಳಬಲ್ಲ. ನಾನು ಸಾಧಾರಣ ಮನುಷ್ಯ. ನಿಮ್ಮಲ್ಲಿ ಕೆಲವರಷ್ಟುಸಹ ನಾನು ಓದಿಲ್ಲ. ನಾನು ನನ್ನ ಹೆಸರಿನ ಮುಂದೆ ಬಿ. ಎ. ಎಂದು ಬರೆದುಕೊಂಡರೆ ಜನ ನಗುವರು ಎಂದರು ಪ್ರಶ್ನೆ ಕೇಳಿದವರು ತಮಿಳಿನಲ್ಲಿ ಮತ್ತೆ ಕೇಳಿದರು. ಗಾಂಧಿಯವರು "ಭವಿಷ್ಯವನ್ನು ಕುರಿತು ನಾನು ಏನನ್ನೂ ಹೇಳಲಾರೆ. ಅದು ದೇವರ ಕೈಯ್ಯಲ್ಲಿದೆ" ಎಂದರು. ಮತ್ತೊಬ್ಬರು ಹಿಂದುಸ್ಥಾನಿಯನ್ನು ಕಲಿಯಲು ಸುಲಭವಾದ ಮಾರ್ಗವಾವುದು ಎಂದು ಕೇಳಿದರು. ಗಾಂಧಿಯವರು "ಇಂಗ್ಲಿಷ್ ಕಲಿಯಲು ವೆಚ್ಚ ಮಾಡಿದುದರಲ್ಲಿ ಹದಿನಾರರಲ್ಲಿ ಒಂದು ಭಾಗವನ್ನು ಇದಕ್ಕೆ ಕೊಡಿ." ಎಂದರು.

ಆ ಸಂದರ್ಭದಲ್ಲಿ ಇಬ್ಬರು ಸಭೆಗೆ ಓಡಿಬಂದು ಇಂಗ್ಲಿಷಿನಲ್ಲಿ "ಮಹಾತ್ಮಜಿ ನಾನು ಹರಿಜನ." ಎಂದು ಪ್ರಾರಂಭಿಸಿದರು. ಗಾಂಧಿಯವರು "ಹರಿಜನರಾದರೆ ಇಂಗ್ಲಿಷನ್ನು ಹೇಗೆ ಮಾತನಾಡುತ್ತಿ" ಎಂದರು. ಬಂದವರ ಪೈಕಿ ಒಬ್ಬನು ತೆಲುಗಿನಲ್ಲಿ ಹೀಗೆ ಹೇಳಿದನು. "ನಾನೂ ನನ್ನ ಮಿತ್ರರೂ ಅಖಿಲ ಭಾರತ ಚರಖ ಸಂಘದ ಕಛೇರಿಯಲ್ಲಿ ಝಾಡಮಾಲಿಗಳಾಗಿ ಕೆಲಸ ಮಾಡುತ್ತಿದ್ದೇವೆ. ನಮ್ಮನ್ನು ನಾಯಿಗಳಿಗಿಂತ ಕಡೆಯಾಗಿ ನೋಡುತ್ತಿದ್ದಾರೆ. ನಲ್ಲಿಯ ಮೇಲು ಭಾಗದಲ್ಲಿ "ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕೆಂದು ಬರೆದಿರುವುದೇನೋ ನಿಜ. ಆದರೆ ಆ ನಲ್ಲಿಯನ್ನು ಮುಟ್ಟುವುದಕ್ಕೆ ನಮ್ಮನ್ನು ಬಿಡುವುದಿಲ್ಲ" ಎಂದನು.

ಸಭೆಯಲ್ಲಿದ್ದವರೊಬ್ಬರು "ಇದು ಸುಳ್ಳು" ಎಂದರು. ಗಾಂಧಿಯವರು "ಇದು ನೀವೆಲ್ಲಾ ಆಳವಾಗಿ ಯೋಚಿಸಬೇಕಾದ ವಿಚಾರ. ಇದು ನಿಜವಾದರೆ ಪಶ್ಚಾತ್ತಾಪ ಪಡಬೇಕು. ಕಾಂಗ್ರೆಸ್ಸಿಗರೆಲ್ಲಾ ಹೃದಯದಲ್ಲಿ ದೇವರಿರುವುದನ್ನು ಅರಿತು ಆತನ ಪ್ರೇರಣೆಯಂತೆ ನಡೆಯಬೇಕು. ಆಗ ಎಲ್ಲವೂ ಸರಿಯಾಗುತ್ತದೆ. ಹಿಂದು ಮುಸಲ್ಮಾನ್ ಹೊಲೆಯ ಮೊದಲಾದ ವ್ಯತ್ಯಾಸ

ಗಳನ್ನು ಆಚರಿಸಿದರೆ ದೇಶ ನಿಜವಾಗಿ ನಾಶವಾಗುವುದು ” ಎಂದರು. ಮತ್ತೊಬ್ಬರು ಕಾಂಗ್ರೆಸ್ಸಿಗರು ಪಾರ್ಲಿಮೆಂಟರಿ ಸಮಿತಿಗಳಲ್ಲಿಯೂ ಇತರ ಸಮಿತಿಗಳಲ್ಲಿಯೂ ಭಾಗ ವಹಿಸಬಹುದೇ ಎಂದು ಕೇಳಿದರು. ಗಾಂಧಿಯವರು “ ಇದು ನನ್ನ ಕೆಲಸವಲ್ಲ. ನಾನು ಕಾಂಗ್ರೆಸ್ಸಿನ ನಾಲ್ಕಾಣೆ ಸದಸ್ಯನೂ ಅಲ್ಲ. ಈ ಪ್ರಶ್ನೆಗೆ ಉತ್ತರ ಕೊಡಲು ಅರ್ಹರಾದವರು ಜವಹಿರ್‌ಲಾಲ ನೆಹ್ರು, ಸರ್ದಾರ್ ಪಟೇಲ್ ಅಬುಲ್ ಕಲಂ ಆಜಾದ್ ಮುಂತಾದವರು ಇದ್ದಾರೆ. ಅವರನ್ನು ಕೇಳಿ. ನಾನು ಕಾಂಗ್ರೆಸ್ ಸೇವಕ

೯

ಮಹಿಳೆಯರಿಗೆ ಉಪದೇಶ

ದ್ರೌಪದಿ, ಸೀತೆಯರ ಆದರ್ಶವನ್ನು ಅನುಸರಿಸಿ

ಇದು ಮಹಿಳೆಯರು, ಏರ್ಪಡಿಸಿದ್ದ ಮಹಿಳಾ ಸಮ್ಮೇಳನ. ಸ್ತ್ರೀಯರಿಗೆ ಹತ್ತಿರದಲ್ಲಿ ಗಾಂಧಿಯವರನ್ನು ನೋಡುವ ಯೋಗ ಒದಗಿತು. ಮೂವತ್ತು ಸಾವಿರ ಮಹಿಳೆಯರು ನೆರೆದಿದ್ದರು. ಹಿಂದಿ ಸುವರ್ಣೋತ್ಸವ ಮಂಟಪದಲ್ಲಿಯೇ ಸಮ್ಮೇಳನ. ಕರ್ನಾಟಕ ಆಂಧ್ರ ತಮಿಳುನಾಡು ಕೇರಳಗಳ ಸ್ತ್ರೀಯರು ಬಗೆ ಬಗೆಯ ಉಡುಪುಗಳನ್ನುಟ್ಟು ಉದ್ಯಾನದ ವಿಧ ವಿಧವಾದ ಹೂವುಗಳಂತೆ ನೆರೆದಿದ್ದರು. ಸ್ತ್ರೀಯರ ಗದ್ದಲ ಅಸಾಧ್ಯವಾಗಿದ್ದಿತು. ಗಾಂಧಿಯವರು ಬಂದು ಸಭೆಯಲ್ಲಿ ಕುಳಿತರೂ ಸಹ ಗದ್ದಲ ಕಡಿಮೆ ಆಗಲಿಲ್ಲ.

ಇದಕ್ಕೆ ಒಂದೇ ಉಪಾಯವೆಂದು ಗಾಂಧಿಯವರು ರಾಮಧುನ್ ಪ್ರಾರಂಭಿಸಿದರು. "ರಘುಪತಿ ರಾಘವ ರಾಜಾರಾಮ; ಪತಿತ ಪಾವನ ಸೀತಾರಾಮ್" ಮಹಿಳೆಯರೆಲ್ಲಾ ರಾಮಧುನ್‌ನಲ್ಲಿ ಸೇರಿದರು. ಆ ಮೂವತ್ತು ಸಾವಿರ ಮಧುರ ಕಂಠಗಳ ಮಧುರಗಾನ; ನಿದಾನವಾಗಿ ಗದ್ದಲ ಕಡಿಮೆಯಾಯಿತು. ಗಾಂಧಿಯವರು ಬಯಸಿದಂತೆ ಪೂರ್ಣವಾಗಿ ನಿಶ್ಶಬ್ದವಾಯಿತು. ವಿಜಯನಗರದ ಮಹಾರಾಣಿ ಗಾಂಧಿಜಿಗೆ ಹತ್ತುಸಾವಿರ ರೂಪಾಯಿಗಳ ನಿಧಿಯನ್ನು ಅರ್ಪಿಸುತ್ತಾ "ಗಾಂಧಿಯವರಿಗೆ ನಮ್ಮ ಜತೆಯಲ್ಲಿ ಅರ್ಧ ಗಂಟೆಯಾದರೂ ಇರಲು ಅವಕಾಶವಾದುದಕ್ಕೆ ನಮಗೆ ಬಹಳ ಆನಂದವಾಗಿದೆ. ಗಾಂಧಿಯವರು ಒಂದು ಲಕ್ಷ ರುಪಾಯಿ ಕೇಳಿದರು. ನಾನು ಶೇಖರಿಸಿ ಕೊಡುವುದಾಗಿ ವಾಗ್ದಾನ ಮಾಡಿದ್ದೇನೆ. ಉಳಿದ ೯೦ ಸಾವಿರ ರೂಪಾಯಿ ಕೂಡಿಸಲು ನೀವೆಲ್ಲ ಧಾರಾಳವಾಗಿ ಸಹಾಯ ಮಾಡಬೇಕು" ಎಂದರು

ಗಾಂಧಿಯವರು ಹೀಗೆ ಹೇಳಿದರು. "ಮಹಾರಾಣಿ ಇನ್ನು ಮೂರು ತಿಂಗಳಿನಲ್ಲಿ ತೊಂಬತ್ತು ಸಾವಿರ ಶೇಖರಿಸುವುದಾಗಿ ವಾಗ್ದಾನ ಮಾಡಿದ್ದಾರೆ. ಆಂಧ್ರ ತಮಿಳುನಾಡು ಮಲೆಯಾಳ ಕರ್ನಾಟಕದ ಸ್ತ್ರೀಯರೆಲ್ಲಾ ಧಾರಾಳ ವಾಗಿ ಈ ನಿಧಿಗೆ ಕೊಡಬೇಕು. ಈ ಹಣ ಹಿಂದುಸ್ಥಾನಿ ಪ್ರಚಾರಕ್ಕೆ ಉಪ ಯೋಗವಾಗುವುದು, ಹರಿಜನೋದ್ಧಾರಕ್ಕೆ ಆಗುವುದು ಇಂತಹ ದೊಡ್ಡ ಕೆಲಸಗಳಿಗೆ ಒಂದು ಲಕ್ಷ ರೂಪಾಯಿ ಹೆಚ್ಚಲ್ಲ. ಹಣವಿದ್ದರೆ ಹಿಂದಿ ಪ್ರಚಾರಕರು ಇನ್ನೂ ಬಹಳ ಹೆಚ್ಚು ಕೆಲಸ ಸಾಧಿಸಬಲ್ಲರು."

ನಾನು ಈ ಹಣವನ್ನು ಸ್ತ್ರೀಯರ ಏಳಿಗೆಗಾಗಿಯೇ ಮೀಸಲಾಗಿಡುವು ದಿಲ್ಲ. ಹಿಂದುಸ್ಥಾನಿ ಪ್ರಚಾರಕ್ಕೂ ಹರಿಜನರಿಗಾಗಿಯೂ ಸ್ತ್ರೀಯರ ಏಳಿಗೆ ಗಾಗಿಯೂ ಉಪಯೋಗಿಸುವೆನು ಅನೇಕ ಸ್ತ್ರೀಯರು ಹಿಂದುಸ್ಥಾನಿ ಪ್ರಚಾರಕರಾಗಿದ್ದಾರೆ. ಅದು ಸಾಲದು. ದಕ್ಷಿಣದಲ್ಲಿ ಸ್ತ್ರೀಯರು ಕೋಟಿ ಸಂಖ್ಯೆಯಲ್ಲಿ ಪ್ರಚಾರಕರಾಗಬೇಕು. ಹಣದ ಶೇಖರಣೆಯಲ್ಲಿ ನನಗೆ ಆಸೆ ಹೆಚ್ಚು. ನನ್ನ ಕೆಲಸಗಳಿಗಾಗಿ ನನಗೆ ಕೋಟಿ ಸಂಖೆಯಲ್ಲಿ ಹಣ ಬೇಕು. ಮದರಾಸು ಪ್ರಾಂತದ ಸ್ತ್ರೀಯರಿಗೆ ೧ ಲಕ್ಷ ಹಣ ಕೊಡುವುದು ಹೆಚ್ಚಲ್ಲ, ಸ್ತ್ರೀಯರಿಗೆ ಅಲಂಕಾರದ ಆಸೆ ಹೆಚ್ಚು. ಅದನ್ನು ಬಿಟ್ಟರೆ ಒಳ್ಳೆಯ ಕೆಲಸ ಗಳಿಗೆ ಬೇಕಾದಷ್ಟು ಹಣವನ್ನು ಕೊಡಬಹುದು. ನೀವೆಲ್ಲಾ ಬೇಕಾದಷ್ಟು ಒಡವೆಗಳನ್ನು ಧರಿಸಿದ್ದೀರಿ ನೀವು ಬಿಳಿಯ ಖಾದಿ ಧರಿಸಿದರೆ ಸಾಕು. ಅದಕ್ಕಿಂತ ಮತ್ತೇನೂ ಬೇಕಿಲ್ಲ, ಸ್ತ್ರೀಯರಿಗೆ ಮುಖ್ಯವಾದುದು ಶೀಲ. ನಿಮ್ಮ ಅಜ್ಞಾನದಿಂದ ನಿಮಗೆ ಒಡವೆಗಳ ಆಸೆ ಉಂಟಾಗುತ್ತಿದೆ. ಭಾರತವು ಉಜ್ವಲರಾಷ್ಟ್ರ. ಇಲ್ಲಿಯ ಸ್ತ್ರೀಯರು ಜಗತ್ತಿಗೇ ಭೂಷಣ. ಪಾಂಡವರು ನಿಶ್ಯಕ್ತರಾಗಿ ಕುಳಿತಿದ್ದರೂ ದ್ರೌಪದಿಯ ಶೀಲವೇ ಆಕೆಯ ಮಾನವನ್ನು ಕಾಪಾಡಿತು ಸ್ವರಾಜ್ಯ ರಾಮರಾಜ್ಯ ದೊಡ್ಡದಲ್ಲ. ಹಿಂದುಸ್ಥಾನದ ತೇಜಸ್ಸು ಮುಖ್ಯವಾದದ್ದು. ನಿಮ್ಮ ನಿಜವಾದ ಶಕ್ತಿ ನಿಮ್ಮ ಶೀಲವೇ ಹೊರತು ನಿಮ್ಮ ವಸ್ತ್ರ ಭೂಷಣಗಳಲ್ಲ.

ಗಾಂಧಿಯವರು ಮುಂದೆ ಹೀಗೆ ಹೇಳಿದರು "ಭಾರತದ ಮಹಿಳೆ ಯರು ಮಹತ್ವವಾದ ಆದರ್ಶಗಳನ್ನು ನೆನೆಯಲಿ. ದ್ರೌಪದಿ ಸೀತಾದೇವಿ ಯವರ ಉಜ್ವಲವಾದ ಜೀವನ ನಿಮ್ಮ ಮೇಲ್ಪಂಕ್ತಿಯಾಗಲಿ. ಆ

ತೇಜಸ್ಸು ಸ್ತ್ರೀಯರಿಗೆ ಭೂಷಣ. ಸೀತಾದೇವಿಯ ತೇಜಸ್ಸನ್ನು, ಜಗತ್ತನ್ನೆಲ್ಲಾ ಜಯಿಸಿದ ರಾವಣನು ಜಯಿಸಲಾರದೆ ಹೋದನು. ಭಾರತ ಮಹಿಳೆಯರು ಆ ತೇಜಸ್ಸನ್ನು ಮತ್ತೆ ಪಡೆಯಬೇಕು.

"ಸ್ತ್ರೀಯರು ಸಿದ್ಧರಾದರೆ ರಾಜಕೀಯ ಸ್ವಾತಂತ್ರ್ಯ ಒಂದು ಗಳಿಗೆಯ ಮಾತು. ಭಾರತ ಮಹಿಳೆಯರ ಹಿಂದಲ ತೇಜಸ್ಸು ಅವರಿಗೆ ಬಂದರೆ ಪರ ದೇಶಿಯರು ಒಂದು ನಿಮಿಷವೂ ಈ ದೇಶದಲ್ಲಿ ನಿಲ್ಲಲಾರರು. ನಿಮ್ಮಿಂದ ಆಗಬೇಕಾದ ಸಮಾಜ ಸುಧಾರಣೆ ಬಹಳವಾಗಿದೆ. ಆದರೆ ಮುಖ್ಯವಾಗಿ ಹರಿಜನ ಸೇವೆ ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದುಸ್ಥಾನಿ ಇವುಗಳಿಗಾಗಿ ನಿಮ್ಮ ಜೀವವನ್ನು ಕೊಡಬೇಕು. ಹರಿಜನರು ನಿಮ್ಮ ಹತ್ತಿರಕ್ಕೆ ಬರಬಾರ ದೆನ್ನುತ್ತೀರಿ. ಅವರ ಕೈಗೆ ನೀರಿನ ಪಾತ್ರೆಯನ್ನು ಕೊಡುವುದಿಲ್ಲ. ಹರಿಜನ ರನ್ನು ನೀವು ಮನುಷ್ಯರೆಂದೇ ಗಣಿಸುವುದಿಲ್ಲ. ಹೀಗಿರುತ್ತಾ ನನಗೆ ಒಂದು ನಿಧಿಯನ್ನು ಸುಮ್ಮನೆ ಅರ್ಪಿಸಿದ ಮಾತ್ರಕ್ಕೆ ನನಗೆ ಸಮಾಧಾನವಾಗುವುದಿಲ್ಲ. ನನ್ನ ಧ್ಯೇಯವನ್ನು ಅನುಸರಿಸಬೇಕು. ಎಲ್ಲಾ ಜಾತಿ ವ್ಯತ್ಯಾಸಗಳು ಹೋಗಬೇಕು. ಹಿಂದುಸ್ಥಾನಿ ನಮ್ಮ ದೇಶದ ಪರಸ್ಪರ ಸಂಬಂಧವನ್ನು ಕಲ್ಪಿಸುವ ಭಾಷೆಯಾಗಬೇಕು.

൧൦

ಕೂಲಿಗಾರರಿಗೆ ಸಂದೇಶ

ಕೂಲಿ, ಕಾಂಗ್ರೆಸ್ ಅಧ್ಯಕ್ಷನಾಗಲಿ

✲

೩೧ನೆ ತಾರೀಖು ಮದರಾಸು ನಗರದ ಸುಮಾರು ಐವತ್ತು ಸಾವಿರ ಕೂಲಿಗಳ ಸಭೆಯಲ್ಲಿ ಗಾಂಧಿಯವರು ಭಾಷಣಮಾಡಿದರು. ಗಾಂಧಿಯವರು ಬರುತ್ತಿರುವುದು ದೂರದಲ್ಲಿ ಕಂಡಾಗಲೇ ಜನರಲ್ಲಿ ಸಂಭ್ರಮವುಂಟಾಯಿತು. ಆದರೆ ಶ್ರೀ ಸಿ. ಆರ್.ರವರು 'ಶಾಂತರಾಗಿರಿ' ಎಂದು ಹೇಳಿದುದರಿಂದ ಜನ ತತ್‌ಕ್ಷಣ ನಿಶ್ಯಬ್ದರಾದರು. ಜನರ ಶಿಸ್ತನ್ನು ನೋಡಿ ಗಾಂಧಿಯವರಿಗೆ ಸಹ ತೃಪ್ತಿಯಾಯಿತು. ಗಾಂಧಿಯವರು ಹೀಗೆ ಹೇಳಿದರು.

"ಕೆಲಸ ಮಾಡುವ ಶಕ್ತಿಯೇ ನಿಜವಾದ ಬಂಡವಾಳ. ಬರಿಯ ಹಣ ದಿಂದಲೇ ಪದಾರ್ಥಗಳು ಸಿದ್ಧವಾಗುವುದಿಲ್ಲ. ಕೆಲಸಗಾರರ ಕೂಲಿಯಿಂದಲೇ ಪದಾರ್ಥಗಳು ತಯಾರಾಗುತ್ತವೆ. ಆದುದರಿಂದ ಐಶ್ವರ್ಯವಿರುವುದು ಕೂಲಿ ಗಳಲ್ಲಿ. ಆದರೆ ಕೂಲಿಗಳಿಗೆ ಆಸ್ತಿ ಇಲ್ಲ. ಕೂಲಿಗಳೆಲ್ಲ ಮಾಲಿಕರಾಗ ಬೇಕೆಂಬುದು ನನ್ನ ಆಸೆ. ಆದರೆ ಇದನ್ನು ಬಲಾತ್ಕಾರದಿಂದಲೂ ಹಿಂಸೆ ಯಿಂದಲೂ ಸಾಧಿಸಬಾರದು. ಹಿಂಸೆಯಿಂದ ಬಂದ ಆಸ್ತಿ ನಿಮ್ಮಲ್ಲಿ ತುಂಬ ಕಾಲ ಉಳಿಯುವುದಿಲ್ಲ. ನಿಮಗಿಂತ ಹೆಚ್ಚು ಶಕ್ತನಾದವನು ನಿಮ್ಮಿಂದ ಅದನ್ನು ಕಿತ್ತುಕೊಳ್ಳಬಹುದು. ಆದುದರಿಂದ ನೀವು ಮಾಲಿಕರಾಗಬೇಕಾ ದರೆ ಮೊದಲು ಸತ್ಯ-ಅಹಿಂಸೆ-ಶಾಂತಿ ನಿಮ್ಮಲ್ಲಿ ನೆಲೆಗೊಳ್ಳಬೇಕು. ಅಶಿಸ್ತು, ದೊಂಬಿಯಿಂದ ನೀವು ಏನನ್ನೂ ಸಾಧಿಸಲಾರಿರಿ. ಐಶ್ವರ್ಯವನ್ನು ಬರಿಯ ರುಪಾಯಿ ಆಣೆ ಕಾಸುಗಳಲ್ಲಿ ಮಾತ್ರ ಅಳೆಯುವುದಲ್ಲ. ನೀವು ಶಿಸ್ತುಳ್ಳವ ರಾಗಿ ಶಾಂತರಾದ ಪ್ರಜೆಗಳಾಗಿ ದೇಶದ ಏಳಿಗೆಗಾಗಿ ದುಡಿಯಬೇಕು. ಆ

ಯೋಗ್ಯತೆಗೆ ಬೆಲೆ ನೂರು ರುಪಾಯಿ ಅಲ್ಲ ಕೋಟಿ ರುಪಾಯಿ. ಆಗ ಮಾತ್ರ ನೀವು ನಿಜವಾದ ಮಾಲಿಕರಾಗುತ್ತೀರಿ.

"ಇವತ್ತಲ್ಲ ನಾಳೆಯಾದರೂ ಒಬ್ಬ ಕೂಲಿ ಕಾಂಗ್ರೆಸ್ಸಿನ ಅಧ್ಯಕ್ಷನಾಗುತ್ತಾನೆಂದು ನಾನು ಬಯಸುತ್ತೇನೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಕಾಂಗ್ರೆಸ್ ಅಧ್ಯಕ್ಷನಾಗಬೇಕಾದರೆ ಇಂಗ್ಲಿಷ್ ಬರಲೇಬೇಕೆಂಬ ನಿಯಮವಿಲ್ಲ. ಕಾಂಗ್ರೆಸ್ ಪ್ರೆಸಿಡೆಂಟ್ ಆಜಾದರಿಗೆ ಇಂಗ್ಲಿಷು ಚೆನ್ನಾಗಿ ಬಂದರೂ ಯಾರೊಂದಿಗೂ ಇಂಗ್ಲಿಷಿನಲ್ಲಿ ಮಾತನಾಡುವುದಿಲ್ಲ. ವೈಸರಾಯರೊಂದಿಗೆ ಮಾತನಾಡಬೇಕಾದರೂ ಅವರು ಜತೆಯಲ್ಲಿ ಒಬ್ಬ ದ್ವಿಭಾಷಿಯನ್ನು ಕರೆದುಕೊಂಡು ಹೋಗುತ್ತಾರೆ. ನಮ್ಮ ದೇಶದ ಭಾಷೆಯಲ್ಲಿ ಮಾತನಾಡುವುದು ಅವರಿಗೆ ಅಷ್ಟು ಹಿತ.

"ನಮ್ಮ ದೇಶವೆಲ್ಲಾ ಒಂದೇ. ಕೆಲವರು ರೈತರು. ಕೆಲವರು ಕಾರ್ಖಾನೆ ಕೂಲಿಗಳು. ರೈತರು ತಾವು ಇರುವಲ್ಲಿಯೇ ಕೂಲಿಗಳು. ಕಾರ್ಖಾನೆ ಕೂಲಿಗಳನ್ನು ಯಜಮಾನರು ಬೇಕಾದೆಡೆಗೆ ಕರೆದುಕೊಂಡು ಹೋಗುತ್ತಾರೆ. ನಿಜವಾದ ಯಜಮಾನ ಕಾರ್ಖಾನೆಯ ಯಜಮಾನನಲ್ಲ. ಅಲ್ಲಿ ಕೆಲಸಮಾಡುವ ಕೂಲಿಯೆ. ನಾನೂ ಒಬ್ಬ ಕೂಲಿಯೆ. ನನ್ನಲ್ಲಿದ್ದ ಆಸ್ತಿಯನ್ನು ನಾನು ಹಿಂದೆಯೇ ಸಾರ್ವಜನಿಕ ಕಾರ್ಯಗಳಿಗೆ ಕೊಟ್ಟುಬಿಟ್ಟೆ. ಈಗ ನನ್ನ ಹತ್ತಿರ ಇರುವ ಲಕ್ಷಗಳೆಲ್ಲಾ ದೇಶದ ಹಣವೇ.

"ನಾನು, ದಕ್ಷಿಣ ಆಫ್ರಿಕದಿಂದ ಬಂದಂದಿನಿಂದ ಕೂಲಿಗಳ ಸೇವೆ ಮಾಡಿದ್ದೇನೆ. ಅಹಮ್ಮದಾಬಾದ್ ಕೂಲಿಗಾರರ ಸಂಘ, ನಾನು ಸ್ಥಾಪಿಸಿದುದು. ಅದರ ಮೇಲ್ಪಂಕ್ತಿಯನ್ನು ಎಲ್ಲರೂ ಅನುಸರಿಸುವುದು ಒಳ್ಳೆಯದು. ಆದರೆ ಅಲ್ಲಿಯೂ ಕೂಲಿಗಳು ಯಜಮಾನರಾಗಿದ್ದಾರೆಂದು ನಾನು ಹೇಳುತ್ತಿಲ್ಲ. ಕೂಲಿಗಳು ಯಜಮಾನರಾಗುವ ಕಾಲ ದೂರವಿಲ್ಲ ಎಂದು ಮಾತ್ರ ಹೇಳುತ್ತೇನೆ.

"ರೈತರಿಗೂ ಕಾರ್ಖಾನೆ ಕೂಲಿಗಳಿಗೂ ಇಬ್ಬರಿಗೂ ಕಷ್ಟ ಹೆಚ್ಚಾಗಿದೆ. ಅವರೆಲ್ಲರೂ ಒಟ್ಟಾಗಿ ಸೇರಿ ಅಹಿಂಸಾ ಮಾರ್ಗದಲ್ಲಿ ಕೆಲಸಮಾಡಿದರೆ ಬಹಳ ಒಳ್ಳೆಯ ಫಲಗಳುಂಟಾಗುತ್ತವೆ.

ಗಾಂಧಿಯವರು ಹಿಂದುಸ್ಥಾನಿಯಲ್ಲಿ ಮಾತನಾಡುತ್ತಿದ್ದುದರಿಂದ ಹೀಗೆ ಹೇಳಿದರು "ನಿಮ್ಮಲ್ಲಿ ಅನೇಕರಿಗೆ ನನ್ನ ಭಾಷೆ ಅರ್ಥವಾಗುತ್ತಿಲ್ಲವೆಂಬುದು ನನಗೆ ಗೊತ್ತು. ಆದರೂ ನೀವು ನಿಶ್ಶಬ್ದವಾಗಿ ಕುಳಿತಿರುವುದಕ್ಕೆ ವಂದಿಸುತ್ತೇನೆ. ನಿಮಗೆ ಹಿಂದುಸ್ಥಾನಿ ಬರದಿರುವುದರ ತಪ್ಪು ನಿಮ್ಮ ಮೇಲಲ್ಲ ಇದರ ಸ್ವಲ್ಪಭಾಗ ಹಿಂದುಸ್ಥಾನಿ ಪ್ರಚಾರ ಸಭೆಯವರದು. ಆದರೆ ಹೆಚ್ಚು ಭಾಗ ಈ ದೇಶದ ವಿದ್ಯಾವಂತರದು. ನಮ್ಮ ದೇಶದ ವಿದ್ಯಾವಂತರು ನಮ್ಮ ದೇಶದ ಬಡಜನರನ್ನು ಉದಾಸೀನ ಮಾಡಿದ್ದಾರೆ ವಿದ್ಯಾವಂತರು ನಿಮಗೆ ಹಿಂದುಸ್ಥಾನಿ ಕಲಿಸುವುದನ್ನು ನಿಶ್ಚಯಿಸಿದರೆ ನೀವು ಆ ಭಾಷೆಯನ್ನು ಕಲಿಯುವಿರಿ. ನಾನು ಮುಂದಲ ಸಲ ಮದ್ರಾಸಿಗೆ ಬರುವುದರೊಳಗಾಗಿ ನೀವೆಲ್ಲಾ ಹಿಂದೀ ಕಲಿಯುವಂತಾಗಲಿ"

೧೧

ವಿದ್ಯಾರ್ಥಿಗಳ ಸಭೆ

ಅಲಂಕಾರಪ್ರಿಯರಾಗಬೇಡಿ, ಬೀಡಿ ಚುಟ್ಟಾ ಬಿಡಿ

●

ಹಿಂದೀ ಪ್ರಚಾರ ಸಭಾ ಮಂಟಪದಲ್ಲಿ ಹದಿನೈದು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಭೆ ಗಾಂಧಿಯವರನ್ನು ಸ್ವಾಗತಿಸಲು ನೆರೆದಿದ್ದಿತು.

ಗಾಂಧಿಯವರು ಹೀಗೆ ಹೇಳಿದರು :— " ಈಚೆಗೆ ಕೆಲವು ಕಾಲದಿಂದ ನಾನು ವಿದ್ಯಾರ್ಥಿಗಳ ಸಭೆಗಳಲ್ಲಿ ಸೇರುತ್ತಿಲ್ಲ. ಆದರೂ ನನಗೆ ವಿದ್ಯಾರ್ಥಿಗಳಲ್ಲಿ ಪ್ರೀತಿ ಹೆಚ್ಚಾಗಿದೆ. ಮಾತನಾಡದೆ ಕೆಲಸ ಮಾಡುವುದರಿಂದಲೇ ಹೆಚ್ಚು ಪ್ರಯೋಜನವುಂಟಾಗುವುದೆಂದು ನನ್ನ ನಂಬಿಕೆ ಇದು ನನ್ನ ಅನುಭವವೂ ಹೌದು. ಈಗ ನೋಡಿ, ನಾನು ಮದರಾಸಿಗೆ ಬಂದ ಮೇಲೆ ಹೆಚ್ಚು ಮಾತನಾಡಿಲ್ಲ. ಆದರೂ ನನ್ನ ಧ್ಯೇಯಗಳೇನು, ಯಾವ ರೀತಿ ಜನ ದೇಶಸೇವೆ ಮಾಡಬೇಕೆಂಬುದು ನನ್ನ ಅಭಿಪ್ರಾಯ ಎಂಬುದು ಎಲ್ಲರಿಗೂ ತಿಳಿದಿದೆ'' ಎಂದರು.

ಮೊದಲು ಗಾಂಧಿಯವರು ತಮಗೆ ಕೊಡಲು ಕೂಡಿಸಿದ್ದ ನಿಧಿಯ ವಿಚಾರ ಹೇಳಿದರು. ನಿಧಿಯನ್ನು ಹತ್ತುಸಾವಿರ ಕೂಡಿಸಿರುವರೆಂದೂ ಆದರೆ ಅದರಲ್ಲಿ ಅರ್ಧವನ್ನು ಮಾತ್ರ ಗಾಂಧಿಯವರಿಗೆ ಕೊಟ್ಟು ಉಳಿದುದನ್ನು ಮತ್ತಾವುದಕ್ಕೋ ಕೊಡುವರೆಂದು ಇದು ಕೂಡದೆಂದೂ ಒಬ್ಬರು ಗಾಂಧಿಯವರಿಗೆ ಬರೆದಿದ್ದರು. ಅದಕ್ಕೆ ಉತ್ತರವಾಗಿ ವಿದ್ಯಾರ್ಥಿ ಸಭೆಯ ವ್ಯವಸ್ಥಾಪಕರು ಕೂಡಿಸಿರುವ ಒಟ್ಟು ನಿಧಿಯೇ ಏಳು ಸಾವಿರವೆಂದೂ ಅದರಲ್ಲಿ ಎರಡು ಸಾವಿರವನ್ನು ಗ್ರಾಮಪುನರೋದ್ಧಾರಕ್ಕೆ ಕೊಟ್ಟು ಉಳಿದುದನ್ನು ಗಾಂಧಿಯವರು ತಮಗೆ ಇಷ್ಟಬಂದಂತೆ ಉಪಯೋಗಿಸಬಹುದೆಂದೂ ಬರೆದಿದ್ದರು. ಗಾಂಧಿಯವರು ಎರಡು ಪತ್ರಗಳನ್ನೂ ಸಭೆಯ ಮುಂದೆ

ಇಟ್ಟು "ಹಿಂದೀ ಪ್ರಚಾರಕ್ಕೆ ಈ ಹಣವನ್ನು ನನಗೆ ಕೊಟ್ಟಿದ್ದೀರಿ. ಹೀಗಿರುವಾಗ ಅದನ್ನು ಹೀಗೆ ಹಾಗೆ ಉಪಯೋಗಿಸು ಎಂದು ಮತ್ತೆ ಹೇಳುವುದು ಸರಿಯಲ್ಲ" ಎಂದು ತೀರ್ಮಾನಿಸಿದರು. ಅನಂತರ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಕೆಳಗಿನಂತೆ ಉತ್ತರ ಕೊಟ್ಟರು.

ಪ್ರಶ್ನೆ—ವಿದ್ಯಾರ್ಥಿಗಳು ಒಬ್ಬರೊಂದಿಗೆ ಒಬ್ಬರು ಇಂಗ್ಲಿಷಿನಲ್ಲಿಯೇ ಸಂಭಾಷಿಸುತ್ತಾರಲ್ಲ, ಇದು ಸರಿಯೆ?

ಉತ್ತರ—ನಾನು ಇದನ್ನು ತೀವ್ರವಾಗಿ ಖಂಡಿಸುತ್ತೇನೆ ಇಂಗ್ಲಿಷ್ ಭಾಷೆ ನಮಗೆ ಚಿನ್ನದ ಸಂಕೋಲೆ. ಮಾತೃಭಾಷೆ ನಮ್ಮ ತಾಯಿಯಿದ್ದಂತೆ. ಅದನ್ನು ಬಿಟ್ಟು ಇಂಗ್ಲಿಷನ್ನು ಅನುಸರಿಸುವುದು ನಮ್ಮ ತಾಯಿಗೆ ಮೋಸ ಮಾಡಿದಂತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಹಿಂದುಸ್ಥಾನಿಯನ್ನೂ ಮಾತೃಭಾಷೆಯನ್ನೂ ಎರಡನ್ನೂ ಕಲಿಯಬೇಕು.

ಪ್ರಶ್ನೆ—ವಿದ್ಯಾರ್ಥಿನಿಯರು ಸೆಂಟು, ಪೌಡರ್, ಸ್ನೊ, ಎಣ್ಣೆ ಮುಂತಾದ ಅಲಂಕಾರ ಪರಿಮಳ ದ್ರವ್ಯಗಳನ್ನು ಉಪಯೋಗಿಸಬಹುದೆ? ಅದನ್ನು ವಿದ್ಯಾರ್ಥಿಗಳೂ ಅನುಸರಿಸಬಹುದೆ?

ಉತ್ತರ—ಕಲ್ಲಿನ ಗೊಂಬೆಗೆ ಈ ವಿಧವಾಗಿ ಅಲಂಕರಿಸಬೇಕು. ಮನುಷ್ಯನಿಗೆ ಸ್ವಾಭಾವಿಕವಾದ ಜೀವಕಳೆ ಇದೆ. ಅವರಿಗೆ ಈ ಸುಗಂಧ ದ್ರವ್ಯ ಪೌಡರ್ ಸ್ನೊಗಳ ಆವಶ್ಯಕತೆ ಇಲ್ಲ. ನಮ್ಮದು ಬಡದೇಶ. ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಈ ದೇಶದಲ್ಲಿ ಹೀಗೆ ಹಣವನ್ನು ಪೋಲು ಮಾಡುವುದು ಅನ್ಯಾಯ, ಬುದ್ಧಿಹೀನತೆ."

ಪ್ರಶ್ನೆ—ವಿದ್ಯಾರ್ಥಿಗಳಲ್ಲಿ ಬೀಡಿ ಚುಟ್ಟಾ ಸಿಗರೇಟು ಸೇದುವುದು ಅತಿ ಹೆಚ್ಚಾಗಿದೆ. ಇದು ನಿಮಗೆ ಒಪ್ಪಿಗೆಯೇ?

ಉತ್ತರ—ನಾನೂ ಬಾಲ್ಯದಲ್ಲಿ ಒಂದೆರಡು ಸಲ ಸಿಗರೇಟು ಸೇದಿದೆ. ಅದನ್ನು ಯೋಚಿಸಿದರೆ ನಾಚಿಕೆಯಾಗುತ್ತದೆ. ನಾವು ಆಗ ಗುಟ್ಟಾಗಿ ಸೇದುತ್ತಿದ್ದೆವು. ಈಗಿನ ಹುಡುಗರು ಬಹಿರಂಗವಾಗಿಯೇ ಸೇದುತ್ತಾರೆ. ಸೇದುವುದು ಕುಡಿಯುವುದರಷ್ಟೇ ಕೆಟ್ಟದ್ದು. ಸ್ವದೇಶಿಯಾಗಲಿ ಪರದೇಶಿಯಾಗಲಿ ಹೊಗೆಸೊಪ್ಪನ್ನು ಪೂರ್ತಾ ಬಿಡಬೇಕು.

ಪ್ರಶ್ನೆ—ವಿದ್ಯಾರ್ಥಿಗಳಲ್ಲಿ ಬಹಳ ಸ್ವಲ್ಪ ಮಂದಿ ಖಾದಿ ಧರಿಸುತ್ತಾರೆ. ಇದು ಸರಿಯೆ ?

ಉತ್ತರ—ಖಾದಿ ನಮ್ಮ ಸ್ವಾತಂತ್ರ್ಯದ ಗುರುತು. ವಿದ್ಯಾರ್ಥಿಗಳು ಖಾದಿಯನ್ನು ಧರಿಸುವುದು ಮಾತ್ರವಲ್ಲ. ಮಾಡಲೂ ಬೇಕು. ವಿದ್ಯಾರ್ಥಿಗಳಿಗೆ ರಚನಾತ್ಮಕ ಕಾರ್ಯದಲ್ಲಿ ನಂಬಿಕೆ ಇಲ್ಲ. ಅದರಂತಹ ಮನೋರಂಜಕವಾದ ಕೆಲಸ ಬೇರೆ ಇಲ್ಲ. ಹರಿಜನರ ಮಧ್ಯೆಯೂ ಗುಡ್ಡಗಾಡು ನಿವಾಸಿಗಳ ಮಧ್ಯೆಯೂ ಕೆಲಸ ಮಾಡುವುದರಲ್ಲಿ ಕಾವ್ಯ, ಮನೋರಂಜನೆ ಇಲ್ಲವೆ ? ರಚನಾತ್ಮಕ ಕಾರ್ಯವಿಲ್ಲದೆ ದೇಶ ಏಳಿಗೆಯಾಗುವುದಿಲ್ಲ.

ವಿದ್ಯಾರ್ಥಿಗಳು ಇತರರ ಅಭಿಪ್ರಾಯಗಳ ವಿಷಯದಲ್ಲಿ ಅಸಹನೆಯುಳ್ಳವರಾಗಿದ್ದಾರಲ್ಲ ಎಂದು ಗಾಂಧಿಯವರನ್ನು ಕೇಳಿದುದಕ್ಕೆ ಗಾಂಧಿಯವರು ಹೀಗೆ ಹೇಳಿದರು. "ವಿದ್ಯಾರ್ಥಿಗಳು ಬೆಳಸಿಕೊಳ್ಳಬೇಕಾದ ಮೊದಲನೆಯ ಸದ್ಗುಣ ಸಹನೆ. ಭಾರತ ಸ್ವಾತಂತ್ರ್ಯ ಹಿಂಸೆಯಿಂದ ಮಾತ್ರ ಸಾಧ್ಯವೆಂದು ಯಾರಾದರೂ ಹೇಳಲು ಪ್ರಾರಂಭಿಸಿದರೆ ನಾನು ಇಷ್ಟು ದಿವಸ ಅಹಿಂಸೆಯನ್ನು ಬೋಧಿಸಿದ್ದರೂ ನಿಧಾನವಾಗಿ ಅವರ ವಾದವನ್ನು ಕೇಳುತ್ತೇನೆ."

ಕೊನೆಯಲ್ಲಿ ಗಾಂಧಿಯವರು ಅಣುಬಾಂಬಿನಿಂದ ಜಗತ್ತು ನಾಶವಾಗುವುದನ್ನು ಕುರಿತು ಪ್ರಸ್ತಾಪಿಸಿದರು : "ಈ ಪ್ರಶ್ನೆಯನ್ನು ನಾನು ಚೆನ್ನಾಗಿ ಯೋಚನೆ ಮಾಡಿದ್ದೇನೆ ಸತ್ಯ ಅಹಿಂಸೆಗಳು ಅಣುಬಾಂಬಿಗಿಂತ ಹೆಚ್ಚು ಶಕ್ತವಾದುವು. ನನಗೆ ಅಣುಬಾಂಬಿನ ಭಯವಿಲ್ಲ. ಅದು ನಿಮ್ಮ ದೇಹವನ್ನು ನಾಶಮಾಡಬಲ್ಲದು ನಿಜ. ಆದರೆ ನಿಮ್ಮ ಆತ್ಮವನ್ನು ಮುಟ್ಟಲಾರದು. ಹಿಂಸೆಯು ನಮ್ಮನ್ನು ಜಯಿಸಲಾರದು ಎಂದು ನಾವು ದೃಢ ಸಂಕಲ್ಪ ಮಾಡಿಕೊಂಡರೆ ಸಾಕು. ಅನಂತರ ನಮ್ಮನ್ನು ಯಾವುದೂ ಜಯಿಸಲಾರದು. ಕೆಡಕಿಗೆ ಎದುರಾದ ನೀತಿ-ಧೈರ್ಯವೇ ನಮ್ಮ ಗೆಲುವು"

೧೨

ಸ್ವಯಂಸೇವಕರಿಗೆ

ಗಾಂಧಿಯವರು ಇದ್ದಕ್ಕಿದ್ದಂತೆ ತಮ್ಮ ಕಾರ್ಯಕ್ರಮದಲ್ಲಿಲ್ಲದ ಕಾರ್ಯಗಳನ್ನು ಪ್ರಾರಂಭಿಸಿದರು. ತಮ್ಮ ನಿವಾಸಸ್ಥಾನದಿಂದ ಗಾಂಧಿಯವರು ನಡೆದುಕೊಂಡೇ ಹಿಂದುಸ್ಥಾನಿ ನಗರಕ್ಕೆ ಹೋದರು. ದ್ವಾರದಲ್ಲಿ ಸ್ವಯಂಸೇವಕ ದಳದ ಸೇನಾಪತಿಗಳು ಗಾಂಧಿಯವರನ್ನು ಎದುರುಗೊಂಡು ವಂದಿಸಿದರು. ಅಲ್ಲಿಯೇ ನೆರೆದಿದ್ದ ಭೋಜನ ಸಮಿತಿಯವರೂ ಗಾಂಧಿಯವರನ್ನು ಸ್ವಾಗತಿಸಿದರು. ಗಾಂಧಿಯವರು ನಗುತ್ತಾ "ನೀವು ಎಲ್ಲರಿಗೂ ಇಡಲಿ ಉಪವೂ ಕೊಟ್ಟು ತುಷ್ಟಿಪಡಿಸಿದಿರಿ. ನನಗೆ ಮಾತ್ರ ಕೊಡಲಿಲ್ಲ" ಎಂದರು

ಗಾಂಧಿಯವರು ಸ್ತ್ರೀ ಪುರುಷ ಸ್ವಯಂಸೇವಕರನ್ನೂ ನಿರೀಕ್ಷಿಸಿದರು. ಬೆಂಕಿ ಆರಿಸುವವರು, ಸ್ಕೌಟುಗಳು, ಅಡಿಗೆಯವರು, ಎಲ್ಲರೂ ಗಾಂಧಿಯವರನ್ನು ವಂದಿಸಲು ಸಾಲಾಗಿ ನಿಂತಿದ್ದರು. ಪೋಸ್ಟಆಫೀಸಿನ ಅಧಿಕಾರಿಗಳ ಒಂದು ಸಾಲು ನಿಂತಿದ್ದಿತು. ಗಾಂಧಿಯವರು ಮುಗುಳುನಗೆ ನಗುತ್ತಾ ಎಲ್ಲರ ವಂದನೆಗಳನ್ನೂ ಸ್ವೀಕರಿಸಿ ಪೋಸ್ಟಆಫೀಸಿನ ಅಧಿಕಾರಿಗಳಿಗೆ "ನೀವು ಹಿಂದುಸ್ಥಾನಿ ಕಲಿಯಿರಿ. ಅದರಿಂದ ಜನರ ಸೇವೆಯನ್ನು ಇನ್ನೂ ಚೆನ್ನಾಗಿ ಮಾಡಬಹುದು" ಎಂದರು.

ಗಾಂಧಿಯವರು ಜನರ ಮಧ್ಯದಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡು ಮಾತನಾಡಿದರು. "ನಿನ್ನೆ ಸಾಯಂಕಾಲದ ವೇಳೆಗೆ ಎಲ್ಲಾ ಕಾರ್ಯಕ್ರಮಗಳೂ ಮುಗಿದುವೆಂದು ನಾನು ಭಾವಿಸಿದ್ದೆ. ಆದರೆ ರಾತ್ರಿ ಸ್ವಯಂಸೇವಕರ "ರ್‍ಯಾಲಿಗೆ" ನಾನು ಬರಬೇಕೆಂದರು. ನಿಮ್ಮನ್ನು ನೋಡಿ ನನಗೆ ನಿಜವಾಗಿಯೂ ಬಹಳ ಆನಂದವಾಯಿತು. ಸ್ವಯಂಸೇವಕರ ಸಹಾಯವಿಲ್ಲದಿದ್ದರೆ ನಮ್ಮ ಉತ್ಸವಗಳು ಜಯಪ್ರದವಾಗುತ್ತಿರಲಿಲ್ಲ. ಸ್ವಯಂಸೇವಕರು ಅಹಿಂಸೆಯ ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದಾರೆ.

ಮಿಲಿಟರಿ ಮತ್ತು ಪೋಲೀಸರೂ ಹಿಂಸಾವಾದಿಗಳು. ಸ್ವಯಂಸೇವಕರು ಜನರ ನಿಜವಾದ ಸೇವಕರು. ದೇಶದಲ್ಲಿ ಸ್ವಯಂಸೇವಕ ದಳಗಳಿರಬೇಕೆಂದು ನಾನು ೧೯೨೧ನೆ ಇಸವಿಯಿಂದಲೂ ಹೇಳುತ್ತ ಬಂದಿದ್ದೇನೆ.

ದೊಡ್ಡ ದೊಡ್ಡ ಸಭೆಗಳಲ್ಲಿ ಜನರನ್ನು ನಿಷ್ಪಕ್ಷಪಾತವಾಗಿ ಶಾಂತಿ ಶಿಸ್ತಿನಲ್ಲಿಡುವುದನ್ನು ಸ್ವಯಂಸೇವಕರು ಕಲಿಯಬೇಕು. ಧನಿಕರು ಬಡವರು ಒಂದೇಸಮನಾಗಿ ಕಾಣಬೇಕು. ಪೋಲಿಸಿನವನು ಬಂದು ದೊಣ್ಣೆ ತೋರಿಸಿದರೆ ಜನ ಶಾಂತರಾಗುತ್ತಾರೆ. ಪೋಲಿಸಿನವನು ತಾನೆ ಒಡೆಯನಂತೆ ವರ್ತಿಸುತ್ತಾನೆ. ಅಹಿಂಸೆ ಸತ್ಯಗಳೇ ನಾವು ಅನುಸರಿಸಬೇಕಾದ ಕಾನೂನು ಎಂಬುದನ್ನು ಸ್ವಯಂಸೇವಕರು ಜನರಿಗೆ ತಿಳಿಸಬೇಕು. ನಾನು ದೊಡ್ಡ ದೊಡ್ಡ ರ್‍ಯಾಲಿಗಳನ್ನು ಲಂಡನ್ನಿನಲ್ಲಿ ನೋಡಿದೆ. ಲಂಡನ್ನಿನ ಪೋಲಿಸಿನವರು ನಾವು ಜನರ ಸೇವಕರು, ಜನರ ಸೇವೆ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತಿದ್ದರು. ಇಲ್ಲಿಯೂ ಪೋಲಿಸಿನವರು ಆ ರೀತಿ ಪ್ರತಿಜ್ಞೆ ಮಾಡಬೇಕು. ಅಂತಹ ನಿಸ್ವಾರ್ಥ ಸೇವೆಯಿಂದಲೇ ದೇಶವು ಮುಂದುವರಿಯುವುದು. ಪ್ರಾರ್ಥನಾ ಸಭೆಗಳಲ್ಲಿಯೂ ಜನರು ಬಹಳ ಗದ್ದಲಮಾಡುತ್ತಾರೆ. ಪ್ರಾರ್ಥನಾ ಸಭೆಗಳಲ್ಲಿ ಶಾಂತಿ ಶಿಸ್ತು ಇರಬೇಕು. ಸ್ವಯಂಸೇವಕರು ಇದನ್ನು ಸ್ಥಾಪಿಸಬೇಕು.

ಭೋಜನಸಮಿತಿ:— ಮುಂದೆ ಗಾಂಧಿಯವರು ಭೋಜನ ಸಮಿತಿಯವರ ಕೂಟಕ್ಕೆ ಹೋದರು. ಇದ್ದಕ್ಕಿದ್ದಂತೆ ಅವರು ಅಡಿಗೆ ಮನೆಗೆ ಹೋದರು. ಪರಿಚಾರಕರಿಗೆ ವಿದುರನ ಎದುರಿಗೆ ಕೃಷ್ಣ ಬಂದಂತೆ ಆಯಿತು. ಅವರು ಪುಳಕಿತರಾಗಿ ಕೈಮುಗಿದರು. ಗಾಂಧಿಯವರು ಎಲ್ಲರನ್ನೂ ಮಾತನಾಡಿಸಿದರು. ಕಾಳು ಕಡಿ ಅಕ್ಕಿ ಬೇಳೆ ತರಕಾರಿ ಧಾನ್ಯ ಶುದ್ಧವಾಗಿದೆಯೇ ನೋಡಿದರು. ಪಾಯಖಾನೆಗೆ ಹೋಗಿ ನೋಡಿದರು. ಪಾಯಖಾನೆ ಮನೆ ಅಡಿಗೆ ಮನೆಯಷ್ಟೆ ಶುದ್ಧವಾಗಿರಬೇಕೆಂದರು. ಬಗೆ ಬಗೆಯ ಸಮಿತಿಯ ವರದಿಗಳ ಪಠನೆಯಾದ ನಂತರ ನೆರೆದಿದ್ದವರು ಗಾಂಧಿಯವರಿಗೆ ಕಾಣಿಕೆಗಳನ್ನು ಅರ್ಪಿಸಿದರು. ಗಾಂಧಿಯವರು ಭೋಜನ ಸಮಿತಿಯವರಿಗೆ "ನೀವು ಐವತ್ತು ಸಾವಿರ ಜನಕ್ಕೆ ಆಹಾರವಿತ್ತಿದ್ದೀರಿ. ಒಳ್ಳೆಯ ಆಹಾರವನ್ನು

ನೀವು ಕೊಟ್ಟುದರಿಂದ ಜನರಿಗೆ ಸಂತೋಷವಾಗಿ ಕೆಲಸಗಳು ಉತ್ಸಾಹದಿಂದ ಜರುಗಿದವು. ನೀವು ವಹಿಸಿಕೊಂಡ ಈ ಮುಖ್ಯವಾದ ಹೊಣೆಯಿಂದ, ಸ್ವಾಗತ ಸಮಿತಿಯವರ ಕೆಲಸ ಹಗುರವಾಯಿತು. ನನ್ನ ಮನಸ್ಸನ್ನು ಅಪಹರಿಸಿದುದು ನಿಮ್ಮ ಪರಿಶುದ್ಧತೆ ಮತ್ತು ಚೊಕ್ಕಟತನ. ನಾನು ದೇಶ ವನ್ನೆಲ್ಲಾ ತಿರುಗಿದ್ದೇನೆ. ಆದರೆ ಅಡಿಗೆಯಲ್ಲಿ ಪರಿಶುದ್ಧ್ಯತೆ ಸ್ಥಳ ಶುದ್ಧ್ಯ ತೆಗೆ ನೀವೇ ದೇಶಕ್ಕೆ ಉದಾಹರಣೆ. ಇಂತಹ ಸಂದರ್ಭಗಳಲ್ಲಿ ಅಡಿಗೆ ಮಾಡುವವರು ದೇಹದಲ್ಲಿಯೂ ಮನಸ್ಸಿನಲ್ಲಿಯೂ ಶುದ್ಧವಾಗಿರಬೇಕು.

ಅನಂತರ ಗಾಂಧಿಯವರಿಗೆ ಕಾಣಿಕೆಯಾಗಿ ಕೊಟ್ಟಿದ್ದ ಪದಾರ್ಥ ಗಳನ್ನು ಗಾಂಧಿಯವರು ಹರಾಜು ಹಾಕುತ್ತೇನೆ ಎಂದರು. ಶ್ರೀ ಸತ್ಯ ನಾರಾಯಣರು ಎಲ್ಲಾ ಪದಾರ್ಥಗಳನ್ನೂ ಒಂದು ತಟ್ಟೆಯಲ್ಲಿ ಇಟ್ಟಿದ್ದರು. ಶ್ರೀ. ಸತ್ಯನಾರಾಯಣರು "ಪದಾರ್ಥಗಳ ಬೆಲೆ ಹತ್ತುಸಾವಿರವಾದರೂ ಆಗುತ್ತದೆ" ಎಂದರು. ಗಾಂಧಿಯವರು ಸತ್ಯನಾರಾಯಣರಿಗೆ "ಬೆಲೆ ಏನು ಗೊತ್ತು. ಅವರು ನಿಮಗೆ ಚೆನ್ನಾಗಿ ಹಿಂದಿ ಕಲಿಸುತ್ತಾರೆ ಅಷ್ಟೆ. ಪದಾರ್ಥ ಗಳ ಬೆಲೆ ನನಗೆ ಗೊತ್ತು. ನಾನು ಬನಿಯ" ಎಂದರು.

ಗಾಂಧಿಯವರಿಗೆ ಬಹುಮಾನವಾಗಿ ಬಂದ ಪದಾರ್ಥಗಳಲ್ಲಿ ಮೂರು ಕೈಕೋಲುಗಳಿದ್ದವು. "ನಾನು ಮುದುಕ ಕೋಲು ಊರಿಕೊಂಡು ನಡೆಯಬೇಕೆಂದು ಕೊಟ್ಟಿದ್ದಾರೆ. ಸದ್ಯಕ್ಕೆ ಅವು ನನಗೆ ಬೇಕಿಲ್ಲ" ಎಂದರು. ಒಂದು ಗಜಲಕ್ಷ್ಮಿ ವಿಗ್ರಹ ಇತ್ತು. ಅದನ್ನು ಕೊಟ್ಟವಳು ಹೀಗೆ ಬರೆದಿದ್ದ ಳಂತೆ. "ನೀವು ನಿತ್ಯ ಇದನ್ನು ಪೂಜಿಸಬೇಕೆಂದು". ಗಾಂಧಿಯವರು "ನಾನೇನೊ ದೇವರ ಪೂಜಾರಿ. ಆದರೆ ನಾನು ಅವಿನಾಶಿ ಮತ್ತು ಅವ್ಯಕ್ತ ಬ್ರಹ್ಮನ ಪೂಜಕ" ಎಂದರು. ಹಾಗೆಯೇ ಮತ್ತೊಬ್ಬರು ಒಂದು ಮುರಲೀ ಧರನ ವಿಗ್ರಹವನ್ನು ಕೊಟ್ಟಿದ್ದರು. ಅದನ್ನು ನೋಡಿ ಗಾಂಧಿಯವರು "ನಾನು ಕೃಷ್ಣಭಕ್ತನೇ ಹೌದು. ಆದರೆ ನನ್ನ ಕೃಷ್ಣ ನನ್ನನ್ನು ನೋಡು ತ್ತಾನೆ. ನಾನು ಅವನನ್ನು ನೋಡುವುದಿಲ್ಲ" ಎಂದರು

ಗಾಂಧಿಯವರು ಹರಾಜಿಗೆ ತೆಗೆದರು. ವರ್ತಕರಿಗೆ "ಒಂದು ಲಕ್ಷ ರೂಪಾಯಿಗಳಿಗೆ ಇವನ್ನೆಲ್ಲಾ ಕೊಂಡುಕೊಂಡು ಬಿಡಿ. ಹಿಂದುಸ್ಥಾನಿ

ಪ್ರಚಾರಕ್ಕೆ ತೊಂಬತ್ತುಸಾವಿರ, ಹರಿಜನ ನಿಧಿಗೆ ಹತ್ತುಸಾವಿರ. ಹಿಂದುಸ್ಥಾನಿ ಪ್ರಚಾರಕ್ಕೆ ನೀವು ಗುರಿ ಇಟ್ಟಷ್ಟು ಹಣ ಹೇಗೋ ಇನ್ನೂ ವಸೂಲಾಗಿಲ್ಲ" ಎಂದರು. ಆ ಕುಚೇಲನ ಎದುರಿಗೆ ಧನಿಕರು ಒಂದು ಗಳಿಗೆಯಲ್ಲಿ ಕುಚೇಲರಾಗುತ್ತಾರೆ. ನೆರೆದಿದ್ದ ವರ್ತಕರು ಸಂಧ್ಯಾಕಾಲದ ವರೆಗೆ ಅವಕಾಶವನ್ನು ಬೇಡಿದರು.

ನಿರೀಕ್ಷಣೆ

ಮರುದಿನ ಗಾಂಧಿಯವರ ಮೌನದಿನ. ಗಾಂಧಿಯವರು ಸೇವಾಗ್ರಾಮ ಪ್ರದರ್ಶನವನ್ನು ಮಾತ್ರ ನೋಡುವ ಕಾರ್ಯಕ್ರಮವಿತ್ತು. ಗಾಂಧಿಯವರು ಹಿಂದುಸ್ಥಾನಿ ನಗರವನ್ನು ಕಾಲುನಡಿಗೆಯಲ್ಲಿಯೆ ಪರೀಕ್ಷಿಸಿದರು. ಅನಂತರ ಮರುದಿನ ತಾವು ತಳಹದಿ ಸ್ಥಾಪಿಸಬೇಕಾದ ಹರಿಜನ ಪಾಠಶಾಲೆಯ ಸ್ಥಳವನ್ನೂ ಗಾಂಧಿಯವರು ನೋಡಿದರು.

ವೆಂಕಟನಾರಾಯಣ ರಸ್ತೆಯಲ್ಲಿ ಕೆಲವು ಲಾರಿಗಳೂ ಬಸ್‌ಗಳೂ ನಿಂತಿದ್ದವು. ಗಾಂಧಿಯವರನ್ನು ನೋಡಿ ಆ ಬಸ್ಸಿನವರೆಲ್ಲಾ ಗುಂಪಾಗಿ ದರ್ಶನಕ್ಕಾಗಿ ನೆರೆದರು. ಗಾಂಧಿಯವರು ಹತ್ತಿರಕ್ಕೆ ಬಂದೊಡನೆ ಪ್ರಣಾಮ ಮಾಡಿದರು. ಗಾಂಧಿಯವರು ಮೌನವಾಗಿ ಆ ಅಭಿನಂದನೆಯನ್ನು ಸ್ವೀಕರಿಸಿದರು. ಬರಿದಾಗಿದ್ದ ಒಂದು ಬಸ್‌ನ್ನು ಗಾಂಧಿಜಿ ತಮ್ಮೆಡೆಗೆ ಬರುವಂತೆ ಸನ್ನೆಮಾಡಿದರು. ಆ ಡ್ರೈವರ್‌ನಿಗೇ ಆಶ್ಚರ್ಯವಾಯಿತು ಡ್ರೈವರ್ ಬಸ್‌ನ್ನು ಸಮೀಪಕ್ಕೆ ತಂದನು. ಗಾಂಧಿಯವರು ಬಸ್‌ನಲ್ಲಿ ಕುಳಿತರು. ಗಾಂಧಿಯವರ ಇಚ್ಛೆಯಂತೆ ಡ್ರೈವರ್ ಬಸ್ಸನ್ನು ತ್ಯಾಗರಾಜ ರಸ್ತೆಗೆ ತೆಗೆದುಕೊಂಡು ಹೋದನು. ಅಲ್ಲಿ ಗಾಂಧಿಯವರು ಕಸ್ತೂರಿಬಾ ಮಹಾದ್ವಾರವನ್ನೂ ಬಜಾಜ್ ದ್ವಾರವನ್ನೂ ಸಂದರ್ಶಿಸಿ ಬಸ್ಸಿನಿಂದ ಕೆಳಕ್ಕೆ ಇಳಿದರು. ಡ್ರೈವರ್‌ಗೆ ನಾನೇ ಧನ್ಯ ಎಂಬ ಹೆಮ್ಮೆಯುಂಟಾಯಿತು.

ನಂತರ ಸೇವಾಗ್ರಾಮ ಪ್ರದರ್ಶನಕ್ಕೆ ಬೇಟಿ ಇತ್ತರು. ಹರಿಜನ ಪಾಠಶಾಲೆಯ ಪ್ರದರ್ಶನದ ಮುಂದೆ ಗಾಂಧಿಯವರು ಒಂದು ಗಳಿಗೆ ನಿಂತರು. ಒಂದು ಹೊಸ ಬಗೆಯ ತಕ್ಲಿ ಇತ್ತು. ಎಲ್ಲಾ ನೂಲುವ ಸ್ಪರ್ಧೆಗಳಲ್ಲಿಯೂ ಹರಿಜನರಿಗೆ ಬಹುಮಾನ ಬರುತ್ತಿರುವುದನ್ನೂ ತಾವು

ನೂತ ನೂಲಿನ ಬಟ್ಟೆಯನ್ನು ತಾವೇ ಹಾಕಿಕೊಳ್ಳುತ್ತಿರುವುದನ್ನೂ ಕೇಳಿ ಗಾಂಧಿಯವರು ಸಂತುಷ್ಟರಾದರು. ಏಳು ವರುಷದ ಮೂರು ಹುಡುಗಿಯರು ಪ್ರದರ್ಶನದಲ್ಲಿ ನೂಲುತ್ತಿದ್ದುದನ್ನು ನೋಡಿ ಗಾಂಧಿಯವರ ಮುಖ ಆನಂದ ದಿಂದ ಅರಳಿತು. ಅಲ್ಲಿಂದ ಮುಂದೆ ವೈದ್ಯಕೀಯ ಸಹಾಯದ ಭಾಗಕ್ಕೆ ಹೊರಟರು.

ದಾರಿಯಲ್ಲಿ ಆರೋಗ್ಯರಕ್ಷಣೆಗಾಗಿ ಏರ್ಪಡಿಸಿದ್ದ ವೈದ್ಯ ತಂಡ ದವರು ಗಾಂಧಿಯವರನ್ನು ಕಂಡು ಅವರಿಗೆ ಒಂದು ನಿಧಿಯನ್ನು ಅರ್ಪಿಸಿ ದರು. ಗಾಂಧಿಯವರು ವೈದ್ಯರಿಗೆ ಹೀಗೆ ಬೋಧಿಸಿದರು “ಜನರಿಗೆ ಬಡತನದ ನಿವಾರಣೋಪಾಯವನ್ನು ಸೂಚಿಸುವುದೂ ವೈದ್ಯವೇ. ವೈದ್ಯನ ಮುಖ್ಯ ಕರ್ತವ್ಯ ಜನರಿಗೆ ಪರಿಶುದ್ಧತೆಯನ್ನೂ ರೋಗ ಬರದಂತೆ ತಡೆಯು ವುದನ್ನೂ ಕಲಿಸುವುದೇ ಆಗಿದೆ. ಆದುದರಿಂದ ನೀವು ಜನರಿಗೆ ಔಷಧಿ ಕೊಡುವುದರ ಜತೆಗೆ, ಮತ್ತೆ ರೋಗ ಬರದಂತೆ ಮಾಡಿಕೊಳ್ಳುವುದನ್ನೂ ಬೋಧಿಸಬೇಕು.” ಮುಂದೆ ಗಾಂಧಿಯವರು ಹಿಂದುಸ್ಥಾನಿ ಸಭೆಯ ಕಟ್ಟಡ ವನ್ನು ನೋಡಿ ಹೊರಗೆ ಬಂದರು.

ಆಗ ಬಾಗಿಲಿನಲ್ಲಿ, ಬಹು ದೂರದಿಂದ ಗಾಂಧಿಯವರನ್ನು ನೋಡ ಬೇಕೆಂದು ಒಬ್ಬ ಕುರುಡನು ಬಂದು ನಿಂತಿರುವುದು ಗಾಂಧಿಯವರಿಗೆ ತಿಳಿಯಿತು. ಅದನ್ನು ನೋಡಿದ ಕೂಡಲೇ ಗಾಂಧಿಯವರು ಅವನ ಹತ್ತಿರ ಹೋಗಿ ತಮ್ಮ ಕೈಯಿಂದ ಅವನ ಕೆನ್ನೆಯನ್ನು ತಡವಿದರು ಕುರುಡನಿಗೆ ಒಂದು ಗಳಿಗೆ ತನ್ನನ್ನು ಮುಟ್ಟಿದವರಾರೆಂಬುದು ಗೊತ್ತಾಗಲಿಲ್ಲ. ಗೊತ್ತಾದ ಕೂಡಲೇ ಅವನು ಆಶ್ಚರ್ಯದಿಂದ ಬಾಯನ್ನು ಅಗಲವಾಗಿ ತೆರೆದನು. ಎರಡು ಕೈಗಳನ್ನೂ ಜೋಡಿಸಿ ಗಾಂಧಿಯವರಿಗೆ ಕೈಮುಗಿದನು.

೧೩

ಸಾಹಿತಿಗಳ ಮತ್ತು ಕಲಾವಿದರ ಸಭೆ

ಸತ್ಯಕ್ಕೆ ಅನುಸಾರವಾಗಿ ಬಾಳುವುದೇ ಕಲೆ

✽

ಈ ಸಂದರ್ಭದಲ್ಲಿ ದಕ್ಷಿಣ ಭಾರತದ ಕಲಾವಿದರ ಮತ್ತು ಸಾಹಿತಿಗಳ ಸಮ್ಮೇಳನ ಸಹ ನಡೆಯಿತು. ಶ್ರೀ. ಸತ್ಯನಾರಾಯಣರು ಭಾಷಣ ಮಾಡುತ್ತಾ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು. ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಸಮ್ಮೇಳನದ ಅಧ್ಯಕ್ಷರಾದರು. ತಮಿಳು ಬರಹಗಾರರಾದ ವಾ. ರಾ., ಮಾಸ್ತಿಯವರ ಪರಿಚಯ ಮಾಡಿಕೊಡುತ್ತಾ "ಇವರು ಅತ್ಯುತ್ತಮ ಸಣ್ಣ ಕಥೆಗಾರ"ರೆಂದರು. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳಗಳಿಂದ ಬರೆಹಗಾರರೂ ಕವಿಗಳೂ ಕಲಾವಿದರೂ ನೆರೆದಿದ್ದರು. ಅಧ್ಯಕ್ಷರಾದ ಶ್ರೀಮಾನ್ ಮಾಸ್ತಿಯವರು ಕನ್ನಡದಲ್ಲಿ ಹೀಗೆ ಹೇಳಿದರು.

ಭಾರತದಲ್ಲಿ ಅನೇಕ ಭಾಷೆಗಳಿದ್ದರೂ ನಾವು ಹೆಚ್ಚು ಕಷ್ಟವಿಲ್ಲದೆ ನಮ್ಮ ಕೆಲಸ ಸಾಗಿಸಿಕೊಂಡು ಹೋಗುತ್ತಿದ್ದೇವೆ. ಭಾರತ ಒಂದು ಎಂಬು ದಕ್ಕೆ ಇದೊಂದು ಗುರುತು; ರಾಷ್ಟ್ರೀಯ ಸಾಹಿತ್ಯ ಎಂದರೆ ರಾಜಕೀಯ ಸಾಹಿತ್ಯವಲ್ಲ; ಸಾಹಿತ್ಯ ಜೀವನದ ಎಲ್ಲಾ ಕ್ಷೇತ್ರಗಳಿಗೂ ವ್ಯಾಪಿಸಿದುದು. ಹಾಗೆ ಅದು ವ್ಯಾಪಿಸಿದಾಗ ಮಾತ್ರವೇ ದೇಶದ ಜನರ ಹೃದಯವೂ ಬುದ್ಧಿಯೂ ವಿಶಾಲವಾಗುತ್ತದೆ.

ಭಾರತದಲ್ಲಿ ಇಪ್ಪತ್ತಕ್ಕಿಂತ ಕಮ್ಮಿ ಇಲ್ಲದೆ ಭಾಷೆಗಳಿವೆ. ಹದಿಮೂರು ಮುಖ್ಯ ಭಾಷೆಗಳಿವೆ. ಸಾಧ್ಯವಾದಷ್ಟು ಭಾಷೆಗಳ ಜ್ಞಾನ ಜನರಿಗೆ ಆಗ ಬೇಕಾದುದು ಒಳ್ಳೆಯದು. ಆದರೆ ದಕ್ಷಿಣ ಭಾರತದವರಿಗೆ ಹಿಂದುಸ್ಥಾನಿ ಅಷ್ಟು ಸುಲಭವಲ್ಲ. ಹಿಂದುಸ್ಥಾನಿ ಪ್ರಚಾರ ಸಭೆಯವರು ದಕ್ಷಿಣದವರು ಹಿಂದುಸ್ಥಾನಿ ಕಲಿಯಲು ಇನ್ನೂ ಹೆಚ್ಚು ಪರಿಶ್ರಮಿಸಬೇಕು. ಉತ್ತರದೇಶ

ದೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳಬಯಸುವವರೂ ಹಿಂದುಸ್ಥಾನಿ ಕಲಿಯಬೇಕು. ಉತ್ತರ ಭಾರತದವರು ಒಂದು ಅಥವಾ ಎರಡು ದ್ರಾವಿಡ ಭಾಷೆಗಳನ್ನಾದರೂ ಕಲಿಯಬೇಕು. ಉತ್ತರ ಭಾರತದಲ್ಲಿ ದ್ರಾವಿಡ ಭಾಷೆ ಕಲಿಸುವ ಸಭೆಗಳು ಇರಬೇಕು. ಇದರಿಂದ ರಾಷ್ಟ್ರಕ್ಕೆ ಒಳ್ಳೆಯದಾಗುವುದು.

ಭಾಷೆಗಳ ಪ್ರಶ್ನೆ ಜಯಪುರದ ಸಮ್ಮೇಳನದಲ್ಲಿ ಮೊದಲು ಬಂದಿತು. ಜವಹಿರ್‌ಲಾಲ್ ನೆಹ್ರು ಹೇಳಿದಂತೆ, ಭಾಷೆಗಳಿಂದ ದೇಶ ವಿಭಾಗವಾಗುವುದಿಲ್ಲ. ಕಿತ್ತಳೆ ಹಣ್ಣಿನಲ್ಲಿ ಬೇರೆ ಬೇರೆ ತೊಳೆಗಳು ಹೇಗೋ ಭಾರತದಲ್ಲಿ ಭಾಷೆಗಳು ಹಾಗೆ. ಪ್ರಕೃತಿಯನ್ನು ನೋಡಿ. ಜಗತ್ತಿನಲ್ಲಿ ಇಂಪಾದ ಕಂಠಗಳುಳ್ಳ ಅನೇಕ ಪಕ್ಷಿಗಳಿದ್ದರೂ ದೇವರು ಕಾಗೆಯನ್ನೂ ನಿರ್ಮಿಸಿದ್ದಾನೆ. ಲೋಕವನ್ನು ಬೆಳಗಲು ಕೋಟಿ ಸಂಖ್ಯೆಯ ನಕ್ಷತ್ರಗಳೂ ಅನೇಕ ಗ್ರಹಗಳೂ ಇದ್ದರೂ ಮಿಣುಕು ಹುಳುವಿಗೆ ಸಹ ಒಂದು ಸ್ಥಾನವಿದೆ. ಭಾರತದ ಒಂದು ಅದ್ವಿತೀಯ ಲಕ್ಷಣ ಭಾರತ ಒಂದು ಖಂಡವೂ ಹೌದು, ಒಂದು ದೇಶವೂ ಹೌದು. ಭಾರತದಲ್ಲಿ ಐದು ರಾಷ್ಟ್ರಗಳಿವೆ ಎಂದು ಹೇಳಿದರೂ ನಮಗೆ ಗಾಬರಿಯಿಲ್ಲ ಅನೇಕದರಲ್ಲಿರುವ ಒಂದನ್ನು ಕಂಡುಕೊಳ್ಳುವುದೂ, ಇತರರಿಗೆ ಬೋಧಿಸುವುದೂ ಲೇಖಕನ ಕೆಲಸ. ಭಾರತೀಯರ ಧ್ಯೇಯ, ಒಂದು ರಾಷ್ಟ್ರದ ಸಂಕುಚಿತ ಪರಿಮಿತಿಯನ್ನು ಮೀರಿದುದು. ಜಗತ್ತಿಗೇ ಸೇವೆ ಸಲ್ಲಿಸುವುದು ನಮ್ಮ ಧರ್ಮ. ಭಾರತ ಈ ಕಾರ್ಯದಲ್ಲಿ ಜಗತ್ತಿಗೆ ಗುರುವಾಗಬೇಕು. ಕವಿ ರವೀಂದ್ರರು ನಮಗೆ ಇದರಲ್ಲಿ ಮಾರ್ಗದರ್ಶಕರು. ಆ ಮೇಲುಪಂಗ್ತಿಯನ್ನು ಅನುಸರಿಸಿ ಆ ಧ್ಯೇಯಕ್ಕೆ ಕುಂದಕ ಬಾರದಂತೆ ನಡೆಯುವುದು ನಮ್ಮ ಕರ್ತವ್ಯ.

ನಮ್ಮ ಸದ್ಯದ ಕರ್ತವ್ಯ ನಮ್ಮಲ್ಲಿರುವ ಹೆಚ್ಚುಕಡಿಮೆಗಳನ್ನೂ ಅನ್ಯಾಯಗಳನ್ನೂ ಹೋಗಲಾಡಿಸುವುದೇ ಆಗಿದೆ. ಸ್ವಾತಂತ್ರ್ಯ, ಸಮಾನತೆ ಇವೇ ಇಂದಿನ ಜೀವನದ ಸೂತ್ರಗಳು. ಆ ದೇವತೆಯ ರಥ ಸುಸೂತ್ರವಾಗಿ ಕೊನೆ ಮುಟ್ಟುವಂತೆ ಲೇಖಕರೂ ಕಲಾವಿದರೂ ಶ್ರಮಿಸಬೇಕು. ಮುಂದೆ ಜಗತ್ತಿಗೆ ಮಾರ್ಗದರ್ಶಕವಾಗುವುದು ಕಲೆ ಮತ್ತು ಸಾಹಿತ್ಯವೇ. ಈ ಸ್ವಾತಂತ್ರ್ಯ ಸಮಾನತೆಗಳ ಭಾವ ಜನರಲ್ಲಿ ಪೂರ್ಣವಾಗಿ ಬೆಳೆಯುವಂತೆ ಮಾಡುವುದು ಲೇಖಕರ ಜವಾಬ್ದಾರಿ.”

ಶ್ರೀಮಾನ್ ಮಾಸ್ತಿಯವರ ಭಾಷಣದ ನಂತರ ಶ್ರೀ. ವಾ. ರಾ. ತಮಿಳು ಸಾಹಿತ್ಯವನ್ನು ಕುರಿತು ಮಾತನಾಡಿದರು “ಭಾರತ ಸ್ವಾತಂತ್ರ್ಯ ಚಳುವಳಿಗಳಿಂದ ತಮಿಳು ಸಾಹಿತ್ಯ ಬಹಳ ಬೆಳೆಯಿತು. ಈ ಸಾಹಿತ್ಯದಿಂದ ಚಳುವಳಿಗೂ ಸಹಾಯವಾಯಿತು. ದ್ರಾವಿಡ ಭಾಷೆಯ ಬರಹಗಾರರೆಲ್ಲ ಒಬ್ಬರ ಪರಿಚಯ ಒಬ್ಬರು ಮಾಡಿಕೊಳ್ಳಬೇಕೆಂದೂ ಹೇಳಿದರು.

ಶ್ರೀ. ಕಟ್ಟೂರಿ ವೆಂಕಟೇಶ್ವರರಾವ್‌ರು ತೆಲುಗು ಸಾಹಿತ್ಯದ ಬೆಳವಣಿಗೆಯನ್ನೂ, ಕೆ. ಎ. ದಾಮೋದರ ಮೆನನ್‌ರು ಮಲೆಯಾಳಿ ಸಾಹಿತ್ಯದ ಬೆಳವಣಿಗೆಯನ್ನೂ ಕುರಿತು ಹೇಳಿದರು. ಶ್ರೀಮಾನ್ ವೀ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯದ ಬೆಳವಣಿಗೆಯ ಮೂರು ಮೆಟ್ಟಲುಗಳನ್ನು ವಿಶದವಾಗಿ ವಿವರಿಸಿದರು. [೧] ಆನಂತರ ಹರಿ ಸರ್ವೋತ್ತಮರಾಯರು ಕನ್ನಡದಲ್ಲಿ ಭಾಷಣ ಮಾಡಿದರು.

ಮಧ್ಯಾಹ್ನದ ಸಭೆಗೆ ಗಾಂಧಿಯವರು ಬಂದರು. ಬಂದವರೇ ತಮಗೆ ಕಾಣಿಕೆಯಾಗಿ ದೊರೆತಿದ್ದ ಒಂದು ಪಟವನ್ನು (ಚಿತ್ರ) ಹರಾಜು ಮಾಡಲು ಪ್ರಾರಂಭಿಸಿದರು. ಗಾಂಧಿಯವರು ಹರಾಜನ್ನು ಒಂದು ರೂಪಾಯಿನಿಂದ ಪ್ರಾರಂಭಿಸಿದರು. ‘ನೋಡಿ ಎಷ್ಟು ಚೆನ್ನಾಗಿದೆ ಈ ಮುದುಕನ ಚಿತ್ರ. ಇವನು ಒಳ್ಳೆಯ ಹಾಸ್ಯಗಾರನಾದ ಮುದಕನಲ್ಲವೆ?’ ಎಂದು ನಕ್ಕರು. ಹರಾಜಿನಲ್ಲಿ ಯಾರೂ ಹೆಚ್ಚಿಗೆ “ಬಿಡ್” ಮಾಡಲಿಲ್ಲ. ಗಾಂಧಿಯವರು “ಯಾಕೆ ಎಲ್ಲರೂ ಮೌನವಾಗಿದ್ದೀರಿ” ಎಂದರು ಆನಂತರ ‘ನೀವು ಕಲೆಗಾರರು, ನಿಮ್ಮಲ್ಲಿ ದುಡ್ಡಿಲ್ಲ’ ಎಂದರು. ಗಾಂಧಿಯವರು “ಈ ಚಿತ್ರದಲ್ಲಿರುವವನು ಮುದುಕನಾಗಿ ಕಾಣುವುದೇ ಇಲ್ಲ ಅಲ್ಲವೆ?” ಎಂದರು “ಒಳ್ಳೆ ಚಿತ್ರ ಹೋಗಿಬಿಡುತ್ತದೆ. ಬನ್ನಿ ಏ ಕೂಗಿ” ಎಂದರು ಒಂದು ಸಲ, ಎರಡು ಸಲ ಎಂದರು. ಆ ವೇಳೆಗೆ ಕೆಲವು ವಿದ್ಯಾರ್ಥಿಗಳು ಸಭೆಗೆ ನುಗ್ಗಿ ಬಂದರು ಸ್ವಯಂಸೇವಕರು ಅವರನ್ನು ತಡೆಯುತ್ತಿದ್ದರೂ ಗಾಂಧಿಯವರು “ನಿಮ್ಮಲ್ಲಿ ದುಡ್ಡಿರುವವರಿದ್ದರೆ ಬನ್ನಿ. ಹರಾಜಿನಲ್ಲಿ ಕೂಗಿ” ಎಂದರು. ಚಿತ್ರ ೩೫೦ ರೂ ಗಳಿಗೆ ಮಾರಾಟವಾಯಿತು.

---

೧ ಈ ಭಾಷಣ ತ್ರಿವೇಣಿಯ ೧೯೪೭ರ ಮಾರ್ಚ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಸತ್ಯಜೀವನವೇ ಕಲೆ

ಅನಂತರ ಗಾಂಧಿಯವರು ನೆರೆದಿದ್ದವರನ್ನು ಕುರಿತು ನಾಲ್ಕು ಮಾತುಗಳನ್ನಾಡಿದರು. "ನಾನು ಸಾಹಿತಿಯಲ್ಲ. ದಕ್ಷಿಣಭಾರತ ಸಾಹಿತ್ಯವನ್ನು ಕುರಿತು ನಾನು ಏನನ್ನೂ ಹೇಳಲು ಶಕ್ತನಲ್ಲ. ಯಾವ ಸಾಹಿತ್ಯವನ್ನೂ ಕುರಿತು ಹೇಳಲು ಶಕ್ತನಲ್ಲ. ನನಗೆ ಗುಜರಾತಿ ಸಾಹಿತ್ಯದ ವಿಚಾರ ಎಲ್ಲೊ ಸ್ವಲ್ಪ ಗೊತ್ತು. ನಿಮ್ಮಂತಹ ಸಾಹಿತಿಗಳ ಗುಂಪಿಗೆ ಸಾಹಿತ್ಯವನ್ನು ಕುರಿತು ಮಾತನಾಡುವ ಶಕ್ತಿ ನನಗೆ ಇಲ್ಲ. ಆದರೆ ಒಂದು ದೃಷ್ಟಿಯಿಂದ ನಾನೊಬ್ಬ ಕಲಾವಿದ. ಆ ದೃಷ್ಟಿ "ಕಲೆ ಎಂದರೆ ಜೀವನ ಕಲೆ" ಎಂಬ ದೃಷ್ಟಿ. ಸತ್ಯ ಮತ್ತು ಅಹಿಂಸೆಯ ಜೀವನ ಕಲೆ. ಆ ಕಲೆಯನ್ನು ನಾನು ಇಪ್ಪತ್ತು ವರ್ಷಗಳಿಂದ ಅಭ್ಯಸಿಸುತ್ತಿದ್ದೇನೆ. ನೀವು ಸೌಂದರ್ಯವನ್ನು ಸೃಷ್ಟಿಸಬೇಕು. ಆದರೆ ಅದು ಸತ್ಯ ಮತ್ತು ಅಹಿಂಸೆಯ ಆದರ್ಶಕ್ಕೆ ಅನುಗುಣವಾಗಿರಬೇಕು.

"ನಮ್ಮ ಮುಂದೆ ಇರುವ ಸಮಸ್ಯೆ ದೊಡ್ಡದು ನೀವು ಇಷ್ಟೊಂದು ಜನ ಕಲೆಗಾರರಿದ್ದೀರಿ. ಇಪ್ಪತ್ತು ವರ್ಷ ದುಡಿದಿದ್ದೀರಿ. ಆದರೂ ಸ್ವರಾಜ್ಯ ಇನ್ನೂ ಸಿದ್ಧಿಸಿಲ್ಲ. ಯಾಕೆ? ಇದರ ಕಾರಣವನ್ನು ನೀವು ಕಂಡು ಹಿಡಿಯಬೇಕು."

ಅದೇ ಸಾಯಂಕಾಲ ಕಲೆಗಾರರ ಸಮ್ಮೇಳನ ಜರುಗಿತು. ಶ್ರೀ. ಕಟ್ಟೂರಿ ವೆಂಕಟೇಶ್ವರರಾವ್ ಅಧ್ಯಕ್ಷರಾಗಿದ್ದರು. ಶ್ರೀ ಚುಮ್ಮುರರು "ಕಲೆ ಎಂದರೆ ಕಾಗದದ ಬೇರೆ ಬೇರೆ ಭಾಗಗಳಲ್ಲಿ ಬಗೆ ಬಗೆಯ ಬಣ್ಣಗಳನ್ನು ಹಚ್ಚುವುದಲ್ಲ. ಕಲೆ ದೈವಿಕ ಭಗವಂತನೊಂದಿಗೆ ಒಂದಾಗಲು ಇದು ಸಾಧನ ಭಗವಂತನೇ ಅತ್ಯುತ್ತಮನಾದ ಕಲೆಗಾರ. ಆತ ಯಾವಾಗಲೂ ಸೃಷ್ಟಿಯ ಆನಂದದಲ್ಲಿ ತೊಡಗಿರುತ್ತಾನೆ. ಕಲೆಗಾರನು ಯೋಗಿ. ಭಗವಂತನ ಅನ್ವೇಷಣದಲ್ಲಿ ಕಲೆಯೇ ಅವನ ತಪಸ್ಸು ಎಂದರು. ಶ್ರೀಮತಿ ಬುಚಿ ಕೃಷ್ಣಮ್ಮ ಅವರು "ಕಲೆಯನ್ನು ನಿತ್ಯಜೀವನಕ್ಕೆ ಅನ್ವಯಿಸುವುದನ್ನು ಭಾರತ ಸ್ತ್ರೀಯರು ಕಲಿಯಬೇಕು. ಜಪಾನಿನ ಸ್ತ್ರೀಯರನ್ನು ನೋಡಿ. ಅವರು ವಿರಾಮಕಾಲದಲ್ಲಿ ಮನೆಗಳನ್ನು ಅಲಂಕರಿಸುತ್ತಾರೆ. ಚಿತ್ರ ಕೆಲಸವನ್ನು ಸಹ ಮಾಡುತ್ತಾರೆ. ನಯಿತಾಲಿಮ್ (ಮೂಲ ಶಿಕ್ಷಣ ;ನ

ಸಹ ಕಲೆಗೆ ಸ್ಥಾನವನ್ನು ಕೊಟ್ಟಿದ್ದಾರೆ. ಯಾಕೆಂದರೆ ಮಗುವಿಗೆ ಚಿತ್ರ ಕೆಲಸದಲ್ಲಿ ಸ್ವಾಭಾವಿಕವಾದ ಪ್ರೀತಿ ಇದೆ" ಎಂದರು. ಶ್ರೀ ಕಟ್ಟೂರಿ ವೆಂಕಟರಾಯರು "ಕಲೆಯಿಂದ ಜೀವನ ಸುಸಂಸ್ಕೃತವಾಗುತ್ತದೆ ನಮ್ಮ ಅಲ್ಪವಾದ ಆಸೆಗಳು ನಾಶವಾಗಿ ಘನೋದ್ದೇಶಗಳು ಉಂಟಾಗುತ್ತವೆ" ಎಂದು ಹೇಳಿದರು.

ಕೊನೆಯಲ್ಲಿ ಕಲೆಗಾರರು ಭಾರತದ ಪುನರುಜ್ಜೀವನಕ್ಕೆ ಸ್ಫೂರ್ತಿದಾತರಾದ ಮಹಾತ್ಮಾಗಾಂಧಿಯವರ ಮಹಿಮೆಯನ್ನು ವರ್ಣಿಸಿದರು.

ಹರಿಜನ ಔದ್ಯೋಗಿಕ ಶಾಲೆ

ಮದರಾಸಿನಲ್ಲಿರುವಾಗ ಗಾಂಧಿಯವರು ಶ್ರೀ. ಅಳಗಪ್ಪ ಚೆಟ್ಟಿಯಾರ್ ಹರಿಜನ ಔದ್ಯೋಗಿಕ ಶಾಲೆಯ ತಳಹದಿಯನ್ನು (೧-೨-೪೬ ರಲ್ಲಿ) ಹಾಕಿದರು. ಹರಿಜನೋದ್ಧಾರದಲ್ಲಿ ಅದೊಂದು ಹೊಸ ಮಾರ್ಗ. ಇಲ್ಲಿ ಹರಿಜನರಿಗೆ ಕೈಗಾರಿಕೆ ಶಿಕ್ಷಣ ಕೊಡಲಾಗುತ್ತಿದೆ. ಈಗ ೫೦ ಜನ ಇದ್ದಾರೆ. ಈ ಸಂಖ್ಯೆಯನ್ನು ೩೦೦ಕ್ಕೆ ಏರಿಸಲಾಗುವುದು. ಹಳ್ಳಿಗಳಿಂದ ಹರಿಜನರನ್ನು ಆರಿಸಿ ಶಿಕ್ಷಣ ಕೊಟ್ಟು ಮತ್ತೆ ಅವರನ್ನು ತಮ್ಮ ಹಳ್ಳಿಗಳ ಉದ್ಧಾರಕ್ಕಾಗಿ ಹಳ್ಳಿಗಳಿಗೇ ಹಿಂದಿರುಗಿಸಲಾಗುವುದು. ಒಟ್ಟು ಯೋಜನೆಗೆ ಐದು ಲಕ್ಷ ರೂಪಾಯಿ ಬೇಕಾಗುವುದೆಂದೂ ಕಟ್ಟಡಗಳನ್ನು ಸರ್ ಅಳಗಪ್ಪ ಚೆಟ್ಟಿಯಾರರು ಕಟ್ಟಿಸಿಕೊಡುವರೆಂದೂ ಶ್ರೀ. ಥಕ್ಕರ್‌ಬಾಪಾ ಹೇಳಿದರು ಅನಂತರ ಗಾಂಧಿಯವರು ತಳಹದಿಯನ್ನು ಹಾಕಿದರು.

ಗಾಂಧಿಯವರು ಒಳ್ಳೆಯ ಚತುರನಾದ ಕೆಲಸಗಾರನಂತೆ ಮೊದಲು ಸಿಮೆಂಟನ್ನು ಹರಡಿ ಅನಂತರ ಇಟ್ಟಿಗೆಗಳನ್ನು ಸರಿಯಾಗಿ ಅಲ್ಲಾಡಿಸಿ ಒಂದು ಸಾಲನ್ನು ಇಟ್ಟರು. ಸಂದಿಗಳಿಗೆಲ್ಲಾ ಸಿಮೆಂಟನ್ನು ಚೆನ್ನಾಗಿ ಹಾಕಿ ಎರಡನೆಯ ಸಾಲನ್ನೂ ಇಟ್ಟರು. ಇಟ್ಟಿಗೆಗಳನ್ನೆಲ್ಲಾ ಕರಣೆಯಿಂದ ಹೊಡೆದು ಸರಿಮಾಡಿ ಅದರ ಮೇಲೆ ಪುಟ್ಟಿಯಲ್ಲಿಟ್ಟಿದ್ದ ಸಿಮೆಂಟನ್ನೆಲ್ಲಾ ಸರಿಯಾಗಿ ಸುರಿದರು. ಅನಂತರ ತಳಹದಿಗೆ ಕುಂಕುಮ ಪೂಜೆ ಮಾಡಿ ತಮ್ಮ ಸ್ಥಳಕ್ಕೆ ಬಂದರು. ಪಾಠಶಾಲೆಗೆ ಥಕ್ಕರ್‌ಬಾಪಾ ಔದ್ಯೋಗಿಕ ಶಾಲೆಯೆಂದು ಹೆಸರಿಡಲಾಯಿತು, ಮಹಾತ್ಮಾ ಗಾಂಧಿಯವರು ಹೀಗೆ ಹೇಳಿದರು.

ಹರಿಜನರನ್ನು ಕುರಿತು ನಾವು ಆಳವಾಗಿ ಆಲೋಚಿಸುವ ಕಾಲ ಈಗ ಬಂದಿದೆ. ಅಳಗಪ್ಪ ಚೆಟ್ಟಿಯಾರರು ತಮ್ಮ ಐಶ್ವರ್ಯ ಬಡವರದೆಂದು ಅರಿತಿದ್ದಾರೆ. ಆದರೆ ಅಳಗಪ್ಪ ಚೆಟ್ಟಿಯಾರರ ಪೂರ್ಣ ಐಶ್ವರ್ಯವಾದರೂ ಹರಿಜನರ ಸೇವೆಗೆ ಸಾಲದು. ಅಸ್ಪೃಶ್ಯತೆಯಿಂದ ಹಿಂದು ಸಮಾಜ ದೊಡ್ಡ ಪಾಪಕ್ಕೆ ಒಳಗಾಗುತ್ತಿದೆ. ಹರಿಜನರ ಸೇವೆಯೇ ಅದಕ್ಕೆ ಆ ಪ್ರಾಯಶ್ಚಿತ್ತ

ಈ ಪ್ರಶ್ನೆಯ ಮತ್ತೊಂದು ಭಾಗವನ್ನೂ ನೋಡಿ; ಜನರೆಲ್ಲ ಸಮಾನರು. ಆದರೆ ಹರಿಜನರನ್ನು ಅಸ್ಪೃಶ್ಯರನ್ನಾಗಿ ಮಾಡಿರುವುದರಿಂದ ಉತ್ತಮರೂ ಸಹ ಅಸ್ಪೃಶ್ಯರಾಗುತ್ತಿದ್ದಾರೆ. ಅಣ್ಣತಮ್ಮಂದಿರನ್ನು ನೆರೆಹೊರೆಯವರನ್ನೂ ಯಾರು ಅಸ್ಪೃಶ್ಯರಾಗಿ ಕಾಣುತ್ತಾರೆಯೋ ಅವರೇ ನಿಜವಾದ ಅಸ್ಪೃಶ್ಯರು. ಧನಿಕರಾದವರು, ಬಡವರ ಉದ್ಧಾರಕ್ಕೆ ಹಣ ಕೊಡಲೇಬೇಕು. ಧನಿಕರು ಧನದ ವಿಶ್ವಸ್ತರು ಮಾತ್ರ. ಈ ದೃಷ್ಟಿಯಿಂದ ಅಳಗಪ್ಪ ಚೆಟ್ಟಿಯಾರರನ್ನು ವಂದಿಸುತ್ತೇನೆ. ಹರಿಜನರ ವಿಷಯದಲ್ಲಿ ನಿಮ್ಮ ಹೃದಯವೇ ಬದಲಾಗಬೇಕು. ಹೃದಯ ಪರಿವರ್ತನೆಯಾಗದೆ ಬರಿಯ ಹಣದಿಂದಲೂ ಹೆಚ್ಚು ಪ್ರಯೋಜನವಿಲ್ಲ.

ಈ ಸಂಸ್ಥೆಯಲ್ಲಿ ೩೦೦ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣ ಕೊಡಲು ಏರ್ಪಡಿಸಿರುವುದು ಬಹಳ ಒಳ್ಳೆಯದು. ಈ ಶಿಕ್ಷಣ ಈ ಪ್ರಾಂತ್ಯಕ್ಕೆ ಮಾತ್ರವೇ ಅಲ್ಲ. ಅಖಿಲ ಭಾರತಕ್ಕೂ ಮೇಲುಪಂಗ್ತಿಯಾಗಬೇಕು. ಇತರ ಪ್ರಾಂತ್ಯಗಳವರೂ ಇಲ್ಲಿ ಬಂದು ಕಲಿತುಕೊಂಡು ಹೋಗಬೇಕು. ಇಲ್ಲಿ ಸಿದ್ಧರಾದ ವಿದ್ಯಾರ್ಥಿಗಳು ಉತ್ತಮ ಹರಿಜನ ಸೇವಕರಾಗುವುದರಲ್ಲಿಯೂ ಸಂದೇಹವಿಲ್ಲ.

ಶ್ರದ್ಧೆಯಿಂದಲೂ ಸತ್ಯದಿಂದಲೂ ನಡೆಸುವ ಒಳ್ಳೆಯ ಕಾರ್ಯಗಳಿಗೆ ಬೇಕಾದ ಹಣ ಯಾವಾಗಲೂ ದೊರೆತೇ ದೊರೆಯುವುದು ದೇವರು ಒಳ್ಳೆಯ ಕಾರ್ಯವನ್ನು ಕೈಬಿಡುವುದಿಲ್ಲ. ಅಳಗಪ್ಪ ಚೆಟ್ಟಿಯಾರರ ಮುಖಾಂತರ ದೇವರು ಸಹಾಯ ಕಳುಹಿಸಿಲ್ಲವೆ? ನಾನು ಬಂದುದರಿಂದ ಈ ಸಂಸ್ಥೆಗೆ ಸ್ವಲ್ಪ ಪ್ರೋತ್ಸಾಹವುಂಟಾದುದಕ್ಕಾಗಿ ನಾನು ಆನಂದಪಡುತ್ತೇನೆ.

ಮಾತೃಭಾಷೆ

ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕು ಈ ಸಂಸ್ಥೆಯಲ್ಲಿ ಎಲ್ಲಾ ಶಿಕ್ಷಣವನ್ನು ನೀವು ತಮಿಳಿನಲ್ಲಿ ಕೊಡುತ್ತಿರುವುದು ಸಂತೋಷ. ಹಿಂದುಸ್ಥಾನಿಯನ್ನೂ ಕಲಿಸಬೇಕು. ಕಾರ್ಯಕ್ರಮವೆಲ್ಲಾ ತಮಿಳಿನಲ್ಲಿ ನಡೆಯುತ್ತಿರುವುದು ಸಂತೋಷ ಕಾರ್ಯಕ್ರಮವನ್ನೂ ತಮಿಳು ಅಥವಾ ಹಿಂದುಸ್ಥಾನಿಯಲ್ಲಿ ಪ್ರಕಟಿಸಿದ್ದರೆ ಇನ್ನೂ ಚೆನ್ನಾಗುತ್ತಿದ್ದಿತು ಹರಿಜನ ಔದ್ಯೋಗಿಕ ಶಾಲೆಯ ಉಪಾಧ್ಯಾಯರು ಮಾತೃವನ್ನು ಹೇಗೆ ಮರೆಯಕೂಡದೋ ಹಾಗೆಯೇ ಮಾತೃಭಾಷೆಯನ್ನೂ ಮರೆಯಕೂಡದು. ಹಾಗೆಯೇ ಮಾತೃಭೂಮಿಯನ್ನೂ ಮರೆಯಕೂಡದು ನಿಮಗೆ ಸಾಧ್ಯವಾದಷ್ಟು ಭಾಷೆಗಳನ್ನು ನೀವು ಕಲಿಯಬೇಕು. ಆದರೆ ಭಾರತದ ಐಕ್ಯತೆಗೆ ಸಾಧಕವಾದ ಹಿಂದುಸ್ಥಾನಿಯನ್ನು ಕಲಿಯಲೇಬೇಕು.

ಈ ಔದ್ಯೋಗಿಕ ಶಾಲೆಗೆ 'ಥಕ್ಕರ್ ಬಾಪ್'ರ ಹೆಸರಿಡುವುದು ನ್ಯಾಯವಾಗಿದೆ. ಬಾಪರ ಆಯುಷ್ಯವೆಲ್ಲ ಹರಿಜನರ ಮತ್ತು ಆದಿವಾಸಿಗಳ ಸೇವೆಗೆ ಮೀಸಲಾಗಿದೆ. ಇದಕ್ಕೆ ಬಾಪಾ ವಿದ್ಯಾಲಯ ಎಂದರೂ ಸಾಕು. ಥಕ್ಕರ್ ಬಾಪರಿಗಿಂತ ಹರಿಜನರಿಗೆ ಹೆಚ್ಚಾದ ತಂದೆ ಯಾರೂ ಇಲ್ಲ. ಈ ಸಂಸ್ಥೆಯಿಂದ ದೇಶಕ್ಕೆ ಉಪಕಾರವಾಗಲಿ. ಇದರ ಭವಿಷ್ಯವೂ ಉಜ್ವಲವಾಗಲಿ. ಹರಿಜನರ ವಿಷಯದಲ್ಲಿ ಉತ್ತಮರ ಹೃದಯಪರಿವರ್ತನೆಯಾಗಿ ಹರಿಜನರು ಎಲ್ಲರೊಂದಿಗೆ ಸಮಾನರಾಗಿ ಬಾಳುವಂತಾಗಲಿ. ವಿದ್ಯಾಲಯ ದಿನದಿನಕ್ಕೆ ಮುಂದಲ ಹೆಜ್ಜೆ ಇಡುತ್ತಾ ಹೋಗಲಿ. ಇಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ನಿಜವಾಗಿ ದೇವರ ಮಕ್ಕಳಾಗಿ ಸತ್ಯದಿಂದ ದೇಶವನ್ನು ಸೇವಿಸಲಿ."

× × × ×

ಸಿಂಧದ ವರ್ತಕರು ಗಾಂಧಿಯವರನ್ನು ಕಂಡು ಅವರಿಗೆ ಹತ್ತು ಸಾವಿರದ ನಿಧಿಯನ್ನು ಅರ್ಪಿಸಿದರು. ಗಾಂಧಿಯವರು ನಗುತ್ತಾ "ಇಷ್ಟೇಯೆ. ನೀವು ಎಲ್ಲೆಲ್ಲಿಯೂ ಒಳ್ಳೆ ವ್ಯಾಪಾರದಲ್ಲಿ ತೊಡಗಿರುವುದು ನನಗೆ ಕಾಣುತ್ತಿದೆ. ನಿಧಿ ಇನ್ನೂ ಹೆಚ್ಚಬೇಕು" ಎಂದರು. ಒಬ್ಬ ವರ್ತಕರು "ನಾವು ಸಿಂಧ್‌ನಲ್ಲಿ ಪಂಡಿತ್ ನೆಹ್ರುಗಳಿಗೆ ಆಗಲೇ ಐವತ್ತು ಸಾವಿರ ರೂಪಾಯಿ ಕೊಟ್ಟಿದ್ದೇವೆ" ಎಂದರು. ಗಾಂಧಿಯವರು "ಅಂದ ಮೇಲೆ ನನಗೂ

ಅಷ್ಟಾದರೂ ಕೊಡಬೇಕಲ್ಲ” ಎಂದರು. ಒಬ್ಬ ವರ್ತಕರು “ಆಗಲಿ. ತಾವು ಸಿಂಧಗೆ ಬಂದರೆ ಕೊಡುತ್ತೇವೆ” ಎಂದರು.

ಆಫ್ರಿಕದ ಸಿಪಾಯಿಗಳ ಒಂದು ಗುಂಪು ಗಾಂಧಿಯವರ ದರ್ಶನಕ್ಕಾಗಿ ಕಾಯುತ್ತಿದ್ದಿತು. ಅವರನ್ನು ಮಾತನಾಡಿಸಿ ನೀವು ಆಫ್ರಿಕದ ಯಾವ ಭಾಗದಿಂದ ಬಂದಿದ್ದೀರಿ ಎಂದು ಕೇಳಿದರು. ಅವರು ಪಶ್ಚಿಮ ಆಫ್ರಿಕದಿಂದ ಎಂದರು. ಗಾಂಧಿಯವರು ನಾನು ಅಲ್ಲಿ ಇರಲಿಲ್ಲ. ಇಲ್ಲಿ ನೀವು ಏನು ಮಾಡುತ್ತೀರಿ ಎಂದು ಕೇಳಿದರು. ಸಿಪಾಯಿಗಳು, ನಾವು ಸೈನ್ಯದಲ್ಲಿದ್ದೇವೆ ಎಂದರು. ಗಾಂಧಿಯವರು ಅಚ್ಛ ಎಂದು ಹೇಳಿ ಕೈಮುಗಿದು ಅವರನ್ನು ಬೀಳ್ಕೊಟ್ಟರು.

ಆಂಧ್ರ ಮಹಿಳಾ ಸಭೆಯ ಶಂಕುಸ್ಥಾಪನೆ ಮಾಡುತ್ತಾ ಗಾಂಧಿಯವರು ಹೀಗೆ ಹೇಳಿದರು. “ಈ ಕಟ್ಟಡವನ್ನು ಕಟ್ಟುವ ಹಣವನ್ನು ನೀವು ಕೂಡಿಸಿದ್ದೀರಿ. ಆದರೆ ಇಲ್ಲಿ ಜೀವವನ್ನು ನೀವು ತುಂಬಬೇಕು. ಆಗ ಮಾತ್ರ ನಿಮ್ಮ ಕಾರ್ಯ ಪೂರ್ಣವಾಗುತ್ತದೆ. ನಿಮ್ಮ ಸಂಘದ ವರದಿಯನ್ನು ಕೇಳಿದೆ. ಸ್ತ್ರೀಯರ ಉದ್ಧಾರಕಾರ್ಯಕ್ಕೆ ತುಂಬ ಅನುಭವ ಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ.

ಆಂಧ್ರ ಪ್ರಾಂತ ಮತ್ತು ಮೈಸೂರಿನ ಕಸ್ತೂರಿಬಾ ಕೆಲಸಗಾರರ ಸಭೆಯಲ್ಲಿ ಗಾಂಧಿ ಹೀಗೆ ಹೇಳಿದರು. “ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರು ವಹಿಸಿದ ಪಾತ್ರ ಎಲ್ಲರಿಗೂ ಗೊತ್ತಿದೆ ಆದರೆ ಕಸ್ತೂರಿಬಾ ನಿಧಿಗೆ ಸಂಬಂಧಿಸಿದ ಕಾರ್ಯಕ್ರಮ ಬೇರೆ ಬಗೆಯದು. ಇಲ್ಲಿ ಹಳ್ಳಿಗಳಲ್ಲಿ ಕೆಲಸ ಮಾಡಲು ತಯಾರಿ ಕೊಡಲ್ಪಡುತ್ತಿದೆ. ಹಳ್ಳಿಯಲ್ಲಿ ಕಸ್ತೂರಿಬಾ, ಕೆಲಸಗಾರರ ಸಂಖೆ ಹೆಚ್ಚಿದಾಗ ಮಾತ್ರ ನನಗೆ ಸಮಾಧಾನವಾಗುವುದು ಅವರು ಹಳ್ಳಿಗಳಲ್ಲಿ ನಿರಕ್ಷತೆಯನ್ನು ಹೋಗಲಾಡಿಸಿ, ಹಳ್ಳಿ ಮಹಿಳೆಯರ ಸೇವೆ ಮಾಡಬೇಕು. ಆಗ ಮಾತ್ರ ನಮ್ಮ ಸ್ವರಾಜ್ಯ ರಾಮರಾಜ್ಯವಾಗುವುದು.

೧೪

ಸಾಮುದಾರ ಶಾಸ್ತ್ರಿಗಳೊಡನೆ ಭೇಟಿ

ಗಾಂಧಿಯವರು ಎಂತಹ ರಾಜಕೀಯ ಕಾರ್ಯದ ಮಧ್ಯದಲ್ಲಿಯೂ ಸ್ನೇಹ, ಪ್ರೀತಿ ಮಮತೆಗಳನ್ನು ಮರೆಯುವವರಲ್ಲ. ಗುರುತಿರುವವರಲ್ಲಿ, ಅವರು ತೋರಿಸುವ ವಾತ್ಸಲ್ಯವನ್ನು ನೋಡಿದರೆ "ಮಹಾತ್ಮತನ"ವೂ ರಾಜತಂತ್ರವೂ ಅವರ ತಲೆಯ ಮೇಲೆ ಸವಾರಿ ಮಾಡುತ್ತಿಲ್ಲವೆಂಬುದು ಗೊತ್ತಾಗುವುದು.

ಶಾಸ್ತ್ರಿಗಳು ಖಾಯಿಲೆ ಇದ್ದುದನ್ನು ಕೇಳಿ ಗಾಂಧಿಯವರು ಅವರನ್ನು ನೋಡಲು ಎರಡು ಸಲ ಹೋದರು. ಮೊದಲನೆಯ ಭೇಟಿಯು ಜನವರಿ ೨೨ರ ಸಂಜೆ ನಡೆಯಿತು. ಶಾಸ್ತ್ರಿಗಳಿಗೂ ಗಾಂಧಿಯವರಿಗೂ ಬಹಳ ಅಭಿಪ್ರಾಯ ಭೇದವಿದ್ದರೂ ಇಬ್ಬರದೂ ಖಂಡಿತ ಸ್ವಭಾವವೇ ಆದರೂ ಅವರ ಮೈತ್ರಿ ಗಾಢವಾಗಿತ್ತು. ಗಾಂಧಿಯವರು ಹಾಗೆ ಎಲ್ಲರನ್ನೂ ತಮ್ಮ ಸೌಜನ್ಯದಲ್ಲಿ ಸಿಕ್ಕಿಸಿಕೊಂಡು ಬಿಡುತ್ತಿದ್ದರು.

'ಗಾಂಧಿಜಿ ಮದರಾಸಿಗೆ ಬರುವ ವರೆಗೆ ತಾನು ಬದುಕುವುದಿಲ್ಲವೆಂದೇ ಒಂದು ಸಲ ಶಾಸ್ತ್ರಿಗಳು ನೆನೆದಿದ್ದರು.' ಗಾಂಧಿಯವರನ್ನು ಪ್ರತ್ಯಕ್ಷವಾಗಿ ಕಾಣುವ ಆನಂದ ಅವರನ್ನು ಮೈಮರೆವಂತೆ ಮಾಡಿತ್ತು. ಗಾಂಧಿಜಿ ಒಳಹೊಕ್ಕು ಹಾಸಿಗೆಯ ಸಮೀಪಕ್ಕೆ ಸಾಗಿದೊಡನೆಯೇ ಒರಗಿಕೊಂಡಿದ್ದ ಶಾಸ್ತ್ರಿಗಳು ನೆಟ್ಟಗೆ ಎದ್ದು ಕುಳಿತರು "ಪ್ರಿಯ ತಮ್ಮಾ ನಿನ್ನನ್ನು ಆಲಿಂಗಿಸುವಷ್ಟು ಹತ್ತಿರಕ್ಕೆ ಬರಬೇಕೆಂದು ನನ್ನ ಆತುರ." ಎಂದು ಗದ್ಗದ ಸ್ವರದಿಂದ ಹೇಳಿದರು.

ಗಾಂಧಿಜಿ ಅವರ ಕೈಯನ್ನು ಹಿಡಿದುಕೊಂಡು ಸಂತೈಸಿದರು. "ನೀವು ನನ್ನನ್ನು ಆಲಿಂಗಿಸಿಕೊಂಡು ಆಯಾಸಪಡಬಾರದು" ಎಂದರು ಆ ಮಹನೀಯನಾದ ರೋಗಿ ಗಾಂಧಿಜಿಯ ಕೈಯನ್ನು ಮಾತ್ರ ತನ್ನ ಎರಡೂ ಕೈಗಳಿಂದ ಹಿಡಿದುಕೊಂಡು ಮತ್ತೆ ದಿಂಬಿನ ಮೇಲೆ ಒರಗಿಕೊಂಡನು.

ಅವರು ಬಹಳ ಆಯಾಸದಿಂದ ಹೇಳಲು ಪ್ರಾರಂಭಿಸಿದರು. "ನಿಮಗೆ ಒಂದು ವಿಷಯವನ್ನು ಹೇಳಬೇಕೆಂದಿದ್ದೆ." (ಮಾತು ಮಾತಿಗೆ ಅವರ ಆಯಾಸ ಹೆಚ್ಚುತ್ತಿತ್ತು. ಕಣ್ಣು ಒದ್ದೆಯಾಗುತ್ತಿದ್ದಿತು.) "ಶಾಂತಿಯು ಮತ್ತೊಂದು ಸಂಧಿ ಕಳೆದುಹೋಯಿತು. ಅವರು ಮತ್ತೊಂದು ಶಾಂತಿ ಸಮ್ಮೇಳನ ನಡೆಸುತ್ತಿದ್ದಾರೆ. ಆದರೆ ಬಾಪು, ನಿಮ್ಮನ್ನು ಬಿಟ್ಟರೆ ಮಾನವತೆಯ ಹೆಸರಿನಲ್ಲಿ ಮಾತನಾಡಬಲ್ಲವರು ಯಾರು? ಭಾರತ ತನ್ನ ಕರ್ತವ್ಯವನ್ನು ಮಾಡಲಿಲ್ಲವೆಂದು ನನಗೆ ಅನ್ನಿಸುತ್ತಿದೆ." (ಗಾಂಧಿಯವರು ಸೆರೆಮನೆಯಿಂದ ಹೊರಬಿದ್ದಂದಿನಿಂದ ಅವರು ಸ್ಯಾನ್ ಫ್ರಾನ್ಸಿಸ್ಕೊ ಸಮ್ಮೇಳನಕ್ಕೆ ಹೋಗಬೇಕೆಂಬ ಬೇಡಿಕೆಯ ಪತ್ರವನ್ನು ಶಾಸ್ತ್ರಿಗಳು ಬರೆಯುತ್ತಲೇ ಇದ್ದರು.) "ಅವರು ಆಹ್ವಾನಿಸದಿದ್ದರೂ ಸತ್ಯ ಅಹಿಂಸೆಗಳ ಆಚಾರ್ಯರಾಗಿ ನೀವು ಅಲ್ಲಿ ಉಪಸ್ಥಿತರಾಗಿರಬೇಕು. ನಿಮ್ಮ ಸಾನ್ನಿಧ್ಯವೇ ಅದ್ಭುತ ಪರಿಣಾಮವನ್ನುಂಟುಮಾಡುವುದು. ನೀವು ಶಿಷ್ಟಾಚಾರದ ಮೇಲೆ ನಿಲ್ಲಬಾರದು." ಎಂದರು.

ಗಾಂಧಿಜಿ:— "ತಾವು ಇದ್ದ ಸ್ಥಳದಿಂದಲೇ ತಮ್ಮ ಅಹಿಂಸೆ ಪರಿಣಾಮಕಾರಿಯಾಗಬೇಕು ಎಂಬುದು ತಮ್ಮ ಮತ. ಪ್ರಬಲ ರಾಷ್ಟ್ರಗಳು ತಾವಾಗಿಯೇ ಬಯಸಿದ ಹೊರತು ಅಲ್ಲಿ ಹೋಗುವದರಿಂದ ಫಲವಿಲ್ಲ" ಎಂದರು.

ಆ ಮೇಲೆ, ಬಂದಿದ್ದ ಪಾರ್ಲಿಮೆಂಟರಿ ಶಿಷ್ಟಮಂಡಳವನ್ನು ಕುರಿತು ಆದರಿಂದ ಏನೂ ಪ್ರಯೋಜನವಾಗದೆಂದು ನಮಗೆ ಗೊತ್ತು. ಕೂಲಿಕಾರರನಾಗಲಿ ಸಂಪ್ರದಾಯವಾದಿಯಾಗಲಿ ಹಿಂದುಸ್ಥಾನದ ಮಟ್ಟಿಗೆ ಅವರೆಲ್ಲ ಒಂದೇ" ಗಾಂಧಿಜಿ ಒಪ್ಪಿದರು. "ಆದರೂ ನಾವು ನಂಬಬೇಕು" ಎಂದರು.

'ಬಂಗಾಳದ ಕೂಲಿ ಗವರ್ನರ್ ಬರೋಸ್‌ರಲ್ಲಿ' ಒಂದು ಹಾಸ್ಯಪ್ರವೃತ್ತಿ ಕಾಣುತ್ತಿದೆ. ಪತ್ರಿಕಾ ಪ್ರತಿನಿಧಿಗಳು "ನೀವು ಪ್ರಚಾರಿಸುವ ಹೊಸ ಧೋರಣೆಯೇನು?" ಎಂದು ಕಾಡಿದಾಗ ಆತ "ಮಹಾಶಯರೇ, ನಾನು ಹೊಸದನ್ನು ಮಾಡಹೊರಟಿಲ್ಲ. ಹಳೆಯದನ್ನೇ ನೆರವೇರಿಸುವೆ" ಎಂದರು. ಇದು ಅವರೆಲ್ಲರಿಗೂ ಅನ್ವಯಿಸುತ್ತದೆ. ಹೀಗೆ ಹೇಳಿ ಶಾಸ್ತ್ರಿಗಳು ಮುಂದೇನು?' ಎಂದರು.

ಗಾಂಧಿಜಿ "ಯಾರಿಗೆ ಗೊತ್ತು? ಬ್ರಿಟಿಷ್ ಸರ್ಕಾರಕ್ಕೇ ತಿಳಿಯದು ಎಂದು ನನ್ನ ಭಾವನೆ. ಆದರೆ ರಾಜಕಾರಣವನ್ನು ನಿಮ್ಮೊಡನೆ ಚರ್ಚಿಸಲು ನಾನಿಲ್ಲಿ ಬರಲಿಲ್ಲವಲ್ಲ?"

"ಹಾಗೋ ನಾನು ಅದಕ್ಕೆ ಅರ್ಹನಲ್ಲವೆಂದು ನಿಮ್ಮ ಅಭಿಪ್ರಾಯವೊ?" ಎಂದರು ಶಾಸ್ತ್ರಿಗಳು.

ಹಾಗಲ್ಲ. ಆದರೆ ನಿಮ್ಮ ಇಂದಿನ ಅನಾರೋಗ್ಯ ಸ್ಥಿತಿಯಲ್ಲಿ ನೀವು ಖಂಡಿತ ಅದಕ್ಕೆ ಅರ್ಹರಲ್ಲ.

ಅನಂತರ ಅವರು ಜಾತೀಯ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಇನ್ನೂ ಕೆಲವು ಹಾಸ್ಯ ನಗೆಗಳನ್ನು ಚಿಮ್ಮಿಸಿದರು. ಅನಂತರ ಶಾಸ್ತ್ರಿಗಳು ಪ್ಯಾರಿಲಾಲ್ ಸುಶೀಲನಯ್ಯರ್‌ರನ್ನೂ ಕರೆದು ಕೆಲವು ಮೃದು ನುಡಿಗಳನ್ನು ಹೇಳಿ ಬೀಳ್ಕೊಟ್ಟರು. ಅವರು ಶ್ರೀ ಮಣಿಲಾಲ್ ಗಾಂಧಿಯವರೊಂದಿಗೆ ದಕ್ಷಿಣ ಆಫ್ರಿಕ ಮತ್ತು ಜನರಲ್ ಸ್ಮಟ್ಸ್‌ರನ್ನು ಕುರಿತು ಕೆಲವು ಮಾತುಗಳನ್ನಾಡಿದರು. ವೈದ್ಯರು ಒಪ್ಪಿದರೆ ಮಧುರೆಯಿಂದ ಹಿಂದಿರುಗುವ ದಾರಿಯಲ್ಲಿ ಮತ್ತೆ ತಮ್ಮನ್ನು ನೋಡಬೇಕೆಂದು ಗಾಂಧಿಯವರಿಂದ ವಾಗ್ದಾನ ಪಡೆದರು.

ವೈದ್ಯರ ವರದಿ ತೃಪ್ತಿಕರವಾಗಿದ್ದುದರಿಂದ ಗಾಂಧಿಜಿ ತಾ. ೩೦ನೆಯ ರಾತ್ರಿ ಮತ್ತೆ ಅವರಲ್ಲಿಗೆ ಹೋದರು. ಈ ಸಲ ಅವರೊಂದಿಗೆ ಶ್ರೀ. ಸಿ. ರಾಜಗೋಪಾಲಾಚಾರಿ, ಥಕ್ಕರ್ ಬಾಪಾ, ರಾಜಕುಮಾರಿ ಅಮೃತ ಕೌರ, ಅಗಾಥಾ ಹ್ಯಾರಿಸನ್, ಪ್ಯಾರಿಲಾಲ್ ಮತ್ತು ಸುಶೀಲಾ ನಾಯರರಿದ್ದರು.

ಆಗ ನಡೆದ ಬಹುಭಾಗ ಮಾತುಕತೆ ರಾಮಾಯಣಕ್ಕೆ ಸಂಬಂಧಿಸಿದುದು. ಶಾಸ್ತ್ರಿಗಳು ಹೀಗೆ ಪ್ರಾರಂಭಿಸಿದರು

"ನೀವು ನೂರು ಬಗೆಯಲ್ಲಿ ನನ್ನನ್ನು ಧನ್ಯನನ್ನಾಗಿ ಮಾಡಿದಿರಿ"

ಗಾಂಧಿಯವರು "ಏನು ಹುಚ್ಚು ಶಾಸ್ತ್ರಿಗಳೇ?" ಎಂದರು.

ಶಾಸ್ತ್ರಿಗಳು "ನನಗೆ ತಿಳಿಯದೇ? ಇಂದು ಜಗತ್ತಿನಲ್ಲಿರುವವರಲ್ಲಿ ನೀವೇ ಎಲ್ಲರಿಗಿಂತ ದೊಡ್ಡ ಮಹಾಪುರುಷರೆಂಬುದು." ಹೀಗೆ ಹೇಳಿ ಶಾಸ್ತ್ರಿಗಳು ತಮ್ಮ ಮೊಮ್ಮಕ್ಕಳನ್ನು ಗಾಂಧಿಯವರಿಗೆ ಪರಿಚಯ ಮಾಡಿಕೊಟ್ಟರು.

ನಿಮ್ಮ ಕಟಾಕ್ಷ ಅವರ ಮೇಲೆ ಬೀಳಲಿ ಎಂದರು. ಅನಂತರ ವಿನೋದವಾಗಿ ರಾಮಾಯಣದ ಈ ಶ್ಲೋಕವನ್ನು ಉದಹರಿಸಿದರು.

ಯಶ್ಚ ರಾಮಂ ನ ಪಶ್ಯೇತ್ತು ಯಂಚ ರಾಮೋ ನಪಶ್ಯತಿ
ನಿಂದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ

—ಅಯೋಧ್ಯಾಕಾಂಡ

ಅನಂತರ ತಾನು ಕೆಲವು ದಿನದ ಹಿಂದೆ ಹದಿನೈದೇ ನಿಮಿಷಗಳಲ್ಲಿ ಅತ್ಯಂತ ಸುಂದರವಾದ ಒಂದು ನಿಬಂಧವನ್ನು ಬರೆದುದಾಗಿ ಹೇಳಿದರು. ಆ ಸನ್ನಿವೇಶ ಇದು. ರಾವಣನ ಮರಣಾನಂತರ ಹನುಮಂತನು ಅಶೋಕ ವನದಲ್ಲಿದ್ದ ಸೀತೆಯನ್ನು ಸಮೀಪಿಸಿ "ತಾಯೇ ಆಜ್ಞಾಪಿಸು ನಿನ್ನನ್ನು ಹಿಂಸಿಸುತ್ತಿದ್ದ ರಾಕ್ಷಸಿಯರನ್ನೆಲ್ಲಾ ತೀಕ್ಷ್ಣವಾಗಿ ದಂಡಿಸುವೆನು" ಎಂದು ಹೇಳುತ್ತಾನೆ. ಆಗ ಆ ದೇವಿಯು ಮುಖ ತಿರುಗಿಸಿ

ಸಮಯೋ ರಕ್ಷಿತವ್ಯಸ್ತು ಸಂತಶ್ಚಾರಿತ್ರ ಭೂಷಣಾಃ
ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣ ಮಥಾಪಿವಾ
ಕಾರ್ಯಂಕಾರುಣ್ಯ ಮಾರ್ಗೇಣ ನ ಕಶ್ಚಿನ್ನಾಪರಾಧ್ಯತಿ

ಬೇಡ. ಆ ಬಡಪಾಯಿಗಳು ಏನು ತಪ್ಪು ಮಾಡಿದ್ದಾರೆ? ಅವರೆಲ್ಲಾ ತಮ್ಮ ಒಡೆಯನ ದಾಸಿಯರು. ಹೊಟ್ಟೆಪಾಡಿಗಾಗಿ ಅವನ ಆಜ್ಞೆಯಂತೆ ನಡೆದಿದ್ದಾರೆ. ಅವರನ್ನು ಬಿಟ್ಟುಬಿಡು. ಕ್ಷಮೆಯೇ ಜೀವನವನ್ನು ಜೀವನಾರ್ಹವಾಗಿ ಮಾಡುವುದು. ಕ್ಷಮೆ ದಿವ್ಯ ಗುಣ. ಕ್ಷಮೆ ಗುಣಗಳಲ್ಲೆಲ್ಲಾ ಉದಾತ್ತವಾದುದು. ನಾನು ಅವರನ್ನು ಕ್ಷಮಿಸಿದ್ದೇನೆ. ಅಪರಾಧ ಮಾಡದವರು ಯಾರೂ ಇಲ್ಲ. ಅಂದ ಮೇಲೆ ಕ್ಷಮೆ ಯಾರಿಗೆ ತಾನೆ ಬೇಕಿಲ್ಲ"

ಶಾಸ್ತ್ರಿಗಳು "ನಾನು ಮನೆಗೆ ಹೋದ ಕೂಡಲೆ ಶ್ರೀ ಜಗದೀಶನ್ ನನ್ನಲ್ಲಿ ಬಂದರೆ ಅದನ್ನು ಬರೆದು ನಿಮಗ್ಗೆ ಕಳುಹಿಸುತ್ತೇನೆ. ನೀವು ಅದನ್ನು ಪ್ಯಾರೆಲಾಲರಿಂದ ಓದಿಸಿ ಕೇಳುವಿರಾ?' ಎಂದರು.

ಗಾಂಧಿಯವರು ತಾವೇ ಓದುವುದಾಗಿ ವಾಗ್ದಾನ ಮಾಡಿದರು. "ನಾಳೆ ಜಗದೀಶನ್‌ರಿಗೆ ಹೇಳಿ ಬರೆಸಿ ಕಳುಹಿಸಿ ನಾನು ಮಧುರೆಯ ಮಾರ್ಗದಲ್ಲಿ ಅದನ್ನು ಓದುತ್ತೇನೆ" ಎಂದರು.

ಶಾಸ್ತ್ರಿಗಳು ರಾಮಾಯಣವೇ ರಾಮಾಯಣವಾಗಿ ಬಿಟ್ಟರು. ರಾಮಾಯಣ ಅದ್ವಿತೀಯವಾದುದು. ಇದನ್ನು ಇನ್ನಷ್ಟು ಜನ ಓದುತ್ತಿಲ್ಲವಲ್ಲ. ಹಿಂದಿನಂತೆ ಇಂದು ಇದರ ಆದರ್ಶ, ಜನರನ್ನು ಸ್ಫೂರ್ತಿಗೊಳಿಸುತ್ತಿಲ್ಲವಲ್ಲ ಎಂದರು. ತನ್ನ ಸತೀತ್ವದ ತೇಜಸ್ಸು ಮತ್ತು ತಪಸ್ಸಿನಿಂದ ರಾವಣನನ್ನು ಸೀತೆ ಹಿಂದಟ್ಟಿದ ನಂತರ, ರಾಕ್ಷಸಿಯರು ಅವಳ ಬಳಿ ಬಂದು "ನಿನಗೆ ವ್ಯವಹಾರ ಜ್ಞಾನವಿಲ್ಲ. ಇದ್ದಿದ್ದರೆ ನೀನು ರಾವಣನ ಔದಾರ್ಯವನ್ನು ತಿರಸ್ಕರಿಸುತ್ತಿರಲಿಲ್ಲ" ಎಂದರು. ದೇವಿಯು "ನಿಮ್ಮ ನಗರ ಸುಂದರವಾಗಿದೆ. ಸೌಧಗಳು ಅದ್ಭುತವಾಗಿವೆ. ಸಂಸಾರದ ಸಕಲ ಶೋಭೆಗಳೂ ಇಲ್ಲಿ ಕಾಣುತ್ತಿವೆ. ಆದರೆ ಈ ಅನ್ಯಾಯವನ್ನು ಮನಗಂಡು ರಾವಣನ ಮುಂದೆ ಸತ್ಯವನ್ನಾಡಬಲ್ಲವರು ಇಬ್ಬರು ಮೂವರಾದರೂ ಇಲ್ಲವೆ?"

ಶಾಸ್ತ್ರಿಗಳ ಹೃದಯ ತುಂಬಿ ಬಂತು, "ಇದೀಗ ನಾವು ನಮ್ಮ ಗೆಳೆಯರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯ. ಆ ಕರ್ತವ್ಯದಲ್ಲಿ ನಾವು ಪರಾಂಗ್ಮುಖರಾಗುತ್ತೇವೆ. ನಿಮ್ಮ ವಿಷಯದಲ್ಲಿ ನಾನು ಒಂದೆರಡು ಸಲ ಮಾಡಿದ್ದುಂಟು. ನೀವು ಅದನ್ನು—ಕೆಲವು ಬಾರಿ ಅದರಲ್ಲಿಯೂ ಬಹಿರಂಗವಾಗಿ ನಡೆಸಿ ಎಲ್ಲರನ್ನು ಚಕಿತರನ್ನಾಗಿ ಮಾಡಿದ್ದೀರಿ. ಆದರೆ ಮಿತ್ರತ್ವದ ಅತ್ಯುದಾತ್ತ ಕರ್ತವ್ಯವೆಂದರೆ ಅದೇಯೆ. ಶಾಸ್ತ್ರಿಗಳು ರಾಜಾಜಿಯ ಕಡೆ ತಿರುಗಿ ನೀವೇ ಹೇಳಿ ರಾಜಗೋಪಾಲಾಚಾರಿ, ತಪ್ಪು ದಾರಿ ಹಿಡಿವ ನೂರಾರು ಜನರಲ್ಲಿ ಸಕಾಲದಲ್ಲಿ ಎಚ್ಚರಿಕೆ ಕೊಟ್ಟರೆ ಉಳಿದುಕೊಳ್ಳಬಹುದಾದವನು ಒಬ್ಬನೂ ಇಲ್ಲವೆ? ಮಹಾತ್ಮರಿಗೆ ಉಪದೇಶಿಸುತ್ತಿದ್ದೇನೆಂದು ದಯವಿಟ್ಟು ಭಾವಿಸಬೇಡಿ. ನಾನು ತಪ್ಪು ಒಪ್ಪಿಕೊಳ್ಳುತ್ತೇನೆ ನಾನೂ ಕರ್ತವ್ಯದಿಂದ ಅನೇಕ ವೇಳೆ ಚ್ಯುತನಾಗಿದ್ದೇನೆ."

ಬಾಪು ಕಡೆ ಹೊರಳಿ "ನೀವು ಸತ್ಯಶೋಧಕರು ನೀವೂ ನಾನೂ ಕೆಲವು ವಿಷಯಗಳಲ್ಲಿ ಭೂಮ್ಯಾಕಾಶಗಳಷ್ಟು ದೂರವಾಗಿದ್ದೇವೆ. ನಿಮ್ಮೊಡನೆ ನಾನು ಸಹಮತನಾಗಿರದಿದ್ದಾಗ ದಾಕ್ಷಿಣ್ಯ ಬಿಟ್ಟು ಹಾಗೆ ಹೇಳಿದ್ದೇನೆ. ನಿಮ್ಮಿಂದ ಬಹು ದೂರನಾಗಿದ್ದರೂ ನಾನೂ ಒಬ್ಬ ಸತ್ಯಾನ್ವೇಷಿ ರಾಮಾಯಣದಲ್ಲಿಯ ತ್ರಿಕಾಲಾಬಾಧಿತ ಸತ್ಯಗಳು ನನಗೆ ಹೆಚ್ಚಾದ ಸ್ಫೂರ್ತಿ

ಯಾಗಿವೆ. ಆ ಮಹಾಕಾವ್ಯವನ್ನು ನಾನು ಆಸ್ವಾದಿಸಿ ಆನಂದಿಸಿರುವುದನ್ನು ಇತರರಿಗೆ ಕೊಡದೆ ನಾನು ಕರ್ತವ್ಯಪರಾಂಗ್ಮುಖನಾಗಿದ್ದೇನೆ.”

ಆಗ ಗಾಂಧೀಜಿ ಅವನ್ನು ಪ್ರಚುರಪಡಿಸಬೇಕೆಂದು ಹೇಳಿದರು. ಆದರೆ ಶಾಸ್ತ್ರಿಗಳಿಗೆ ಅದು ಸಾಕಾದುದಾಗಿ ತೋರಲಿಲ್ಲ. “ನಾನು ಇನ್ನೂ ಕೆಲವು ಕಾಲ ಬದುಕಿದ್ದರೆ ಮತ್ತು ಜಗದೀಶನ್‌ರು ಪುರಸತ್ತು ಮಾಡಿಕೊಂಡರೆ ಇನ್ನಾದರೂ ಆ ಹಾನಿಯನ್ನು ಸ್ವಲ್ಪಮಟ್ಟಿಗೆ ತುಂಬಿಕೊಡಬಲ್ಲೆ”ಎಂದು ಅಂದರು.

ಗಾಂಧಿಯವರು “ಜಗದೀಶನ್ ನಿಮ್ಮ ಪ್ರಶಂಸಕ, ಮತ್ತು ಅನುಯಾಯಿ. ವೈದ್ಯರು ಬೇಡ ಅನ್ನದಿದ್ದರೆ ಅವರು ಯಾವಾಗಲೂ ನಿಮ್ಮ ಬಳಿ ಇರುವರು. ವೈದ್ಯರು ‘ಬೇಡ’ ಎಂದರೆ ಜಗದೀಶನ್‌ರು ಮನೆಯಲ್ಲಿ ಇಲ್ಲವೆನ್ನಿಸಿಕೊಳ್ಳುತ್ತಾರೆ.”

ಶಾಸ್ತ್ರಿಗಳು ಮನವಾರೆ ನಕ್ಕರು. “ಅಂತೂ ರಾಮನಂತೆ ನೀವೂ ಸುಳ್ಳು ಹೇಳಿಕೊಡುತ್ತೀರಿ, ಸುಮಂತ್ರನು ರಾಮ ಲಕ್ಷ್ಮಣ ಸೀತೆಯರನ್ನು ರಥದಲ್ಲಿ ಕೂರಿಸಿಕೊಂಡು ಕಾಡಿಗೆ ಹೋಗುತ್ತಿರುವಾಗ, ರಾಮನು ‘ಸುಮಂತ್ರ ರಥವನ್ನು ಬೇಗ ಬೇಗ ಬಿಡು. ಈ ಕೋಟಲೆಯನ್ನು ಯಾಕೆ ಮುಂದುವರಿಸಬೇಕು? ನನ್ನ ತಂದೆ ಕೋಪಿಸಿಕೊಂಡರೆ ನಿನಗೆ ಕೇಳಲಿಲ್ಲವೆಂದು ಹೇಳು.’”

ರೋಗಿ ಹೆಚ್ಚಾಗಿ ಮಾತನಾಡುತ್ತಿದ್ದರು. ಡಾಕ್ಟರರು ಚಿಂತಾಕ್ರಾಂತರಾಗತೊಡಗಿದ್ದರು. “ಶಾಸ್ತ್ರಿಗಳು ಸರಿ. ಒಳ್ಳೆಯ ಸಂಭಾಷಣೆಕಾರರು. ಕೇಳುವುದಕ್ಕಿಂತ ಹೇಳುವುದೇ ಹೆಚ್ಚು. ಕೇಳಿಲ್ಲವೇ ಒಮ್ಮೆ ಶಾಲೆಯ ಉಪಾಧ್ಯಾಯನಾದವನು ಎಂದೆಂದೂ ಉಪಾಧ್ಯಾಯನೆ? ಎಂದು. ಹಾಗೆ ನಾನು ಮಾತನಾಡುತ್ತಾ ಹೋದೆ,” ಎಂದರು.

ಗಾಂಧಿಜಿ: “ಅದಕ್ಕೆ ನಾವೆಲ್ಲ ಸಾಕ್ಷಿ.”

ಶಾಸ್ತ್ರಿಗಳು “ಇದೇ ನಿಮ್ಮೊಡನೆ ನನ್ನ ಕೊನೆಯ ಭೆಟ್ಟಿಯಾಗಬಹುದು. ಮಧುರೆಯಿಂದ ನೀವು ಹಿಂದಿರುಗಿದಾಗ ಬಂದು ನೋಡೇನೆಂಬ ಧೈರ್ಯ ನನಗಿಲ್ಲ. ಆದುದರಿಂದ ಹೇಳಬೇಕಾದುದನ್ನು ಹೇಳಿಬಿಟ್ಟೆ. ನಿಮ್ಮ ಸರದಿ.”

ಎಂದರು.

ಗಾಂಧಿಯವರು "ಛೀ. ಇದು ಕೊನೆಯ ಭೆಟ್ಟಿಯಲ್ಲ. ಮಧುರೆಯಿಂದ ಮರಳಿ ನಿಮ್ಮನ್ನು ನೋಡಲು ಯತ್ನಿಸುವೆ. ಬೇಗನೆ ಗುಣವಾಗಿ ಸೇವಾಗ್ರಾಮಕ್ಕೆ ಬನ್ನಿ. ಅದರ ಹೊರತು ನಾನು ಬೇರೆ ಹೇಳುವುದೇನೂ ಇಲ್ಲ."

ಶಾಸ್ತ್ರಿಗಳು "ಆಶಾವಾದಿಗಳ ಚಕ್ರವರ್ತಿ ನೀವು" ಎಂದರು. ಗಾಂಧಿಜಿ "ಅಹಾ, ಸಂದೇಹವೇನು? ನಾನು ಅಗಮ್ಯ ಆಶಾವಾದಿ" ಎಂದರು. ಇಬ್ಬರೂ ಕೆಲಹೊತ್ತು ನಕ್ಕು ಮತ್ತೆ ಕೆಲವು ಹಾಸ್ಯದ ನಂತರ ಬೀಳ್ಕೊಂಡರು.

ಮಧುರೆಯಿಂದ ಹಿಂದಿರುಗಿದ ಮೇಲೆ ಗಾಂಧಿಜಿಗೆ ಬರಿ ಮೂರು ಗಂಟೆ ಮಾತ್ರ ಬಿಡುವಿತ್ತು. ಆ ಅವಕಾಶದಲ್ಲಿಯೇ ಅವರು ಪ್ರಾರ್ಥನೆ ಸ್ನಾನ ನಡೆಸಿದರು; ಅನೇಕರಿಗೆ ಹಸ್ತಾಕ್ಷರ ಕೊಟ್ಟರು. ಅನೇಕರಿಗೆ ಭೇಟಿ ಇತ್ತರು. ಶಾಸ್ತ್ರಿಗಳಿಗೂ ಅವಸರದ ಭೇಟಿ ಇತ್ತರು. ಅಂದು ಸೋಮವಾರ. ಗಾಂಧಿ ಮೌನವ್ರತಧಾರಿಯಾಗಿದ್ದುದರಿಂದ ಶಾಸ್ತ್ರಿಗಳಿಗೆ ನಿರುತ್ಸಾಹವಾಯಿತು. ಶಾಸ್ತ್ರಿಗಳು ಮಾತನಾಡಿದರು. ಗಾಂಧಿಜಿ ಕಾಗದದ ಚೂರುಗಳಲ್ಲಿ ಬರೆದು ಜವಾಬು ಕೊಟ್ಟರು. ಮಧುರೆಯ ಪ್ರವಾಸದ ವಿಚಾರದಲ್ಲಿ ಶಾಸ್ತ್ರಿಗಳು ಕೇಳಿದುದಕ್ಕೆ ಗಾಂಧಿಜಿ ಸೊಗಸಾಗಿದ್ದರೂ ಪ್ರಯಾಸಕರವಾಗಿತ್ತೆಂದರು. ಮಧುರೆಗೆ ೫–೬ ಲಕ್ಷ ಜನ ಪ್ರಾರ್ಥನಾ ಸಭೆಗೆ ಬಂದಿದ್ದರೆಂದೂ ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಸುತ್ತಲ ಹಳ್ಳಿಗಳಿಂದ ಬಂದಿದ್ದರೆಂದೂ ಕೇಳಿ ಶಾಸ್ತ್ರಿಗಳಿಗೆ ಆಶ್ಚರ್ಯವಾಯಿತು.

ಗಾಂಧಿಜಿ ಶಾಸ್ತ್ರಿಗಳ ದೇಹ ಸ್ಥಿತಿಯನ್ನು ಕುರಿತು ವಿಚಾರಿಸಿದರು. ವೈದ್ಯರಿಗೆ ವಿಧೇಯರಾಗಿರಬೇಕೆಂದು ಉಪದೇಶಿಸಿದರು. ತಮ್ಮ ಸ್ಥಿತಿ ಹೆಚ್ಚು ಕಡಿಮೆ ಉತ್ತಮವಾಗಿದೆಯೆಂದು ಶಾಸ್ತ್ರಿಗಳು ಹೇಳಿದರು. ಅವರು ಅತ್ಯಂತ ಭಾವಾವೇಶವಾಗಿ "ಭ್ರಾತೃ, ನೀವು ನನಗೆ ಅತ್ಯಂತ ಹೆಚ್ಚಿನ ಸನ್ಮಾನ ಮಾಡಿದ್ದೀರಿ. ನೀವು ಅವಸರದಲ್ಲಿ ಹೋಗುತ್ತಿರುವಾಗ ಈ ಸಂದರ್ಶನವನ್ನು ನನಗೆ ಕೊಟ್ಟುದು ಇನ್ನೂ ಹೆಚ್ಚಿನ ಗೌರವವಾಯಿತು. ನೀವು ನಮ್ಮ ಮಕ್ಕಳು, ಸಹೋದರರು ಮತ್ತು ಸಂಸಾರದ ಇತರರೆಲ್ಲರಿಗಿಂತ ಹೆಚ್ಚು ಪ್ರಿಯರಾಗಿದ್ದೀರಿ." ಶಾಸ್ತ್ರಿಗಳ ಧ್ವನಿ ಕೇಳಿಸದಷ್ಟು ಮೃದು

ವಾಗಿದ್ದಿತು. "ಯಾವುದೋ ಒಂದು ಅಂತರಂಗ ಬಾಂಧವ್ಯದಿಂದ ನಾವು ಒಂದೆಡೆ ಕೂಡಿದ್ದೇವೆ ಯಾವ ಬಾಹ್ಯ ಕಾರಣವೂ ಈ ಗೆಳೆತನಕ್ಕೆ ಅರ್ಥವನ್ನು ಕಲ್ಪಿಸಲಾರದು. ಗೋಖಲೆಯವರು ಅದಕ್ಕೆ ನಿಮಿತ್ತಮಾತ್ರರಾಗಿದ್ದರು" ಎಂದರು. ಶಾಸ್ತ್ರಿಗಳು ಗಾಂಧಿಯವರನ್ನು ಮತ್ತಷ್ಟು ಸಮೀಪಿಸಿ ಅತಿ ಸಣ್ಣ ದನಿಯಲ್ಲಿ ನುಡಿದರು. "ಮಾತನ್ನು ವ್ಯರ್ಥ ಮಾಡುವುದಿಲ್ಲ. ನಾನು ಏನು ಹೇಳಬಯಸುತ್ತಿದ್ದೇನೆಂಬುದು ನಿಮಗೆ ಗೊತ್ತಿದೆ" ಭಾವ ಪರವಶತೆಯಿಂದ ಶಾಸ್ತ್ರಿಗಳ ಉಸಿರು ತಡೆಯತೊಡಗಿತ್ತು. ಆದುದರಿಂದ ಗಾಂಧಿಜಿ ಅವರನ್ನು ಬೀಳ್ಕೊಳ್ಳಲು ಎದ್ದರು.

ಗಾಂಧಿಜಿ ಎದ್ದುನಿಂತ ಕೂಡಲೇ ಅವರ ಜೋತಾಡುವ ಗಡಿಯಾರ ಶಾಸ್ತ್ರಿಗಳ ಕಣ್ಣಿಗೆ ಬಿದ್ದಿತು. ಶಾಸ್ತ್ರಿಗಳು, "ನಿಮ್ಮ ಗಡಿಯಾರ ಕಳೆದು ಹೋಯಿತೆಂದೂ ಆದುದರಿಂದ ನೀವು ಮತ್ತೆ ಗಡಿಯಾರವನ್ನು ಉಪಯೋಗಿಸುವುದಿಲ್ಲವೆಂದೂ ಯಾರೋ ಹೇಳಿದರು." ಶ್ರೀ ಟಿ. ಆರ್. ವೆಂಕಟರಾಮಾ ಶಾಸ್ತ್ರಿಗಳು ಅದು ಗಾಂಧಿಯವರ ಫೌಂಟೆನ್ ಪೆನ್‌ಗೆ ಅನ್ವಯಿಸಿದ ಮಾತೆಂದು ಹೇಳಿದರು.

ಶಾಸ್ತ್ರಿಗಳು, "ಓಹೊ ಹಾಗೋ. ಹಾಗಾದರೆ ನಿಮ್ಮ ಗಡಿಯಾರವನ್ನು ಯಾರಾದರೂ ಕದ್ದರೆ ನೀವು ಗಡಿಯಾರದ ಉಪಯೋಗವನ್ನು ಬಿಟ್ಟು ಬಿಡುವಿರಿ?" ಎಂದರು. ಗಾಂಧಿಜಿ ನಗುತ್ತಾ ಗಡಿಯಾರವಿಲ್ಲದೆ ತನಗೆ ಸಾಗದೆಂಬಂತೆ ತಲೆ ಅಲ್ಲಾಡಿಸಿದರು.